ಬಿಬಿಎಂಪಿ ಬಜೆಟ್ ರೂಪಿಸಲು ನಡೆದಿದೆ ಭರದ ಸಿದ್ಧತೆ ● ಅಗತ್ಯ ಕಾಮಗಾರಿಗಳಿಗೆ ಅನುದಾನ ಒದಗಿಸಲು ನಿರ್ಧಾರ

ಬಜೆಟ್ ₹7,500 ಕೋಟಿಗೆ ಸೀಮಿತ?

• ಪ್ರವೀಣ್ ಕುಮಾರ್ ಪಿ.ವಿ.

ಬಿಬಿಎಂಪಿ ಸುದ್ದಿ

ಬೆಂಗಳೂರು: ಬಿಬಿಎಂಪಿಯ ಆದಾಯದ ನೈಜ ಲೆಕ್ಕಾಚಾರಗಳನ್ನು ಮರೆಮಾಚಿ, ವಾಸ್ತವವಲ್ಲದ ಬಜೆಟ್ ಮಂಡಿಸುವ ಪರಿಪಾಠ ಈ ಬಾರಿಯಾದರೂ ಕೊನೆಯಾಗಲಿದೆಯೇ. ಹೌದು ಎನ್ನುತ್ತವೆ ಬಿಬಿಎಂಪಿ ಮೂಲಗಳು.

‘ಬಿಬಿಎಂಪಿ ಆಸ್ತಿ ತೆರಿಗೆ ಮತ್ತು ಇತರ ವರಮಾನ, ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದಿಂದ ಸಿಗಲಿರುವ ಅನುದಾನವನ್ನು ನೋಡಿಕೊಂಡು ಬಜೆಟ್ ಮಂಡಿಸಲು ಸಿದ್ಧತೆ ನಡೆದಿದೆ. 2021–22ನೇ ಸಾಲಿನ ಬಜೆಟ್ ಗಾತ್ರವು ₹ 7,500 ಕೋಟಿಗೆ ಸೀಮಿತವಾಗಲಿದೆ’ ಎಂದು ಹೆಸರು ಬಹಿರಂಗ ಪಡಿಸಲು ಬಯಸದ ಬಿಬಿಎಂಪಿ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ಮಾಹಿತಿ ನೀಡಿದರು.

‘ಆಸ್ತಿ ತೆರಿಗೆ, ಜಾಹೀರಾತು, ಸ್ವಂತ ಆಸ್ತಿಗಳಿಂದ ಬರುವ ವರಮಾನ ಹಾಗೂ ಇತರ ಮೂಲಗಳಿಂದ ಬಿಬಿಎಂಪಿಯು ಪ್ರತಿ ವರ್ಷ ಹೆಚ್ಚೆಂದರೆ ₹ 4,000 ಕೋಟಿಗಳಷ್ಟು ಆದಾಯವನ್ನು ಗಳಿಸುತ್ತಿದೆ. ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರದ ವಿವಿಧ ಮೂಲಗಳಿಂದ ವರ್ಷಕ್ಕೆ ಸುಮಾರು ₹3,500 ಸಾವಿರ ಕೋಟಿಗಳಷ್ಟು ಅನುದಾನ ನಿರೀಕ್ಷಿಸಲಾಗಿದೆ. ಹಾಗಾಗಿ, ಈ ಬಾರಿ ₹7,500 ಕೋಟಿ ಗಾತ್ರದ ಬಜೆಟ್ ಮಂಡನೆಗೆ ಸಿದ್ಧತೆ ನಡೆದಿದೆ’ ಎಂದರು.

‘ಹೊಸ ಕಾಮಗಾರಿಗಳನ್ನು ಹಮ್ಮಿಕೊಳ್ಳುವ ಬದಲು ನಿರ್ವಹಣೆ ವ್ಯವಸ್ಥೆ ಸುಧಾರಣೆಗೆ ಆದ್ಯತೆ ನೀಡಲು ಚಿಂತನೆ ನಡೆದಿದೆ. ತೀರಾ ಅಗತ್ಯ ಇರುವ ಕಾಮಗಾರಿಗಳಿಗೆ ಮಾತ್ರ ಬಜೆಟ್‌ನಲ್ಲಿ ಅನುದಾನ ಒದಗಿಸಲು ನಿರ್ಧರಿಸಿದ್ದೇವೆ’ ಎಂದು ಅವರು ತಿಳಿಸಿದರು.

‘ಕೋವಿಡ್‌ನಿಂದಾಗಿ ಆರ್ಥಿಕ ಪರಿಸ್ಥಿತಿ ಮೇಲೆ ಹೊಡೆತ ಬಿದ್ದಿದೆ. ಹಾಗಾಗಿ ರಾಜ್ಯ ಸರ್ಕಾರದಿಂದ ಹೆಚ್ಚಿನ ಅನುದಾನ ನಿರೀಕ್ಷೆ ಮಾಡುವಂತಿಲ್ಲ. ರಾಜ್ಯ ಸರ್ಕಾರದ ಬಜೆಟ್ ಮಂಡನೆ ಬಳಿಕವೇ ಪಾಲಿಕೆ ಬಜೆಟ್‌ಗೆ ಅಂತಿಮ ರೂಪ ನೀಡಲಾಗುತ್ತದೆ’ ಎಂದರು.

ಶಾಸಕರಿಂದ ಒತ್ತಡ?: ‘ಪ್ರತಿ ಸಲ ಮೇಯರ್, ಉಪಮೇಯರ್ ಹಾಗೂ ಆಡಳಿತ ಪಕ್ಷದ ಪ್ರಮುಖರ ಒತ್ತಡಕ್ಕೆ ಮಣಿದು ಕೊನೆಯ ಕ್ಷಣದಲ್ಲಿ ಬಜೆಟ್‌ಗೆ ಕಾಮಗಾರಿಗಳನ್ನು ಸೇರ್ಪಡೆ ಮಾಡಲಾಗುತ್ತಿತ್ತು. ಇದರಿಂದಾಗಿ ಬಜೆಟ್ ಗಾತ್ರ ವಾಸ್ತವದ ವರಮಾನಕ್ಕಿಂತಲೂ ಹೆಚ್ಚು ಇರುತ್ತಿತ್ತು. ಈ ಬಾರಿ ಚುನಾಯಿತ ಕೌನ್ಸಿಲ್ ಅಸ್ತಿತ್ವದಲ್ಲಿ ಇಲ್ಲ. ಆಡಳಿತಾಧಿಕಾರಿಯೇ ಬಜೆಟ್ ರೂಪಿಸುತ್ತಾರೆ. ಆದರೂ ಈ ಸಲವೂ ಶಾಸಕರು ಕೆಲ ಕಾಮಗಾರಿಗಳಿಗೆ ಅನುದಾನ ಒದಗಿಸುವಂತೆ ಪಟ್ಟು ಹಿಡಿದರೆ, ಅವುಗಳನ್ನು ಬಜೆಟ್‌ನಲ್ಲಿ ಸೇರ್ಪಡೆ ಮಾಡಬೇಕಾಗಬಹುದು’ ಎಂದು ಅಧಿಕಾರಿಯೊಬ್ಬರು ಅಭಿಪ್ರಾಯಪಟ್ಟರು.

‘2020–21ನೇ ಆರ್ಥಿಕ ವರ್ಷದಲ್ಲಿ ಇನ್ನು ಒಂದು ತಿಂಗಳು ಮಾತ್ರ ಬಾಕಿ ಇದೆ. ಪಾಲಿಕೆ ಈವರೆಗೆ ಸಂಗ್ರಹಿಸಿರುವುದು ₹2,700 ಕೋಟಿಗಳಷ್ಟು ಆಸ್ತಿ ತೆರಿಗೆ ಮಾತ್ರ. ಆರ್ಥಿಕ ವರ್ಷದ ಕೊನೇಯ ತಿಂಗಳು ಆಸ್ತಿ ತೆರಿಗೆ ಸಂಗ್ರಹ ಪ್ರಮಾಣ ಸ್ವಲ್ಪ ಹೆಚ್ಚಳವಾಗುತ್ತದೆ. ಇದು ಹೆಚ್ಚು ಕಡಿಮೆ ಈ ವರ್ಷ ₹ 3,000 ಕೋಟಿಯಿಂದ ₹ 3500 ಕೋಟಿ ಆಸ್ತಿ ತೆರಿಗೆ ಸಂಗ್ರಹವಾಗುವ ನಿರೀಕ್ಷೆ ಇದೆ’ ಎಂದು ಬಿಬಿಎಂಪಿ ಅಧಿಕಾರಿಯೊಬ್ಬರು ತಿಳಿಸಿದರು.

ಬಜೆಟ್ ಬೇಡಿಕೆ: ವಾರ್ಡ್ ಸಮಿತಿಗಳಲ್ಲಿ ಚರ್ಚೆ

ಈ ಬಾರಿಯ ಬಜೆಟ್ ರೂಪಿಸುವುದಕ್ಕೆ ಪೂರ್ವಭಾವಿಯಾಗಿ ಪ್ರತಿ ವಾರ್ಡ್‌ನಿಂದಲೂ ಬೇಡಿಕೆಗಳ ಪಟ್ಟಿ ತರಿಸಿಕೊಳ್ಳಲಾಗುತ್ತದೆ. ವಾರ್ಡ್ ಸಮಿತಿ ಸಭೆಯಲ್ಲಿ ವಾರ್ಡ್‌ನ ಬಜೆಟ್ ಬೇಡಿಕೆಗಳ ಚರ್ಚಿಸಲು ಅವಕಾಶ ಕಲ್ಪಿಸಲಾಗಿದೆ.

‘ಬೇಡಿಕೆಗಳ ಪಟ್ಟಿ ನೀಡುವಂತೆ ವಾರ್ಡ್ ಸಮಿತಿಗಳಿಗೆ ಸೂಚಿಸಲಾಗಿತ್ತು. ಅನೇಕ ಕಡೆ ಶನಿವಾರ ನಡೆದ ಸಭೆಯಲ್ಲಿ ಈ ಬಗ್ಗೆ ಚರ್ಚೆ ನಡೆದಿದೆ. ಕೆಲವು ವಾರ್ಡ್ ಸಮಿತಿಗಳು ಬೇಡಿಕೆ ಪಟ್ಟಿ ಅಂತಿಮಗೊಳಿಸಲು ಕಾಲಾವಕಾಶ ಕೋರಿವೆ. ಇನ್ನು ಎರಡು– ಮೂರು ದಿನಗಳಲ್ಲಿ ಬೇಡಿಕೆ ಪಟ್ಟಿ ಸಲ್ಲಿಸುವುದಾಗಿ ತಿಳಿಸಿವೆ’ ಎಂದು ಬಿಬಿಎಂಪಿ ಆಯುಕ್ತ ಎನ್.ಮಂಜುನಾಥ ಪ್ರಸಾದ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ನಾನು ನೋಡಲ್ ಅಧಿಕಾರಿಯಾಗಿರುವ ವಸಂತ ನಗರ ವಾರ್ಡ್‌ನಲ್ಲಿ ನಾಗರಿಕರ ಹಾಗೂ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳ ಪ್ರತಿನಿಧಿಗಳನ್ನು ಒಳಗೊಂಡ ವಾಟ್ಸ್‌ಆ್ಯಪ್ ಬಳಗಗಳನ್ನು ರಚಿಸಿಕೊಂಡಿದ್ದೇವೆ. ಇವುಗಳ ಮೂಲಕವೂ ಪ್ರಮುಖ ಬೇಡಿಕೆಗಳ ಬಗ್ಗೆ ನಾಗರಿಕರು ಮಾಹಿತಿ ನೀಡಲಿದ್ದಾರೆ. ಅವುಗಳಲ್ಲಿ ಬರುವ ಬೇಡಿಕೆ ಆಧರಿಸಿ ಬಜೆಟ್‌ನಲ್ಲಿ ಸೇರಿಸಬೇಕಾದ ಕಾಮಗಾರಿಗಳ ಪಟ್ಟಿ ತಯಾರಿಸುತ್ತೇವೆ’ ಎಂದರು.

ಬಿಬಿಎಂಪಿಯನ್ನು ಆರ್ಥಿಕ ಸಂಕಷ್ಟಕ್ಕೆ ಸಿಲುಕಿಸಿದ್ದ ಬಜೆಟ್

2010–11ರಿಂದಲೂ ಪಾಲಿಕೆ ಬಜೆಟ್‌ನಲ್ಲಿ ನಿರೀಕ್ಷಿಸಿದಷ್ಟು ವರಮಾನ ಬರುತ್ತಿಲ್ಲ. ಆದರೆ, ಬಜೆಟ್‌ನಲ್ಲಿ ವೆಚ್ಚಕ್ಕೆ ನಿಗದಿಪಡಿಸಿದ ಅಷ್ಟೂ ಯೋಜನೆಗಳಿಗೆ ಕಾಮಗಾರಿ ಸಂಖ್ಯೆ ನೀಡಲಾಗುತ್ತಿದೆ. ಇದರಿಂದಾಗಿ ಪ್ರತಿವರ್ಷ ಗುತ್ತಿಗೆದಾರರಿಗೆ ಪಾವತಿಸಬೇಕಾದ ಬಾಕಿ ಬಿಲ್‌ಗಳ ಮೊತ್ತ ಹೆಚ್ಚುತ್ತಲೇ ಹೋಗುತ್ತಿದೆ.

2020–21ನೇ ಸಾಲಿನ ಬಿಬಿಎಂಪಿ ಬಜೆಟ್‌ಗೆ ಸರ್ಕಾರ ಅನುಮೋದನೆ ನೀಡಿದಾಗ ಪಾಲಿಕೆಯು ಗುತ್ತಿಗೆದಾರರಿಗೆ ₹2,575.25 ಕೋಟಿ ಬಿಲ್ ಪಾವತಿ ಬಾಕಿ ಇಟ್ಟುಕೊಂಡಿತ್ತು. ಆಗ ನಗರಾಭಿವೃದ್ಧಿ ಇಲಾಖೆಗೆ ಪತ್ರ ಬರೆದಿದ್ದ ಬಿಬಿಎಂಪಿ ಆಯುಕ್ತ ಎನ್.ಮಂಜುನಾಥ್ ಪ್ರಸಾದ್ ಅವರು ಪಾಲಿಕೆಯ ಆರ್ಥಿಕ ಪರಿಸ್ಥಿತಿಯನ್ನು ಎಳೆ ಎಳೆಯಾಗಿ ಬಿಚ್ಚಿಟ್ಟಿದ್ದರು.

‘ಬಿಬಿಎಂಪಿಯಲ್ಲಿ 2020–21ನೇ ಸಾಲಿನಲ್ಲಿ ಅನುಮೋದನೆಗೊಂಡ ಬಜೆಟ್ ಗಾತ್ರ ₹ 10,717 ಕೋಟಿ. ಆದರೆ, ಈ ಸಾಲಿನಲ್ಲಿ ಪಾಲಿಕೆ ಎದುರಿಸುತ್ತಿರುವ ಒಟ್ಟು ಆರ್ಥಿಕ ಹೊರೆ ₹22,657 ಕೋಟಿ. ಆದಾಯ ಸಂಗ್ರಹ ಕುಸಿಯುತ್ತಿರುವುದರಿಂದ ಆರ್ಥಿಕ ಸ್ಥಿತಿ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗುತ್ತಿದೆ’ ಎಂದು ವಿವರಿಸಿದ್ದರು. ಬಳಿಕ ₹ 5 ಸಾವಿರ ಕೋಟಿ ಮೊತ್ತದ ಕಾಮಗಾರಿಗಳನ್ನು ಕೈಬಿಡಲು ಬಿಬಿಎಂಪಿ ನಿರ್ಧರಿಸಿತ್ತು.

ಸುದ್ದಿ 2 ನಿಮಿಷ

‘ಮಾಜಿ ಮುಖ್ಯಮಂತ್ರಿಗಳು ಜನರಿಗೆ ಸ್ಪಷ್ಟೀಕರಣ ನೀಡಲಿ’

ಧಾರವಾಡ: ‘ಐಎಂಎ ಬಹುಕೋಟಿ ವಂಚನೆ ಪ್ರಕರಣದಲ್ಲಿ ಇಬ್ಬರು ಮಾಜಿ ಮುಖ್ಯಮಂತ್ರಿಗಳ ಹೆಸರುಗಳು ಕೇಳಿ ಬಂದಿದ್ದು, ಇಬ್ಬರೂ ರಾಜ್ಯದ ಜನತೆಗೆ ಇದರ ಬಗ್ಗೆ ಸ್ಪಷ್ಟೀಕರಣ ನೀಡಬೇಕು’ ಎಂದು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಒತ್ತಾಯಿಸಿದರು.

ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇಬ್ಬರೂ ಮಾಜಿ ಮುಖ್ಯಮಂತ್ರಿಗಳ ಹೆಸರನ್ನು ಉಲ್ಲೇಖಿಸದೆ ‘ಇವರಿಬ್ಬರೂ ರಾಜಕೀಯದಲ್ಲಿ ದೊಡ್ಡ ಸ್ಥಾನ ಅಲಂಕರಿಸಿದ್ದು, ಈಗ ಇವರ ಹೆಸರುಗಳನ್ನು ಐಎಂಎ ನಿರ್ದೇಶಕ ತನಿಖೆ ವೇಳೆ ಹೇಳಿರುವುದಾಗಿ ತಿಳಿದು ಬಂದಿದೆ. ಈ ತನಿಖೆ ತಾರ್ಕಿಕ ಅಂತ್ಯಕ್ಕೆ ಬರಬೇಕು ಹಾಗೂ ಬಡ ಜನರಿಗೆ ನ್ಯಾಯ ಸಿಗಬೇಕು. ಇಬ್ಬರು ರಾಜಕಾರಣಿಗಳು ಕರ್ನಾಟಕದ ಜನತೆಗೆ ಐಎಂಎ ನಿರ್ದೇಶಕನ ಹೇಳಿಕೆಗೆ ಉತ್ತರ ನೀಡಬೇಕು’ ಎಂದು ಆಗ್ರಹಿಸಿದರು.

ಮಂದಿರದಲ್ಲೇ ನಡೆದ ಕೃಷ್ಣ–ಬಲರಾಮ ರಥಯಾತ್ರೆ



ಬೆಂಗಳೂರು: ಇಲ್ಲಿನ ಇಸ್ಕಾನ್ ದೇವಸ್ಥಾನವು ಶನಿವಾರ ಹಮ್ಮಿಕೊಂಡಿದ್ದ ಕೃಷ್ಣ–ಬಲರಾಮನ ರಥಯಾತ್ರೆ ಕೋವಿಡ್ ಕಾರಣ ಮಂದಿರದ ಆವರಣದಲ್ಲಿಯೇ ನಡೆಯಿತು.

ಪ್ರತಿ ವರ್ಷ ರಥಯಾತ್ರೆಯು ಪಶ್ಚಿಮ ಕಾರ್ಡ್ ರಸ್ತೆ, ರಾಜಾಜಿನಗರ, ಮಹಾಲಕ್ಷ್ಮಿ ಬಡಾವಣೆಗಳ ಮೂಲಕ ಸಾಗುತ್ತಿತ್ತು. ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಈ ಕ್ಷಣಕ್ಕೆ ಸಾಕ್ಷಿಯಾಗುತ್ತಿದ್ದರು. ಈ ಬಾರಿ ಕೋವಿಡ್ ನಿರ್ಬಂಧದ ಕಾರಣ ಕೆಲವೇ ಮಂದಿ ಭಕ್ತಿ ಭಾವದಿಂದ ಈ ರಥಯಾತ್ರೆಯಲ್ಲಿ ಪಾಲ್ಗೊಂಡರು. ಭಕ್ತಾಧಿಗಳು ರಥಯಾತ್ರೆಯನ್ನು ಆನ್‌ಲೈನ್‌ನಲ್ಲೂ ವೀಕ್ಷಿಸಲು ವ್ಯವಸ್ಥೆ ಮಾಡಲಾಗಿತ್ತು.

ಅಬಕಾರಿ ಸಚಿವ ಕೆ.ಗೋಪಾಲಯ್ಯ ಮತ್ತು ಸ್ಥಳೀಯ ಮುಖಂಡ ಎಸ್. ಹರೀಶ್ ದೇವರ ದರ್ಶನ ಪಡೆದರು. ರಥದ ಮುಂದಿನ ಮಾರ್ಗವನ್ನು ಗುಡಿಸುವ ಸಾಂಪ್ರದಾಯಿಕ ವಿಧಿಯಲ್ಲಿ ಪಾಲ್ಗೊಂಡರು. ಇಸ್ಕಾನ್ ಮಂದಿರದ ಭಕ್ತರು ಹರೇ ಕೃಷ್ಣ ಸಂಕೀರ್ತನೆ ಸೇವೆಯನ್ನು ನಡೆಸಿಕೊಟ್ಟರು. ಮಹಾ ಪ್ರಸಾದ ವಿತರಣೆಯೊಂದಿಗೆ ರಥಯಾತ್ರೆ ಸಂಪನ್ನವಾಯಿತು.

ಪ್ರಜಾವಾಣಿ ಕ್ವಿಜ್: ದಕ್ಷ್ ಶೆಟ್ಟರ್ ಪ್ರಥಮ

ಬೆಂಗಳೂರು: ಆರಂಭದ ಸುತ್ತಿನಿಂದಲೇ ಮುನ್ನಡೆ ಸಾಧಿಸಿದ್ದ ಬೆಂಗಳೂರಿನ ಆರ್‌ಟಿ ನಗರದ ಪ್ರೆಸಿಡೆನ್ಸಿ ಶಾಲೆಯ ವಿದ್ಯಾರ್ಥಿ ದಕ್ಷ್ ಶೆಟ್ಟರ್, ‘ಪ್ರಜಾವಾಣಿ’ ಆನ್‌ಲೈನ್ ಕ್ವಿಜ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಗೆದ್ದುಕೊಂಡರು.

ಶನಿವಾರ ನಡೆದ ಚಾಂಪಿಯನ್‌ಷಿಪ್‌ನ ‘ಗ್ರ್ಯಾಂಡ್ ಫಿನಾಲೆ’ಯಲ್ಲಿ, ವಿವಿಧ ವಲಯಗಳಿಂದ ಅರ್ಹತೆ ಪಡೆದಿದ್ದ ಏಳು ವಿದ್ಯಾರ್ಥಿಗಳು ಭಾಗವಹಿಸಿದ್ದರು.



ದಕ್ಷ್ ಶೆಟ್ಟರ್

ವಿವರ 7



ಓಕುಳಿ ಸಂಭ್ರಮ... ಮಂಗಳೂರಿನ ರಥಬೀದಿಯ ವೆಂಕಟರಮಣ ದೇವಸ್ಥಾನದ ಬ್ರಹ್ಮ ರಥೋತ್ಸವದ ಮರುದಿನವಾದ ಶನಿವಾರ ವೀರ ವೆಂಕಟೇಶ ದೇವರ ಅವಭೃಥ ಉತ್ಸವ ನಡೆಯಿತು. ಈ ಸಂದರ್ಭದಲ್ಲಿ ಸಾವಿರಾರು ಭಕ್ತಾದಿಗಳು ಬಣ್ಣದಲ್ಲಿ ಮಿಂದೆದ್ದರು

ಕನ್ನಡ ಬರಹಗಾರರ, ಪ್ರಕಾಶಕರ ಸಂಘದ ಜಾಲತಾಣಕ್ಕೆ ಚಾಲನೆ

‘ಸಾಹಿತಿಗಳು ಪಕ್ಷಗಳ ವಕ್ತಾರರಂತೆ ವರ್ತಿಸಬಾರದು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಾಹಿತಿಗಳು ರಾಜಕೀಯ ಪಕ್ಷಗಳ ವಕ್ತಾರರಂತೆ ವರ್ತಿಸಬಾರದು. ರಾಜಕೀಯ ಪ್ರಜ್ಞೆ ಎಂದರೆ ರಾಜಕೀಯ ಪಕ್ಷದ ಪರ ಪ್ರಜ್ಞೆ ಎಂದು ತಿಳಿಯಬಾರದು’ ಎಂದು ಸಾಹಿತಿ ಪ್ರೊ. ಬರಗೂರು ರಾಮಚಂದ್ರಪ್ಪ ಹೇಳಿದರು.

ಕರ್ನಾಟಕ ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘದ ಜಾಲತಾಣಕ್ಕೆ ಇಲ್ಲಿ ಶನಿವಾರ ಚಾಲನೆ ನೀಡಿ ಮಾತನಾಡಿದ ಅವರು, ‘ಇತ್ತೀಚೆಗೆ ಜಾತಿಗೊಂದು ಸತ್ಯ, ಪಕ್ಷಕ್ಕೊಂದು ಸತ್ಯ ಎಂಬಂತಾಗಿದೆ. ಈ ಸಂದರ್ಭದಲ್ಲಿ ಲೇಖಕರು ಹಾಗೂ ಪ್ರಕಾಶಕರು ಪ್ರಜಾಪರ ಪ್ರಜ್ಞೆ ಹೊಂದುವುದು ಮುಖ್ಯ’ ಎಂದರು.

‘ಜನರಲ್ಲಿ ಪುಸ್ತಕ ಸಂಸ್ಕಾರ ಬೆಳೆಸಬೇಕು ಎಂಬ ಉದ್ದೇಶ ಸರ್ಕಾರಕ್ಕೆ ಇದ್ದರೆ ಈ ಬಾರಿಯ ಬಜೆಟ್‌ನಲ್ಲಿ ಗ್ರಂಥಾಲಯಗಳ ಸಗಟು ಪುಸ್ತಕ ಖರೀದಿಗೆ ಅನುದಾನ ಮೀಸಲಿಡಬೇಕು’ ಎಂದು ಒತ್ತಾಯಿಸಿದರು.

‘ಈವರೆಗೆ ಯಾವುದೇ ಸರ್ಕಾರವೂ ಪ್ರಕಾಶಕರ ಪರವಾಗಿಲ್ಲ. ಅನುದಾನ ನೀಡುತ್ತೇವೆ ಎನ್ನುತ್ತಾರೆ. ಆದರೆ, ಈವರೆಗೆ ಅದು ಅನುಷ್ಠಾನಗೊಂಡಿಲ್ಲ’ ಎಂದರು.

ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್, ‘ಇತ್ತೀಚಿನ ದಿನಗಳಲ್ಲಿ ಪುಸ್ತಕ ಪ್ರಕಾಶಕರ ಸಂಖ್ಯೆ ಹೆಚ್ಚಾಗುತ್ತಿದೆ. ಈ ನಿಟ್ಟಿನಲ್ಲಿ ಪುಸ್ತಕ ಪ್ರಕಾಶನಕ್ಕೂ ನಿಯಮಾವಳಿ ರೂಪಿಸುವ ಅಗತ್ಯವಿದೆ’ ಎಂದರು.

ಪ್ರಶಸ್ತಿ ಪ್ರದಾನ: ಹೇಮಂತ ವರ್ಷದ ಲೇಖಕ ಪ್ರಶಸ್ತಿಯನ್ನು ಡಾ.ಸಿ. ಚಂದ್ರಪ್ಪ, ಸಪ್ನ ವರ್ಷದ ಯುವ ಲೇಖಕ ಪ್ರಶಸ್ತಿಯನ್ನು ಕಪಿಲ.ಪಿ. ಹುಮನಾಬಾದ, ಕಣ್ವ ವರ್ಷದ ಪ್ರಕಾಶಕ ಪ್ರಶಸ್ತಿಯನ್ನು ಪ್ರಕಾಶ್ ಕಂಬತ್ತಳ್ಳಿ ಅವರಿಗೆ ಪ್ರದಾನ ಮಾಡಲಾಯಿತು.



ಕಾರ್ಯಕ್ರಮದಲ್ಲಿ ಕಪಿಲ ಪಿ. ಹುಮನಾಬಾದೆ, ಡಾ.ಸಿ.ಚಂದ್ರಪ್ಪ ಹಾಗೂ ಪ್ರಕಾಶ್ ಕಂಬತ್ತಳ್ಳಿ ಅವರಿಗೆ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು. ಪ್ರೊ.ಮಲ್ಲೇಪುರ ಜಿ. ವೆಂಕಟೇಶ್, ಪ್ರೊ. ಬರಗೂರು ರಾಮಚಂದ್ರಪ್ಪ, ವಿಜಯಮ್ಮ, ನಿಡಸಾಲೆ ಪುಟ್ಟಸ್ವಾಮಯ್ಯ ಇದ್ದರು ಪ್ರಜಾವಾಣಿ ಚಿತ್ರ

ಜುಲೈ 7, 8ರಂದು ಸಿಇಟಿ

ಬೆಂಗಳೂರು: ಪ್ರಸಕ್ತ ಸಾಲಿನ ವೃತ್ತಿಪರ ಕೋರ್ಸ್‌ಗಳ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ಜುಲೈ 7 ಮತ್ತು 8ರಂದು ನಡೆಯಲಿದೆ.

7ರಂದು ಬೆಳಿಗ್ಗೆ ಜೀವವಿಜ್ಞಾನ, ಮಧ್ಯಾಹ್ನ ಗಣಿತ, 8ರಂದು ಬೆಳಿಗ್ಗೆ ಭೌತ ವಿಜ್ಞಾನ, ಮಧ್ಯಾಹ್ನ ರಸಾಯನವಿಜ್ಞಾನ, 9ರಂದು ಬೆಳಿಗ್ಗೆ ಕನ್ನಡ (ಬೆಂಗಳೂರಿನಲ್ಲಿ ಮಾತ್ರ) ಪರೀಕ್ಷೆ ನಡೆಯಲಿದೆ. ಪರೀಕ್ಷೆಯ ಅವಧಿ ಬೆಳಿಗ್ಗೆ 10.30ರಿಂದ 11.50, ಮಧ್ಯಾಹ್ನ 2.30ರಿಂದ 3.50. ಕನ್ನಡ ಪರೀಕ್ಷೆ 11.30ರಿಂದ 12.30ರವರೆಗೆ ನಡೆಯಲಿದೆ.

ಪರೀಕ್ಷಾ ವೇಳಾಪಟ್ಟಿ ಶನಿವಾರ ಪ್ರಕಟಿಸಿದ ಉನ್ನತ ಶಿಕ್ಷಣ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಾ.ಸಿ. ಎನ್. ಅಶ್ವತ್ಥನಾರಾಯಣ, ‘ಹೊರನಾಡು ಹಾಗೂ ಗಡಿನಾಡು ಕನ್ನಡಿಗ ಅಭ್ಯರ್ಥಿಗಳು ಕನ್ನಡ ಪರೀಕ್ಷೆ ಬರೆಯಲಿದ್ದಾರೆ’ ಎಂದರು.

ಎಂಜಿನಿಯರಿಂಗ್, ಕೃಷಿ ವಿಜ್ಞಾನ, ಪಶುವೈದ್ಯ, ಯೋಗ ಮತ್ತು ನ್ಯಾಚುರೋಪತಿ, ಬಿ ಫಾರ್ಮ, ಫಾರ್ಮ-ಡಿ ಮತ್ತಿತರ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಸಿಇಟಿ ನಡೆಸಲಿದೆ.

ಸಂವಿಧಾನ ತಿದ್ದುಪಡಿ ಅನಿವಾರ್ಯ: ದೊಡ್ಡರಂಗೇಗೌಡ

ಹಾಸನ: ‘ಬಿ.ಆರ್. ಅಂಬೇಡ್ಕರ್ ರಚಿಸಿರುವ ಸಂವಿಧಾನದ ಕೆಲ ಕಾನೂನುಗಳು 2021ಕ್ಕೆ ಪ್ರಸ್ತುತ ಅಲ್ಲ. ಹಾಗಾಗಿ ಸಂವಿಧಾನ ತಿದ್ದುಪಡಿ ಅನಿವಾರ್ಯ’ ಎಂದು 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ನಿಯೋಜಿತ ಅಧ್ಯಕ್ಷ ಪ್ರೊ. ದೊಡ್ಡರಂಗೇಗೌಡ ಹೇಳಿದರು.

ಶನಿವಾರ ನಡೆದ ಹಾಸನ ಜಿಲ್ಲಾ 19ನೇ ಕನ್ನಡ ಸಾಹಿತ್ಯ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

‘ಈ ದೇಶ, ಹೊಸ ಕಾಲಕ್ಕೆ ತಕ್ಕಂತೆ ಸಂವಿಧಾನವನ್ನು ಬರೆಯುವ ಪ್ರಯತ್ನ ಮಾಡುವುದಾದರೆ, ಇದಕ್ಕಿಂತ ದೊಡ್ಡ ಕೆಲಸ ಮತ್ತೊಂದಿಲ್ಲ. ಇದರಿಂದ ಸರ್ವರಿಗೆ ಸಮಪಾಲು, ಸಮಬಾಳು ಸಾಧ್ಯ. ಪ್ರಧಾನಿ ನರೇಂದ್ರ ಮೋದಿ ಈ ಪ್ರಯತ್ನ ಮಾಡಬೇಕು’ ಎಂದು ಮನವಿ ಮಾಡಿದರು.

ಕೋವಿಡ್ ಎರಡನೇ ಅಲೆಯ ಅಪಾಯ

ಆತಿಥ್ಯ ತಾಣಗಳಲ್ಲಿ ಮುನ್ನೆಚ್ಚರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಎರಡನೇ ಅಲೆಯ ಅಪಾಯ ಇರುವ ಕಾರಣ ಆತಿಥ್ಯ ತಾಣಗಳಲ್ಲಿ ಸೂಕ್ತ ಮುನ್ನೆಚ್ಚರಿಕೆ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ನಿರ್ಬಂಧಿತ ವಲಯದಲ್ಲಿ (ಕಂಟೈನ್ಮೆಂಟ್ ಝೋನ್) ಆಹಾರ ನಿರ್ವಹಣೆ ಹಾಗೂ ಅಡುಗೆ ಸೇವೆಗಳು ಮುಚ್ಚಲ್ಪಡುತ್ತವೆ ಎಂದು ಆರೋಗ್ಯ ಇಲಾಖೆ ಸುತ್ತೋಲೆ ಹೊರಡಿಸಿದೆ.

ವಿವಾಹ, ರಾಜಕೀಯ ಸಮಾವೇಶ ಸೇರಿದಂತೆ ವಿವಿಧ ಸಮಾರಂಭಗಳಿಗೆ ಅಡುಗೆ ಸೇವೆ ನೀಡುವವರು ಹಾಗೂ ಹೋಟೆಲ್, ರೆಸ್ಟೋರೆಂಟ್, ಡಾಬಾಗಳಲ್ಲಿ ಕಾರ್ಯನಿರ್ವಹಿಸುವವರು ಕೊರೊನಾ ಸೋಂಕು ಹರಡುವುದನ್ನು ತಡೆಯಲು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು. ಅಡುಗೆ ಸೇವೆಯಲ್ಲಿ ಕೆಲಸ ಮಾಡುವವರು ಹಾಗೂ ಆಹಾರ ನಿರ್ವಹಿಸುವವರು ಕನಿಷ್ಠ ಆರು ಅಡಿ ಅಂತರವನ್ನು ಕಾಯ್ದುಕೊಂಡು ಕಾರ್ಯನಿರ್ವಹಿಸಬೇಕು. ಕಡ್ಡಾಯವಾಗಿ ಮುಖಗವಸನ್ನು ಧರಿಸಿರಬೇಕು. ಕೈಗಳು ಗಲೀಜಾಗದಿದ್ದರೂ ಆಗಾಗ ಕೈಗಳನ್ನು 40ರಿಂದ 60 ಸೆಕೆಂಡ್‌ಗಳು ಸಾಬೂನಿನಿಂದ ತೊಳೆದುಕೊಳ್ಳುತ್ತಿರಬೇಕು. ಸೋಂಕು ನಿವಾರಕ ದ್ರಾವಣದಿಂದ ಕೈಗಳನ್ನು ಸ್ವಚ್ಛಮಾಡಿಕೊಳ್ಳುವ ಅಭ್ಯಾಸವನ್ನು ರೂಢಿಸಿಕೊಳ್ಳಬೇಕು ಎಂದು ಇಲಾಖೆ ಸೂಚಿಸಿದೆ.

ಇಲಾಖೆ ನೀಡಿದ ಸೂಚನೆಗಳು

- ಕೆಮ್ಮುವಾಗ ಮತ್ತು ಸೀನುವಾಗ ಮೂಗು–ಬಾಯಿಯನ್ನು ಕರವಸ್ತ್ರ, ಮೊಣಕೈ ಅಥವಾ ಟಿಶ್ಯೂ ಪೇಪರ್‌ಗಳಿಂದ ಮುಚ್ಚಿಕೊಳ್ಳಬೇಕು.
- ಅನಾರೋಗ್ಯ ಸಮಸ್ಯೆಗಳು ಕಾಣಿಸಿಕೊಂಡಲ್ಲಿ ಕೂಡಲೇ ಹತ್ತಿರದ ಆರೋಗ್ಯ ಕೇಂದ್ರಕ್ಕೆ ತೆರಳಿ, ತಪಾಸಣೆ ಮಾಡಿಸಿಕೊಳ್ಳಬೇಕು.
- ಆಹಾರವನ್ನು ತಯಾರಿಸುವಾಗ ಹಾಗೂ ಆಹಾರ ಪದಾರ್ಥವನ್ನು ಬಡಿಸುವಾಗ ಬಳಸಿ ಬಿಸಾಡಬಹುದಾದ ಕೈಗವಸುಗಳನ್ನು ಧರಿಸಬೇಕು.
- ಲಕ್ಷಣ ರಹಿತ ಸಿಬ್ಬಂದಿಗೆ ಮಾತ್ರ ಕೆಲಸಕ್ಕೆ ಹಾಜರಾಗಲು ಅನುಮತಿ ನೀಡಬೇಕು. ಯಾವಾಗಲೂ ಮುಖಗವಸು ಧರಿಸಿರಬೇಕು.
- ಥರ್ಮಲ್ ಸ್ಕ್ಯಾನರ್ ಮೂಲಕ ದೇಹದಲ್ಲಿನ ಉಷ್ಣಾಂಶವನ್ನು ಪ್ರತಿನಿತ್ಯ ತಪಾಸಣೆ ಮಾಡಬೇಕು. ಸೋಂಕು ನಿವಾರಕ ದ್ರಾವಣವನ್ನು ಇಡಬೇಕು.
- ಗ್ರಾಹಕರು ಸರಿಯಾಗಿ ಅಂತರವನ್ನು ಕಾಯ್ದುಕೊಳ್ಳುವಂತೆ ಆತಿಥ್ಯ ಕೇಂದ್ರಗಳ ಮುಖ್ಯಸ್ಥರು ನೋಡಿಕೊಳ್ಳಬೇಕು.
- ತಿಂಡಿ–ಊಟಗಳಿಗೆ ಬಳಸಿ ಬಿಸಾಡಬಹುದಾದ ತಟ್ಟೆಗಳು, ಚಮಚಗಳನ್ನು ಹೆಚ್ಚಾಗಿ ಬಳಸಬೇಕು.
- ನೈಸರ್ಗಿಕ ಗಾಳಿ, ಬೆಳಕಿನ ವ್ಯವಸ್ಥೆ ಇರುವಂತೆ ನೋಡಿಕೊಳ್ಳಬೇಕು.
- ಕೈತೊಳೆಯುವ ಸ್ಥಳ, ಶೌಚಾಲಯಗಳಲ್ಲಿ ಸ್ವಚ್ಛತೆಗೆ ಆದ್ಯತೆ ನೀಡಬೇಕು.
- ಕುರ್ಚಿ, ಬಾಗಿಲು, ನೆಲವನ್ನು ಸೋಂಕು ನಿವಾರಕದಿಂದ ಸ್ವಚ್ಛಮಾಡಬೇಕು.

ಅಡ್ಡ ಪರಿಣಾಮ 22ಕ್ಕೆ ಏರಿಕೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಲಸಿಕೆ ಪಡೆದವರಲ್ಲಿ ಮತ್ತೆ ಇಬ್ಬರಿಗೆ ಗಂಭೀರ ಸ್ವರೂಪದ ಅಡ್ಡ ಪರಿಣಾಮಗಳು ಕಾಣಿಸಿಕೊಂಡಿರುವುದು ಶನಿವಾರ ದೃಢಪಟ್ಟಿದೆ. ಇದರಿಂದಾಗಿ ಈವರೆಗೆ ಅಡ್ಡ ಪರಿಣಾಮ ಎದುರಿಸಿದವರ ಸಂಖ್ಯೆ 22ಕ್ಕೆ ತಲುಪಿದೆ.


ಧಾರವಾಡದ 40 ವರ್ಷದ ಪೌರಕಾರ್ಮಿಕರೊಬ್ಬರು ಫೆ.10ರಂದು ಕೋವಿಡ್ ಲಸಿಕೆ ಪಡೆದುಕೊಂಡಿದ್ದರು. ಅದೇ ದಿನ ಅವರಿಗೆ ಜ್ವರ ಸೇರಿದಂತೆ ವಿವಿಧ ಅನಾರೋಗ್ಯ ಸಮಸ್ಯೆಗಳು ಕಾಣಿಸಿಕೊಂಡಿದ್ದವು. ಎಸ್‌ಡಿಎಂ ಆಸ್ಪತ್ರೆಯಲ್ಲಿ ಹೊರರೋಗಿಯಾಗಿ ಸೇವೆ ಪಡೆದುಕೊಂಡಿದ್ದರು. ಫೆ.18ರಂದು ಕೆಮ್ಮು ಮತ್ತು ಉಸಿರಾಟದ ಸಮಸ್ಯೆ ಕಾಣಿಸಿಕೊಂಡ ಕಾರಣ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಬಳ್ಳಾರಿಯಲ್ಲಿ 38 ವರ್ಷದ ಪೌರಕಾರ್ಮಿಕ ಫೆ.19ರಂದು ಲಸಿಕೆ ಪಡೆದಿದ್ದರು. ಎರಡು ಗಂಟೆಗಳ ಬಳಿಕ ಅವರಿಗೆ ಜ್ವರ ಕಾಣಿಸಿಕೊಂಡಿದೆ. ಅವರಿಗೆ ಅಲ್ಲಿನ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

ರಾಜ್ಯದಲ್ಲಿ ಶನಿವಾರ ನಿಗದಿಪಡಿಸಲಾಗಿದ್ದ ಫಲಾನುಭವಿಗಳಲ್ಲಿ 21,935 ಮಂದಿ ಕೋವಿಡ್ ಲಸಿಕೆ ಪಡೆದುಕೊಂಡಿದ್ದಾರೆ.

ಲಾಕ್‌ಡೌನ್ ಜಾರಿ ಚಿಂತನೆ ಇಲ್ಲ: ಸಚಿವ ಸುಧಾಕರ್

ಲಸಿಕೆ: ಕೇವಲ ಶೇ 57ರಷ್ಟು ಪ್ರಗತಿ

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ರಾಜ್ಯದಲ್ಲಿ ಈವರೆಗೆ 6,32,711 ಮಂದಿ ಲಸಿಕೆ ಪಡೆದಿದ್ದು, ಶೇ 57ರಷ್ಟು ಪ್ರಗತಿ ಸಾಧಿಸಲಾಗಿದೆ’ ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಹೇಳಿದರು.


ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, ‘ತುಮಕೂರು ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಅತೀ ಹೆಚ್ಚು ಶೇ 78ರಷ್ಟು ಮಂದಿ ಲಸಿಕೆ ಪಡೆದರೆ, ಬೆಂಗಳೂರಿನಲ್ಲಿ ನಗರದಲ್ಲಿ ಅತೀ ಕಡಿಮೆ, ಶೇ 36ರಷ್ಟು ಮಂದಿ ಲಸಿಕೆ ಪಡೆದಿದ್ದಾರೆ’ ಎಂದರು.

‘ವೈದ್ಯರೇ ಲಸಿಕೆ ಪಡೆಯದಿದ್ದರೆ ಸಾಮಾನ್ಯ ಜನರು ಹೇಗೆ ಮುಂದೆ ಬಂದು ಲಸಿಕೆ ಪಡೆಯುತ್ತಾರೆ’ ಎಂದು ಪ್ರಶ್ನಿಸಿದ ಸುಧಾಕರ್, ‘ಮುಖ್ಯ ಕಾರ್ಯದರ್ಶಿ, ಜಿಲ್ಲಾಧಿಕಾರಿಗಳು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ತಜ್ಞ ವೈದ್ಯರು ಲಸಿಕೆ ಪಡೆದಿದ್ದಾರೆ. ಆರೋಗ್ಯ ಕ್ಷೇತ್ರದಲ್ಲಿರುವ ಎಲ್ಲರೂ ಮೊದಲು ಲಸಿಕೆ ಪಡೆದುಕೊಳ್ಳಬೇಕು’ ಎಂದೂ ಮನವಿ ಮಾಡಿದರು.

ಮಾರ್ಚ್ ಅಂತ್ಯದವರೆಗೆ ಗಂಭೀರ: ‘ಕೊರೊನಾ ವಿಷಯದಲ್ಲಿ ಮಾರ್ಚ್ ಅಂತ್ಯದವರೆಗೆ ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕಾಗಿದೆ. ತಾಂತ್ರಿಕ ಸಲಹಾ ಸಮಿತಿಯ ವರದಿ ಆಧಾರದಲ್ಲಿ ಈ ಮಾತು ಹೇಳುತ್ತಿದ್ದೇನೆ’ ಎಂದು ಸುಧಾಕರ್ ಹೇಳಿದರು.

‘ಮುಂದಿನ ವಾರ ತಜ್ಞರು ಮತ್ತು ಅಧಿಕಾರಿಗಳ ಜೊತೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಸಭೆ ನಡೆಸಲಿದ್ದಾರೆ. ಈ ಸಭೆಯಲ್ಲಿ ಕೆಲವು ಮಹತ್ವದ ತೀರ್ಮಾನಗಳನ್ನು ತೆಗೆದುಕೊಳ್ಳಲಿದ್ದಾರೆ’ ಎಂದ ಅವರು, ರಾಜ್ಯದಲ್ಲಿ ಲಾಕ್‌ಡೌನ್ ಮಾಡುವ ಯಾವುದೇ ಚಿಂತನೆ ಇಲ್ಲ ಎಂದರು.

ನಗರದ ಕೋವಿಡ್ ಪ್ರಕರಣಗಳ ಅಂಕಿ–ಅಂಶ



ಗುತ್ತಿಗೆ ಆಧಾರದ ಸಿಬ್ಬಂದಿ ರಜೆ ಕೇಳಿದ್ದಕ್ಕೆ ಸೇವೆಯಿಂದ ವಜಾಗೊಳಿಸಿದ್ದ ಅಧಿಕಾರಿಗಳು

ಹೆರಿಗೆ ರಜೆ ನೀಡದ ಪೌರಾಡಳಿತ ನಿರ್ದೇಶನಾಲಯಕ್ಕೆ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗುತ್ತಿಗೆ ಆಧಾರದಲ್ಲಿ ಯೋಜನಾ ಮಾಹಿತಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಮಹಿಳೆಗೆ ಹೆರಿಗೆ ರಜೆ ನೀಡದೆ ಸೇವೆಯಿಂದ ವಜಾಗೊಳಿಸಿದ ಪೌರಾಡಳಿತ ನಿರ್ದೇಶನಾಲಯಕ್ಕೆ ಹೈಕೋರ್ಟ್ ₹25 ಸಾವಿರ ದಂಡ ವಿಧಿಸಿದೆ.

ಬೆಂಗಳೂರಿನ ಬಿ.ಎಸ್. ರಾಜೇಶ್ವರಿ ಎಂಬುವರು ಸಲ್ಲಿಸಿದ್ದ ಅರ್ಜಿಯನ್ನು ಪುರಸ್ಕರಿಸಿದ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಪೀಠ ಈ ಆದೇಶ ನೀಡಿದೆ.

‘ಹೆರಿಗೆಗೆ ರಜೆ ಪಡೆಯುವ ಹಕ್ಕನ್ನು ಸಂವಿಧಾನದ ಪರಿಚ್ಛೇದ 42ರಲ್ಲಿ ನೀಡಲಾಗಿದೆ. ರಜೆ ನೀಡುವ ಮೂಲಕ ಮಹಿಳೆಯ ಹಕ್ಕನ್ನು ಸರ್ಕಾರ ಕಾಪಾಡಬೇಕು. ಹೆರಿಗೆ ರಜೆ ನೀಡದೆ ಅವರನ್ನು ಸೇವೆಯನ್ನು ವಜಾಗೊಳಿಸುವ ಮೂಲಕ ಸಂವಿಧಾನದ ಹಕ್ಕನ್ನು ನೀಡದೆ ಉಲ್ಲಂಘಿಸಲಾಗಿದೆ’ ಎಂದು ಪೀಠ ಅಭಿಪ್ರಾಯಪಟ್ಟಿದೆ.

‘ವಜಾಗೊಳಿಸಿ 2019ರ ಆ.29ರಂದು ಹೊರಡಿಸಿದ್ದ ಆದೇಶವನ್ನು ಪೀಠ ವಜಾಗೊಳಿಸಿತು. ಮುಂದಿನ ಎರಡು ವಾರಗಳ ಒಳಗೆ ಅರ್ಜಿದಾರರನ್ನು ಸೇವೆಗೆ ಮರು ನಿಯೋಜನೆ ಮಾಡಿಕೊಳ್ಳಬೇಕು. ವಜಾಗೊಳಿಸಿದ ದಿನದಿಂದ ಮರು ನಿಯೋಜನೆಗೊಳ್ಳುವ ತನಕದ ವೇತನದಲ್ಲಿ ಶೇ 50ರಷ್ಟು ಹಿಂಬಾಕಿ ನೀಡಬೇಕು. ದಂಡ ಮೊತ್ತವನ್ನು ಆದೇಶ ಹೊರಡಿಸಿದ ಅಧಿಕಾರಿಯಿಂದ ವಸೂಲಿ ಮಾಡಬೇಕು’ ಎಂದು ತಿಳಿಸಿದೆ.

ರಾಜೇಶ್ವರಿ ಅವರನ್ನು 2009ರಲ್ಲಿ ಗುತ್ತಿಗೆ ಆಧಾರದಲ್ಲಿ ಪೌರಾಡಳಿತ ನಿರ್ದೇಶನಾಲಯ ನೇಮಕ ಮಾಡಿಕೊಂಡಿತ್ತು. ಹೆರಿಗೆ ರಜೆ ಕೋರಿ ಅವರು 2019ರ ಜೂ.11ರಂದು ಅರ್ಜಿ ಸಲ್ಲಿಸಿದ್ದರು. ಅರ್ಜಿ ತಿರಸ್ಕರಿಸಿದ್ದ ನಿರ್ದೇಶನಾಲಯ, ನೋಟಿಸ್ ನೀಡಿ ಕರ್ತವ್ಯಕ್ಕೆ ಹಾಜರಾಗುವಂತೆ ಸೂಚಿಸಿತ್ತು. ಹೆರಿಗೆ ಸಂದರ್ಭದಲ್ಲಿ ಕರ್ತವ್ಯಕ್ಕೆ ಅವರು ಹಾಜರಾಗಲಿಲ್ಲ. ಇದರಿಂದ ಅವರನ್ನು ಸೇವೆಯಿಂದ ವಜಾಗೊಳಿಸಿ ನಿರ್ದೇಶನಾಲಯ ಆದೇಶ ಹೊರಡಿಸಿತ್ತು. ಇದನ್ನು ಪ್ರಶ್ನಿಸಿ ರಾಜೇಶ್ವರಿ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದರು.



ಅಜೀಮ್ ಪ್ರೇಮ್‌ಜಿ ವಿರುದ್ಧ ಅರ್ಜಿ ಸಲ್ಲಿಸಿದವರಿಗೆ ₹10 ಲಕ್ಷ ದಂಡ

ಬೆಂಗಳೂರು: ಬ್ಯಾಂಕೇತರ ಹಣಕಾಸು ವ್ಯವಹಾರ ನಡೆಸುತ್ತಿರುವ ಕಾರಣ ಉದ್ಯಮಿ ಅಜೀಮ್ ಪ್ರೇಮ್‌ಜಿ ವಿರುದ್ಧ ತನಿಖೆ ಕೋರಿ ಸಲ್ಲಿಕೆಯಾಗಿದ್ದ ಅರ್ಜಿ ವಜಾಗೊಳಿಸಿರುವ ಹೈಕೋರ್ಟ್, ಪದೇ ಪದೇ ಅರ್ಜಿ ಸಲ್ಲಿಸಿದ ಕಾರಣಕ್ಕೆ ಅರ್ಜಿದಾರರಿಗೆ ₹10 ಲಕ್ಷ ದಂಡ ವಿಧಿಸಿದೆ.

ಇಂಡಿಯನ್ ಅವೇಕ್ ಫಾರ್ ಟ್ರಾನ್ಸ್‌ಪರೆನ್ಸಿ ಸಂಸ್ಥೆ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಪಿ.ಎಸ್. ದಿನೇಶ್ ಕುಮಾರ್ ಅವರಿದ್ದ ಪೀಠ, ಈ ಆದೇಶ ನೀಡಿದೆ.

ಕಾನೂನು ಬಾಹಿರವಾಗಿ ಬ್ಯಾಂಕೇತರ ಹಣಕಾಸು ವ್ಯವಹಾರ ನಡೆಸಲಾಗುತ್ತಿದೆ. ಆರ್‌ಬಿಐ ಕಾಯ್ದೆಯಡಿ ಕ್ರಿಮಿನಲ್ ಕ್ರಮ ತೆಗೆದುಕೊಳ್ಳಬೇಕು ಎಂದು ಅರ್ಜಿದಾರರು ಕೋರಿದ್ದರು. ಈ ಅರ್ಜಿಯನ್ನು ಜನವರಿಯಲ್ಲಿ ಹೈಕೋರ್ಟ್ ವಜಾಗೊಳಿಸಿತ್ತು.

‘ಅರ್ಜಿದಾರರ ದೂರಿಗೆ ಆರ್‌ಬಿಐ ಕೂಡ 2017ರಲ್ಲಿ ಉತ್ತರ ನೀಡಿದೆ. ಈ ಬಗ್ಗೆ ಬೇರೆ ತಕರಾರು ಇದ್ದರೆ ಸೂಕ್ತ ವೇದಿಕೆಯಲ್ಲಿ ಪರಿಹರಿಸಿಕೊಳ್ಳಬಹುದು. ಪದೇ ಪದೇ ನ್ಯಾಯಾಲಯಗಳಿಗೆ ಅರ್ಜಿ ಸಲ್ಲಿಸುವ ಮೂಲಕ ಸಮಯ ವ್ಯರ್ಥ ಮಾಡಲಾಗುತ್ತಿದೆ. ನ್ಯಾಯಾಂಗ ದುರ್ಬಳಕೆ ಮಾಡಲಾಗುತ್ತಿದೆ’ ಎಂದು ಅಭಿಪ್ರಾಯಿಸಿದ ಪೀಠ, ದಂಡ ವಿಧಿಸಿ ಆದೇಶಿಸಿದೆ.

ಅಕಾಲಿಕ ಮಳೆ: ಮಾವು, ಹುಣಸೆ ಬೆಳೆಗೆ ಹಾನಿ

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: ಸೋಂಪುರ ಹೋಬಳಿಯುದ್ದಕ್ಕೂ ಮೂರು ದಿನಗಳಿಂದ ಸುರಿಯುತ್ತಿರುವ ಅಕಾಲಿಕ ಮಳೆಯಿಂದ ಮಾವು, ಹುಣಸೆ, ಶೀಗೆ, ಫಸಲುಗಳು ಹಾಳಾಗಿದ್ದು, ರೈತರು ಕಂಗಾಲಾಗಿದ್ದಾರೆ.

ಗುರುವಾರ ರಾತ್ರಿ ಮಳೆ ಪ್ರಮಾಣ ಕಡಿಮೆ ಇತ್ತು. ಶುಕ್ರವಾರ ಸಂಜೆ 8 ಗಂಟೆಗೆ ಆರಂಭವಾದ ಮಳೆ ರಾತ್ರಿಯೆಲ್ಲಾ ಗುಡುಗು ಮಿಂಚು ಸಮೇತ ಎಡಬಿಡದೆ ಸುರಿಯಿತು. ಜೊತೆಗೆ ಆಲಿಕಲ್ಲುಗಳೂ ಬಿದ್ದವು.

‘ಮಳೆ ಹಾಗೂ ಆಲಿಕಲ್ಲಿನಿಂದ ಮಾವಿನ ಹೂ ಮತ್ತು ಪೀಚು, ಹುಣಸೆ ಹಣ್ಣುಗಳು ನೆಲಕ್ಕುರುಳಿವೆ. ಇದರಿಂದ ರೈತರ ಆದಾಯಕ್ಕೆ ಖೋತಾ ಆಗಿದೆ. ಒಕ್ಕಣೆ ಮಾಡಿದ ರಾಗಿ ಹುಲ್ಲಿನ ಮೆದೆಗಳು ನೀರು ತೆಗೆದುಕೊಂಡು ಕೊಳೆತು ಹೋಗುವ ಭಯ ಮೂಡಿದೆ’ ಎಂದು ಗ್ರಾಮಸ್ಥರು ಆತಂಕ ವ್ಯಕ್ತಪಡಿಸಿದರು.



ಮಳೆಯಿಂದ ಹೂವು ಉದುರಿರುವ ಮಾವಿನ ಮರಗಳು

‘ರಾಗಿ, ಭತ್ತ, ತೊಗರಿ, ಹುರುಳಿ, ಇನ್ನಿತರ ಬೆಳೆಗಳನ್ನು ಕೊಯ್ಲು ಮಾಡುವಾಗ, ಕೂಡಿಡುವಾಗ ಮತ್ತು ಒಕ್ಕಣಿ ಮಾಡುವಾಗ ಅಕಾಲಿಕ ಮಳೆ ಬಂದು ಫಸಲು ಹಾಳಾಗಿತ್ತು. ಹುಲ್ಲು, ರಾಗಿ ಕಪ್ಪಾದವು. ಇದೀಗ ಮತ್ತೆ ಮಳೆ ಬಂದು, ಆದಾಯದ ಮೂಲಗಳಾದ ಹುಣಸೆ, ಮಾವು ಶೀಗೆಕಾಯಿ ಬೆಳೆಗಳು ಹಾಳಾಗಿವೆ’ ಎಂದು ರೈತ ತಿಮ್ಮಣ್ಣ ಅಳಲು ತೋಡಿಕೊಂಡರು.

ಭಾನುವಾರ, ಫೆಬ್ರುವರಿ 21, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 52 | ಪುಟ 14+4+4
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಗ್ರಾಮಾಫೋನ್ ಮುಂದೆ ನಾಯಿಯೊಂದು ಆಲಿಸುತ್ತಿರುವಂತೆ ಕುಳಿತಿರುವ ಚಿತ್ರ ನೋಡಿದಾಗ ಆ ಜಮಾನಾದ ರಿಕಾರ್ಡಿಂಗ್‌ಗಳು, ಅವುಗಳ ಜಾಹೀರಾತುಗಳು ಮನದಂಗಳದಲ್ಲಿ ಮೆರವಣಿಗೆ ಹೊರಡುತ್ತವೆ...



ಆರ್ಥಿಕ ನೆರವು: ಬೇಡಿಕೆ ಸಲ್ಲಿಸಿದ ಬಿಎಸ್‌ವೈ 4
ಗ್ರಾಮ ವಾಸ್ತವ್ಯದಲ್ಲಿ ಕಂದಾಯ ಸಚಿವ ಆರ್. ಅಶೋಕ ಹೇಳಿಕೆ
ಕೊಡಗು: 1,450 ಎಕರೆಯಷ್ಟು ಕಾಫಿ ಬೆಳೆಗೆ ಹಾನಿ 7
ದಲ್ಲಾಳಿಗಳ ಹೊರಗಟ್ಟಲು ಆಡಳಿತ ಹಳ್ಳಿ ಕಡೆ 4

ವಲಸೆ ಮಧ್ಯವರ್ತಿಗೆ ಬುಕ್ರದೆಸೆ

• ಗಣೇಶ ಚಂದನಶಿವ

ಒಳನೋಟ
ಕಾರ್ಮಿಕರ ಅಳಲು
ಪ್ರತಿಕ್ರಿಯಿಸಿ: 9606038256

ಕಲಬುರ್ಗಿ: ಬದುಕಿನ ಬಂಡಿ ಸಾಗಿಸಲು ಬಡವರು ಕೆಲಸ ಅರಸಿ ವಲಸೆ ಹೋಗುವುದು ನಿಂತಿಲ್ಲ. ಉದ್ಯೋಗ ಖಾತ್ರಿ, ಸರ್ಕಾರಿ ಪಡಿತರ ಇವರ ಕೈ ಹಿಡಿಯುತ್ತಿಲ್ಲ.

'ವಲಸೆಯಿಂದ ಆರ್ಥಿಕ ಸಬಲತೆ' ಎಂಬುದು ದೂರದ ಮಾತು. ಕಲ್ಯಾಣ ಕರ್ನಾಟಕ ಮತ್ತು ಮುಂಬೈ ಕರ್ನಾಟಕ ಭಾಗದಿಂದ ಕೆಲಸ ಅರಸಿ ರಾಜ್ಯ–ಹೊರ ರಾಜ್ಯಗಳ ಮಹಾನಗರಗಳಿಗೆ ವಲಸೆ ಹೋಗುವವರ ಸಂಖ್ಯೆ ಹೆಚ್ಚು. ಕೈಗಾರಿಕೆಗಳು ಹೆಚ್ಚಿನ ಸಂಖ್ಯೆಯಲ್ಲಿ ಇಲ್ಲ. ಗುಡಿ–ಗೃಹ ಕೈಗಾರಿಕೆಗಳಿಗೆ ಉತ್ತೇಜನ ಸಿಗುತ್ತಿಲ್ಲ. ಅರಣ್ಯ ಪ್ರದೇಶ ಅತ್ಯಲ್ಪ. ಕಲ್ಯಾಣ ಕರ್ನಾಟಕದಲ್ಲಿ ದಲಿತರು ಮತ್ತು ಹಿಂದುಳಿದ ವರ್ಗಗಳವರಲ್ಲಿ ಭೂ ಒಡೆತನ ಬಹಳ ಕಡಿಮೆ. ಇದ್ದರೂ ಚೂರುಪಾರು ಭೂಮಿ. ಹೀಗಾಗಿ ಇಲ್ಲಿ ಕೃಷಿ ಕೂಲಿಕಾರ್ಮಿಕರ ಸಂಖ್ಯೆ ಅಧಿಕ. ಮಳೆ– ಬೆಳೆ ಬಾರದಿದ್ದಾಗ ಅವರಿಗೆ ಆಶಾಕಿರಣವಾಗಿ ಕಾಣುವುದು ವಲಸೆ.

ಇದು ಅಸುರಕ್ಷಿತ ಬದುಕಿನ ಪ್ರತಿರೂಪ. ಊರಿನಿಂದ ಪ್ರಯಾಣ ಬೆಳೆಸುವುದರೊಂದಿಗೆ ಅವರ ಬೆನ್ನು ಬೀಳುತ್ತದೆ. ಪ್ರಯಾಣ ದರ ಕಡಿಮೆ ಎಂಬ ಕಾರಣಕ್ಕೆ ಅಸುರಕ್ಷಿತ/ ಸರಕು ವಾಹನಗಳಲ್ಲಿ ಪ್ರಯಾಣಿಸುತ್ತಾರೆ. ಇಂತಹ ವಾಹನಗಳು ಅಪಘಾತಕ್ಕೀಡಾಗಿ ಲೆಕ್ಕವಿಲ್ಲದಷ್ಟು ಜನ ಸತ್ತಿದ್ದಾರೆ. ಕೆಲಸದ ವೇಳೆ ಸುರಕ್ಷತಾ ನಿಯಮಗಳ ಪಾಲನೆಯಾಗುವುದಿಲ್ಲ. ಗುಡಿಸಲು ಹಾಕಿಕೊಂಡು ಅಭದ್ರತೆಯಲ್ಲಿ ಬದುಕು ಸಾಗಿಸಬೇಕು. ಹೀಗೆ ಎರಡೂ ಕಡೆ ಅಸುರಕ್ಷತೆಯ ಭಯ. ಇನ್ನು 'ದಲ್ಲಾಳಿಗಳು' ಕಡಿಮೆ ಕೂಲಿ ನೀಡಿ ವಂಚಿಸುವುದು, ಮುಂಗಡ ಹಣ ಕೊಟ್ಟು ಹೆಚ್ಚು ಕೆಲಸ ಮಾಡಿಸಿ ಕೊಂಡು ಶೋಷಿಸುವುದಕ್ಕೆ ಕಡಿವಾಣ ಬಿದ್ದಿಲ್ಲ. ರಾಜ್ಯದಿಂದ ಹೊರಗೆ ಹೋಗುವ, ಹೊರ ರಾಜ್ಯಗಳಿಂದ ನಮ್ಮಲ್ಲಿಗೆ ಬರುವ ಕಾರ್ಮಿಕರು ಇಂತಹ ದಾರುಣ ಸ್ಥಿತಿಯಲ್ಲೇ ಬದುಕು ಸಾಗಿಸಬೇಕು. ಆದರೂ, 'ಗುಳೆ ಹೋಗುವುದು ಕೆಲವರಿಗೆ ಹವ್ಯಾಸವಾಗಿದೆ' ಎಂದು ಅಧಿಕಾರಸ್ಥರು ಹೀಯಾಳಿಸಿದ್ದೂ ಉಂಟು!

ವಲಸೆ ಬಹುವಾಗಿ ಪರಿಣಾಮ ಬೀರುತ್ತಿರುವುದು ವೃದ್ಧರು ಮತ್ತು ಮಕ್ಕಳ ಮೇಲೆ. ವಯಸ್ಸಾದವರನ್ನು ಊರಲ್ಲೇ ಬಿಟ್ಟು ದುಡಿಯಲು ಬೇರೆ ಊರುಗಳಿಗೆ ಹೋಗುವುದರಿಂದ ಆ ಹಳ್ಳಿ, ತಾಂಡಾ, ಹಟ್ಟಿಗಳು ವೃದ್ಧಾಶ್ರಮದಂತೆ ಭಾಸವಾಗುತ್ತಿರುತ್ತವೆ. ತಂದೆ–ತಾಯಿ ಮಕ್ಕಳನ್ನು ಕರೆದುಕೊಂಡು ಹೋಗುವುದರಿಂದ ಅಂತಹ ಮಕ್ಕಳ ಶಿಕ್ಷಣ ಅರ್ಧಕ್ಕೇ ಮೊಟಕುಗೊಳ್ಳುತ್ತದೆ.

'ವಯಸ್ಸಿಗೆ ಬಂದ ಮಗಳನ್ನು ಜೊತೆಯಲ್ಲಿ ಇಟ್ಟುಕೊಂಡು ಕೆಲಸಕ್ಕೆ ಅಲೆಯುವ ಬದಲು ಮದುವೆ ಮಾಡಿ ಕೊಟ್ಟರೆ ಆಕೆ ಗಂಡನ ಮನೆಯಲ್ಲಿ ಸುರಕ್ಷಿತವಾಗಿರಬಲ್ಲಳು' ಎಂಬ ನಂಬಿಕೆ ಬಹುಪಾಲು ಪಾಲಕರದ್ದು. ಈ ಕಾರಣಕ್ಕಾಗಿಯೇ ಬಾಲ್ಯ ವಿವಾಹಗಳು ಹೆಚ್ಚುತ್ತಿವೆ. ಈ ತಾಯಂದಿರು ರಕ್ತಹೀನತೆ ಮತ್ತು ಅಪೌಷ್ಟಿಕತೆಯಿಂದ ಬಳಲುತ್ತಾರೆ. ಈ ಕಾರಣಕ್ಕಾಗಿಯೇ ತಾಯಿ–ಶಿಶುಮರಣ ಪ್ರಮಾಣ ಹೆಚ್ಚುತ್ತಿದೆ. ವಲಸೆ ಎಂಬುದು ಸಂಕಷ್ಟಗಳ ವಾಹಕವಾಗಿಯೂ ಕಾಡುತ್ತಿದೆ.


ಕಲಬುರ್ಗಿಯಲ್ಲಿ ವಲಸಿಗ ಕುಟುಂಬದ ಮಹಿಳೆಯೊಬ್ಬರು ಕಲ್ಲು ಕೆತ್ತನೆಯಲ್ಲಿ ತೊಡಗಿರುವುದು
ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್.ಜಿ.

ಶೇ 31ರಷ್ಟು 'ಕಾಣಿಕೆ'

ರಾಜ್ಯ ಸರ್ಕಾರ 2019–20ನೇ ಸಾಲಿನಲ್ಲಿ ಎರಡು ಬಾರಿ ಗ್ರಾಮ ಸಭೆಗಳನ್ನು ನಡೆಸಿ ಶಾಲೆಯಿಂದ ಹೊರಗುಳಿದ ಮಕ್ಕಳ ಸಮೀಕ್ಷೆ ನಡೆಸಿತ್ತು. 6ರಿಂದ 13 ವಯೋಮಾನದ 70,166 ಮಕ್ಕಳು ಶಾಲೆಯಿಂದ ಹೊರಗುಳಿದ ಮಾಹಿತಿ ಲಭಿಸಿತ್ತು. ಅವರಲ್ಲಿ ಶೇ 31.10ರಷ್ಟು ಮಕ್ಕಳು ವಲಸೆ ಕಾರಣಕ್ಕಾಗಿಯೇ ಶಾಲೆಯಿಂದ ಹೊರಗುಳಿದಿರುವುದನ್ನು ಈ ಸಮೀಕ್ಷೆ ಗುರುತಿಸಿತ್ತು.

6ನೇ ಪುಟ ನೋಡಿ
ಇನ್ನಷ್ಟು ಸುದ್ದಿಗಳು 6

ಶೇ 30ರಷ್ಟು ಜನ ಮತ್ತೆ ವಲಸೆ



ಲಾಕ್‌ಡೌನ್ ವೇಳೆ ತವರಿಗೆ ಮರಳಿದ್ದ ವಲಸೆ ಕಾರ್ಮಿಕರಲ್ಲಿ ಶೇ 30ರಷ್ಟು ಜನ ಮರಳಿ ತಾವು ದುಡಿಯುವ ಸ್ಥಳಗಳಿಗೆ ಹೋಗಿದ್ದಾರೆ ಎಂಬುದು ನಾವು ನಡೆಸಿದ ಸಮೀಕ್ಷೆಯಿಂದ ಗೊತ್ತಾಗಿದೆ. ಉದ್ಯೋಗ ಖಾತ್ರಿ ಕೆಲಸ ನೀಡಿದರೂ ಅವರಿಗೆ ಆ ಶ್ರಮದಾಯಕ ಕೆಲಸ ಮಾಡುವ ರೂಢಿ ಇಲ್ಲ. ಇನ್ನು ಶೇ 40ರಷ್ಟು ಜನ ಇಲ್ಲೇ ಉಳಿದು ನರೇಗಾದಲ್ಲಿ ಕೆಲಸ ಮಾಡುತ್ತ, ಜೀವನ ನಿರ್ವಹಣೆ ಮಾಡುತ್ತಿದ್ದಾರೆ. ಇಟ್ಟಿಗೆ ತಯಾರಿಕೆಯೂ ಸೇರಿದಂತೆ ಇನ್ನೂ ಹೆಚ್ಚಿನ ಬಗೆಯ ಕಾಮಗಾರಿಗಳನ್ನು ಉದ್ಯೋಗ ಖಾತ್ರಿಯಲ್ಲಿಯೂ ತೆಗೆದುಕೊಂಡರೆ ಅರೆ ವಲಸೆ ತಡೆಗೆ ಸಹಕಾರಿಯಾಗುತ್ತದೆ. ಗ್ರಾಮೀಣ ಪ್ರದೇಶಕ್ಕಷ್ಟೇ ಸೀಮಿತವಾಗಿರುವ ನರೇಗಾವನ್ನು ನಗರ ಪ್ರದೇಶಕ್ಕೂ ವಿಸ್ತರಿಸಬೇಕು.

ಕೆ.ನೀಲಾ, ಜನವಾದಿ ಮಹಿಳಾ ಸಂಘಟನೆ ಉಪಾಧ್ಯಕ್ಷೆ

ಕಾರ್ಮಿಕರ ಕಾರ್ಡ್ ಬಗ್ಗೆ ತಿಳಿದಿಲ್ಲ!



ದೇವನಹಳ್ಳಿ ಸುತ್ತಮುತ್ತ ಕಟ್ಟಡಗಳ ನಿರ್ಮಾಣಕ್ಕೆ ಬಿಹಾರ, ಒಡಿಶಾ, ಪಶ್ಚಿಮ ಬಂಗಾಳ, ಆಂಧ್ರಪ್ರದೇಶ, ತೆಲಂಗಾಣ, ತಮಿಳುನಾಡು, ಕೇರಳ ಮತ್ತು ಉತ್ತರ ಕರ್ನಾಟಕದಿಂದ ವಲಸೆ ಬಂದಿರುವ 25 ಸಾವಿರಕ್ಕೂ ಹೆಚ್ಚು ಕಾರ್ಮಿಕರು ದುಡಿಯುತ್ತಿದ್ದೇವೆ. ನಾನು ದೇವನಹಳ್ಳಿಯಲ್ಲಿ ಆರು ವರ್ಷಗಳಿಂದ ಗಾರೆ ಕೆಲಸ ಮಾಡುತ್ತಿದ್ದೇನೆ. ಕಾರ್ಮಿಕರ ಕಾರ್ಡ್ ಬಗ್ಗೆ ತಿಳಿದಿಲ್ಲ. ಒಬ್ಬ ಅಧಿಕಾರಿಯೂ ಸಂಪರ್ಕಿಸಿಲ್ಲ.

ಬಾಬು, ವಲಸೆ ಕಾರ್ಮಿಕ

ನದಿಗಳ ಜೋಡಣೆಗೆ ಕೇಂದ್ರ ಸರ್ಕಾರದ ನೆರವು...

ಕಾವೇರಿ: ತಮಿಳುನಾಡು ವಿರುದ್ಧ ಚಕಾರವೆತ್ತದ ರಾಜ್ಯ

• ಸಿದ್ದಯ್ಯ ಹಿರೇಮಠ

ನವದೆಹಲಿ: ಕಾವೇರಿ ಕಣಿವೆಯಲ್ಲಿನ ಹೆಚ್ಚುವರಿ ನೀರನ್ನು ಬರಪೀಡಿತ ಜಿಲ್ಲೆಗಳ ಜನರ ದಾಹ ನೀಗಿಸಲು ಬಳಸಬೇಕೆಂಬ ರಾಜ್ಯದ ಸದುದ್ದೇಶಕ್ಕೆ ಸದಾ ಆಕ್ಷೇಪಣೆ ಸಲ್ಲಿಸುವ ತಮಿಳುನಾಡು, ಕಾವೇರಿಯ 45 ಟಿಎಂಸಿ ಅಡಿ ಹೆಚ್ಚುವರಿ ನೀರಿನ ಬಳಕೆಯ 'ಬೃಹತ್ ಯೋಜನೆ'ಗೆ ಭಾನುವಾರ ಸದ್ದಿಲ್ಲದೇ ಚಾಲನೆ ನೀಡುತ್ತಿದೆ.

ವ್ಯರ್ಥವಾಗಿ ಸಮುದ್ರ ಸೇರುವ ಕಾವೇರಿಯ ಹೆಚ್ಚುವರಿ ನೀರನ್ನು ಸಂಗ್ರಹಿಸುವ ಕರ್ನಾಟಕದ ಪ್ರಸ್ತಾವಿತ ಯೋಜನೆಗಳಿಗೆ ನೆರೆಯ ರಾಜ್ಯ ಕೈಗೆತ್ತಿಕೊಳ್ಳುತ್ತಿರುವ ಈ ಯೋಜನೆಯಿಂದ ತಡೆ ಬೀಳುವ ಸಾಧ್ಯತೆ ಇದ್ದರೂ, ರಾಜ್ಯ ಸರ್ಕಾರ ಇದುವರೆಗೂ ಚಕಾರ ಎತ್ತಿಲ್ಲ.

ವಿಧಾನಸಭೆ ಚುನಾವಣೆಗೆ ಸನ್ನದ್ಧವಾಗಿರುವ ತಮಿಳುನಾಡಿನಲ್ಲಿ ರಾಜಕೀಯ ಅಸ್ತಿತ್ವ ಕಂಡುಕೊಳ್ಳುವ ಉದ್ದೇಶದೊಂದಿಗೆ 'ನದಿ ಜೋಡಣೆ' ಯೋಜನೆಗೆ ಆರ್ಥಿಕ ನೆರವು ಒದಗಿಸಿರುವ ಕೇಂದ್ರದ ಬಿಜೆಪಿ ಸರ್ಕಾರದ ನಡೆಯು ರಾಜ್ಯದ ಹಿತಾಸಕ್ತಿಗೆ ಮಾರಕವಾಗಲಿದ್ದರೂ, ರಾಜ್ಯ ಸರ್ಕಾರ ಆಕ್ಷೇಪಣೆ ಸಲ್ಲಿಸದಿರುವುದು ಆಶ್ಚರ್ಯ ಮೂಡಿಸಿದೆ.

ರಾಜ್ಯದ ವಿರುದ್ಧ ಕ್ಯಾತೆ: ಕರ್ನಾಟಕ ಸೇರಿದಂತೆ ಕಾವೇರಿ ಕಣಿವೆಯ ಎಲ್ಲ ನಾಲ್ಕೂ ರಾಜ್ಯಗಳಿಗೆ ನೀರು ಹಂಚಿಕೆ ಮಾಡಿ 2018ರ ಫೆಬ್ರುವರಿ 16ರಂದು ಸುಪ್ರೀಂ ಕೋರ್ಟ್ ತೀರ್ಪನ್ನು ನೀಡಿದೆ.

8ನೇ ಪುಟ ನೋಡಿ

ಪ್ರಜಾವಾಣಿ ವಿಶೇಷ

ತಮಿಳುನಾಡು ರೂಪಿಸಿರುವ ಯೋಜನೆ

ಕೇಂದ್ರದ ಆರ್ಥಿಕ ನೆರವಿನೊಂದಿಗೆ ₹ 6,941 ಕೋಟಿ ವೆಚ್ಚದಲ್ಲಿ ವೆಲ್ಲಾರು–ವೈಗೈ ಮತ್ತು ಗುಂಡಾರು ನದಿಗಳನ್ನು ಕಾವೇರಿಯೊಂದಿಗೆ ಜೋಡಿಸುವ ಮೊದಲ ಹಂತದ ಯೋಜನೆಗೆ ತಮಿಳುನಾಡಿನ ಮುಖ್ಯಮಂತ್ರಿ ಎಡಪ್ಪಾಡಿ ಪಳನಿಸ್ವಾಮಿ ಅವರು ಭಾನುವಾರ ವಿರಾಳಿಮಲೈ– ಕುಣ್ಣತ್ತೂರ್ ಬಳಿ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ.

ಕರೂರ್ ಜಿಲ್ಲೆಯಲ್ಲಿ ನಿರ್ಮಿಸಲಾಗಿರುವ ಮಾಯನೂರ್ ಜಲಾಶಯದಿಂದ ಕಾವೇರಿಯ ಹೆಚ್ಚುವರಿ ನೀರನ್ನು ತಿರುಚ್ಚಿ, ಪುದುಕೋಟೆ, ಶಿವಗಂಗೈ ಹಾಗೂ ವಿರುಧುನಗರ ಜಿಲ್ಲೆಗಳ ಜನತೆಗೆ ಒದಗಿಸಲು, 118.45 ಕಿಲೋಮೀಟರ್ ಉದ್ದದ ಬೃಹತ್ ಕಾಲುವೆ ನಿರ್ಮಿಸಿ ಗುಂಡಾರು ನದಿಗೆ ಜೋಡಿಸುವುದು ಈ ಯೋಜನೆಯ ಮೊದಲ ಹಂತವಾಗಿದೆ. ಈ ಭಾಗದ ಒಟ್ಟು 342 ಕೆರೆಗಳನ್ನು ಭರ್ತಿ ಮಾಡಿ ಅಂತರ್ಜಲ ಮಟ್ಟ ವೃದ್ಧಿಸುವುದಲ್ಲದೆ, 42,170 ಎಕರೆ ಭೂಮಿಗೆ ನೀರಾವರಿ ಒದಗಿಸುವುದು ಈ ಯೋಜನೆಯ ಪ್ರಮುಖ ಉದ್ದೇಶ.

8ನೇ ಪುಟ ನೋಡಿ

'ಆತ್ಮನಿರ್ಭರ'ದಲ್ಲಿ ಖಾಸಗಿ ರಂಗಕ್ಕೆ ಹೆಚ್ಚು ಅವಕಾಶ: ಮೋದಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಭಾರತದ ಸ್ವಾವಲಂಬನೆಯ ಗುರಿ ಸಾಧನೆಯಲ್ಲಿ ಖಾಸಗಿ ಕ್ಷೇತ್ರಕ್ಕೆ ಮಹತ್ವದ ಪಾತ್ರವಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಕೃಷಿ ಕ್ಷೇತ್ರಕ್ಕೆ ಉತ್ತಮವಾದ ಮೂಲಸೌಕರ್ಯ ಮತ್ತು ತಂತ್ರಜ್ಞಾನ ಒದಗಿಸಲು ಇನ್ನಷ್ಟು ಸುಧಾರಣೆಗಳ ಅಗತ್ಯವಿದೆ ಎಂದೂ ಅವರು ಪ್ರತಿಪಾದಿಸಿದ್ದಾರೆ.

ನೀತಿ ಆಯೋಗದ ಆಡಳಿತ ಮಂಡಳಿಯ ಸಭೆಯನ್ನು ಉದ್ದೇಶಿಸಿ ಮೋದಿ ಅವರು ಶನಿವಾರ ಮಾತನಾಡಿದರು.

ದೇಶದ ಅಭಿವೃದ್ಧಿಯ ಪಯಣದಲ್ಲಿ ಖಾಸಗಿ ರಂಗವು ಹೆಚ್ಚು ಹುರುಪಿನಿಂದ ಭಾಗಿಯಾಗುತ್ತಿದೆ. ಈ ಉತ್ಸಾಹ ಮತ್ತು ಚೈತನ್ಯವನ್ನು ಸರ್ಕಾರವು ಗೌರವಿಸಬೇಕು. ಹಾಗಾಗಿಯೇ ಆತ್ಮನಿರ್ಭರ ಭಾರತ ಅಭಿಯಾನದಲ್ಲಿ ಖಾಸಗಿ ಕ್ಷೇತ್ರಕ್ಕೆ ಹೆಚ್ಚು ಅವಕಾಶಗಳನ್ನು ನೀಡಲಾಗುವುದು ಎಂದು ಅವರು ಹೇಳಿದ್ದಾರೆ.

ನಕ್ಷೆ ದತ್ತಾಂಶಕ್ಕೆ ಸಂಬಂಧಿಸಿದ ನಿರ್ಬಂಧಗಳನ್ನು ಸಡಿಲಗೊಳಿಸಿದ ಕ್ರಮವನ್ನು ಅವರು ಉಲ್ಲೇಖಿಸಿದರು. ಹತ್ತು ವರ್ಷಗಳ ಹಿಂದೆಯೇ ಈ ಸುಧಾರಣೆಗಳನ್ನು ಜಾರಿಗೆ ತಂದಿದ್ದರೆ ಗೂಗಲ್‌ನಂತಹ ಸಂಸ್ಥೆಗಳು ಭಾರತದಲ್ಲಿ ಸ್ಥಾಪನೆಯಾಗುತ್ತಿದ್ದವು. 'ಪ್ರತಿಭೆ ನಮ್ಮ ದೇಶದ ಜನರದ್ದು, ಆದರೆ ಉತ್ಪನ್ನವು ನಮ್ಮದು ಅಲ್ಲ' ಎಂದು ಅವರು ಹೇಳಿದರು. ನಕ್ಷೆ ಕ್ಷೇತ್ರದ ಸುಧಾರಣೆಯು ನವೋದ್ಯಮ ಹಾಗೂ ತಂತ್ರಜ್ಞಾನ ಕ್ಷೇತ್ರಕ್ಕೆ ದೊಡ್ಡ ಮಟ್ಟದಲ್ಲಿ ನೆರವು ನೀಡಲಿದೆ ಎಂದರು.



ಆತ್ಮನಿರ್ಭರ ಭಾರತ ಅಭಿಯಾನದ ಉದ್ದೇಶ ಭಾರತದ ಸ್ವಾವಲಂಬನೆ ಮಾತ್ರ ಅಲ್ಲ, ಜಗತ್ತಿನ ಅಗತ್ಯಗಳನ್ನೂ ಅದು ಪೂರೈಸಬೇಕು
ನರೇಂದ್ರ ಮೋದಿ, ಪ್ರಧಾನಿ

ಖಾದ್ಯ ತೈಲದಂತಹ ಕೃಷಿ ಉತ್ಪನ್ನಗಳನ್ನು ಹೆಚ್ಚಿಸಲು ಪ್ರಯತ್ನಿಸಬೇಕು ಮತ್ತು ಈ ಮೂಲಕ ಆಮದನ್ನು ಕಡಿತ ಮಾಡಬೇಕು. ಪ್ರತಿ ವರ್ಷ ಖಾದ್ಯ ತೈಲ ಆಮದಿಗೆ ₹65 ಸಾವಿರ ಕೋಟಿಯಿಂದ ₹70 ಸಾವಿರ ಕೋಟಿ ವೆಚ್ಚವಾಗುತ್ತಿದೆ. ಈ ಮೊತ್ತವು ನಮ್ಮ ರೈತರಿಗೆ ಸಿಗಬೇಕು. ಹಲವು ಉತ್ಪನ್ನಗಳು ಆಮದಾಗುತ್ತಿವೆ. ಇಂತಹ ಉತ್ಪನ್ನಗಳನ್ನು ಬೆಳೆಯಲು ಭಾರತದ ರೈತರಿಗೆ ಕಷ್ಟವೇನೂ ಇಲ್ಲ. ಸ್ವಲ್ಪ ಮಾರ್ಗದರ್ಶನವಷ್ಟೇ ಅವರಿಗೆ ಬೇಕಾಗಿರುವುದು ಎಂದರು.

ಆಯಾ ಪ್ರದೇಶದ ಹವಾಮಾನಕ್ಕೆ ಅನುಗುಣವಾದ ಬೆಳೆ ಬೆಳೆಯಲು ರಾಜ್ಯ ಸರ್ಕಾರಗಳು ರೈತರಿಗೆ ನೆರವು ನೀಡಬೇಕು. ಹಳೆಯ ಮತ್ತು ಅಪ್ರಸ್ತುತ ಎನಿಸಿದ ಕಾಯ್ದೆಗಳನ್ನು ರದ್ದುಪಡಿಸಬೇಕು. ಆ ಮೂಲಕ ಭಾರತದಲ್ಲಿ ವ್ಯಾಪಾರ ಮಾಡುವುದನ್ನು ಸುಲಭಗೊಳಿಸಬೇಕು. ಆರ್ಥಿಕ ಪ್ರಗತಿಗಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹೆಚ್ಚು ನಿಕಟವಾಗಿ ಕೆಲಸ ಮಾಡಬೇಕು ಎಂದು ಮೋದಿ ಹೇಳಿದ್ದಾರೆ.

ದಿಶಾಗೆ ಜಾಮೀನು: ಆದೇಶ ಕಾಯ್ದಿರಿಸಿದ ಕೋರ್ಟ್

ನವದೆಹಲಿ: ಟೂಲ್‌ಕಿಟ್ ಪ್ರಕರಣದಲ್ಲಿ ಬಂಧಿತರಾಗಿರುವ ಬೆಂಗಳೂರಿನ ಪರಿಸರ ಕಾರ್ಯಕರ್ತೆ ದಿಶಾ ರವಿ ಅವರ ಜಾಮೀನು ಅರ್ಜಿಯ ಮೇಲಿನ ಆದೇಶವನ್ನು ದೆಹಲಿಯ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶರು ಕಾಯ್ದಿರಿಸಿದ್ದಾರೆ.

ಮಂಗಳವಾರ ಆದೇಶ ಪ್ರಕಟವಾಗುವ ಸಾಧ್ಯತೆ ಇದೆ. ದೆಹಲಿ ಪೊಲೀಸರ ಪರ ವಾದಿಸಿದ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ. ರಾಜು ಅವರು ಜಾಮೀನು ನೀಡುವುದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. 5

ಚಿನಕುರಳಿ
ಪ್ರಕಾಶ್ ಶೆಟ್ಟಿ



ಮಹಾರಾಷ್ಟ್ರದಿಂದ ರಾಜ್ಯಕ್ಕೆ ಬರುವವರಿಗೆ ಆರೋಗ್ಯ ಇಲಾಖೆಯ ಸೂಚನೆ

ಕೋವಿಡ್ 'ನೆಗೆಟಿವ್' ವರದಿ ಕಡ್ಡಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಾರಾಷ್ಟ್ರದಿಂದ ರಾಜ್ಯಕ್ಕೆ ಬರುವವರು ಪ್ರಯಾಣಕ್ಕೂ ಮೊದಲಿನ 72 ಗಂಟೆಗಳ ಅವಧಿಯಲ್ಲಿ ನಡೆಸಲಾದ ಕೋವಿಡ್ ಆರ್‌ಟಿ–ಪಿಸಿಆರ್ ಪರೀಕ್ಷೆಯ ನೆಗೆಟಿವ್ ವರದಿಯನ್ನು ಕಡ್ಡಾಯವಾಗಿ ಹೊಂದಿರಬೇಕು ಎಂದು ಆರೋಗ್ಯ ಇಲಾಖೆ ಸುತ್ತೋಲೆ ಹೊರಡಿಸಿದೆ.

ಮಹಾರಾಷ್ಟ್ರದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಏರಿಕೆ ಪಡೆದುಕೊಂಡಿದೆ. ಒಂದು ವಾರದಿಂದ ಪ್ರತಿನಿತ್ಯ ಸರಾಸರಿ 645 ಮಂದಿ ಕೋವಿಡ್ ಪೀಡಿತರಾಗುತ್ತಿದ್ದಾರೆ. ಅಮರಾವತಿ, ನಾಗಪುರ, ಪುಣೆ, ಮುಂಬೈ ಸೇರಿದಂತೆ ವಿವಿಧ ನಗರದಲ್ಲಿ ಗಮನಾರ್ಹವಾಗಿ ಪ್ರಕರಣಗಳ ಸಂಖ್ಯೆ ಹೆಚ್ಚಳವಾಗಿವೆ. ಅಲ್ಲಿ ಕೋವಿಡ್ ಎರಡಲೇ ಅಲೆ ಪ್ರಾರಂಭವಾಗಿದೆ ಎನ್ನುವ ಸೂಚನೆಗಳು ದೊರೆತಿವೆ. ಹಾಗಾಗಿ, ಹೋಟೆಲ್, ರೆಸಾರ್ಟ್, ಹಾಸ್ಟೆಲ್, ಹೋಂ ಸ್ಟೇಗಳು ಮತ್ತಿತರ ಕಡೆಗಳಲ್ಲಿ ಮಹಾರಾಷ್ಟ್ರದಿಂದ ಹಿಂದಿರುಗಿರುವವರಿಗೆ ಪ್ರವೇಶ ನೀಡುವ ಮುನ್ನ 'ಕೋವಿಡ್ ನೆಗೆಟಿವ್' ವರದಿಯನ್ನು ಖಾತರಿಪಡಿಸಿಕೊಳ್ಳುವುದು ಕಡ್ಡಾಯ ಎಂದು ಇಲಾಖೆ ತಿಳಿಸಿದೆ.

ಮಹಾರಾಷ್ಟ್ರದಿಂದ ಬರುವ ವಿದ್ಯಾರ್ಥಿಗಳ ಮಾಹಿತಿಯನ್ನು ಕಾಲೇಜು ಮತ್ತು ಹಾಸ್ಟೆಲ್‌ಗಳ ಪ್ರತಿನಿಧಿಗಳು ಸಕ್ಷಮ ಪ್ರಾಧಿಕಾರದ ಜತೆ ಹಂಚಿಕೊಳ್ಳಬೇಕು. ನೋಡಲ್ ಅಧಿಕಾರಿಯ ಅನುಮತಿ ಇಲ್ಲದೆ ಪೋಷಕರ ಭೇಟಿಗೆ ಅವಕಾಶ ಕಲ್ಪಿಸುವಂತಿಲ್ಲ. ಊಟದ ಕೊಠಡಿಯಲ್ಲಿ ದಟ್ಟಣೆ ತಡೆಯಲು ಊಟದ ಅವಧಿಯನ್ನು ಹೆಚ್ಚಿಸಬೇಕು ಎಂದು ಸುತ್ತೋಲೆಯಲ್ಲಿ ಸೂಚಿಸಲಾಗಿದೆ.

ಅಂತರರಾಷ್ಟ್ರೀಯ ಪ್ರಯಾಣಿಕರಿಗೆ ಪರೀಕ್ಷೆ

ರೂಪಾಂತರ ವೈರಾಣು ಕಾಣಿಸಿಕೊಂಡ ಕಾರಣ ಬ್ರಿಟನ್, ಯುರೋಪ್ ಮತ್ತು ಮಧ್ಯಪ್ರಾಚ್ಯದ ದೇಶಗಳಿಂದ ಬರುವ ವಿಮಾನಗಳಲ್ಲಿ ಇಲ್ಲಿಗೆ ಬರುವವರು ಪ್ರಯಾಣಕ್ಕೂ ಮೊದಲಿನ 72 ಗಂಟೆಗಳ ಅವಧಿಯಲ್ಲಿ ನಡೆಸಲಾದ ಕೋವಿಡ್ ಆರ್‌ಟಿ–ಪಿಸಿಆರ್ ಪರೀಕ್ಷೆಯ ನೆಗೆಟಿವ್ ವರದಿ ತರಬೇಕು. ಅವರಿಗೆ ಇಲ್ಲಿನ ವಿಮಾನ ನಿಲ್ದಾಣಗಳಲ್ಲಿ ಕೂಡ ಆರ್‌ಟಿ–ಪಿಸಿಆರ್ ಪರೀಕ್ಷೆಗಳನ್ನು ನಡೆಸಲಾಗುತ್ತದೆ. ಪರೀಕ್ಷೆಯ ವರದಿ ಬಂದ ಬಳಿಕವೇ ವಿಮಾನ ನಿಲ್ದಾಣದಿಂದ ಕಳುಹಿಸಲಾಗುತ್ತದೆ ಎಂದು ಆರೋಗ್ಯ ಇಲಾಖೆ ಸುತ್ತೋಲೆಯಲ್ಲಿ ತಿಳಿಸಿದೆ. 'ಸೋಂಕಿತರಾದಲ್ಲಿ ಅವರನ್ನು 14 ದಿನಗಳು ಸಾಂಸ್ಥಿಕ ಕ್ವಾರಂಟೈನ್‌ಗೆ ಒಳಪಡಿಸಲಾಗುತ್ತದೆ. ಸೋಂಕಿತರಾಗಿರದವರು 14 ದಿನಗಳು ಮನೆ ಕ್ವಾರಂಟೈನ್‌ಗೆ ಒಳಪಡಬೇಕು. 7ನೇ ದಿನಕ್ಕೆ ಮತ್ತೊಮ್ಮೆ ಆರ್‌ಟಿ–ಪಿಸಿಆರ್ ಪರೀಕ್ಷೆ ಮಾಡಲಾಗುತ್ತದೆ' ಎಂದು ಹೇಳಲಾಗಿದೆ.

ಐವರು ಸೋಂಕಿತರಿದ್ದರೆ ನಿರ್ಬಂಧಿತ ವಲಯ

ಯಾವುದೇ ಪ್ರದೇಶದಲ್ಲಿ ಐದು ಅಥವಾ ಅದಕ್ಕಿಂತ ಹೆಚ್ಚು ಮಂದಿಯಲ್ಲಿ ಕೋವಿಡ್ ಸೋಂಕು ಪತ್ತೆಯಾದರೆ ಆ ಸ್ಥಳವನ್ನು ನಿರ್ಬಂಧಿತ ವಲಯ (ಕಂಟೇನ್‌ಮೆಂಟ್ ಝೋನ್) ಎಂದು ಘೋಷಿಸಬೇಕು. ಅಂತಹ ಸ್ಥಳದ ಮೇಲೆ ಸ್ಥಳೀಯ ಆಡಳಿತದಿಂದ ವಿಶೇಷ ನಿಗಾ ಇರಿಸಬೇಕು. ಏಳು ದಿನಗಳ ಬಳಿಕ ಮತ್ತೊಮ್ಮೆ ಕೋವಿಡ್ ಪರೀಕ್ಷೆ ನಡೆಸಬೇಕು ಎಂದು ಸುತ್ತೋಲೆಯಲ್ಲಿ ನಿರ್ದೇಶನ ನೀಡಲಾಗಿದೆ.

ಕೇರಳ ಮತ್ತು ಮಹಾರಾಷ್ಟ್ರದಿಂದ ಬರುವವರು ಕಡ್ಡಾಯವಾಗಿ ಪರೀಕ್ಷೆ ವರದಿ ತರಬೇಕು ಎಂದು ಸೂಚಿಸಲಾಗಿದೆ
ಡಾ.ಕೆ. ಸುಧಾಕರ್
ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ

ಕಳೆದ ಎರಡು ವಾರದ ಅವಧಿಯಲ್ಲಿ ಮಹಾರಾಷ್ಟ್ರದಿಂದ ರಾಜ್ಯಕ್ಕೆ ಬಂದಿರುವವರು (72 ಗಂಟೆಗಳ ಅವಧಿಯಲ್ಲಿ ಪರೀಕ್ಷೆಗೊಳಗಾದವರ ಹೊರತಾಗಿ) ಆರ್‌ಟಿ–ಪಿಸಿಆರ್ ಪರೀಕ್ಷೆ ಮಾಡಿಸಿಕೊಳ್ಳುವುದು ಕಡ್ಡಾಯ. ಈ ಸೂಚನೆ ಉಲ್ಲಂಘಿಸಿದವರನ್ನು ತಕ್ಷಣವೇ ಕ್ವಾರಂಟೈನ್‌ನಲ್ಲಿ ಇರಿಸಬೇಕು. ನೆಗೆಟಿವ್ ವರದಿ ಲಭ್ಯವಾದ ಬಳಿಕವೇ ಹೊರಹೋಗಲು ಅನುಮತಿ ನೀಡಬೇಕು. ಅಲ್ಪ ಸಮಯದ ಭೇಟಿಗೆ ಬರುವವರು ಕೂಡ ಕೋವಿಡ್ ನೆಗೆಟಿವ್ ವರದಿಯನ್ನು ತರಬೇಕು. ಆ ವರದಿಯು ಇಲ್ಲಿ 7 ದಿನಗಳವರೆಗೆ ಮಾತ್ರ ಮಾನ್ಯತೆ ಹೊಂದಿರುತ್ತದೆ ಎಂದು ತಿಳಿಸಲಾಗಿದೆ.

ಇಲ್ಲಿನ ಬಹುರಾಷ್ಟ್ರೀಯ ಕಂಪನಿಗಳು, ಹೋಟೆಲ್‌ಗಳು, ರೆಸಾರ್ಟ್‌ಗಳು, ಲಾಡ್ಜ್‌ಗಳು, ಹೋಂ ಸ್ಟೇಗಳಲ್ಲಿ ಕೆಲಸ ಮಾಡುತ್ತಿರುವ ಮಹಾರಾಷ್ಟ್ರದ ಸಂಪರ್ಕ ಇರುವ ನೌಕರರು ತಮ್ಮ ಸ್ವಂತ ಖರ್ಚಿನಲ್ಲಿ ಪರೀಕ್ಷೆ ಮಾಡಿಸಿಕೊಳ್ಳಬೇಕು ಎಂದು ಸೂಚಿಸಲಾಗಿದೆ.

2ಎ ಮೀಸಲಾತಿಗೆ ಒತ್ತಾಯ • ಬೆಂಗಳೂರಿನಲ್ಲಿ ಮಹಾ ರ್‍ಯಾಲಿ

ಪಂಚಮಸಾಲಿ ಶಕ್ತಿಪ್ರದರ್ಶನ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರವರ್ಗ 2ಎ ಮೀಸಲಾತಿಗೆ ಒತ್ತಾಯಿಸಿ ಬೃಹತ್ ಪಾದಯಾತ್ರೆ ನಡೆಸಿದ ಲಿಂಗಾಯತ ಪಂಚಮಸಾಲಿ ಸಮುದಾಯವು ನಗರದಲ್ಲಿ ಭಾನುವಾರ ಮಹಾರ್‍ಯಾಲಿ ಮೂಲಕ ಶಕ್ತಿ ಪ್ರದರ್ಶನ ನಡೆಸಲಿದೆ.

ಕೂಡಲಸಂಗಮ ಪಂಚಮಸಾಲಿ ಪೀಠದ ಬಸವ ಜಯಮೃತ್ಯುಂಜಯ ಸ್ವಾಮೀಜಿ ನೇತೃತ್ವದಲ್ಲಿ ಹಮ್ಮಿಕೊಂಡಿರುವ 38 ದಿನಗಳ ಪಾದಯಾತ್ರೆ ಶನಿವಾರ ಅಂತಿಮಗೊಂಡಿದ್ದು, ಅರಮನೆ ಮೈದಾನದಲ್ಲಿ 21ರಂದು ಮಹಾರ್‍ಯಾಲಿ ಮೂಲಕ ಮುಕ್ತಾಯಗೊಳ್ಳಲಿದೆ. ಸುಮಾರು ಹತ್ತು ಲಕ್ಷ ಜನ ಸೇರುವ ನಿರೀಕ್ಷೆ ಇದೆ ಎಂದು ಸಂಘಟಕರು ಹೇಳಿದ್ದಾರೆ.

2 ಲಕ್ಷ ಆಸನ: ಎರಡು ಲಕ್ಷಕ್ಕೂ ಹೆಚ್ಚು ಕುರ್ಚಿಗಳನ್ನು ಹಾಕಲಾಗಿದೆ. ಇದಕ್ಕಿಂತ ಹೆಚ್ಚು ಜನ ಸೇರಿದರೂ ಕುಳಿತುಕೊಳ್ಳಲು ತೊಂದರೆಯಾಗದಂತೆ ಮ್ಯಾಟ್‌ಗಳನ್ನು ಹಾಕಲಾಗಿದೆ. ಒಟ್ಟು ಮೂರು ವೇದಿಕೆಗಳನ್ನು ನಿರ್ಮಾಣ ಮಾಡಲಾಗಿದೆ. ಮಧ್ಯದಲ್ಲಿ ಅತಿಗಣ್ಯರಿಗೆ ಅಂದರೆ ಜನಪ್ರತಿನಿಧಿಗಳಿಗೆ, ಬಲ ಮತ್ತು ಎಡಭಾಗದಲ್ಲಿ ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಪದಾಧಿಕಾರಿಗಳಿಗೆ ಮೀಸಲಿಡಲಾಗಿದೆ.

'ಹತ್ತು ಲಕ್ಷ ಜನ ಸೇರಿದರೂ ಊಟದ ಕೊರತೆಯಾಗದಂತೆ ಎಲ್ಲ ವ್ಯವಸ್ಥೆ ಮಾಡಲಾಗಿದೆ. ಕುಡಿಯುವ ನೀರು, ಶೌಚಾಲಯ ವ್ಯವಸ್ಥೆಯನ್ನೂ ಕಲ್ಪಿಸಲಾಗುತ್ತದೆ. ಉತ್ತರ ಕರ್ನಾಟಕದಿಂದ ನಮ್ಮ ಸಮಾಜದವರು 2.5 ಲಕ್ಷ ರೊಟ್ಟಿ ತಂದಿದ್ದಾರೆ. ಜೊತೆಗೆ ಪಲಾವ್ ಮತ್ತು ಮಜ್ಜಿಗೆ ನೀಡಲಾಗುತ್ತದೆ' ಎಂದು ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ರಾಷ್ಟ್ರೀಯ ಘಟಕದ ಅಧ್ಯಕ್ಷ ವಿಜಯಾನಂದ ಕಾಶಪ್ಪನವರ ಹೇಳಿದರು.


ಪಾದಯಾತ್ರೆ ಪೂರ್ಣಗೊಂಡ ಸಂದರ್ಭದಲ್ಲಿ ಮಹಿಳೆಯರು ಬಸವಜಯ ಮೃತ್ಯುಂಜಯ ಸ್ವಾಮೀಜಿ ಹಾಗೂ ವಚನಾನಂದ ಸ್ವಾಮೀಜಿ ಅವರಿಗೆ ಆರತಿ ಮಾಡಿದರು –ಪ್ರಜಾವಾಣಿ ಚಿತ್ರ

ಮಾ.4ರವರೆಗೆ ಗಡುವು: 'ಸುಮಾರು 600 ಕಿ.ಮೀ. ಪಾದಯಾತ್ರೆಯು ಮುಕ್ತಾಯವಾಗಿದೆ. ಆದರೂ ಬೇಡಿಕೆ ಈಡೇರಿಸುವ ಬಗ್ಗೆ ಸರ್ಕಾರ ಯಾವುದೇ ಕ್ರಮಕ್ಕೆ ಮುಂದಾಗಿಲ್ಲ. ಮೀಸಲಾತಿಗಾಗಿ ಮಹಾರ್‍ಯಾಲಿಯಲ್ಲಿ ಮತ್ತೊಮ್ಮೆ ಒತ್ತಾಯಿಸಲಾಗುವುದು. ನಂತರ ವಿಧಾನಸೌಧದವರೆಗೆ ತೆರಳಿ ಧರಣಿ ನಡೆಸಲಾಗುವುದು. ಸರ್ಕಾರಕ್ಕೆ ಮಾ.4ರವರೆಗೆ ಗಡುವು ನೀಡಲಾಗುತ್ತದೆ. ಒಪ್ಪದಿದ್ದರೆ ಮಾ.5ರಿಂದ ವಿಧಾನಸೌಧ ಮುಂಭಾಗ ಆಮರಣಾಂತ ಉಪವಾಸ ಸತ್ಯಾಗ್ರಹ ಆರಂಭಿಸಲಾಗುವುದು' ಎಂದು ಬಸವಜಯ ಮೃತ್ಯುಂಜಯ ಸ್ವಾಮೀಜಿ ಪುನರುಚ್ಚರಿಸಿದರು.

ಬಸವೇಶ್ವರ ಪ್ರತಿಮೆಗೆ ಮಾಲಾರ್ಪಣೆ: ನಗರದ ಶಿವನಗರದಿಂದ ಶನಿವಾರ ಪಾದಯಾತ್ರೆ ಆರಂಭಗೊಂಡು ಸ್ವಾತಂತ್ರ್ಯ ಉದ್ಯಾನದವರೆಗೆ ಸಾಗಿತು. ನಂತರ, ಪಂಚಮಸಾಲಿ ಹರಿಹರ ಪೀಠದ ವಚನಾನಂದ ಸ್ವಾಮೀಜಿ, ವಿಜಯಾನಂದ ಕಾಶಪ್ಪನವರ ಸೇರಿದಂತೆ ಹಲವು ಪಾದಯಾತ್ರಿಗಳು, ಚಾಲುಕ್ಯ ವೃತ್ತದಲ್ಲಿರುವ ಅಶ್ವಾರೂಢ ಬಸವಣ್ಣ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು. ಕೊನೆಗೆ, ಅರಮನೆ ಮೈದಾನ ತಲುಪಿದರು.

LIVING ROOM • BEDROOM • DINING ROOM • OFFICE • OUTDOOR • MATTRESSES • HOME DECOR & MORE

VISIT OUR STORES Store Timing : 10.30 Am to 8 Pm www.lovefurniturestore.in

HBR Layout (Corporate Office & Showroom) #505, 1st Stage, 4th Block, HBR Layout, Bengaluru - 560043. Ph : +91 8971909393

KR Puram #1st Floor, T.C. Palya Signal, Old Madras Road, Thambu Chetty Palya Bengaluru - 560049. Ph : +91 8971909394

Banaswadi TMG Heights, No.7, Ground Floor, Outer Ring Road - Service lane, Near Hormavu, Bengaluru - 560043 M : +91 98450 15083

For store locations & other queries, Whatsapp to this number +91 81970 31010 | 81971 31010

ಊಟಕ್ಕೆ ಹೋಟೆಲ್‌ಗೆ ಹೋದಾಗ ಸಿಕ್ಕಿಬಿದ್ದ ದೆಹಲಿ ಗ್ಯಾಂಗ್

ಸರಗಳವು: ಆರೋಪಿಗಳ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಲ್ಸರ್ ಬೈಕ್‌ನಲ್ಲಿ ನಗರದಲ್ಲಿ ಸುತ್ತಾಡಿ ಸರಗಳವು ಮಾಡಿ ಪರಾರಿಯಾಗುತ್ತಿದ್ದ ದೆಹಲಿ ನಿವಾಸಿಗಳ ಗ್ಯಾಂಗ್, ಈಶಾನ್ಯ ಪೊಲೀಸರ ಬಲೆಗೆ ಬಿದ್ದಿದೆ.

‘ಕೃತ್ಯವೆಸಗಿ ಚಿನ್ನಾಭರಣಗಳೊಂದಿಗೆ ನಗರ ತೊರೆಯುತ್ತಿದ್ದ ಆರೋಪಿಗಳು, ಸಾದಹಳ್ಳಿ ಗೇಟ್ ಬಳಿಯ ಹೋಟೆಲ್‌ನಲ್ಲಿ ಊಟಕ್ಕೆ ಬಂದಿದ್ದರು. ಗಸ್ತಿನಲ್ಲಿದ್ದ ಸಿಬ್ಬಂದಿ, ಆರೋಪಿಗಳ ಬಗ್ಗೆ ಅನುಮಾನಗೊಂಡು ವಶಕ್ಕೆ ಪಡೆದಿದ್ದರು. ಹೆಚ್ಚಿನ ವಿಚಾರಣೆ ನಡೆಸಿದಾಗಲೇ ಅವರು ನಡೆಸಿದ್ದ ಕೃತ್ಯ ಬಯಲಾಯಿತು’ ಎಂದು ಪೊಲೀಸರು ಹೇಳಿದರು.

‘ದೆಹಲಿ ಉತ್ತಮ್ ನಗರದ ಸುರೇಶ್‌ಕುಮಾರ್ ಅಲಿಯಾಸ್ ಪಂಡಿತ್ ಸುರೇಶ್ (32), ತಿಮಾರ್‌ಪುರದ ಇರ್ಷಾದ್ ಅಕಿಲ್ (24), ಸಲೀಂ ಮೋಸಿನ್ (22), ಪೂರ್ವ ದೆಹಲಿಯ ಹಸೀನ್‌ಖಾನ್ ಅಲಿಯಾಸ್ ಫೌಜಿ (23), ಅಫ್ರೋಜ್ ಅಲಿಯಾಸ್ ಶಹೀದ್ (25) ಹಾಗೂ ಅವರಿಗೆ ಕೃತ್ಯಕ್ಕೆ ಸಹಕರಿಸುತ್ತಿದ್ದ ಕೇರಳದ ವಯನಾಡು ಜಿಲ್ಲೆಯ ಪಿ.ಕೆ. ಹ್ಯಾರಿಸ್ (37) ಬಂಧಿತರು. ಅವರಿಂದ ₹ 11 ಲಕ್ಷ ಮೌಲ್ಯದ ಆಭರಣ ಹಾಗೂ ಕಾರು ಜಪ್ತಿ ಮಾಡಲಾಗಿದೆ’ ಎಂದೂ ತಿಳಿಸಿದರು.



ಬಂಧಿತ ಆರೋಪಿಗಳು

ಅಪರಾಧ ಸುದ್ದಿ

‘ಫೆ. 16 ಹಾಗೂ 17ರಂದು ಚಿಕ್ಕಜಾಲ, ಬಾಗಲೂರು, ಯಲಹಂಕ, ದೇವನಹಳ್ಳಿ ಹಾಗೂ ಅಮೃತಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ಸರಣಿ ಸರಗಳವು ನಡೆದಿತ್ತು. ಕಪ್ಪು ಬಣ್ಣದ ಪಲ್ಸರ್‌ನಲ್ಲಿ ಸುತ್ತಾಡಿದ್ದ ಆರೋಪಿಗಳು, ದಾರಿಯಲ್ಲಿ ಹೊರಟಿದ್ದ ಹಾಗೂ ಮನೆ ಎದುರು ನಿಂತಿದ್ದ ಮಹಿಳೆಯರ ಸರ ಕಿತ್ತುಕೊಂಡು ಪರಾರಿಯಾಗಿದ್ದರು.’

‘ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ, ಆರೋಪಿಗಳ ಪತ್ತೆಗೆ ವಿಶೇಷ ತಂಡ ರಚಿಸಲಾಗಿತ್ತು. ಆರೋಪಿಗಳ ಚಹರೆ ಪತ್ತೆಗೆ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಗಳನ್ನೂ ಪರಿಶೀಲಿಸಲಾಗಿತ್ತು. ಆದರೆ, ಬೈಕ್ ನೋಂದಣಿ ಸಂಖ್ಯೆ ಹಾಗೂ ಆರೋಪಿಗಳ ಚಹರೆ ಅಸ್ಪಷ್ಟವಾಗಿತ್ತು’ ಎಂದೂ ಪೊಲೀಸರು ಹೇಳಿದರು.

ಬೆನ್ನಟ್ಟಿ ಹಿಡಿದ ಸಿಬ್ಬಂದಿ: ‘ಸಿ.ಸಿ.ಟಿ.ವಿ. ಕ್ಯಾಮೆರಾ ದೃಶ್ಯ ಪರಿಶೀಲನೆಗೆಂದು ಸಿಬ್ಬಂದಿ, ಸಾದಹಳ್ಳಿ ಗೇಟ್ ಬಳಿಯ ಹೋಟೆಲೊಂದಕ್ಕೆ ಹೋಗಿದ್ದರು. ಅದೇ ಹೋಟೆಲ್‌ಗೆ ಆರೋಪಿಗಳು ಊಟಕ್ಕೆ ಬಂದಿದ್ದರು. ಊಟ ಮುಗಿಸಿಕೊಂಡು ನಗರ ತೊರೆಯುವುದು ಅವರ ಉದ್ದೇಶವಾಗಿತ್ತು’ ಎಂದೂ ಪೊಲೀಸರು ತಿಳಿಸಿದರು.

‘ಆರೋಪಿಗಳ ವರ್ತನೆ ಗಮನಿಸಿ ಅನುಮಾನಗೊಂಡಿದ್ದ ಸಿಬ್ಬಂದಿ, ಅವರನ್ನು ಹಿಡಿದುಕೊಳ್ಳಲು ಮುಂದಾಗಿದ್ದರು. ಆರೋಪಿಗಳು ತಪ್ಪಿಸಿಕೊಂಡು ಓಡಲಾರಂಭಿಸಿದ್ದರು. ಸಿಬ್ಬಂದಿ, ಅವರನ್ನು ಬೆನ್ನಟ್ಟಿ ಹಿಡಿದಿದ್ದಾರೆ. ಅವರ ಜೇಬಿನಲ್ಲೇ ಚಿನ್ನದ ಮಾಂಗಲ್ಯ ಸರಗಳು ಪತ್ತೆಯಾದವು’ ಎಂದೂ ಹೇಳಿದರು.

24 ಪ್ರಕರಣಗಳಲ್ಲಿ ಬೇಕಿದ್ದ ಆರೋಪಿ: ‘ಬಂಧಿತ ಸುರೇಶ್‌ಕುಮಾರ್ ವಿರುದ್ಧ 24 ಪ್ರಕರಣ ಹಾಗೂ ಇನ್ನೊಬ್ಬ ಆರೋಪಿ ಸಲೀಂ ಮೋಸಿನ್ ವಿರುದ್ಧ 21 ಪ್ರಕರಣಗಳು ದಾಖಲಾಗಿವೆ’ ಎಂದೂ ಪೊಲೀಸರು ತಿಳಿಸಿದರು.

ಚಿಪ್ಸ್ ಅಂಗಡಿ ಮಾಲೀಕನೇ ಮಾರ್ಗದರ್ಶಕ

‘ಕೇರಳದ ಪಿ.ಕೆ. ಹ್ಯಾರೀಸ್, ದೇವನಹಳ್ಳಿ ಬಳಿಯ ಕನ್ನಮಂಗಲದಲ್ಲಿ ಚಿಪ್ಸ್ ಅಂಗಡಿ ಇಟ್ಟುಕೊಂಡಿದ್ದ. ಆತನೇ ಸರಗಳವು ಆರೋಪಿಗಳಿಗೆ ಮಾರ್ಗದರ್ಶಕನಾಗಿದ್ದ. ಆರೋಪಿಗಳನ್ನು ದೆಹಲಿಯಿಂದ ನಗರಕ್ಕೆ ಕರೆಸಿಕೊಳ್ಳುತ್ತಿದ್ದ ಆತ, ಪ್ರತಿಯೊಂದು ರಸ್ತೆಗೂ ಕರೆದೊಯ್ಯುತ್ತಿದ್ದ’ ಎಂದು ಪೊಲೀಸರು ಹೇಳಿದರು.

‘ಮಧ್ಯಪ್ರದೇಶದ ನಾಗಪುರದ ಮೂಲಕ ಹೈದರಾಬಾದ್ ಮಾರ್ಗವಾಗಿ ಆರೋಪಿಗಳು ಬೆಂಗಳೂರಿಗೆ ಬರುತ್ತಿದ್ದರು. ಇಲ್ಲಿಯೇ ಬೈಕ್ ಕದ್ದು, ಅದನ್ನೇ ಕೃತ್ಯಕ್ಕೆ ಬಳಸುತ್ತಿದ್ದರು.’ ಎಂದೂ ಹೇಳಿದರು.

ಸರ್ಕಾರದಿಂದ ‘ರಾಜ್ಯ ವಿವಾದ ಪರಿಹಾರ ನೀತಿ’ ಪ್ರಸ್ತಾವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರ ‘ಕರ್ನಾಟಕ ರಾಜ್ಯ ವಿವಾದ ಪರಿಹಾರ ನೀತಿ–2021’ ಅನ್ನು ಪ್ರಸ್ತಾಪಿಸಿ ಶನಿವಾರ ಅಧಿಸೂಚನೆ ಹೊರಡಿಸಿದೆ.

ರಾಜ್ಯ ಸರ್ಕಾರ ಭಾಗಿಯಾಗಿರುವ ವ್ಯಾಜ್ಯಗಳನ್ನು ಪರಿಹರಿಸುವ ಸಂದರ್ಭದಲ್ಲಿ ಹೊಣೆಗಾರಿಕೆ, ಉತ್ತರದಾಯಿತ್ವ ಮತ್ತು ದಕ್ಷತೆಯಿಂದ ಕಾರ್ಯಪ್ರವೃತ್ತರಾಗುವುದು ಈ ನೀತಿಯ ಉದ್ದೇಶವಾಗಿದೆ.

ವಿವಾದಗಳನ್ನು ಪರಸ್ಪರ ಸಹಮತ, ಸೌಹಾರ್ದಯುತವಾಗಿ ಪರಿಹರಿಸಲು ಆದ್ಯತೆ ನೀಡಬೇಕು. ಆ ಮೂಲಕ, ಸಮಯ ಮತ್ತು ಅನಾಶ್ಯಕ ವೆಚ್ಚಕ್ಕೆ ನಿಯಂತ್ರಿಸಬಹುದು. ಆ ಹೊಣೆಗಾರಿಕೆಯಲ್ಲಿ ವಿವಾದಗಳಿಗೆ ಅಂತ್ಯ ಹಾಡಲು ನೀತಿ ನೆರವಾಗಲಿದೆ.

‘ಕರ್ನಾಟಕ ರಾಜ್ಯ ದಾವೆ ನೀತಿ 2011ರಲ್ಲಿ ರಚನೆಯಾಗಿದ್ದು, ಅದು ಈಗಲೂ ಜಾರಿಯಲ್ಲಿದೆ. ವಿವಾದಗಳನ್ನು ಪರಿಣಾಮಕಾರಿಯಾಗಿ ಮತ್ತು ಹೊಣೆಗಾರಿಕೆಯಿಂದ ಪರಿಹರಿಸುವ ಉದ್ದೇಶದಿಂದ ಈ ನೀತಿ ಜಾರಿಗೆ ತರಲಾಗಿತ್ತು. ಈ ಬಗ್ಗೆ 2018ರಲ್ಲಿ ನಡೆದ ಅಧ್ಯಯನ ಪ್ರಕಾರ ಈ ನೀತಿ ಸಮರ್ಪಕವಾಗಿ ಜಾರಿಯಾಗಿಲ್ಲ. ಸರ್ಕಾರದ ದಾವೆಗಳನ್ನು ನಿಭಾಯಿಸುವ ಪ್ರಕ್ರಿಯೆಯ ವೇಳೆ ದಕ್ಷತೆ ಮತ್ತು ಹೊಣೆಗಾರಿಕೆ ಇಲ್ಲದಿರುವುದು ಗೊತ್ತಾಗಿತ್ತು. ಹೀಗಾಗಿ, ಅದನ್ನು ಪರಿಷ್ಕರಿಸಿ ಹೊಸ ನೀತಿಯನ್ನು ಜಾರಿಗೆ ತರಲು ಇದೀಗ ಅಧಿಸೂಚನೆ ಹೊರಡಿಸಲಾಗಿದೆ.

ಸ್ನೇಹಿತೆ ಮನೆಯಲ್ಲಿ ಕಳವು: ಸೆರೆ

ಪ್ರಜಾವಾಣಿ ವಾರ್ತೆ



ಶಫೀವುಲ್ಲಾ



ನಜೀಂ

ಬೆಂಗಳೂರು: ಸ್ನೇಹಿತೆ ಮನೆಯಲ್ಲಿ ಕಳ್ಳತನ ಮಾಡಿ ಸಾಕ್ಷ್ಯ ನಾಶಕ್ಕೆ ಯತ್ನಿಸಿ ಪರಾರಿಯಾಗಿದ್ದ ಇಬ್ಬರು ಆರೋಪಿಗಳನ್ನು ಪುಲಿಕೇಶಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಆಡುಗೋಡಿ ಲಕ್ಕಸಂದ್ರದ ನಜೀಂ ಶರೀಫ್ ಅಲಿಯಾಸ್ ಶಾಹೀದ್ (41) ಹಾಗೂ ಸುದ್ದಗುಂಟೆಪಾಳ್ಯದ ಮೊಹಮ್ಮದ್ ಶಫೀವುಲ್ಲಾ (42) ಬಂಧಿತರು. ಅವರಿಂದ ₹30 ಲಕ್ಷ ನಗದು, ಚಿನ್ನಾಭರಣ, ವಿವಿಧ ದೇಶಗಳ ಕರೆನ್ಸಿ ಸೇರಿದಂತೆ ₹ 70 ಲಕ್ಷ ಮೌಲ್ಯದ ವಸ್ತುಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಪೂರ್ವ ವಿಭಾಗದ ಡಿಸಿಪಿ ಎಸ್. ಡಿ.ಶರಣಪ್ಪ ತಿಳಿಸಿದರು.

‘ಪುಲಿಕೇಶಿನಗರ ಠಾಣೆ ವ್ಯಾಪ್ತಿಯಲ್ಲಿ ವಾಸವಿದ್ದ ಜ್ಯೋತಿ ಅವರ ಮನೆಯಲ್ಲಿ ಕಳ್ಳತನ ನಡೆದಿತ್ತು. ಮನೆಯಲ್ಲೆಲ್ಲ ಖಾರದ ಪುಡಿ ಎರಚಿದ್ದ ಆರೋಪಿಗಳು, ಚಿನ್ನಾಭರಣ, ವಿದೇಶಿ ಕರೆನ್ಸಿ ಹಾಗೂ ದ್ವಿಚಕ್ರ ವಾಹನ ಕದ್ದುಕೊಂಡು ಪರಾರಿಯಾಗಿದ್ದರು. ತಮ್ಮ ಸುಳಿವು ಸಿಗಬಾರದೆಂದು ನಾನಾ ಕಸರತ್ತು ಮಾಡಿದ್ದರು. ಹೀಗಾಗಿ, ಇದೊಂದು ಸವಾಲಿನ ಪ್ರಕರಣವಾಗಿತ್ತು. ತನಿಖೆ ನಡೆಸಿದ ಇನ್‌ಸ್ಪೆಕ್ಟರ್ ಎಸ್. ಎಡ್ವಿನ್ ಪ್ರದೀಪ್ ನೇತೃತ್ವದ ವಿಶೇಷ ತಂಡ, ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದೆ’ ಎಂದೂ ಹೇಳಿದರು.

‘ಆರೋಪಿ ನಜೀಂ ಷರೀಫ್, ರಿಯಲ್ ಎಸ್ಟೇಟ್ ಉದ್ಯಮ ನಡೆಸುತ್ತಿದ್ದ. ಮೊಹಮ್ಮದ್ ಶಫೀವುಲ್ಲಾ, ಗ್ರಾನೈಟ್ ಮಾರಾಟಗಾರ. ಇಬ್ಬರೂ ವ್ಯವಹಾರದಲ್ಲಿ ನಷ್ಟ ಅನುಭವಿಸಿದ್ದರು. ಸ್ನೇಹಿತೆ ಮನೆಯಲ್ಲಿ ಚಿನ್ನಾಭರಣ ಹಾಗೂ ಹಣವಿರುವುದನ್ನು ನೋಡಿದ್ದ ಅವರು, ಸಂಚು ರೂಪಿಸಿ ಕೃತ್ಯ ಎಸಗಿದ್ದರು’ ಎಂದೂ ತಿಳಿಸಿದರು.

ಆಸ್ಪತ್ರೆಗೆ ಸೇರಿ ಸಂಚು: ‘ಕಳ್ಳತನ ಮಾಡಿದರೂ ಪೊಲೀಸರಿಗೆ ಸುಳಿವು ಸಿಗಬಾರದೆಂದು ಆರೋಪಿಗಳು, ಮೊದಲೇ ಅಂದುಕೊಂಡಿದ್ದರು. ಸ್ನೇಹಿತೆ ಮನೆಯ ನಕಲಿ ಕೀ ಮಾಡಿಸಿದ್ದ ನಜೀಂ, ಚಿಕಿತ್ಸೆ ಪಡೆಯುವ ನೆಪದಲ್ಲಿ ಆಸ್ಪತ್ರೆಯೊಂದಕ್ಕೆ ದಾಖಲಾಗಿದ್ದ. ಆರೈಕೆ ನೆಪದಲ್ಲಿ ಶಫೀವುಲ್ಲಾ ಜೊತೆಗಿದ್ದ. ಪೊಲೀಸರಿಗೆ ಸಿಕ್ಕಿಬಿದ್ದರೆ, ಆಸ್ಪತ್ರೆ ದಾಖಲೆ ತೋರಿಸಿ ಬಚಾವಾಗುವ ಉದ್ದೇಶ ಅವರಿಗಿತ್ತು’ ಎಂದು ಶರಣಪ್ಪ ಹೇಳಿದರು.

‘ಸ್ನೇಹಿತೆ ಮನೆಯಲ್ಲಿಲ್ಲ ಎಂಬುದನ್ನು ತಿಳಿದುಕೊಂಡ ನಜೀಂ, ಕಳ್ಳತನಕ್ಕಾಗಿ ಶಫೀವುಲ್ಲಾನನ್ನು ಕಳುಹಿಸಿದ್ದ. ಮನೆಗೆ ಹೋಗಿ ಚಿನ್ನಾಭರಣ ಹಾಗೂ ಸುರಕ್ಷಿತ ಲಾಕರ್ ಕಳ್ಳತನ ಮಾಡಿದ್ದ ಶಫೀವುಲ್ಲಾ, ಹೆಜ್ಜೆ ಗುರುತು ಹಾಗೂ ಬೆರಳಚ್ಚು ಸಿಗಬಾರದೆಂದು ಮನೆಯಲ್ಲಿದ್ದ ಖಾರದ ಪುಡಿ ಎರಚಿದ್ದ. ಮನೆ ಮುಂದಿದ್ದ ದ್ವಿಚಕ್ರ ವಾಹನ ಕದ್ದುಕೊಂಡು ಪರಾರಿಯಾಗಿದ್ದ.’

‘ಹಲಸೂರು ಕೆರೆ ಬಳಿ ದ್ವಿಚಕ್ರ ವಾಹನ ನಿಲ್ಲಿಸಿದ್ದ ಆತ, ಅಲ್ಲಿಂದ ಆಟೊದಲ್ಲಿ ಎಂ.ಜಿ.ರಸ್ತೆಗೆ ಹೋಗಿದ್ದ. ಅಲ್ಲಿಂದ ಮತ್ತೊಂದು ಆಟೊದಲ್ಲಿ ಹೊಸೂರು ರಸ್ತೆಗೆ ಹೋಗಿ ಇಳಿದಿದ್ದ. ನಂತರ, ಇನ್ನೊಂದು ಆಟೊದಲ್ಲಿ ಬನ್ನೇರುಘಟ್ಟ ರಸ್ತೆಗೆ ತೆರಳಿದ್ದ. ಪ್ರಕರಣ ಸಂಬಂಧ 270ಕ್ಕೂ ಹೆಚ್ಚು ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಗಳನ್ನು ಪರಿಶೀಲಿಸಲಾಗಿತ್ತು. ಕೊನೆಯಲ್ಲಿ ಆರೋಪಿ, ಲಕ್ಕಸಂದ್ರಕ್ಕೆ ಹೋಗಿದ್ದು ಗೊತ್ತಾಗಿತ್ತು. ಅದೇ ಸುಳಿವು ಆಧರಿಸಿ ಆರೋಪಿಯನ್ನು ಬಂಧಿಸಲಾಯಿತು’ ಎಂದೂ ಶರಣಪ್ಪ ತಿಳಿಸಿದರು. ‘ಕಳ್ಳತನ ಮಾಡಿದ್ದ ಶಫೀವುಲ್ಲಾಗೆ ₹ 10.50 ಲಕ್ಷ ನೀಡಿದ್ದ ನಜೀಂ, ಉಳಿದ ಹಣವನ್ನು ತನ್ನ ಬಳಿಯೇ ಇಟ್ಟುಕೊಂಡಿದ್ದ. ಕಾರು ಸಹ ಖರೀದಿಸಿದ್ದ' ಎಂದರು.

ಗೌರಿ ಹತ್ಯೆ: ಆರೋಪಿಗಳ ಜಾಮೀನು ಅರ್ಜಿ ತಿರಸ್ಕೃತ

ಬೆಂಗಳೂರು: ಪತ್ರಕರ್ತೆ ಗೌರಿ ಲಂಕೇಶ್ ಹತ್ಯೆ ಪ್ರಕರಣದಲ್ಲಿ ಜಾಮೀನು ಕೋರಿ 6 ಆರೋಪಿಗಳು ಸಲ್ಲಿಸಿದ್ದ ಅರ್ಜಿಯನ್ನು ನಗರದ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ತಿರಸ್ಕರಿಸಿದೆ.

ರಾಜರಾಜೇಶ್ವರಿನಗರದ ಐಡಿಯಲ್ ಹೋಮ್ಸ್ ಟೌನ್‌ಶಿಪ್‌ನಲ್ಲಿರುವ ಮನೆ ಎದುರೇ 2017ರ ಸೆಪ್ಟೆಂಬರ್ 5ರಂದು ಗೌರಿ ಲಂಕೇಶ್ ಅವರನ್ನು ಗುಂಡಿಕ್ಕಿ ಹತ್ಯೆ ಮಾಡಲಾಗಿತ್ತು. ಪ್ರಕರಣದ ತನಿಖೆ ನಡೆಸಿದ್ದ ವಿಶೇಷ ತನಿಖಾ ದಳದ (ಎಸ್‌ಐಟಿ) ಅಧಿಕಾರಿಗಳು, 16 ಆರೋಪಿಗಳನ್ನು ಬಂಧಿಸಿದ್ದರು. ಸದ್ಯ ಅವರೆಲ್ಲರೂ ನ್ಯಾಯಾಂಗ ಬಂಧನದಲ್ಲಿದ್ದಾರೆ.

ಆರೋಪಿಗಳ ಪೈಕಿ ಅಮಿತ್ ದೇಗ್ವೇಕರ್, ಭರತ್ ಕುರ್ನೆ, ಸುಧನ್ವಾ ಗೊಂಧಲೇಕರ್, ಸುಜಿತ್‌ಕುಮಾರ್ ಅಲಿಯಾಸ್ ಪ್ರವೀಣ್, ಮನೋಹರ್ ಯಡವೆ ಹಾಗೂ ರಾಜೇಶ್ ಬಂಗೇರ್ ಜಾಮೀನು ಕೋರಿ ತಮ್ಮ ವಕೀಲರ ಮೂಲಕ ಕಳೆದ ವರ್ಷವೇ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು.

ವಿಚಾರಣೆ ನಡೆಸಿದ ನ್ಯಾಯಾಲಯ, ಆರೂ ಆರೋಪಿಗಳ ಜಾಮೀನು ಅರ್ಜಿಯನ್ನು ತಿರಸ್ಕರಿಸಿ ಶನಿವಾರ ಆದೇಶ ಹೊರಡಿಸಿದೆ.

ಆದೇಶದ ಬಗ್ಗೆ ಪ್ರತಿಕ್ರಿಯಿಸಿದ ಅರ್ಜಿದಾರರ ಪರ ವಕೀಲ ಉಮಾಶಂಕರ್ ಮೇವುಂಡಿ, ‘ತೀರ್ಪಿನಪ್ರತಿ ಪಡೆದು ಕೂಲಂಕುಷವಾಗಿ ಅಧ್ಯಯನ ನಡೆಸಲಾಗುವುದು. ಯಾವ ಆಧಾರದಲ್ಲಿ ಜಾಮೀನು ತಿರಸ್ಕರಿಸಲಾಗಿದೆ ಎಂಬುದನ್ನು ತಿಳಿದುಕೊಳ್ಳಲಾಗುವುದು. ನಂತರವೇ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲಾಗುವುದು’ ಎಂದರು.

ಮದ್ಯದಂಗಡಿ ತೆರೆಯದಂತೆ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ಕೊಡಿಗೇಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಯ ಚಿಕ್ಕಗೊಲ್ಲರಹಟ್ಟಿ ಜನವಸತಿ ಪ್ರದೇಶದಲ್ಲಿ ಬಾರ್ ಅಂಡ್ ರೆಸ್ಟೋರೆಂಟ್ ತೆರೆಯಬಾರದು ಎಂದು ಆಗ್ರಹಿಸಿ ಸ್ಥಳೀಯರು ಪ್ರತಿಭಟನೆ ನಡೆಸಿದರು. ಪ್ರತಿಭಟನೆಯಿಂದ ಮಾಗಡಿ ರಸ್ತೆಯಿಂದ ಕೊಡಿಗೇಹಳ್ಳಿ ಮುಖ್ಯ ರಸ್ತೆಯಲ್ಲಿ ಸಂಚಾರ ದಟ್ಟಣೆ ಉಂಟಾಯಿತು.

ಸಂಜೆ 5.30ರಿಂದ ರಾತ್ರಿ8.30ವರೆಗೆ ಪ್ರತಿಭಟನೆ ನಡೆಯಿತು. ಮದ್ಯದಂಗಡಿ ತೆರೆಯಲು ಉದ್ದೇಶಿಸಿರುವ ಸ್ಥಳದ ಅಕ್ಕ–ಪಕ್ಕ ಶಾಲೆ, ದೇವಸ್ಥಾನವಲ್ಲದೆ, ವಸತಿ ಪ್ರದೇಶವಿದೆ. ಮದ್ಯದಂಗಡಿ ತೆರೆಯಲು ಈ ಹಿಂದೆಯೂ ಉದ್ದೇಶಿಸಿದ್ದಾಗ, ಸ್ಥಳೀಯರು ಪ್ರತಿಭಟನೆ ನಡೆಸಿದ್ದರು. ಆಗ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳು ಬಾರ್ ತೆರೆಯದಿರುವ ಬಗ್ಗೆ ಭರವಸೆ ನೀಡಿದ್ದರು. ಆದರೆ, ಈಗ ಮದ್ಯದಂಗಡಿ ತೆರೆದಿದ್ದರಿಂದ ಸ್ಥಳೀಯರು ಪ್ರತಿಭಟನೆ ನಡೆಸಿದರು.

ಗ್ರಾಮ ಪಂಚಾಯ್ತಿ ಸದಸ್ಯರಾದ ಜಯಣ್ಣ, ಸಿದ್ದಗಂಗಮ್ಮ, ಚಿಕ್ಕರಾಜು, ಕೋಮಲಾ, ವಿಜಯಲಕ್ಷ್ಮಿ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು. ತಾವರೆಕೆರೆ ಪೊಲೀಸ್ ಇನ್‌ಸ್ಪೆಕ್ಟರ್ ನರೇಂದ್ರಬಾಬು ಸ್ಥಳಕ್ಕೆ ಬಂದು ಪ್ರತಿಭಟನೆಕಾರರ ಮನವೊಲಿಸಿ, ತೆರೆದಿದ್ದ ಬಾರ್ ಅಂಡ್ ರೆಸ್ಟೋರೆಂಟ್ ಮುಚ್ಚಿಸಿದರು.

ಮುಂಬೈ ಆಫ್‌ಕೋರ್ಸ್ ಬೆಟ್ಟಿಂಗ್ ಪುನರಾರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ಥಗಿತಗೊಂಡಿದ್ದ ಮುಂಬೈ ರೇಸ್‌ಗಳ ಮೇಲಿನ ಆಫ್‌ಕೋರ್ಸ್ ಬೆಟ್ಟಿಂಗ್‌ಅನ್ನು ಬಿ.ಟಿ.ಸಿ ಭಾನುವಾರದ ಮುಂಬೈ ರೇಸ್‌ನೊಂದಿಗೆ ಪುನಾರಂಭಿಸಿದೆ. ಮುಂಬೈ ರೇಸ್ ಜೊತೆಯಲ್ಲಿ ಹೈದರಾಬಾದ್ ರೇಸ್‌ಗಳ ಮೇಲಿನ ಆಫ್‌ಕೋರ್ಸ್ ಬೆಟ್ಟಿಂಗ್ ಸಹ ನಡೆಸಲಾಗುವುದು ಎಂದು ಬಿಟಿಸಿ ತಿಳಿಸಿದೆ.

ಮುಂಬೈ ರೇಸ್

‘ಡ್ರಾಗೊನೆಸ್’ ಗೆಲ್ಲುವ ನಿರೀಕ್ಷೆ

ಪಂಚಶೀಲ್ ಬ್ರೀಡರ್ಸ್ ಪ್ರೊಡ್ಯೂಸ್ ಸ್ಟೇಕ್ಸ್ ಭಾನುವಾರದ ಮುಂಬೈ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಈ ರೇಸ್‌ನಲ್ಲಿ ‘ಡ್ರಾಗೊನೆಸ್’ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.00ಕ್ಕೆ ಪ್ರಾರಂಭವಾಗಲಿರುವ ದಿನದ ಹತ್ತು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:


1ನೇ ರೇಸ್: ಟಾನ್‌ಹೈಯಾನ್ 4, ನಾರ್ದರನ್ ಸಿಂಗರ್ 3, ಸಫ್ದಾರ್ 2
2ನೇ ರೇಸ್: ಟಗ್ರಿಯೊ 4, ವೆನೆಜುಲಾ 5, ಮಕ್ತೂಬ್ 3
3ನೇ ರೇಸ್: ಸೀಸನ್ಸ್ ಗ್ರೀಟಿಂಗ್ಸ್ 1, ಆರ್ಕೆಡಿಯಾ 2, ಇನ್ ಕಂಟೆನ್ಶನ್ 4
4ನೇ ರೇಸ್: ಹಿಲ್ಮಾ ಕ್ಲಿಂಟ್ 5, ಸರ್ಕಸ್ ಕ್ವೀನ್ 3, ಪೆಟ್ರೋನಿಯಾ 6
5ನೇ ರೇಸ್: ಪಾರಿಸಿಯಾನ್ 3, ವಿಜಾರ್ಡ್ ಆಫ್ ಸ್ಟಾರ್ಸ್ 2, ವಲ್ಕಾನ್ 1
6ನೇ ರೇಸ್: ಗ್ಯಾಲಪಿಂಗ್ ಸ್ಟಾರ್ 7, ಕರಡಿಶಿಯಾನ್ 1, ಡ್ಯಾಶಿಂಗ್ ಇಮೇಜ್ 3
7ನೇ ರೇಸ್: ಡ್ರಾಗೊನೆಸ್ 3, ಮಿರಾಕಲ್ 4, ಇನ್ಫಿನೈಟ್ ಎನ್ ಬಿಯಾಂಡ್ 1
8ನೇ ರೇಸ್: ಚಾನ್ಸಲರ್ 3, ಸಾಕ್ರಟೆಸ್ 5, ಮ್ಯಾಂಡೆವಿಲ್ 9
9ನೇ ರೇಸ್: ಥಂಡರ್ ಕ್ಲಾಪ್ 3, ವೈಟ್ ರಿವರ್ 6, ಸ್ಯಾಂಡಲ್ವಾನ್ 1
10ನೇ ರೇಸ್: ಲಿಟ್ಲ್ ಮೋರ್ 7, ಬ್ರೇವ್ 9, ಸ್ಟಾರ್ ಸಿನ್ಸಿಯಾರಿಟಿ 10

ಉತ್ತಮ ಬೆಟ್: ಪಾರಿಸಿಯಾನ್

1ನೇ ಜಾಕ್‌ಪಾಟ್	2ನೇ ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
3,4,5,6,7	6,7,8,9,10	4,5,6	7,8,9	8,9,10

ನಿಧನ ವಾರ್ತೆ

ಎಚ್‌.ಟಿ. ದಾಸಪ್ಪ



ಬೆಂಗಳೂರು: ಲೋಕೋಪಯೋಗಿ ಇಲಾಖೆಯ ನಿವೃತ್ತ ಕಾರ್ಯನಿರ್ವಾಹಕ ಎಂಜಿನಿಯರ್ ಎಚ್‌.ಟಿ. ದಾಸಪ್ಪ (93) ಅವರು ಗುರುವಾರ (ಫೆ. 18) ರಾತ್ರಿ ನಗರದಲ್ಲಿರುವ ತಮ್ಮ ನಿವಾಸದಲ್ಲಿ ನಿಧನರಾದರು.

ಅವರಿಗೆ ಪತ್ನಿ, ಇಬ್ಬರು ಪುತ್ರಿಯರು ಹಾಗೂ ಇಬ್ಬರು ಪುತ್ರರು ಇದ್ದಾರೆ.

ಬೆಂಗಳೂರು ಈಡಿಗರ ವಿದ್ಯಾರ್ಥಿ ನಿಲಯದ ಹಳೇ ವಿದ್ಯಾರ್ಥಿಗಳ ಸಂಘದ ಪದಾಧಿಕಾರಿಯಾಗಿಯೂ ದಾಸಪ್ಪ ಅವರು ಕೆಲಸ ಮಾಡಿದ್ದರು. ಅವರ ಅಂತ್ಯಕ್ರಿಯೆ ಶುಕ್ರವಾರ ನಡೆಯಿತು ಎಂದು ಕುಟುಂಬದವರು ತಿಳಿಸಿದ್ದಾರೆ.



ನಿರ್ಮಲಾ ಸೀತಾರಾಮನ್ ಅವರಿಗೆ ಮನವಿಗೆ ಸಲ್ಲಿಸಿದ ಡಾ.ಕೆ. ಸುಧಾಕರ್

ಏಮ್ಸ್ ಸ್ಥಾಪಿಸಲು ನೆರವಿಗೆ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಶನಿವಾರ ಭೇಟಿ ಮಾಡಿದ ಆರೋಗ್ಯ ಸಚಿವ ಡಾ.ಕೆ. ಸುಧಾಕರ್, ರಾಜ್ಯದಲ್ಲಿ ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ಏಮ್ಸ್) ಮತ್ತು ಅದರ ಶಾಖೆಗಳನ್ನು ತೆರೆಯಲು ನೆರವು ನೀಡುವಂತೆ ಮನವಿ ಮಾಡಿದರು.

ಈ ಕುರಿತು ಟ್ವೀಟ್ ಮಾಡಿರುವ ಸಚಿವರು, 'ರಸ್ತೆ ಅಪಘಾತಗಳಲ್ಲಿ ಸಾವಿನ ಸಂಖ್ಯೆ ಕಡಿಮೆಮಾಡಲು ನಾಲ್ಕು ಅತ್ಯಾಧುನಿಕ ತುರ್ತು ಚಿಕಿತ್ಸಾ ಕೇಂದ್ರಗಳ ಸ್ಥಾಪನೆಗೂ ನೆರವು ನೀಡುವಂತೆ ಮನವಿ ಮಾಡಿದ್ದೇನೆ. ಕ್ಯಾನ್ಸರ್, ಮೂತ್ರಪಿಂಡ ರೋಗಗಳು, ಹೃದ್ರೋಗ ಮತ್ತಿತರ ತೀವ್ರ ಸ್ವರೂಪದ ಕಾಯಿಲೆಗಳಿಗೆ ಚಿಕಿತ್ಸೆ ನೀಡುವುದಕ್ಕೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳುಳ್ಳ ಹೆಲ್ತ್ ಸಿಟಿ ನಿರ್ಮಾಣಕ್ಕೂ ನೆರವು ಕೋರಿದ್ದೇನೆ' ಎಂದು ತಿಳಿಸಿದ್ದಾರೆ.

ಬಯಲುಸೀಮೆಯ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ನೀರಾವರಿ ಸೌಲಭ್ಯದ ವಿಸ್ತರಣೆ, ಕೋಲಾರ- ಚಿಕ್ಕಬಳ್ಳಾಪುರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಮತ್ತು ಸಹಕಾರಿ ಹಾಲು ಉತ್ಪಾದಕರ ಒಕ್ಕೂಟಗಳ ವಿಭಜನೆ ಕುರಿತೂ ಚರ್ಚಿಸಲಾಗಿದೆ ಎಂದು ಸಚಿವರು ಟ್ವಿಟರ್ ನಲ್ಲಿ ಮಾಹಿತಿ ನೀಡಿದ್ದಾರೆ.



ಆಲಿಕಲ್ಲು ಮಳೆ: ನೆಲಕಚ್ಚಿದ ದ್ರಾಕ್ಷಿ

ಪ್ರಜಾವಾಣಿ ವಾರ್ತೆ

ಬಾಗೇಪಲ್ಲಿ: ತಾಲ್ಲೂಕಿನ ಮಿಟ್ಟೇಮರಿ ಹೋಬಳಿಯ ಗೊಲ್ಲಪಲ್ಲಿ ಗ್ರಾಮದಲ್ಲಿ ಶನಿವಾರ ಸಂಜೆ ಸುರಿದ ಆಲಿಕಲ್ಲು ಸಹಿತ ಅಕಾಲಿಕ ಮಳೆಗೆ ರೈತ ವೆಂಕಟರೆಡ್ಡಿ ಬೆಳೆದ ಸುಮಾರು ₹ 25 ಲಕ್ಷ ಮೌಲ್ಯದ ದ್ರಾಕ್ಷಿ ಬೆಳೆ ನೆಲಕಚ್ಚಿದೆ.

ವೆಂಕಟರೆಡ್ಡಿ ತಮಗೆ ಸೇರಿದ ಎರಡೂವರೆ ಎಕರೆಯಲ್ಲಿ ದ್ರಾಕ್ಷಿ ಬೆಳೆದಿದ್ದಾರೆ. ಇನ್ನು ಒಂದೂವರೆ ತಿಂಗಳ ಒಳಗೆ ಕಟಾವು ಮಾಡಬೇಕಿತ್ತು. ಮಳೆಗೆ ದ್ರಾಕ್ಷಿ ಗೊಂಚಲುಗಳು ನೆಲಕ್ಕೆ ಬಿದ್ದಿವೆ.

ರೈತ ವೆಂಕಟರೆಡ್ಡಿ ಪ್ರತಿಕ್ರಿಯಿಸಿ, 'ಕೊರೊನಾ ಸಂದರ್ಭದಲ್ಲಿ ಮಾರುಕಟ್ಟೆ ಇರದೇ ಬೆಳೆದ ದ್ರಾಕ್ಷಿಯನ್ನು ಉಚಿತವಾಗಿ ಹಂಚಿದ್ದೇನೆ. ಇದೀಗ ಮಳೆಗೆ ದ್ರಾಕ್ಷಿ ಗೊಂಚಲುಗಳು ನೆಲದ ಪಾಲಾಗಿವೆ' ಎಂದರು.



'ಕ್ವಾಂಟಮ್ ಸಂಶೋಧನೆಗೆ ಆದ್ಯತೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆವಿಷ್ಕಾರ ಹಾಗೂ ವಿಜ್ಞಾನ ತಂತ್ರಜ್ಞಾನ ಕ್ಷೇತ್ರಗಳನ್ನು ಮತ್ತಷ್ಟು ಬಲಿಷ್ಠಗೊಳಿಸುವ ಉದ್ದೇಶದಿಂದ ಕ್ವಾಂಟಮ್ (ಕಣ) ಸಂಶೋಧನೆಗೆ ಸರ್ಕಾರ ಹೆಚ್ಚು ಆದ್ಯತೆ ನೀಡುತ್ತಿದೆ' ಎಂದು ವಿಜ್ಞಾನ-ತಂತ್ರಜ್ಞಾನ ಸಚಿವರೂ ಆಗಿರುವ ಉಪ ಮುಖ್ಯ ಮಂತ್ರಿ ಡಾ.ಸಿ.ಎನ್. ಅಶ್ವತ್ಥ ನಾರಾಯಣ ಹೇಳಿದರು.

ಕ್ವಾಂಟಮ್ ಸಂಶೋಧನೆ ಕುರಿತ ಶನಿವಾರ ನಡೆದ ವರ್ಚುವಲ್ ಚರ್ಚಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಆರಂಭದಿಂದಲೂ ಸಂಶೋಧನೆಯತ್ತ ರಾಜ್ಯ ಮುಕ್ತವಾಗಿ ತೆರೆದುಕೊಂಡಿದೆ. ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಯಾದ ಮೇಲೆ ಇದಕ್ಕೆ ಇನ್ನೂ ಹೆಚ್ಚು ಒತ್ತು ನೀಡಲಿದೆ. ಶಿಕ್ಷಣ ಸಂಸ್ಥೆಗಳಲ್ಲಿ ಕಣ ವಿಜ್ಞಾನ ಬೋಧನೆಗೆ ಹೆಚ್ಚೆಚ್ಚು ಅವಕಾಶ ಕಲ್ಪಿಸಲಾಗುವುದು' ಎಂದರು.



ತೆರವುಗೊಳಿಸಿದ ಆಪ್ಟಿಕ್ ಫೈಬರ್ ಕೇಬಲ್‌ಗಳು

ಪಾದಚಾರಿ ಮಾರ್ಗ ಒತ್ತುವರಿ, ಕೇಬಲ್ ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಾದಚಾರಿ ಮಾರ್ಗ ಒತ್ತುವರಿ ಮಾಡಿಕೊಂಡು ನಿರ್ಮಿಸಿದ ಅಂಗಡಿ ಮುಂಗಟ್ಟುಗಳನ್ನು ಮತ್ತು ಅನಧಿಕೃತವಾಗಿ ಅಳವಡಿಸಿದ್ದ ಆಪ್ಟಿಕ್ ಫೈಬರ್ ಕೇಬಲ್‌ಗಳನ್ನು (ಒಎಫ್‌ಸಿ) ಬಿಬಿಎಂಪಿ ಸಿಬ್ಬಂದಿ ಶನಿವಾರ ತೆರವುಗೊಳಿಸಿದರು.

ಮಹದೇವಪುರ ವಲಯದ 82ನೇ ವಾರ್ಡ್ ಇಪಿಐಪಿ ಪ್ರದೇಶದ ರಸ್ತೆಗಳಲ್ಲಿ ಸುಮಾರು 1ಕಿ.ಮೀ.ವರೆಗೆ ರಸ್ತೆಯ ಎರಡೂ ಬದಿಗಳಲ್ಲಿ ಪಾದಚಾರಿ ಮಾರ್ಗ ಒತ್ತುವರಿ ಮಾಡಿಕೊಂಡು ಅಂಗಡಿ–ಮುಂಗಟ್ಟು ನಿರ್ಮಿಸಿಕೊಳ್ಳಲಾಗಿತ್ತು. ವಾರ್ಡ್ ಎಂಜಿನಿಯರ್ ನೇತೃತ್ವದಲ್ಲಿ ನಡೆದ ಕಾರ್ಯಾಚರಣೆಯಲ್ಲಿ 70 ಅಂಗಡಿಗಳನ್ನು ತೆರವುಗೊಳಿಸಲಾಯಿತು.

'ಪಾದಚಾರಿ ಮಾರ್ಗ ಮತ್ತೆ ಒತ್ತುವರಿ ಮಾಡದಂತೆ ಸೂಚನೆ ನೀಡಲಾಗಿದೆ. ವಾರ್ಡ್‌ನಲ್ಲಿ ಬೇರೆ ರಸ್ತೆಗಳ ಪಾದಚಾರಿ ಮಾರ್ಗಗಳನ್ನೂ ಕೆಲವರು ಒತ್ತುವರಿ ಮಾಡಿಕೊಂಡಿದ್ದಾರೆ. ಅವುಗಳನ್ನೂ ಸಾರ್ವಜನಿಕರ ಹಿತದೃಷ್ಟಿಯಿಂದ ತೆರವುಗೊಳಿಸಲಾಗುವುದು' ಎಂದು ವಲಯದ ಮುಖ್ಯ ಎಂಜಿನಿಯರ್ ಆರ್.ಎಲ್.ಪರಮೇಶ್ವರಯ್ಯ ತಿಳಿಸಿದ್ದಾರೆ.

ಹೊರಮಾವು, ಕೆ.ಆರ್.ಪುರ, ಎಚ್.ಎ.ಎಲ್, ಹೂಡಿ, ವೈಟ್‌ಫೀಲ್ಡ್ ಮತ್ತು ಇತರೆಡೆ ವಿದ್ಯುತ್ ಕಂಬ ಮತ್ತು ಮರಗಳ ಮೇಲೆ ಜೋತಾಡುತ್ತಿದ್ದ ಕೇಬಲ್‌ಗಳನ್ನು ಬಿಬಿಎಂಪಿ ಸಿಬ್ಬಂದಿ ಕಿತ್ತುಹಾಕಿದರು. ಮಹದೇವಪುರ ಮತ್ತು ಕೆ.ಆರ್.ಪುರ ಉಪವಲಯದಲ್ಲಿ ಒಟ್ಟು 48 ಕಿ.ಮೀ ಉದ್ದದ ಕೇಬಲ್ ತೆರವುಗೊಳಿಸಲಾಗಿದೆ.

ಪಾದಚಾರಿಗಳ ಓಡಾಟಕ್ಕೆ ಮತ್ತು ವಾಹನ ಸಂಚಾರಕ್ಕೆ ಯಾವುದೇ ತೊಂದರೆ ಆಗಬಾರದು ಎಂಬ ಕಾರಣಕ್ಕೆ ಬಿಬಿಎಂಪಿ ಆಯುಕ್ತರ ಸೂಚನೆಯಂತೆ ಈ ಕಾರ್ಯಾಚರಣೆ ನಡೆಸಲಾಗಿದೆ ಎಂದು ಪರಮೇಶ್ವರಯ್ಯ ತಿಳಿಸಿದರು.











ಮೇಜರ್ ಜನರಲ್ ಜೆ.ವಿ.ಪ್ರಸಾದ್ ಅವರು 'ವಿಜಯ ಜ್ಯೋತಿ'ಯನ್ನು ಸ್ವೀಕರಿಸಿದರು

ಬೆಂಗಳೂರು ತಲುಪಿದ 'ವಿಜಯ ಜ್ಯೋತಿ'

ಬೆಂಗಳೂರು: ಭಾರತವು 1971ರಲ್ಲಿ ಪಾಕಿಸ್ತಾನ ವಿರುದ್ಧ ನಡೆದಿದ್ದ ಯುದ್ಧದಲ್ಲಿ ಗೆಲುವು ಸಾಧಿಸಿತ್ತು. ಇದರ 50ನೇ ವರ್ಷಾಚರಣೆಯ ಆರಂಭದ ಅಂಗವಾಗಿ ನವದೆಹಲಿಯ ರಾಷ್ಟ್ರೀಯ ಯುದ್ಧ ಸ್ಮಾರಕದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಬೆಳಗಿಸಿದ್ದ 'ವಿಜಯ ಜ್ಯೋತಿ' ಶನಿವಾರ ಬೆಳಿಗ್ಗೆ ಉದ್ಯಾನ ನಗರಿಯನ್ನು ತಲುಪಿತು.

ದೇಶದ ವಿವಿಧ ಪ್ರದೇಶಗಳನ್ನು ಹಾದು ಬಂದಿರುವ ಈ ಜ್ಯೋತಿಯನ್ನು ಮದ್ರಾಸ್ ಎಂಜಿನಿಯರ್ ಗ್ರೂಪ್ ಆ್ಯಂಡ್ ಸೆಂಟರ್‌ನ (ಎಂಇಜಿ) ಯೋಧರು ಆದರದಿಂದ ಬರಮಾಡಿಕೊಂಡರು. ಬಳಿಕ ಅದನ್ನು ಹಳೆಯ ಮದ್ರಾಸ್ ರಸ್ತೆಯ ಮೂಲಕ ಎಂಇಜಿ ಕೇಂದ್ರಕ್ಕೆ ಒಯ್ಯಲಾಯಿತು. ಕರ್ನಾಟಕ ಮತ್ತು ಕೇರಳ ಉಪ ವಲಯದ ಜನರಲ್ ಆಫೀಸರ್ ಕಮಾಂಡಿಂಗ್ ಆಗಿರುವ ಮೇಜರ್ ಜನರಲ್ ಜೆ.ವಿ.ಪ್ರಸಾದ್ ಜ್ಯೋತಿಯನ್ನು ಸ್ವೀಕರಿಸಿದರು. ಈ ವೇಳೆ ಹುತಾತ್ಮ ಯೋಧರಿಗೆ ಗೌರವ ಸಮರ್ಪಿಸಲಾಯಿತು.

'ವಿಜಯ ಜ್ಯೋತಿ'ಯು ಮಾರ್ಚ್ 5ರವರೆಗೆ ಬೆಂಗಳೂರಿನಲ್ಲಿ ಇರಲಿದೆ. 1971ರ ಯುದ್ಧದಲ್ಲಿ ಹುತಾತ್ಮರಾದ ಯೋಧರ ಹಳ್ಳಿಗಳಿಗೆ ಇದನ್ನು ಕೊಂಡೊಯ್ಯಲಾಗುತ್ತದೆ. ಮಾರ್ಚ್ 6ರಂದು ಇದು ಕೊಯಂಬತ್ತೂರಿನತ್ತ ಸಾಗಲಿದೆ.

'ಅಂಬೇಡ್ಕರ್ ವಾದ ಒಪ್ಪುವವರು ಬಿಜೆಪಿ ಬೆಂಬಲಿಸಬೇಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಂಬೇಡ್ಕರ್ ವಾದವನ್ನು ಒಪ್ಪುವವರು ಬಿಜೆಪಿಗೆ ಮತ ಹಾಕಬಾರದು. ಆರ್‌ಎಸ್‌ಎಸ್‌ನಿಂದ ಪೋಷಿಸಲ್ಪಡುತ್ತಿರುವ ಆ ಪಕ್ಷಕ್ಕೆ ಯಾರೂ ಸೇರಬಾರದು' ಎಂದು ಕರ್ನಾಟಕ ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ತಿಳಿಸಿದರು.

ದಲಿತ ಸಂಘರ್ಷ ಸಮಿತಿ ಸಂಘಟನೆಗಳ ಜಂಟಿ ವೇದಿಕೆ ಆಯೋಜಿಸಿರುವ ದಲಿತ ಚಳವಳಿಯ ರಾಜ್ಯ ಹಾಗೂ ಜಿಲ್ಲಾ ಪದಾಧಿಕಾರಿಗಳ ಕಾರ್ಯಾಗಾರದಲ್ಲಿ ದುರ್ಗಂ ಸುಬ್ಬಾರಾವ್ ಅವರ 'ಅಂಬೇಡ್ಕರ್ ಸಿದ್ಧಾಂತ' ಪುಸ್ತಕ ಬಿಡುಗಡೆಗೊಳಿಸಿ ಮಾತನಾಡಿದರು.

'ಶ್ರೀನಿವಾಸ್ ಪ್ರಸಾದ್ ಅವರು ಮುಂದೊಂದು ದಿನ ರಾಜ್ಯದ ಮುಖ್ಯ-ಮಂತ್ರಿಯಾಗುತ್ತಾರೆ ಎಂಬ ಆಸೆ ಇಟ್ಟುಕೊಂಡಿದ್ದೆವು. ಆದರೆ ಅವರು ರಾಜಕೀಯ ಜೀವನದ ಕೊನೆಯ ಘಟ್ಟದಲ್ಲಿ ಬಿಜೆಪಿ ಸೇರಿಬಿಟ್ಟರು. ಗೋವಿಂದ ಕಾರಜೋಳ, ರಮೇಶ ಜಿಗಜಿಣಗಿ ಅವರಿಗೆ ತಲೆ ಇಲ್ವಾ. ಬಿಜೆಪಿಯಲ್ಲಿದ್ದುಕೊಂಡು ಅವರು ಅಧಿಕಾರ ಅನುಭವಿಸಬಹುದಷ್ಟೇ. ಅಲ್ಲಿದ್ದು ಏನೂ ಸಾಧನೆ ಮಾಡಲು ಆಗುವುದಿಲ್ಲ. ದೇಶದಲ್ಲಿ ಪ್ರಸ್ತುತ ನಡೆಯುತ್ತಿರುವ ಬೆಳ-ವಣಿಗೆಯನ್ನು ನೋಡಿ, ಸಹಿಸಿಕೊಂಡು ಸುಮ್ಮನಿರುವುದು ಮುಟ್ಠಾಳತನ. ದಲಿತ ನಾಯಕರೆನಿಸಿಕೊಂಡವರು ಮೊದಲು ಬಿಜೆಪಿಯಿಂದ ಹೊರಬರಬೇಕು' ಎಂದೂ ಒತ್ತಾಯಿಸಿದರು.



ಕಾರ್ಯಾಗಾರದಲ್ಲಿ ದುರ್ಗಂ ಸುಬ್ಬಾರಾವ್ ಹಾಗೂ ಎನ್‌.ವೆಂಕಟೇಶ್ ಮಾತುಕತೆಯಲ್ಲಿ ತೊಡಗಿದ್ದರು. ಬಡಗಲಪುರ ನಾಗೇಂದ್ರ, ಇಂದೂಧರ ಹೊನ್ನಾಪುರ ಹಾಗೂ ಮಾವಳ್ಳಿ ಶಂಕರ್ ಇದ್ದಾರೆ –ಪ್ರಜಾವಾಣಿ ಚಿತ್ರ

ದಲಿತ ಸಂಘರ್ಷ ಸಮಿತಿಯ ಹಿರಿಯ ಮುಖಂಡ ಹಾಗೂ ಪತ್ರಕರ್ತ ಇಂದೂಧರ ಹೊನ್ನಾಪುರ 'ಅಂಬೇಡ್ಕರ್ ಅವರು ಬಹಳ ಆಸ್ಥೆ ವಹಿಸಿ ಮೀಸಲಾತಿಯನ್ನು ಜಾರಿಗೊಳಿಸಿದ್ದರು. ಅದನ್ನು ಬುಡಮೇಲಾಗಿಸುವ ಕಾರ್ಯ ಈಗ ನಡೆಯುತ್ತಿದೆ. ಮೀಸಲಾತಿಯನ್ನು ಬಡತನದೊಂದಿಗೆ ಸಮೀಕರಿಸುವ ಅನಾಗರಿಕ ಕೆಲಸ ಮಾಡಲಾಗುತ್ತಿದೆ. ಇದು ಬಡತನ ವಿಮೋಚನೆಗಾಗಿ ಅನು-ಷ್ಠಾನಗೊಂಡಿರುವ ಕಾರ್ಯಕ್ರಮವಲ್ಲ' ಎಂದು ತಿಳಿಸಿದರು.

'ನಾವು ಈ ದೇಶದ ಮಕ್ಕಳು. ನಮಗೆ ಈ ದೇಶದ ಸಂಪತ್ತಿನಲ್ಲಿ ಸಮಪಾಲು ಬೇಕಿದೆ. ಈ ನಿಟ್ಟಿನಲ್ಲಿ ನಾವು ಚಳವಳಿ ಆರಂಭಿಸಬೇಕು. ಖಾಸಗಿ, ರಾಜಕೀಯ ಕ್ಷೇತ್ರದಲ್ಲಿ ಮೀಸಲಾತಿಗಾಗಿ ಹಿಂದುಳಿದ ವರ್ಗದವರನ್ನೆಲ್ಲಾ ಒಗ್ಗೂಡಿಸಿಕೊಂಡು ಹೋರಾಟ ಮಾಡಬೇಕು' ಎಂದು ಸಲಹೆ ನೀಡಿದರು.

'ಹೊಸ ಶಿಕ್ಷಣ ನೀತಿಯನ್ನು ಜಾರಿಗೊಳಿಸುವ ಮೂಲಕ ಶೋಷಿತ ಸಮುದಾಯಗಳನ್ನು ತುಳಿಯುವ ಕೆಲಸ ಮಾಡಲಾಗುತ್ತಿದೆ. ಈಗಿನ ಸರ್ಕಾರವು ದಲಿತರ ಬದುಕುವ ಹಕ್ಕನ್ನೇ ಕಸಿ-ದುಕೊಳ್ಳುತ್ತಿದೆ. ಪ್ರಶ್ನಿಸುವ ಮತ್ತು ಪ್ರತಿಭಟಿಸುವವರಿಗೆ ದೇಶದ್ರೋಹಿಗಳೆಂಬ ಹಣೆಪಟ್ಟಿ ಕಟ್ಟಿ ಜೈಲಿಗೆ ಅಟ್ಟ-ಲಾಗುತ್ತಿದೆ. ಈಗ ನಾವೆಲ್ಲಾ ಜಾಗ್ರತರಾಗಬೇಕಿರುವುದು ಬಹಳ ಅವಶ್ಯ' ಎಂದು ಗುರುಪ್ರಸಾದ್ ಕೆರಗೋಡು ತಿಳಿಸಿದರು.

ಸುದ್ದಿ 2 ನಿಮಿಷ

ಆನ್‌ಲೈನ್ ಮದ್ಯ ಮಾರಾಟಕ್ಕೆ ಅವಕಾಶ ಇಲ್ಲ: ಹೈಕೋರ್ಟ್

ಬೆಂಗಳೂರು: ರಾಜ್ಯದಲ್ಲಿ ಆನ್‌ಲೈನ್ ಮದ್ಯ ಮಾರಾಟಕ್ಕೆ ಅವಕಾಶ ಇಲ್ಲ ಎಂದಿರುವ ಹೈಕೋರ್ಟ್, ಈ ಸಂಬಂಧ ಸಲ್ಲಿಕೆಯಾಗಿದ್ದ ಮೇಲ್ಮನವಿ ವಜಾಗೊಳಿಸಿದೆ.

ಆನ್‌ಲೈನ್ ಮದ್ಯ ಮಾರಾಟಕ್ಕೆ ಅವಕಾಶ ಕೋರಿ ಹಿಪ್ ಬಾರ್ ಪ್ರೈವೆಟ್ ಲಿಮಿಟೆಡ್ ಸಲ್ಲಿಸಿದ್ದ ಅರ್ಜಿಯನ್ನು ಏಕ ಸದಸ್ಯ ಪೀಠ ವಜಾಗೊಳಿಸಿತ್ತು. ಅದನ್ನು ಪ್ರಶ್ನಿಸಿ ದ್ವಿಸದಸ್ಯ ಸದಸ್ಯ ಪೀಠಕ್ಕೆ ಮೇಲ್ಮನವಿ ಸಲ್ಲಿಸ-ಲಾಗಿತ್ತು. ಪರಿಶೀಲನೆ ನಡೆಸಿದ ನ್ಯಾಯಮೂರ್ತಿ ಸತೀಶ್‌ಚಂದ್ರ ಶರ್ಮ ಮತ್ತು ನ್ಯಾಯಮೂರ್ತಿ ವಿ. ಶ್ರೀಶಾನಂದ ಅವರಿದ್ದ ವಿಭಾಗೀಯ ಪೀಠ ಏಕ ಸದಸ್ಯ ಪೀಠದ ಆದೇಶ ಎತ್ತಿ ಹಿಡಿದಿದೆ.

'ಅಬಕಾರಿ ಕಾಯ್ದೆ ಪ್ರಕಾರ ಆನ್‌ಲೈನ್ ಮದ್ಯ ಮಾರಾಟಕ್ಕೆ ಅವಕಾಶ ಇಲ್ಲ. ಕಾಯ್ದೆಯಡಿ ಪಾನೀಯಗಳ ಮಾರಾಟಕ್ಕೆ ಪರವಾನಗಿ ಪಡೆಯುವುದು ಕಡ್ಡಾಯ. ಹೀಗಾಗಿ ಅಬಕಾರಿ ಇಲಾಖೆ ಅನುಮತಿ ರದ್ದುಪಡಿಸಿರು-ವುದರಲ್ಲಿ ಕಾನೂನು ಉಲ್ಲಂಘನೆ ಆಗಿಲ್ಲ. ಏಕ ಸದಸ್ಯ ಪೀಠದ ಆದೇಶ ಸರಿಯಾಗಿದೆ' ಎಂದು ಪೀಠ ಹೇಳಿದೆ.

2017ರಲ್ಲಿ ಮದ್ಯ ಮಾರಾಟಕ್ಕೆ ಅನುಮತಿ ಪತ್ರ ನೀಡಿದ್ದ ಅಬಕಾರಿ ಇಲಾಖೆ, ಯಾವುದೇ ನೋಟಿಸ್ ನೀಡದೆ 2019ರಲ್ಲಿ ಏಕಾಏಕಿ ಅನುಮತಿ ಪತ್ರ ವಾಪಸ್ ಪಡೆದಿದೆ. ಇದು ಕಾನೂನು ಬಾಹಿರ ಎಂದು ಅರ್ಜಿದಾರರು ವಾದಿಸಿದ್ದರು.



ಇದೇ 23ಕ್ಕೆ ಖಾಸಗಿ ಶಾಲಾ ಆಡಳಿತ ಮಂಡಳಿಯ ಪ್ರತಿಭಟನೆ

ಬೆಂಗಳೂರು: 'ಶಿಕ್ಷಣ ಇಲಾಖೆಯ ಧೋರಣೆ, ದ್ವಂದ್ವ ನಿಲುವು, ಅವೈಜ್ಞಾನಿಕ ಕ್ರಮಗಳನ್ನು ಖಂಡಿಸಿ ಇದೇ 23ರಂದು ಬೃಹತ್ ಪ್ರತಿಭಟನಾ ರ‍್ಯಾಲಿ ಮತ್ತು ಸಮಾವೇಶ ಹಮ್ಮಿಕೊಳ್ಳಲಾಗಿದೆ' ಎಂದು ರಾಜ್ಯ ಖಾಸಗಿ ಅನುದಾನರಹಿತ ಶಿಕ್ಷಣ ಸಂಸ್ಥೆಗಳ ಸಂಘಟನೆಯ (ಕ್ಯಾಮ್ಸ್) ಪ್ರಧಾನ ಕಾರ್ಯದರ್ಶಿ ಡಿ. ಶಶಿಕುಮಾರ್ ತಿಳಿಸಿದ್ದಾರೆ.

'ಬೆಂಗಳೂರಿನ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಿಂದ ಫ್ರೀಡಂ ಪಾರ್ಕ್‌ವರೆಗೆ ಅಂದು ಬೆಳಿಗ್ಗೆ 10 ಗಂಟೆಗೆ ನಡೆಯಲಿರುವ ಪ್ರತಿಭಟನಾ ರ‍್ಯಾಲಿಯಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿ, ಶಿಕ್ಷಕರು, ವ್ಯವಸ್ಥಾಪಕರು ಸೇರಿ 25 ಸಾವಿರಕ್ಕೂ ಹೆಚ್ಚು ಮಂದಿ ಭಾಗವಹಿಸಲಿದ್ದಾರೆ' ಎಂದು ಅವರು ಹೇಳಿದ್ದಾರೆ.

'ಕ್ಯಾಮ್ಸ್ ಮತ್ತು ಇತರ 10 ರಾಜ್ಯ ಸಂಘಟನೆಗಳನ್ನು ಒಳಗೊಂಡ ಕರ್ನಾಟಕ ಖಾಸಗಿ ಶಾಲಾ ಆಡಳಿತ ಮಂಡಳಿಗಳು, ಶಿಕ್ಷಣ– ಶಿಕ್ಷಕೇತರ ಸಿಬ್ಬಂದಿಯ ಸಮನ್ವಯ ಸಮಿತಿಯ ಅಡಿಯಲ್ಲಿ ಈ ರ‍್ಯಾಲಿ ಮತ್ತು ಪ್ರತಿಭಟನಾ ಸಮಾವೇಶ ನಡೆಯಲಿದೆ. ಸಂಜೆ 4 ಗಂಟೆಯವರೆಗೆ ಪ್ರತಿಭಟನೆ ನಡೆಯಲಿದೆ' ಎಂದೂ ಅವರು ಹೇಳಿದ್ದಾರೆ.

ಪಿಎಚ್‌.ಡಿ ಕೌನ್ಸೆಲಿಂಗ್ ಮುಂದೂಡಿಕೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯವು ಇದೇ 23ರಂದು ನಡೆಸಲು ಉದ್ದೇಶಿಸಿದ್ದ ಎರಡನೇ ಸುತ್ತಿನ ಪಿಎಚ್‌.ಡಿ ಸೀಟು ಹಂಚಿಕೆ ಪ್ರಕ್ರಿಯೆಯನ್ನು ಅನಿವಾರ್ಯ ಕಾರಣಗಳಿಂದ ಮುಂದೂಡಿದೆ.

'ಪಿಎಚ್‌.ಡಿ ನೋಂದಣಿಗಾಗಿ 2019ರಲ್ಲಿ ಹಲವು ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿದ್ದರು. ಈ ಸಂಬಂಧ ಆಯಾ ಸ್ನಾತಕೋತ್ತರ ವಿಭಾಗಗಳಲ್ಲಿ ಸೀಟು ಹಂಚಿಕೆ ಪ್ರಕ್ರಿಯೆ ನಡೆಸಲು ತೀರ್ಮಾನಿಸಲಾಗಿತ್ತು. ಇದನ್ನು ಮುಂದಕ್ಕೆ ಹಾಕಲಾಗಿದೆ. ಹೊಸ ದಿನಾಂಕವನ್ನು ಶೀಘ್ರವೇ ಪ್ರಕಟಿಸಲಾಗುತ್ತದೆ' ಎಂದು ಪ್ರಕಟಣೆ ತಿಳಿಸಿದೆ.

'ರೈತ ಚಳವಳಿ ಬಗ್ಗೆ ಬರಹಗಾರರ ಮೌನವೇಕೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನವ ವಸಾಹತುಶಾಹಿ ವಿರುದ್ಧ ಬರೆಯುತ್ತಿದ್ದ ಬರಹಗಾರರು ರೈತರ ಹೋರಾಟದ ವಿಷಯ ಬಂದಾಗ ಮೌನ ವಹಿಸಿರುವುದೇಕೆ' ಎಂದು ಚಿಂತಕ ಡಾ. ಪುರುಷೋತ್ತಮ ಬಿಳಿಮಲೆ ಪ್ರಶ್ನಿಸಿದ್ದಾರೆ.

ದೆಹಲಿಯಲ್ಲಿ ರೈತರು ನಡೆಸುತ್ತಿರುವ ಹೋರಾಟದ ಕುರಿತ ಎಚ್‌.ಆರ್. ನವೀನ್‌ಕುಮಾರ್ ಅವರ 'ಕದನ ಕಣ' ಮತ್ತು ಕೆ.ಷರೀಫಾ ಮತ್ತು ಯಮುನಾ ಗಾಂವ್ಕರ್ ಸಂಪಾದಕತ್ವದ ಕವನ ಸಂಕಲನ 'ಹೊನ್ನಾರು ಒಕ್ಕಲು' ಬಿಡುಗಡೆ ಮಾಡಿ ಅವರು ಮಾತನಾಡಿದರು.



ಪುರುಷೋತ್ತಮ ಬಿಳಿಮಲೆ

'ನಮ್ಮ ಅನೇಕ ಬರಹಗಾರರು ನವ ವಸಾಹತುಶಾಹಿ ಬೆಳವಣಿಗೆ ಬಗ್ಗೆ ಬರೆದಿದ್ದಾರೆ. ನವ ವಸಾಹತುಶಾಹಿ ವ್ಯವಸ್ಥೆ ವಿರುದ್ಧ ಬೌದ್ಧಿಕವಾಗಿ ಎತ್ತಿದ್ದ ವಿರೋಧವನ್ನು ರೈತರು ಭೌತಿಕವಾಗಿ ಹೋರಾಟಕ್ಕೆ ಇಳಿದಿದ್ದಾರೆ. ಈ ಸಂದರ್ಭದಲ್ಲಿ ಬರಹಗಾರರು ಮೌನ ವಹಿಸಿದ್ದಾರೆ. ಅವರನ್ನು ಭಯ ಕಾಡುತ್ತಿದೆಯೋ ಅಥವಾ ಬೇರಾವ ಲಾಭ ಇದೆಯೋ ಗೊತ್ತಾಗುತ್ತಿಲ್ಲ' ಎಂದರು.

'ಕೃಷಿ ಸೇರಿ ಎಲ್ಲವನ್ನೂ ಸರ್ಕಾರ ಖಾಸಗೀಕರಣ ಮಾಡುತ್ತದೆ. ಬ್ರಿಟಿಷರ ಕಾಲದ ವಸಾಹತುಶಾಹಿ ವ್ಯವಸ್ಥೆಗೂ ನವ ವಸಾಹತುಶಾಹಿ ಪದ್ಧತಿಗೂ ವ್ಯತ್ಯಾಸ ಇದೆ. ವೈರಿಗಳು (ಬ್ರಿಟಿಷರು) ಯಾರು ಎಂಬುದು ಅವರ ಮುಖ ಮತ್ತು ವೇಷಭೂಷಣದ ಮೂಲಕವೇ ಅಂದು ತಿಳಿಯಬಹುದಿತ್ತು. ನವ ವಸಾಹತುಶಾಹಿ ವ್ಯವಸ್ಥೆಯಲ್ಲಿ ವೈರಿಗಳನ್ನು ಆ ರೀತಿ ಗುರುತಿಸಲು ಆಗುವುದಿಲ್ಲ. ಹೀಗಾಗಿ, ಹೋರಾಟ ನಡೆಸುವುದು ಕಷ್ಟವಾಗಲಿದೆ' ಎಂದರು.

'ಕೃಷಿಗೆ ಸಂಬಂಧಿಸಿದ ವಿಷಯಗಳನ್ನು ತೀರ್ಮಾನಿಸುವ ಅಧಿಕಾರ ಸಂವಿಧಾನದ ಪ್ರಕಾರ ರಾಜ್ಯಗಳಿಗೆ ಇದೆ. ವಿದ್ಯುತ್ ಸಂಬಂಧಿಸಿದ ವಿಷಯದಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರ ಜಂಟಿಯಾಗಿ ತೀರ್ಮಾನ ಕೈಗೊಳ್ಳಬೇಕು. ಆದರೆ, ರಾಜ್ಯಗಳ ಅಧಿಕಾರ ಪರಿಗಣಿಸದೆ ಕೇಂದ್ರ ಸರ್ಕಾರವೇ ನಿರ್ಧಾರ ಕೈಗೊಂಡು ಕಾಯ್ದೆಗಳನ್ನು ರೂಪಿಸುತ್ತಿರುವುದು ಸಂವಿಧಾನಕ್ಕೆ ವಿರುದ್ಧವಾದ ನಡೆ' ಎಂದು ಹೇಳಿದರು.

'ಸಂವಿಧಾನ ಆಶಯ ಅರ್ಥ ಮಾಡಿಕೊಳ್ಳದ ಸರ್ಕಾರ, ಅದಕ್ಕೆ ವಿರುದ್ಧವಾಗಿ ನಡೆದುಕೊಳ್ಳುತ್ತಿ-ದೆ. ಇದನ್ನು ಪ್ರಶ್ನೆ ಮಾಡುವ ಯುವ ತಲೆಮಾರಿನ ಜತೆ ಸಂವಾದ ಮಾಡದೆ ಜೈಲಿಗೆ ತಳ್ಳುವ ಕೆಲಸ ಮಾಡುತ್ತಿದೆ. ಪಠ್ಯದಿಂದ ಹೊಸ ಧರ್ಮಗಳ ಉದಯದ ಪಾಠವನ್ನೇ ತೆಗೆದು ಹಾಕಲಾಗುತ್ತಿದೆ. ಮುಂದೆ ವಚನ ಚಳವಳಿ ಸಾಹಿತ್ಯಕ್ಕೂ ಕೈ ಹಾಕುವ ಸಾಧ್ಯತೆ ಇದೆ' ಎಂದು ಆತಂಕ ವ್ಯಕ್ತಪಡಿಸಿದರು.

'ಹಿಂದಿ ಭಾಷೆಯ ಬೆಳವಣಿಗೆಯ ಪ್ರಮಾಣ ಶೇ 56ರಷ್ಟಿದ್ದರೆ, ಕನ್ನಡ ಭಾಷೆಯ ಬೆಳವಣಿಗೆ ಪ್ರಮಾಣ ಶೇ 3.75ರಷ್ಟಕ್ಕೆ ಕುಸಿದಿದೆ. ಇದು ಅಪಾಯಕಾರಿ ಬೆಳವಣಿಗೆ ಮತ್ತು ಶಿಕ್ಷಣದ ಖಾಸಗೀಕರಣದ ಪರಿಣಾಮ' ಎಂದರು.

ಚಿಂತಕ ಡಾ. ವಿಜು ಕೃಷ್ಣನ್, ಕೇಸರಿ ಹರವು, ಎಚ್‌.ಆರ್‌.ನವೀನ್‌ಕುಮಾರ್, ಕೆ.ಷರೀಫಾ ಮಾತನಾಡಿದರು.

ಮೀಸಲಾತಿ ಹೋರಾಟದಿಂದ ಸಂವಿಧಾನ ಬಿಕ್ಕಟ್ಟಿಗೆ ನಾಂದಿ: ಸಂವಾದದಲ್ಲಿ ದಲಿತ ಮುಖಂಡರ ಕಳವಳ

'ಅಂದು ವಿರೋಧ, ಇಂದು ಹೋರಾಟ'

ಪ್ರಜಾವಾಣಿ ವಾರ್ತೆ



ಕಾರ್ಯಕ್ರಮದಲ್ಲಿ (ಎಡದಿಂದ) ದಲಿತ ಮುಖಂಡ ಸೂಲಿಕುಂಟೆ ರಮೇಶ್, ಸಿ.ಕೆ.ಮಹೇಶ್, ಮುಕುಡಪ್ಪ, ಬಾಬುರಾವ್ ಮುಡಬಿ, ಹೆಣ್ಣೂರು ಶ್ರೀನಿವಾಸ್, ಬಲಜಿಗ ಸಮುದಾಯದ ಮುಖಂಡ ಪಿ.ಎನ್.ಪ್ರಕಾಶ್ ಹಾಗೂ ವಿವಿಧ ಸಮುದಾಯದ ಮುಖಂಡರು ಭಾಗವಹಿಸಿದ್ದರು.

ಬೆಂಗಳೂರು: 'ದಲಿತರಿಗೆ ಮೀಸಲಾತಿ ವಿರೋಧಿಸುತ್ತಿದ್ದ ಸಮುದಾಯಗಳಲ್ಲಿ ಈಗ ತಮಗೂ ಮೀಸಲಾತಿ ಬೇಕೆಂದು ಹೋರಾಟ ನಡೆಸುತ್ತಿರುವುದು ವಿಪರ್ಯಾಸ. ಈ ಬೆಳವಣಿಗೆ ಸಂವಿಧಾನ ಬಿಕ್ಕಟ್ಟಿಗೆ ನಾಂದಿಯಾಗಲಿದೆ' ಎಂದು ದಲಿತ ಸಂಘರ್ಷ ಸಮಿತಿ ಮುಖಂಡ ಸಿ.ಕೆ.ಮಹೇಶ್ ಕಳವಳ ವ್ಯಕ್ತಪಡಿಸಿದರು.

ಕರ್ನಾಟಕ ದಲಿತ ಸಂಘರ್ಷ ಸಮಿತಿಯು ಗಾಂಧಿ ಭವನದಲ್ಲಿ ಶನಿವಾರ ಆಯೋಜಿಸಿದ್ದ 'ಶೋಷಿತ ಸಮುದಾಯಗಳೊಂದಿಗೆ ಸಾಮಾಜಿಕ ನ್ಯಾಯಕ್ಕಾಗಿ ಮೀಸಲಾತಿ ಮತ್ತು ಒಳ ಮೀಸಲಾತಿ' ಸಂವಾದದಲ್ಲಿ ಅವರು ಮಾತನಾಡಿದರು.

'ರಾಜ್ಯದಲ್ಲಿ ವಾಲ್ಮೀಕಿ ಜನಾಂಗಕ್ಕೆ ಮೀಸಲಾತಿ ನೀಡಿದರೆ, ಮೀಸಲಾತಿ ಪ್ರಮಾಣ ಶೇ 54.5ಕ್ಕೆ ಏರಿಕೆಯಾಗಲಿದೆ. ಕೇಂದ್ರ ಸರ್ಕಾರ ಶೇ 10ರಷ್ಟು ಮೀಸಲಾತಿ ನೀಡುವುದಾಗಿ ಪ್ರಕಟಿಸಿದ್ದು, ಮುಂದಿನ ದಿನಗಳಲ್ಲಿ ಮೀಸಲಾತಿ ಶೇ 64ರಷ್ಟಾಗಲಿದೆ. ಮೀಸಲಾತಿಗಾಗಿ ಏರ್ಪಟ್ಟಿರುವ ಈ ಸ್ಪರ್ಧೆಯು ಮುಂದಿನ ದಿನಗಳಲ್ಲಿ ಹಲವು ಸಮಸ್ಯೆಗಳನ್ನು ಹುಟ್ಟು ಹಾಕಲಿದೆ' ಎಂದು ಅವರು ಹೇಳಿದರು.

'ಮೀಸಲಾತಿಯಿಂದಾಗಿ ಲಿಂಗಾಯತರು ಹಾಗೂ ಒಕ್ಕಲಿಗರಿಂದಲೂ ಬೇಡಿಕೆ ಬಂದಿದೆ. ಇವರ ನಡೆ ಅಂಬೇಡ್ಕರ್ ಅವರ ಮೀಸಲಾತಿ ಪರಿಕಲ್ಪನೆಗೆ ವಿರುದ್ಧವಾಗಿದೆ. ಶೋಷಿತರ ವಿರುದ್ಧ ಉನ್ನತ ಸಮುದಾಯಗಳನ್ನು ಎತ್ತಿಕಟ್ಟುವ ಹುನ್ನಾರ ನಡೆಯುತ್ತಿದೆ. ಪರಿಶಿಷ್ಟ ವಲಯದ ಸಮುದಾಯಗಳನ್ನು ಪ್ರತ್ಯೇಕಗೊಳಿಸಿ, ಪ್ರತಿ ಜಾತಿಗೆ ಆಯೋಗಗಳನ್ನು ರಚಿಸುವ ಮೂಲಕ ನಮ್ಮ ಒಗ್ಗಟ್ಟು ಚದುರಿಸಲಾಗುತ್ತಿದೆ' ಎಂದು ದೂರಿದರು.

ಕುರುಬ ಸಮುದಾಯದ ಎಸ್.ಟಿ.ಹೋರಾಟ ಸಮಿತಿಯ ಕಾರ್ಯಾಧ್ಯಕ್ಷ ಮುಕುಡಪ್ಪ, 'ಕುರುಬ ಸಮುದಾಯದ ಶೇ 98ರಷ್ಟು ಮಂದಿಯನ್ನು ಶೇ 2ರಷ್ಟು ನಾಯಕರು ಸ್ವಾರ್ಥಕ್ಕಾಗಿ ಬಳಸಿಕೊಳ್ಳುತ್ತಿದ್ದಾರೆ. ಸಮುದಾಯದ ನಾಯಕರಾದ ಮಲ್ಲಿಕಾರ್ಜುನ ಖರ್ಗೆ, ಕೆ.ಎಚ್. ಮುನಿಯಪ್ಪ, ಸಿದ್ದರಾಮಯ್ಯ ಇವರೆಲ್ಲರೂ ಬ್ರಾಹ್ಮಣರಂತೆ ವರ್ತಿಸುತ್ತಿದ್ದಾರೆ' ಎಂದು ಬೇಸರ ವ್ಯಕ್ತಪಡಿಸಿದರು.

'ನಿಜಕ್ಕೂ ಮೀಸಲಾತಿ ಅಗತ್ಯವಾಗಿದ್ದರೆ, ಸಂವಿಧಾನಕ್ಕೆ ತಿದ್ದುಪಡಿ ತರಬೇಕು. ತಮಿಳುನಾಡು ಮಾದರಿ ಮೀಸಲಾತಿ ಪ್ರಮಾಣ ಹೆಚ್ಚಿಸಿದರೆ, ಎಲ್ಲರಿಗೂ ಮೀಸಲಾತಿ ಸಿಗಲಿದೆ' ಎಂದರು.

ಐಎಎಸ್ ನಿವೃತ್ತ ಅಧಿಕಾರಿ ಬಾಬುರಾವ್ ಮುಡಬಿ, 'ಮೀಸಲಾತಿ ಇಲ್ಲದಿದ್ದರೆ ದೇಶ ಎಲ್ಲ ಕ್ಷೇತ್ರಗಳಲ್ಲಿ ಅಭಿವೃದ್ಧಿ ಸಾಧ್ಯವಾಗುತ್ತಿರಲಿಲ್ಲ. ಮೀಸಲಾತಿ ಕೇಳುವ ಮುನ್ನ ತಮ್ಮ ಸಮುದಾಯಗಳ ಸ್ಥಿತಿಗತಿ ಹಾಗೂ ಸಮಗ್ರ ಮಾಹಿತಿ ಕಲೆ ಹಾಕಬೇಕು. ಸಮುದಾಯದ ಸ್ಪಷ್ಟತೆ ಇಲ್ಲದಿದ್ದರೆ, ವಾದ ಮಂಡನೆಗೆ ಅರ್ಥವಿರುವುದಿಲ್ಲ' ಎಂದರು.

ಯಾವ ಜಾತಿಗೂ ಮೀಸಲಾತಿ ಬೇಡ: ಶಾಸಕ ರಾಜೂಗೌಡ

ಯಾದಗಿರಿ: 'ಮೀಸಲಾತಿ ವಿಚಾರವಾಗಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಚಿಂತಾಜನಕ ಸ್ಥಿತಿಯಲ್ಲಿದ್ದಾರೆ. ಇತ್ತೀಚೆಗೆ ಎಲ್ಲರೂ ಮೀಸಲಾತಿ ಕೇಳುತ್ತಿದ್ದಾರೆ. ಯಾವ ಜಾತಿಗೂ ಮೀಸಲಾತಿ ಕೊಡುವುದು ಬೇಡವೇ ಬೇಡ' ಎಂದು ಶಾಸಕ ರಾಜೂಗೌಡ ಹೇಳಿದರು.

ಸುರಪುರ ತಾಲ್ಲೂಕಿನ ಖಾನಾಪುರ ಎಸ್.ಎಚ್ ಗ್ರಾಮದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಅಂಬೇಡ್ಕರ್ ಬರೆದ ಸಂವಿಧಾನದಲ್ಲಿ ಒಂದು ಅಕ್ಷರ ಬದಲಾವಣೆ ಮಾಡುವ ಶಕ್ತಿ ಯಾರಿಗೂ ಇಲ್ಲ. ಲಿಂಗಾಯತ, ಒಕ್ಕಲಿಗ, ಪಂಚಮಸಾಲಿ ಎಲ್ಲರೂ ಮೀಸಲಾತಿ ಕೇಳುತ್ತಿದ್ದಾರೆ. ಎಲ್ಲಿ ಕಡುಬಡವರಿದ್ದಾರೋ ಅದರ ಆಧಾರದ ಮೇಲೆ ಮೀಸಲಾತಿ ನೀಡಬೇಕು' ಎಂದರು.


'ಮಳೆ ಬಂದರೆ ಸಂತೆಯಲ್ಲಿ ಉಪ್ಪು ಮಾರುವವರು ಅಳುತ್ತಾರೆ. ಉಪ್ಪು ಕರಗಿ ಹೋಗುತ್ತದೆ ಎಂಬ ಆತಂಕ ಅವರದ್ದು. ಆದರೆ, ಈಗ ತೆಂಗಿನಕಾಯಿ ಮಾರುವವರೂ ಅಳುತ್ತಿದ್ದಾರೆ' ಎಂದು ಸೂಚ್ಯವಾಗಿ ಹೇಳಿದರು.

'25ರಿಂದ ಅಹೋರಾತ್ರಿ ಧರಣಿ'

'ಪರಿಶಿಷ್ಟ ವಲಯದ 101 ಜಾತಿಗಳಲ್ಲಿ ಒಳಮೀಸಲಾತಿ ಜಾರಿಗಾಗಿ ನ್ಯಾ. ಸದಾಶಿವ ಆಯೋಗದ ವರದಿಯನ್ನು ಅನುಷ್ಠಾನಗೊಳಿಸಬೇಕು. ಈ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಇದೇ 25ರಿಂದ ಮೌರ್ಯ ವೃತ್ತದಲ್ಲಿ ಅಹೋರಾತ್ರಿ ಪ್ರತಿಭಟನಾ ಧರಣಿ ನಡೆಸಲಾಗುವುದು' ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿಯ ರಾಜ್ಯ ಸಂಚಾಲಕ ಹೆಣ್ಣೂರು ಶ್ರೀನಿವಾಸ್ ತಿಳಿಸಿದರು.

'ಎಲ್ಲರೂ ಮೀಸಲಾತಿಗಾಗಿ ಹೋರಾಡುತ್ತಿರುವುದು ದುರ್ದೈವ'

ಪ್ರಜಾವಾಣಿ ವಾರ್ತೆ



ಅರವಿಂದ ಲಿಂಬಾವಳಿ

ಬೆಂಗಳೂರು: 'ಹಿಂದುಳಿದ ವರ್ಗದವರಿಗೆ ಸೂಕ್ತ ಪ್ರಾತಿನಿಧ್ಯ ಒದಗಿಸುವ ಉದ್ದೇಶದಿಂದ ಡಾ.ಬಿ.ಆರ್.ಅಂಬೇಡ್ಕರ್ ಮೀಸಲಾತಿಯ ಪರಿಕಲ್ಪನೆ ಜಾರಿಗೊಳಿಸಿದರು. ಅದು ತಾತ್ಕಾಲಿಕ ಎಂದೂ ಅವರು ಹೇಳಿದ್ದರು. ಅದು ಈಗಲೂ ಮುಂದುವರಿದಿದೆ. ಅನೇಕ ಸಮುದಾಯಗಳು ತಮಗೂ ಮೀಸಲಾತಿ ನೀಡಬೇಕೆಂದು ಹೋರಾಡುತ್ತಿವೆ. ಇದು ದುರ್ದೈವದ ಸಂಗತಿ' ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಅರವಿಂದ ಲಿಂಬಾವಳಿ ಹೇಳಿದರು.

ಲಂಡನ್‌ನಲ್ಲಿರುವ ಲ್ಯಾಂಬೆತ್ ಬಸವೇಶ್ವರ ಫೌಂಡೇಷನ್ ಶನಿವಾರ ವರ್ಚುವಲ್ ರೂಪದಲ್ಲಿ ಆಯೋಜಿಸಿದ್ದ 'ಬಸವಣ್ಣ ಮತ್ತು ಅಂಬೇಡ್ಕರ್ ಸಂಸ್ಮರಣೆ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ತಮ್ಮ ರಾಜಕೀಯ ಹಿತಾಸಕ್ತಿಗಾಗಿ ಅವರ ರಾಜಕಾರಣಿಗಳು 'ಒಡೆದು ಆಳುವ ನೀತಿ' ಅನುಸರಿಸುತ್ತಿದ್ದಾರೆ. ಆರ್‌ಎಸ್‌ಎಸ್, ದಲಿತ ಸಂಘರ್ಷ ಸಮಿತಿಗಳು ಈ ವ್ಯವಸ್ಥೆಯನ್ನು ನಿರ್ಮೂಲನೆ ಮಾಡಲು ಶ್ರಮಿಸುತ್ತಿವೆ. ಅವರೊಂದಿಗೆ ನಾವೂ ಕೈಜೋಡಿಸಬೇಕಿದೆ' ಎಂದೂ ತಿಳಿಸಿದರು.

'ಕೇಂದ್ರ ಸರ್ಕಾರವು ಸಾಮಾನ್ಯರ ಸೇವೆಯನ್ನು ಗುರುತಿಸಿ ಅವರಿಗೆ ಪದ್ಮಶ್ರೀ, ಪದ್ಮಭೂಷಣದಂತಹ ಅತ್ಯುನ್ನತ ನಾಗರಿಕ ಪ್ರಶಸ್ತಿಗಳನ್ನು ನೀಡುವ ಪರಿಪಾಠ ಆರಂಭಿಸಿದೆ. ವಿದೇಶಗಳಲ್ಲಿ ನೆಲೆಸಿರುವವರ ಪೈಕಿ ಅನೇಕರು ಕನ್ನಡವನ್ನು ಉಳಿಸಿ ಬೆಳೆಸುವ ಕೆಲಸ ಮಾಡುತ್ತಿದ್ದಾರೆ. ಅವರ ಸೇವೆಯನ್ನು ಪರಿಗಣಿಸಿ ಅಗತ್ಯ ಪುರಸ್ಕಾರ ನೀಡುವ ಕೆಲಸವನ್ನು ಸರ್ಕಾರ ಮಾಡಲಿದೆ' ಎಂದು ಭರವಸೆ ನೀಡಿದರು.

ಬಸವಲಿಂಗ ಪಟ್ಟದೇವರು ಸ್ವಾಮಿ, 'ಬಸವಣ್ಣನವರು 12ನೇ ಶತಮಾನದಲ್ಲೇ ಮೂಢನಂಬಿಕೆ ವಿರುದ್ಧ ಹೋರಾಡಿ ಕಿತ್ತೆಸೆದಿದ್ದರು. ಅಂಬೇಡ್ಕರ್ ಹಾಗೂ ಬಸವೇಶ್ವರರು ಒಂದೇ ಬಗೆಯ ವಿಚಾರಧಾರೆಗಳನ್ನು ಹೊಂದಿದ್ದರು' ಎಂದರು.

'ಇಂಗ್ಲೆಂಡ್‌ನ ಕನ್ನಡ ಬಳಗ ಹಾಗೂ ಕನ್ನಡಿಗರ ಯುಕೆ, ಅಮೆರಿಕದ ಅಕ್ಕ ಮತ್ತು ನಾವಿಕ, ಆಸ್ಟ್ರೇಲಿಯಾ ಹಾಗೂ ಅಮೆರಿಕದಲ್ಲಿರುವ ಬಸವ ಸಮಿತಿ, ಐರಿಷ್ ಕನ್ನಡ ಬಳಗದ ಸದಸ್ಯರು ಕನ್ನಡವನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಸಚಿವರಿಗೆ ಅಗತ್ಯ ಸಲಹೆ ನೀಡಿದರು.

'ರಾಷ್ಟ್ರಕವಿಯ ಸ್ಮಾರಕ ನಿರ್ಮಾಣ ಚುರುಕುಗೊಳಿಸಿ'

'ರಾಷ್ಟ್ರಕವಿ ಜಿ.ಎಸ್.ಶಿವರುದ್ರಪ್ಪ ಅವರ ಸ್ಮಾರಕ ನಿರ್ಮಾಣ ಕಾರ್ಯವನ್ನು ಚುರುಕುಗೊಳಿಸಬೇಕು' ಎಂದು ಶಿವರುದ್ರಪ್ಪನವರ ಮಗ ಶಿವಪ್ರಸಾದ್ ಅವರು ಸಚಿವರಲ್ಲಿ ಮನವಿ ಮಾಡಿದರು.

ಪಂಚಮಸಾಲಿ ಹೋರಾಟ: ಶಕ್ತಿ ಪ್ರದರ್ಶನಕ್ಕೆ ಸಜ್ಜು

300 ಗಣ್ಯರಿಗೆ ಆಸನ ವ್ಯವಸ್ಥೆ • ಉತ್ತರ ಕರ್ನಾಟಕದಿಂದ ಹೆಚ್ಚು ಜನ ಪಾಲ್ಗೊಳ್ಳುವ ನಿರೀಕ್ಷೆ

ಪ್ರಜಾವಾಣಿ ವಾರ್ತೆ



ನಗರದಲ್ಲಿ ಭಾನುವಾರ ನಡೆಯಲಿರುವ ಮಹಾರ್‍ಯಾಲಿಗೆ ಸಿದ್ಧಗೊಂಡಿರುವ ಅರಮನೆ ಮೈದಾನ – ಪ್ರಜಾವಾಣಿ ಚಿತ್ರ

ಬೆಂಗಳೂರು: ನಗರದ ಅರಮನೆ ಮೈದಾನದಲ್ಲಿ ಪಂಚಮಸಾಲಿ ಮಹಾರ್‍ಯಾಲಿಯ ಸಿದ್ಧತೆ ಪೂರ್ಣಗೊಂಡಿದ್ದು, ಭಾನುವಾರ ಲಕ್ಷಾಂತರ ಜನ ಭಾಗವಹಿಸುವ ನಿರೀಕ್ಷೆ ಇದೆ. 'ಪಂಚಮಸಾಲಿ ಸಮುದಾಯದ ಮಕ್ಕಳಿಗೆ ಶಿಕ್ಷಣ, ಯುವಜನರ ಉದ್ಯೋಗಕ್ಕಾಗಿ ಮೀಸಲಾತಿ ಹೋರಾಟ ಒಂದೇ ಮಾರ್ಗ' ಎಂಬ ಘೋಷವಾಕ್ಯದೊಂದಿಗೆ ರ್‍ಯಾಲಿ ನಡೆಯಲಿದೆ.

ಪಂಚಮಸಾಲಿ ಶಾಸಕರು, ಸಂಸದರು, ಮಠಾಧೀಶರೂ ಸೇರಿದಂತೆ 2ಎ ಮೀಸಲಾತಿ ಹೋರಾಟಕ್ಕೆ ಬೆಂಬಲ ನೀಡುತ್ತಿರುವ ಇತರೆ ಸಮುದಾಯಗಳ ಮುಖಂಡರು ಕೂಡ ಸಮಾವೇಶದಲ್ಲಿ ಭಾಗವಹಿಸಲಿದ್ದಾರೆ.

300 ಗಣ್ಯರಿಗೆ ವ್ಯವಸ್ಥೆ: ಮಠಾಧೀಶರೂ ಒಳಗೊಂಡಂತೆ ವೇದಿಕೆಯಲ್ಲಿ 300 ಗಣ್ಯರ ಆಸನಕ್ಕೆ ವ್ಯವಸ್ಥೆ ಕಲ್ಪಿಸಲಾಗಿದೆ. 2ಎ ಮೀಸಲು ಹೋರಾಟ ಸಮಿತಿಯಿಂದ 10 ಸಾವಿರ ಚದರಡಿ ವಿಸ್ತೀರ್ಣದಲ್ಲಿ ಬೃಹತ್ ವೇದಿಕೆ ನಿರ್ಮಿಸಲಾಗಿದೆ. ಮಠಾಧೀಶರು, ವಿಶೇಷ ಆಹ್ವಾನಿತ ಗಣ್ಯರಿಗೆ ಮೈದಾನದ ಮೊದಲನೇ ದ್ವಾರದಿಂದ ಕರೆತರಲು ಸಮಿತಿ ನಿರ್ಧರಿಸಿದ್ದು, ಮೈದಾನದ ಹಿಂಬದಿಯ (ದೂರದರ್ಶನ) ದ್ವಾರವನ್ನು ಸಮಾವೇಶದಲ್ಲಿ ಭಾಗವಹಿಸುವ ಜನರಿಗಾಗಿ ಮೀಸಲಿಡಲಾಗಿದೆ.

ಉತ್ತರ ಕರ್ನಾಟಕದಿಂದ ಹೆಚ್ಚು ಜನ: ಪಂಚಮಸಾಲಿ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿರುವ ಉತ್ತರ ಕರ್ನಾಟಕದ ಜಿಲ್ಲೆಗಳಿಂದ ಭಾರಿ ಸಂಖ್ಯೆಯಲ್ಲಿ ಜನ ಬರುವ ನಿರೀಕ್ಷೆ ಇದೆ. ಈ ಭಾಗದ ಜನರಿಗೆ ಅನುಕೂಲವಾಗುವಂತೆ ಬಸ್ ಹಾಗೂ ಇನ್ನಿತರೆ ವಾಹನಗಳ ವ್ಯವಸ್ಥೆ ಮಾಡಲಾಗಿದೆ. ಸ್ವಯಂಪ್ರೇರಿತರಾಗಿ ಸಮಾವೇಶದಲ್ಲಿ ಭಾಗವಹಿಸಲು ಆಗಮಿಸಲು ಇಚ್ಛಿಸುವವರನ್ನು ಕರೆತರುವ ಜವಾಬ್ದಾರಿಯನ್ನು ಉತ್ತರ ಕರ್ನಾಟಕ ಪ್ರದೇಶದ ಪಂಚಮಸಾಲಿ ಸಮುದಾಯದ ಶಾಸಕರು, ಸಂಸದರು, ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಪದಾಧಿಕಾರಿಗಳು ಮತ್ತು ಸಮಾಜದ ಪ್ರಭಾವಿ ಮುಖಂಡರಿಗೆ ವಹಿಸಲಾಗಿದೆ.

ಭೋಜನ ವ್ಯವಸ್ಥೆ: ಮೈದಾನದ ಹಿಂಭಾಗದ ದೂರದರ್ಶನ ದ್ವಾರದ ಬಳಿ ಸಾರ್ವಜನಿಕರ ಭೋಜನಕ್ಕೆ ವ್ಯವಸ್ಥೆ ಮಾಡಲಾಗಿದೆ. ರೊಟ್ಟಿ, ಪಲ್ಯ, ಪಲಾವ್, ಮಜ್ಜಿಗೆ ವಿತರಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ. 500ಕ್ಕೂ ಹೆಚ್ಚು ಸ್ವಯಂಪ್ರೇರಿತ ಕಾರ್ಯಕರ್ತರು ಊಟದ ವ್ಯವಸ್ಥೆ ನೋಡಿಕೊಳ್ಳಲಿದ್ದಾರೆ. ಅಡುಗೆ ಸಾಮಗ್ರಿಗಳ ಸಂಗ್ರಹಕ್ಕೆ ಪ್ರತ್ಯೇಕವಾಗಿ 3 ದಾಸ್ತಾನುಗಳನ್ನು ನಿರ್ಮಿಸಲಾಗಿದೆ.

ಸಿದ್ಧತೆ ಪರಿಶೀಲನೆ

ಬಹಿರಂಗ ಸಮಾವೇಶಕ್ಕೆ ನಡೆದಿರುವ ಸಿದ್ಧತೆಗಳನ್ನು ಜಯಮೃತ್ಯುಂಜಯ ಸ್ವಾಮೀಜಿಯವರು ಶನಿವಾರ ವೀಕ್ಷಿಸಿದರು. ಪಂಚಮಸಾಲಿ ಮುಖಂಡರೊಂದಿಗೆ ಸಭೆ ನಡೆಸಿ ಭಾನುವಾರ ನಡೆಯುವ ಸಮಾವೇಶದ ರೂಪರೇಷೆ ಕುರಿತು ಚರ್ಚಿಸಿದರು.

'ಸಮಾವೇಶದ ನಂತರ ವಿಧಾನಸೌಧಕ್ಕೆ ಮುತ್ತಿಗೆ ಹಾಕುವ ತೀರ್ಮಾನವನ್ನು ಸಚಿವ ಸಿ.ಸಿ. ಪಾಟೀಲ ಮನವಿ ಮೇರೆಗೆ ಕೈಬಿಡಲಾಗಿದೆ. ವಿಧಾನಸೌಧ ಮುಂಭಾಗದಲ್ಲಿ ಧರಣಿ ನಡೆಯಲಿದೆ' ಎಂದು ಸ್ವಾಮೀಜಿ ಮಾಹಿತಿ ನೀಡಿದರು.

ಮುಂಬೈನಿಂದ ಅಂಗರಕ್ಷಕರು

ಮಹಾರ್‍ಯಾಲಿಯ ನೇತೃತ್ವ ವಹಿಸಿರುವ ಜಯಮೃತ್ಯುಂಜಯ ಸ್ವಾಮೀಜಿ ಹಾಗೂ ವಚನಾನಂದ ಸ್ವಾಮೀಜಿ ಅವರ ಭದ್ರತೆಗಾಗಿ ಸೊಲ್ಲಾಪುರ ಮತ್ತು ಮುಂಬೈನಿಂದ 20 ಮಂದಿ ಖಾಸಗಿ ಅಂಗರಕ್ಷಕರನ್ನು ಕರೆತರಲಾಗಿದೆ.

ವಾಹನ ನಿಲುಗಡೆಗೆ ನಿರ್ಬಂಧ

ಬೆಂಗಳೂರು: ಪಂಚಮಸಾಲಿ ಸಮಾವೇಶದ ವೇಳೆ ಸಂಚಾರ ದಟ್ಟಣೆ ಉಂಟಾಗದಂತೆ ಕ್ರಮ ಕೈಗೊಂಡಿರುವ ಪೊಲೀಸರು, ವಾಹನಗಳ ಸಂಚಾರ ಮಾರ್ಗದಲ್ಲಿ ಬದಲಾವಣೆ ಮಾಡಿದ್ದಾರೆ. ಜೊತೆಗೆ, ಹಲವೆಡೆ ವಾಹನ ನಿಲುಗಡೆಗೂ ನಿರ್ಬಂಧ ವಿಧಿಸಿದ್ದಾರೆ.

'ಕಾರ್ಯಕ್ರಮಕ್ಕೆ ಸ್ವಾಮೀಜಿಗಳು, ಗಣ್ಯರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಬರುವ ನಿರೀಕ್ಷೆ ಇದೆ. ಅರಮನೆ ಮೈದಾನದ ಸುತ್ತಮುತ್ತಲಿನ ರಸ್ತೆಗಳಲ್ಲಿ ವಾಹನಗಳ ದಟ್ಟಣೆ ಉಂಟಾಗುವ ಸಾಧ್ಯತೆ ಇದೆ. ಸ್ಥಳೀಯರಿಗೆ ತೊಂದರೆಯಾಗಬಾರದೆಂಬ ಕಾರಣಕ್ಕೆ ಪರ್ಯಾಯ ಮಾರ್ಗಗಳ ವ್ಯವಸ್ಥೆ ಮಾಡಲಾಗಿದೆ' ಎಂದು ಸಂಚಾರ ವಿಭಾಗದ ಜಂಟಿ ಕಮಿಷನರ್ ಡಾ. ಬಿ.ಆರ್. ರವಿಕಾಂತೇಗೌಡ ತಿಳಿಸಿದ್ದಾರೆ.

'ಬೆಳಿಗ್ಗೆ 4 ಗಂಟೆಯಿಂದ ಕಾರ್ಯಕ್ರಮ ಮುಗಿಯುವವರೆಗೂ ರಮಣ ಮಹರ್ಷಿ ರಸ್ತೆ, ಸರ್ ಸಿ.ವಿ. ರಾಮನ್ ರಸ್ತೆ, ಮೇಖ್ರಿ ವೃತ್ತ, ಜಯಮಹಲ್ ರಸ್ತೆ, ತರಳಬಾಳು ರಸ್ತೆ, ಎಂ.ವಿ. ಜಯರಾಮನ್ ರಸ್ತೆ, ಪ್ಯಾಲೇಸ್ ರಸ್ತೆ, ಟಿ. ಚೌಡಯ್ಯ ರಸ್ತೆ ಹಾಗೂ ಸುತ್ತಮುತ್ತಲ ರಸ್ತೆಗಳಲ್ಲಿ ವಾಹನ ನಿಲುಗಡೆ ನಿಷೇಧಿಸಲಾಗಿದೆ' ಎಂದೂ ಹೇಳಿದ್ದಾರೆ.

'ಕಾರ್ಯಕ್ರಮಕ್ಕೆ ಕಾರು ಹಾಗೂ ದ್ವಿಚಕ್ರ ವಾಹನಗಳಲ್ಲಿ ಬರುವವರು, ರಮಣ ಮಹರ್ಷಿ ರಸ್ತೆ ಮೂಲಕ ತ್ರಿಪುರವಾಸಿನಿ ಆವರಣ ಪ್ರವೇಶಿಸಿ ವಾಹನ ನಿಲುಗಡೆ ಮಾಡಬಹುದು' ಎಂದೂ ತಿಳಿಸಿದ್ದಾರೆ.

ಕಾರ್ಯಕ್ರಮಕ್ಕೆ ಬರುವ ವಾಹನಗಳ ಸಂಚಾರಕ್ಕೆ ವ್ಯವಸ್ಥೆ

ಮೈಸೂರು ರಸ್ತೆ ಕಡೆಯಿಂದ ಬರುವವರು, ನಾಯಂಡನಹಳ್ಳಿ, ಸುಮನಹಳ್ಳಿ, ತುಮಕೂರು ರಸ್ತೆ, ಗೊರಗೊಂಟೆಪಾಳ್ಯ ಜಂಕ್ಷನ್, ಬಿಇಎಲ್. ಹೆಬ್ಬಾಳ ಮೇಲ್ಸೇತುವೆ, ಮೇಖ್ರಿ ವೃತ್ತ, ಜಯಮಹಲ್ ರಸ್ತೆ ಮೂಲಕ ಸರ್ಕಸ್ ಮೈದಾನ ಸೇರಬಹುದು.

ತುಮಕೂರು ರಸ್ತೆ ಕಡೆಯಿಂದ ಬರುವವರು ಗೊರಗೊಂಟೆಪಾಳ್ಯ ಜಂಕ್ಷನ್, ಬಿಇಎಲ್. ಹೆಬ್ಬಾಳ ಮೇಲ್ಸೇತುವೆ, ಮೇಖ್ರಿ ವೃತ್ತ, ಜಯಮಹಲ್ ರಸ್ತೆ ಮೂಲಕ ಸರ್ಕಸ್ ಮೈದಾನ ಸೇರಬಹುದು.

ಕನಕಪುರ ರಸ್ತೆ ಕಡೆಯಿಂದ ಬರುವವರು ಬನಶಂಕರಿ ಬಸ್ ನಿಲ್ದಾಣ, ಜಯನಗರ ನಾಲ್ಕನೇ ಹಂತದ ರಾಜಲಕ್ಷ್ಮಿ ಜಂಕ್ಷನ್, ಸೌಂತ್ ಎಂಡ್ ವೃತ್ತ, ಆರ್.ವಿ.ಜಂಕ್ಷನ್, ಮಿನರ್ವ ವೃತ್ತ, ಜೆ.ಸಿ.ರಸ್ತೆ, ಪುರಭವನ, ಕೆ.ಜಿ.ರಸ್ತೆ, ಮೈಸೂರು ಬ್ಯಾಂಕ್ ವೃತ್ತ, ಅರಮನೆ ರಸ್ತೆ, ಬಸವೇಶ್ವರ ವೃತ್ತ, ಮೌಂಟ್ ಕಾರ್ಮೆಲ್ ಕಾಲೇಜು, ವಸಂತನಗರ ಕೆಳ ಸೇತುವೆ ಮೂಲಕ ಸರ್ಕಸ್ ಮೈದಾನಕ್ಕೆ ಹೋಗಬಹುದು.

ಬನ್ನೇರುಘಟ್ಟ ರಸ್ತೆ ಕಡೆಯಿಂದ ಬರುವವರು, ಡೇರಿ ವೃತ್ತ, ಕೆ.ಎಚ್. ರಸ್ತೆ, ಮಿನರ್ವ ವೃತ್ತ, ಜೆ.ಸಿ.ರಸ್ತೆ, ಟೌನ್‌ಹಾಲ್, ಕೆ.ಜಿ.ರಸ್ತೆ, ಮೈಸೂರು ಬ್ಯಾಂಕ್ ವೃತ್ತ, ಪ್ಯಾಲೇಸ್ ರಸ್ತೆ, ಬಸವೇಶ್ವರ ವೃತ್ತ, ಮೌಂಟ್ ಕಾರ್ಮೆಲ್ ಕಾಲೇಜು, ವಸಂತನಗರ ಕೆಳ ಸೇತುವೆ ಮೂಲಕ ಸರ್ಕಸ್ ಮೈದಾನಕ್ಕೆ ಹೋಗಬಹುದು.

ಹೊಸೂರು ರಸ್ತೆ ಕಡೆಯಿಂದ ಬರುವವರು, ಮಡಿವಾಳ, ಡೈರಿ ವೃತ್ತ, ಕೆ.ಎಚ್. ರಸ್ತೆ, ಮಿನರ್ವ ವೃತ್ತ, ಜೆ.ಸಿ.ರಸ್ತೆ, ಪುರಭವನ, ಕೆ.ಜಿ.ರಸ್ತೆ, ಮೈಸೂರು ಬ್ಯಾಂಕ್ ವೃತ್ತ, ಪ್ಯಾಲೇಸ್ ರಸ್ತೆ, ಬಸವೇಶ್ವರ ವೃತ್ತ, ಮೌಂಟ್ ಕಾರ್ಮೆಲ್ ಕಾಲೇಜು, ವಸಂತನಗರ ಕೆಳ ಸೇತುವೆ ಮೂಲಕ ಸರ್ಕಸ್ ಮೈದಾನ ತಲುಪಬಹುದು.

ಹಳೆ ಮದ್ರಾಸ್ ರಸ್ತೆ ಕಡೆಯಿಂದ ಬರುವವರು, ಕೆ.ಆರ್.ಪುರ ತೂಗು ಸೇತುವೆ, ಹೆಣ್ಣೂರು ಜಂಕ್ಷನ್, ನಾಗವಾರ, ಹೆಬ್ಬಾಳ ಮೇಲ್ಸೇತುವೆ, ಮೇಖ್ರಿ ವೃತ್ತ ಮೂಲಕ ಮೈದಾನಕ್ಕೆ ಹೋಗಬಹುದು.

'ಚೆನ್ನೈನಲ್ಲಿ ಸರ್ವಜ್ಞ ಪ್ರತಿಮೆಗೆ ಸಂರಕ್ಷಕರಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇಲ್ಲಿರುವ ತಿರುವಳ್ಳುವರ್ ಪ್ರತಿಮೆಗೆ ಸರ್ಕಾರವು ಎಲ್ಲ ರೀತಿಯ ಸವಲತ್ತು ಒದಗಿಸಿದೆ. ಆದರೆ, ಚೆನ್ನೈನಲ್ಲಿರುವ ಸರ್ವಜ್ಞನ ಪ್ರತಿಮೆಯು ಸಂರಕ್ಷಕರಿಲ್ಲದೆ ಪಾಳು ಬಿದ್ದಿದೆ. ಇದರ ಸಂರಕ್ಷಣೆಗೆ ಸರ್ಕಾರವು ಸೂಕ್ತ ಕ್ರಮಗೊಳ್ಳಬೇಕು' ಎಂದು ಕುಂಬಾರರ ಸಂಘದ ಕಾರ್ಯದರ್ಶಿ ನಾಗೇಶ್ ಒತ್ತಾಯಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಸಂತಕವಿ ಸರ್ವಜ್ಞ ಜಯಂತಿಯಲ್ಲಿ ಭಾಗವಹಿಸಿ, ಮಾತನಾಡಿದರು. 'ಚೆನ್ನೈನಲ್ಲಿರುವ ಸರ್ವಜ್ಞನ ಪ್ರತಿಮೆಗೂ ಮಹತ್ವ ಸಿಗಬೇಕು. ಸರ್ವಜ್ಞನ ಜನ್ಮದಿನದಂದಾದರೂ ಅಲ್ಲಿನ ಸರ್ಕಾರವು ಪ್ರತಿಮೆಯನ್ನು ಸ್ವಚ್ಛಗೊಳಿಸಿ, ಹೂವಿನ ಮಾಲೆ ಹಾಕಬೇಕು. ಹಾವೇರಿ ಜಿಲ್ಲೆಯ ಹಿರೆಕೇರೂರು ತಾಲ್ಲೂಕಿನ ಮಾಸೂರಿನಲ್ಲಿರುವ ಸರ್ವಜ್ಞನ ಸಮಾಧಿ ಸ್ಥಳವೂ ಪಾಳು ಬಿದ್ದಿದೆ. ಸರ್ಕಾರಕ್ಕೆ ಈ ಸಂಬಂಧ ಹಲವು ಬಾರಿ ಮನವಿ ಮಾಡಲಾಗಿದೆ. ಆದರೂ ಅಲ್ಲಿ ಜೀರ್ಣೋದ್ಧಾರ ಕಾರ್ಯ ನಡೆದಿಲ್ಲ. ಇನ್ನು ಮುಂದಾದರೆ ಸರ್ವಜ್ಞನ ಜಯಂತಿಯನ್ನು ಮಾಸೂರಿನಲ್ಲೇ ಆಚರಿಸಬೇಕು' ಎಂದು ಮನವಿ ಮಾಡಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಎಸ್. ರಂಗಪ್ಪ, 'ಸಾಧಕರು ಜನಿಸಿದ ಸ್ಥಳ ಅಥವಾ ಸಮಾಧಿಗಳು ಇರುವ ಸ್ಥಳಗಳಲ್ಲಿ ಜಯಂತಿ ನಡೆಸಲು ಇಲಾಖೆ ಚಿಂತನೆ ನಡೆಸಿದೆ. ಮುಂದಿನ ದಿನಗಳಲ್ಲಿ ಇದು ಕಾರ್ಯರೂಪಕ್ಕೆ ಬರಲಿದೆ. ಚೆನ್ನೈನಲ್ಲಿರುವ ಸರ್ವಜ್ಞನ ಪ್ರತಿಮೆ ಸಂರಕ್ಷಣೆ ಸಂಬಂಧ ಅಲ್ಲಿನ ಕನ್ನಡ ಸಂಘಟನೆಗಳಿಗೆ ಪತ್ರ ಬರೆಯಲಾಗುವುದು. ಸರ್ವಜ್ಞನ ಹಿತವಚನಗಳು ಒಂದು ವರ್ಗಕ್ಕೆ ಸೀಮಿತವಾಗಿಲ್ಲ. ಹೀಗಾಗಿ, ಅವರು ತೋರಿದ ಮಾರ್ಗದಲ್ಲಿ ಸಾಗೋಣ' ಎಂದರು.

'ಅಕಾಡೆಮಿಗಳಲ್ಲಿ ಕಲಾವಿದರಲ್ಲದವರಿಗೆ ಸ್ಥಾನ'

ಕೇಂದ್ರ ಲಲಿತಕಲಾ ಅಕಾಡೆಮಿಯ ಮಾಜಿ ಅಧ್ಯಕ್ಷ ಚಿ.ಸು.ಕೃಷ್ಣಸೆಟ್ಟಿ ಬೇಸರ

ಪ್ರಜಾವಾಣಿ ವಾರ್ತೆ



ಕರ್ನಾಟಕ ಲಲಿತಕಲಾ ಅಕಾಡೆಮಿ ವತಿಯಿಂದ ಶನಿವಾರ ಮೈಸೂರಿನ ಕಿರುರಂಗಮಂದಿರದಲ್ಲಿ ಮಂಗಳೂರಿನ ಕಂದನ್‌ಜಿ, ವಿಜಯಪುರದ ವಿಜಯ ಸಿಂಧೂರ ಹಾಗೂ ಮೈಸೂರಿನ ರಘುಪತಿ ಭಟ್ ಅವರಿಗೆ ಫೆಲೋಶಿಪ್ ಪ್ರದಾನ ಮಾಡಲಾಯಿತು

ಮೈಸೂರು: ಕೇಂದ್ರ ಲಲಿತಕಲಾ ಅಕಾಡೆಮಿ ಸೇರಿದಂತೆ ವಿವಿಧ ಅಕಾಡೆಮಿಗಳಲ್ಲಿ ಕಲಾವಿದರಲ್ಲದವರು ನೇಮಕವಾಗಿದ್ದಾರೆ ಎಂದು ಕೇಂದ್ರ ಲಲಿತಕಲಾ ಅಕಾಡೆಮಿಯ ಮಾಜಿ ಅಧ್ಯಕ್ಷ ಚಿ.ಸು. ಕೃಷ್ಣಸೆಟ್ಟಿ ಬೇಸರ ವ್ಯಕ್ತಪಡಿಸಿದರು.

ಕರ್ನಾಟಕ ಲಲಿತಕಲಾ ಅಕಾಡೆಮಿ ವತಿಯಿಂದ ಶನಿವಾರ ಇಲ್ಲಿನ ಕಿರುರಂಗಮಂದಿರದಲ್ಲಿ ನಡೆದ ಫೆಲೋಶಿಪ್ ಪ್ರದಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕಲಾವಿದರಲ್ಲದವರು ಲಲಿತಕಲಾ ಅಕಾಡೆಮಿಗೆ ನೇಮಕವಾದರೂ ಕಲಾವಿದರು ವಿರೋಧಿಸದೇ ಇರುವುದು ಸರಿಯಲ್ಲ. ಎಲ್ಲರೂ ವ್ಯಕ್ತಿಕೇಂದ್ರಿತವಾಗಿರುವುದೇ ಇದಕ್ಕೆ ಕಾರಣ ಎಂದರು.

ಇತ್ತೀಚಿನ ದಿನಗಳಲ್ಲಿ ಲಲಿತಕಲಾ ಅಕಾಡೆಮಿ ಸೇರಿದಂತೆ ಎಲ್ಲ ಅಕಾಡೆಮಿಗಳ ಹಾಗೂ ಕಲಾಕಾಲೇಜುಗಳ ಗುಣಮಟ್ಟ ಕುಸಿಯುತ್ತಿದೆ. ಕಲಾ ವಿಮರ್ಶೆಗೆ ದಿನಪತ್ರಿಕೆಗಳೂ ಆದ್ಯತೆ ನೀಡುತ್ತಿಲ್ಲ ಎಂದು ಬೇಸರಿಸಿದರು.

ತಟಸ್ಥರಾಗಿರುವುದಕ್ಕೆ ಅವಕಾಶ ಇಲ್ಲದ ಸ್ಥಿತಿ ಈಗ ನಿರ್ಮಾಣವಾಗಿದೆ. ಎಡಪಂಥೀಯ ಇಲ್ಲವೇ ಬಲಪಂಥೀಯ ಎಂದೇ ತೀರ್ಮಾನಿಸಲಾಗುತ್ತಿದೆ. ಇದು ಸರಿಯಲ್ಲ. ದೇಶದಲ್ಲಿ ಬಹುತ್ವವನ್ನು ಉಳಿಸಬೇಕಿದೆ ಎಂದು ಹೇಳಿದರು.

ಸಾಹಿತಿ ಪ್ರಧಾನ್ ಗುರುದತ್ ಮಾತನಾಡಿ, 'ಮೈಸೂರು ವಿಶ್ವವಿದ್ಯಾನಿಲಯ ಸೇರಿದಂತೆ ಇತರೆ ವಿಶ್ವವಿದ್ಯಾಲಯಗಳಲ್ಲಿ ಸ್ಥಾಪನೆಯಾಗಿರುವ ಲಲಿತಕಲಾ ಕಾಲೇಜುಗಳ ಸ್ಥಿತಿ ಶೋಚನೀಯವಾಗಿದೆ. ಇವುಗಳನ್ನು ಸರಿಪಡಿಸುವ ಕಾರ್ಯ ಆಗಬೇಕಿದೆ' ಎಂದು ಹೇಳಿದರು.

ಕಲಾವಿದರಾದ ವಿಜಯಪುರದ ವಿಜಯ ಸಿಂಧೂರ, ಮಂಗಳೂರಿನ ಕಂದನ್‌ಜಿ, ಮೈಸೂರಿನ ರಘುಪತಿ ಭಟ್ಟ ಅವರಿಗೆ ತಲಾ ₹ 2 ಲಕ್ಷ ಮೊತ್ತದ ಗೌರವ ಫೆಲೋಶಿಪ್ ಪ್ರದಾನ ಮಾಡಲಾಯಿತು. ಬೆಂಗಳೂರಿನ ಡಿಂಪಲ್ ಬಿ ಶಹ, ಮಂಜುನಾಥ ವಿ ಕಲ್ಲೇದೇವರು, ಮೈಸೂರಿನ ಕೆ.ಸುರೇಶ್, ವಿಜಯಪುರದ ನಿಂಗನಗೌಡ ಸಿ.ಪಾಟೀಲ, ಕಲಬುರ್ಗಿಯ ಜಗನ್ನಾಥ ಬೆಲ್ಲದ ಅವರಿಗೆ ಶಿಷ್ಯವೇತನ ವಿತರಿಸಲಾಯಿತು. ಕರ್ನಾಟಕ ಲಲಿತಕಲಾ ಅಕಾಡೆಮಿಯ ಅಧ್ಯಕ್ಷ ಡಿ.ಮಹೇಂದ್ರ ಇದ್ದರು.

ಕಲಬುರ್ಗಿಯಲ್ಲಿ ಆರೋಗ್ಯ ವಿ.ವಿ ಪ್ರಾದೇಶಿಕ ಕೇಂದ್ರ

ಪ್ರಜಾವಾಣಿ ವಾರ್ತೆ



ಡಾ.ಎಸ್. ಸಚ್ಚಿದಾನಂದ

ಕಲಬುರ್ಗಿ: 'ಆಡಳಿತ ಸುಧಾರಣೆ, ವಿದ್ಯಾರ್ಥಿಗಳ ಅನುಕೂಲಕ್ಕಾಗಿ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವು ರಾಜ್ಯದ ವಿವಿಧೆಡೆ ಪ್ರಾದೇಶಿಕ ಕೇಂದ್ರಗಳನ್ನು ಪ್ರಾರಂಭಿಸುತ್ತಿದೆ. ಇದರ ಮೊದಲ ಹೆಜ್ಜೆಯಾಗಿ ಕಲಬುರ್ಗಿಯಲ್ಲಿ ಭಾನುವಾರ (ಫೆ. 21) ಮೊದಲ ಕೇಂದ್ರದ ಉದ್ಘಾಟನೆ ನಡೆಯಲಿದೆ' ಎಂದು ವಿಶ್ವವಿದ್ಯಾಲಯದ ಕುಲಪತಿ ಡಾ.ಎಸ್. ಸಚ್ಚಿದಾನಂದ ಹೇಳಿದರು.

'950 ಕಾಲೇಜುಗಳು ನಮ್ಮ ವಿಶ್ವವಿದ್ಯಾಲಯ ವ್ಯಾಪ್ತಿಗೆ ಬರುತ್ತವೆ. ಎಲ್ಲವನ್ನೂ ಬೆಂಗಳೂರು ಕೇಂದ್ರದಿಂದಲೇ ನಿಯಂತ್ರಣ ಮಾಡುವುದು ಕಷ್ಟ. ಕಲಬುರ್ಗಿ ಪ್ರಾದೇಶಿಕ ಕೇಂದ್ರಕ್ಕೆ ಸ್ವಂತ ಕಟ್ಟಡ, ಪೂರ್ಣ ಪ್ರಮಾಣದ ಸೌಲಭ್ಯ ಕಲ್ಪಿಸಲಾಗಿದೆ. ಮುಂದೆ ಹುಬ್ಬಳ್ಳಿ-ಧಾರವಾಡ, ಮೈಸೂರು, ದಾವಣಗೆರೆ, ಮಂಗಳೂರು ಭಾಗದಲ್ಲಿಯೂ ಪ್ರಾದೇಶಿಕ ಕೇಂದ್ರಗಳನ್ನು ತೆರೆಯಲು ಉದ್ದೇಶಿಸಿದ್ದು, ಕೆಲಸಗಳೂ ಪ್ರಗತಿಯಲ್ಲಿವೆ' ಎಂದು ಶನಿವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸಿಮಿಲೇಷನ್ ಲ್ಯಾಬ್: 'ಮುಂದಿನ ಶೈಕ್ಷಣಿಕ ವರ್ಷದಿಂದ ವಿಶ್ವವಿದ್ಯಾಲಯದಲ್ಲಿ 'ಸಿಮಿಲೇಷನ್ ಲ್ಯಾಬ್' ತೆರೆಯಲಾಗುತ್ತಿದೆ. ರೋಗಿಗಳನ್ನು ನೇರವಾಗಿ ಪರೀಕ್ಷಿಸಿ, ಪ್ರಾಯೋಗಿಕ ಚಟುವಟಿಕೆಗಳನ್ನು ಮಾಡಿ ಕಲಿಯುವುದಕ್ಕೆ ಇದು ಸಹಕಾರಿ ಆಗಲಿದೆ. ರಾಷ್ಟ್ರೀಯ ವೈದ್ಯಕೀಯ ಮಂಡಳಿ ಕೂಡ ಇದಕ್ಕೆ ಅನುಮತಿ ನೀಡಿದೆ. ಇಂಥ ಪ್ರಯೋಗ ಮಾಡುತ್ತಿರುವ ದೇಶದ ಮೊದಲ ವಿಶ್ವವಿದ್ಯಾಲಯ ನಮ್ಮದಾಗಿದೆ' ಎಂದೂ ಸಚ್ಚಿದಾನಂದ ಹೇಳಿದರು.

ರೇಷ್ಮೆ ಮಾರುಕಟ್ಟೆ ಸ್ಥಳಾಂತರ ವಿರೋಧ ರಾಮನಗರ ಬಂದ್

ಪ್ರಜಾವಾಣಿ ವಾರ್ತೆ

ರಾಮನಗರ: ಚನ್ನಪಟ್ಟಣಕ್ಕೆ ರೇಷ್ಮೆಗೂಡು ಮಾರುಕಟ್ಟೆ ಸ್ಥಳಾಂತರ ವಿರೋಧಿಸಿ ವಿವಿಧ ಸಂಘಟನೆಗಳು ಶನಿವಾರ ಕರೆ ನೀಡಿದ್ದ ರಾಮನಗರ ಬಂದ್‌ಗೆ ವರ್ತಕರಿಂದ ಬೆಂಬಲ ವ್ಯಕ್ತವಾಯಿತು. ಬಂದ್ ಬೆಂಬಲಿಸಿ ಬೃಹತ್ ಮೆರವಣಿಗೆಯೂ ನಡೆಯಿತು.

ಬಂದ್ ಹಿನ್ನೆಲೆಯಲ್ಲಿ ಬೆಳಗ್ಗೆಯಿಂದಲೇ ಅಂಗಡಿ ಮುಂಗಟ್ಟುಗಳು ಮುಚ್ಚಿದ್ದು, ವ್ಯಾಪಾರ ವಹಿವಾಟು ಸ್ಥಗಿತಗೊಂಡಿತ್ತು. ಸರ್ಕಾರಿ ರೇಷ್ಮೆಗೂಡು ಮಾರುಕಟ್ಟೆಯಲ್ಲಿ ವಹಿವಾಟು ನಡೆಯಲಿಲ್ಲ. ಉಳಿದಂತೆ ಸರ್ಕಾರಿ ಕಚೇರಿ, ಬ್ಯಾಂಕುಗಳು ತೆರೆದಿದ್ದು, ವಾಹನಗಳ ಓಡಾಟ ಎಂದಿನಂತೆ ಇತ್ತು. ಮಧ್ಯಾಹ್ನದ ನಂತರ ನಗರದಲ್ಲಿನ ಅಂಗಡಿಗಳು ಬಾಗಿಲು ತೆರೆದವು.

ನಗರದಲ್ಲಿ ಇಂದು

ಮಲ್ಲೇಶ್ವರ ವಾಕಿಂಗ್ ಆಡಿಟ್: ಆಯೋಜನೆ–ಮಲ್ಲೇಶ್ವರ ಅರ್ಬನ್ ಲಿವಿಂಗ್ ಲ್ಯಾಬ್, ಡಲ್ಟ್, ಸ್ಥಳ–ಯದುಗಿರಿ ಯತಿರಾಜ ಮಠ, ಸಂಪಿಗೆ ರಸ್ತೆ, ಮಲ್ಲೇಶ್ವರ, ಬೆಳಿಗ್ಗೆ 8.30

ಎಲ್.ಎಸ್.ಶೇಷಗಿರಿರಾವ್ ವಿಮರ್ಶಾ ಪ್ರಶಸ್ತಿ ಹಾಗೂ ವಿ.ನಾಗರಾಜರಾವ್ ಸಮೂಹ ಮಾಧ್ಯಮ ಪ್ರಶಸ್ತಿ ಪ್ರದಾನ: ಎಲ್.ಹನುಮಂತಯ್ಯ, ಪುರಸ್ಕೃತರು–ಒ.ಎಲ್.ನಾಗಭೂಷಣ ಸ್ವಾಮಿ, ಡಿ.ವಿ.ರಾಜಶೇಖರ್, ಭಾಗವಹಿಸುವವರು–ಬಿ.ಎಂ.ಹನೀಫ್, ಎಚ್.ದಂಡಪ್ಪ, ಆಯೋಜನೆ–ಬಿಎಂಶ್ರೀ ಪ್ರತಿಷ್ಠಾನ, ಸ್ಥಳ–ಎಂವಿಸೀ ಸಭಾಂಗಣ, ಬಿಎಂಶ್ರೀ ಕಲಾಭವನ, ಎನ್.ಆರ್. ಕಾಲೊನಿ, ಬೆಳಿಗ್ಗೆ 10.30

ಕೆಂಪು ಪುಸ್ತಕ ದಿನದ ಅಂಗವಾಗಿ ತತ್ವಜ್ಞಾನಿ ಫ್ರೆಡರಿಕ್ ಏಂಜೆಲ್ಸ್ ಅವರ ದ್ವಿಶತಮಾನ ಆಚರಣೆ: 'ಕಮ್ಯುನಿಸಂ ಎಂದರೇನು?' ಪುಸ್ತಕ ಬಿಡುಗಡೆ ಹಾಗೂ 'ಕಮ್ಯುನಿಸ್ಟ್ ಪಕ್ಷದ ಮಾದರಿಯಾಗಿ ಕಮ್ಯುನಿಸ್ಟ್ ಪ್ರಣಾಳಿಕೆ' ಉಪನ್ಯಾಸ–ಎಂ.ಎ.ಬೇಬಿ, ಏಂಜೆಲ್ಸ್ ಪುಸ್ತಕ ಪರಿಚಯ–ಟಿ.ಸುರೇಂದ್ರ ರಾವ್, ಕೆ. ಪ್ರಕಾಶ್, ಎನ್.ಕೆ.ವಸಂತರಾಜ್, ಯು. ಬಸವರಾಜ್, ಆಯೋಜನೆ–ಎಡ ಪ್ರಕಾಶಕರ ಸಂಘಟನೆ, ಬೆಳಿಗ್ಗೆ 10.30 (ಆನ್‌ಲೈನ್ ಕಾರ್ಯಕ್ರಮ)

ಬರಹಗಾರ ವಸಂತಶೆಟ್ಟಿ ಅವರಿಂದ ವಿಶ್ವ ತಾಯ್ನುಡಿ ದಿನದ ಹಿನ್ನೆಲೆ ಮತ್ತು ಮಹತ್ವ ಕುರಿತು ಮಾತು: ಆಯೋಜನೆ, ಸ್ಥಳ–ಮುನ್ನೋಟ, ನಾಗಸಂದ್ರ ವೃತ್ತದ ಬಳಿ, ಬಸವನಗುಡಿ, ಬೆಳಿಗ್ಗೆ 10.30

ಕಥೆಗಾರನ ಕಥೆ–ಸಾಕ್ಷ್ಯಚಿತ್ರ ಪ್ರದರ್ಶನ ಮತ್ತು ಮಾತುಕತೆ: ಅತಿಥಿಗಳು–ಸುಧಾಕರನ್ ರಾಮಂತಳಿ, ದು.ಸರಸ್ವತಿ, ಆಯೋಜನೆ–ಸುಚಿತ್ರ, ಕೇಂದ್ರ ಸಾಹಿತ್ಯ ಅಕಾಡೆಮಿ, ಸ್ಥಳ–ಸುಚಿತ್ರ, ಬನಶಂಕರಿ ಮೂರನೇ ಹಂತ, ಬೆಳಿಗ್ಗೆ 11

ನಾದಬ್ರಹ್ಮ ತ್ಯಾಗರಾಜರ ಹಾಗೂ ಪುರಂದರ ದಾಸರ ಆರಾಧನಾ ಮಹೋತ್ಸವ: ಗಣ್ಯರಿಗೆ ಸನ್ಮಾನ–ರಾಧಾಕೃಷ್ಣ ಬಿ.ಶೇಷಪ್ಪ, ಟಿ.ಎಸ್. ಕೃಷ್ಣಮೂರ್ತಿ, ಟಿ.ಎಸ್.ಚಂದ್ರಶೇಖರ್, ಆನೂರು ಅನಂತಕೃಷ್ಣ ಶರ್ಮ, ಅಧ್ಯಕ್ಷತೆ–ಎಸ್.ಆರ್.ಕೃಷ್ಣಮೂರ್ತಿ, ಆಯೋಜನೆ, ಸ್ಥಳ–ಮುಲಕನಾಡು ಮಹಾಸಂಘ, ಬಿಎಸ್‌ಸಿಎಲ್ ಬಡಾವಣೆ, ಉತ್ತರಹಳ್ಳಿ, ಸಂಜೆ 4

ಕಲೋತ್ಸವ ಸಾಂಸ್ಕೃತಿಕ ಸಂಭ್ರಮ: ಉದ್ಘಾಟನೆ–ಆರ್.ಅಶೋಕ, ಆಯೋಜನೆ–ಕಲೋತ್ಸವ ಟ್ರಸ್ಟ್, ಸ್ಥಳ–ಸಿ.ಅಶ್ವತ್ಥ್ ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 5

'ಮಿಸೆಸ್ ಸೌತ್ ಇಂಡಿಯಾ– ಐ ಆ್ಯಮ್ ಪವರ್‌ಫುಲ್' **ಆಡಿಷನ್:** ಅತಿಥಿ–ನಟ ಜಯರಾಮ್ ಕಾರ್ತಿಕ್, ಸ್ಥಳ–ಶಾಂಗ್ರಿಲಾ ಹೋಟೆಲ್, ವಸಂತ ನಗರ, ಬೆಳಿಗ್ಗೆ 11

ಜಪಾನ್ ಹಬ್ಬ: ಆಯೋಜನೆ–ಜಪಾನ್ ಹಬ್ಬ ಟ್ರಸ್ಟ್, ಬೆಳಿಗ್ಗೆ 11ರಿಂದ (ಆನ್‌ಲೈನ್ ಕಾರ್ಯಕ್ರಮ)



ಜಯರಾಮ್ ಕಾರ್ತಿಕ್

ಆಚಾರ್ಯ ಅಭಿಜ್ಞಾನ: ಬನ್ನಂಜೆ ಗೋವಿಂದಾಚಾರ್ಯರಿಗೆ ನುಡಿನಮನ, ಭಾಗವಹಿಸುವವರು–ಕೆ.ಎಸ್.ನಾರಾಯಣ ಆಚಾರ್ಯ, ಲಕ್ಷ್ಮೀಶ ತೋಳ್ಪಾಡಿ, ಗುರುರಾಜ ಕರಜಗಿ, ಮಲ್ಲೇಪುರಂ ಜಿ.ವೆಂಕಟೇಶ್, ಎಚ್.ವಿ.ನಾಗರಾಜರಾವ್, ವಿದ್ಯಾಭೂಷಣ, ಡುಂಡಿರಾಜ್, ಆರ್.ಗಣೇಶ್, ಗಂಜೀಫ ರಘುಪತಿ ಭಟ್, ವಿನಯಾ ಪ್ರಸಾದ್, ಅರ್ಪಣಾ ವಸ್ತಾರೆ, ಆಯೋಜನೆ–ಬನ್ನಂಜೆ ಗೋವಿಂದಾಚಾರ್ಯ ಪ್ರತಿಷ್ಠಾನ, ಸ್ಥಳ–ಜೆಎಸ್‌ಎಸ್ ಸಭಾಂಗಣ, ಜಯನಗರ, ಸಂಜೆ 3.45



ಬನ್ನಂಜೆ ಗೋವಿಂದಾಚಾರ್ಯ

ಕೊತ್ತನೂರು ಕೆರೆ ಸ್ವಚ್ಛತಾ ಕಾರ್ಯಕ್ರಮ: ಆಯೋಜನೆ–ಕೊತ್ತನೂರು ಕೆರೆ ಅಭಿವೃದ್ಧಿ ಸಂಘ, ಸ್ಥಳ–ಕೊತ್ತನೂರು ಕೆರೆ, ಬೆಳಗ್ಗೆ 7

ಸಮಸ್ಯೆ ಹೇಳಿಕೊಂಡ ಹನಿಯೂರು ಗ್ರಾಮಸ್ಥರು

ಎತ್ತಿನ ಬಂಡಿಯೇರಿದ ಜಿಲ್ಲಾಧಿಕಾರಿ

ಪ್ರಜಾವಾಣಿ ವಾರ್ತೆ



ಜಿಲ್ಲಾಧಿಕಾರಿ ಜೆ. ಮಂಜುನಾಥ್ ಅವರನ್ನು ಎತ್ತಿನ ಬಂಡಿಯಲ್ಲಿ ಮೆರವಣಿಗೆ ಮಾಡಲಾಯಿತು. ಶಾಸಕ ಎಸ್‌.ಆರ್‌.ವಿಶ್ವನಾಥ್, ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಅಧ್ಯಕ್ಷ ಮರಿಸ್ವಾಮಿ, ಜಿಲ್ಲಾ ಪಂಚಾಯಿತಿ ಸದಸ್ಯ ಚೊಕ್ಕನಹಳ್ಳಿ ವೆಂಕಟೇಶ್ ಇದ್ದರು

ಹೆಸರಘಟ್ಟ: ಹಸಿರು ತೋರಣಗಳಿಂದ ಕಂಗೊಳಿಸಿದ ಗ್ರಾಮ, ಬಣ್ಣ ಬಣ್ಣದ ರಂಗೋಲಿಯಿಂದ ಮಿನುಗಿದ ಬೀದಿಗಳು, ಪೂರ್ಣ ಕುಂಭವನ್ನು ಹೊತ್ತು ಸಾಗಿದ ಮಹಿಳೆಯರು, ವಿವಿಧ ಹೂವುಗಳಿಂದ ಅಲಂಕೃತಗೊಂಡ ಎತ್ತಿನ ಬಂಡಿ...

'ಜಿಲ್ಲಾಧಿಕಾರಿ ನಡೆ ಹಳ್ಳಿ ಕಡೆ' ಕಾರ್ಯಕ್ರಮದಲ್ಲಿ ಹನಿಯೂರು ಗ್ರಾಮದಲ್ಲಿ ಶನಿವಾರ ಕಂಡುಬಂದ ದೃಶ್ಯಗಳಿವು. ಗ್ರಾಮದ ಹೆಬ್ಬಾಗಿಲಿನಲ್ಲಿ ಬೆಂಗಳೂರು ನಗರ ಜಿಲ್ಲಾಧಿಕಾರಿ ಜೆ.ಮಂಜುನಾಥ್ ಅವರಿಗೆ ಗ್ರಾಮದ ಮಹಿಳೆಯರು ಪೂರ್ಣಕುಂಭದ ಸ್ವಾಗತವನ್ನು ನೀಡಿದರು. ಬಳಿಕ ಎತ್ತಿನ ಬಂಡಿಯಲ್ಲಿ ಕೂರಿಸಿಕೊಂಡು ಗ್ರಾಮದಲ್ಲಿ ಮೆರವಣಿಗೆ ಬರಲಾಯಿತು.

ಗ್ರಾಮಸ್ಥರು ಎಳೆ ಎಳೆಯಾಗಿ ತಮ್ಮ ಸಮಸ್ಯೆಗಳನ್ನು ಜಿಲ್ಲಾಧಿಕಾರಿಗಳ ಮುಂದೆ ಬಿಚ್ಚಿಟ್ಟರು. 'ಯುವಕರಿಗೆ ಕಬಡ್ಡಿ ಆಡಲು ಆಟದ ಮೈದಾನವಿಲ್ಲ. ಮೈದಾನಕ್ಕೆ ಜಾಗವನ್ನು ಮಂಜೂರು ಮಾಡಿಕೊಡಬೇಕು' ಎಂದು ಗ್ರಾಮಸ್ಥರು ಮನವಿ ಮಾಡಿದರು.

ಇದಕ್ಕೆ ತಕ್ಷಣ ಸ್ಪಂದಿಸಿದ ಜಿಲ್ಲಾಧಿಕಾರಿಗಳು ಶೀಘ್ರದಲ್ಲಿಯೇ ಆಟದ ಮೈದಾನ ಮಂಜೂರು ಮಾಡಿ ಕೊಡಲು ಕ್ರಮ ಕೈಗೊಳ್ಳುವುದಾಗಿ ಹೇಳಿದರು.

ಗ್ರಾಮದ ಕೆರೆ ಮತ್ತು ಸ್ಮಶಾನ ಜಾಗ ಒತ್ತುವರಿಯಾಗಿರುವುದನ್ನು ಜಿಲ್ಲಾಧಿಕಾರಿಗಳ ಗಮನಕ್ಕೆ ತಂದಾಗ ಆ ಜಾಗವನ್ನು ಪರಿಶೀಲನೆ ಮಾಡಿದರು. ನಂತರ ಒತ್ತುವರಿ ಮಾಡಿಕೊಂಡ ಗ್ರಾಮಸ್ಥರಿಗೆ ಒತ್ತುವರಿ ತೆರವುಗೊಳಿಸಲು ಹೇಳಿದರು.

ಸರ್ಕಾರದ ಬಹುತೇಕ ಇಲಾಖೆಗಳ ಅಧಿಕಾರಿಗಳು ಹಾಜರಿದ್ದು ಗ್ರಾಮಸ್ಥರ ಅಹವಾಲುಗಳನ್ನು ಸ್ವೀಕರಿಸಿದರು. ಸ್ಥಳದಲ್ಲಿಯೇ 190 ಅರ್ಜಿಗಳನ್ನು ಸ್ವೀಕರಿಸಲಾಯಿತು.

ಫೌತಿ ಖಾತೆ, ಪಹಣಿ ತಿದ್ದುಪಡಿ, ಸರ್ಕಾರಿ ಬಸ್ಸು ಸೌಲಭ್ಯ, ಪ್ರಾಥಮಿಕ ಶಾಲೆಯನ್ನು ಮೇಲ್ದರ್ಜೆಗೇರಿಸುವ ಕುರಿತು ಗ್ರಾಮಸ್ಥರು ಅರ್ಜಿಗಳನ್ನು ನೀಡಿದರು. ಪಿಂಚಣಿ, ಜಾತಿ ಆದಾಯ ಪ್ರಮಾಣ ಪತ್ರ, ಭೂ ಹಿಡುವಳಿ ಪ್ರಮಾಣ ಪತ್ರ, ಭಾಗ್ಯಲಕ್ಷ್ಮೀ ಬಾಂಡ್, ನರೇಗಾ ಮತ್ತು ಗ್ರಾಮದ ನಿವಾಸಿಯಾದ ರಾಮಕೃಷ್ಣಯ್ಯ ಅವರಿಗೆ ಪವರ್ ಗ್ರೀಡ್ ಪರಿಹಾರದ ಚೆಕ್‌ನ್ನು ವಿತರಿಸಲಾಯಿತು.

> **ಗ್ರಾಮ ವಾಸ್ತವ್ಯ ಕಾರ್ಯಕ್ರಮ ಒಂದು ಹಳ್ಳಿಗೆ ಸಿಮೀತವಾಗುವ ಬದಲು ಇಡೀ ಗ್ರಾಮ ಪಂಚಾಯಿತಿಗೆ ವಿಸ್ತರಿಸಿದರೆ ಉತ್ತಮ. ಈ ಬಗ್ಗೆ ಸಿ.ಎಂ ಜೊತೆ ಚರ್ಚೆ ಮಾಡಲಾಗುವುದು**
> **ಎಸ್.ಆರ್. ವಿಶ್ವನಾಥ್,** ಶಾಸಕ

ಕಾಕೋಳು ಜನತಾ ಕಾಲೊನಿಗೆ ಭೇಟಿ: 'ಗ್ರಾಮದಲ್ಲಿ ಆಶ್ರಯ ಮನೆಗಳನ್ನು ಸರ್ಕಾರವು ಬಹಳ ಹಿಂದೆ ನೀಡಿದೆ. ಆದರೆ ನಮಗೆ ಇಲ್ಲಿಯ ತನಕ ಹಕ್ಕು ಪತ್ರಗಳನ್ನು ನೀಡಿಲ್ಲ. ತಾವು ದಯವಿಟ್ಟು ಸ್ಥಳ ಪರಿಶೀಲನೆ ಮಾಡಿ ಹಕ್ಕು ಪತ್ರ ನೀಡಿ' ಎಂದು ಜಿಲ್ಲಾಧಿಕಾರಿಗೆ ಕಾಕೋಳು ಗ್ರಾಮದ ಜನತಾ ಕಾಲೊನಿ ನಿವಾಸಿಗಳು ಮನವಿ ಮಾಡಿದರು.

ಖುದ್ದು ಜಾಗವನ್ನು ಪರಿಶೀಲನೆ ಮಾಡಿ ಹಕ್ಕು ಪತ್ರ ಕೊಡಿಸುವುದಾಗಿ ಮಂಜುನಾಥ್ ಭರವಸೆ ನೀಡಿದರು.

ಯಲಹಂಕ ತಹಶೀಲ್ದಾರ್ ನರಸಿಂಹ ಮೂರ್ತಿ, ವಿಶೇಷ ತಹಶೀಲ್ದಾರ್ ಮಂಜುನಾಥ್, ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಕಿಶೋರ್ ಕುಮಾರ್, ಉಪವಿಭಾಗಾಧಿಕಾರಿ ರಂಗನಾಥ್ ಉಪಸ್ಥಿತರಿದ್ದರು.

‘16 ಸಾವಿರ ಪೊಲೀಸ್ ಸಿಬ್ಬಂದಿ ನೇಮಕ’

ಪ್ರಜಾವಾಣಿ ವಾರ್ತೆ



ಉಡುಪಿ: ‘ರಾಜ್ಯ ಸರ್ಕಾರ ಈ ವರ್ಷ 6 ಸಾವಿರ ಪೊಲೀಸ್ ಸಿಬ್ಬಂದಿ ನೇಮಕ ಮಾಡಿಕೊಳ್ಳುತ್ತಿದ್ದು, ಮುಂದಿನ 3 ವರ್ಷಗಳಲ್ಲಿ 16 ಸಾವಿರ ಪೊಲೀಸರ ನೇಮಕಾತಿ ಮಾಡಲಾಗುವುದು’ ಎಂದು ಗೃಹ ಸಚಿವ ಬಸವರಾಜ ಬೊಮ್ಮಾಯಿ ತಿಳಿಸಿದರು.

ಕಾರ್ಕಳದಲ್ಲಿ ಶನಿವಾರ ಪೊಲೀಸ್ ವಸತಿ ಸಮುಚ್ಚಯ ಉದ್ಘಾಟಿಸಿ ಮಾತನಾಡಿದ ಅವರು, ‘ನೇಮಕಾತಿ ಸಂಪೂರ್ಣ ಪಾರದರ್ಶಕವಾಗಿ ನಡೆಯಲಿದೆ. ಶೇ 25 ಮಹಿಳೆಯರಿಗೆ ಮತ್ತು ಶೇ 2 ರಷ್ಟು ಕ್ರೀಡಾಪಟುಗಳಿಗೆ ಮೀಸಲಾತಿ ನೀಡಲಾಗುವುದು’ ಎಂದರು.

‘ಪೊಲೀಸ್ ವ್ಯವಸ್ಥೆಯ ಸುಧಾರಣೆಗೆ ಸಂಬಂಧಿಸಿದಂತೆ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್ ಅವರು ಮಾರ್ಚ್ 31 ರೊಳಗೆ ವರದಿ ಸಲ್ಲಿಸಲಿದ್ದು, ವರದಿ ಆಧರಿಸಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು’ ಎಂದ ಅವರು, ‘ಈಗಾಗಲೇ ರಾಜ್ಯ ಸರ್ಕಾರ 11 ಸಾವಿರ ಪೊಲೀಸ್ ವಸತಿ ಸಮುಚ್ಚಯ ನಿರ್ಮಾಣ ಮಾಡಿದ್ದು, ಬೇರೆ ರಾಜ್ಯಕ್ಕೆ ಹೋಲಿಸಿದರೆ ವಸತಿ ನಿರ್ಮಾಣದಲ್ಲಿ ರಾಜ್ಯವೇ ಪ್ರಥಮ ಸ್ಥಾನದಲ್ಲಿದೆ’ ಎಂದು ಹೇಳಿದರು.

ಗ್ರಾಮ ವಾಸ್ತವ್ಯದಲ್ಲಿ ಕಂದಾಯ ಸಚಿವ ಆರ್. ಅಶೋಕ ಹೇಳಿಕೆ

ದಲ್ಲಾಳಿಗಳ ಹೊರಗಟ್ಟಲು ಆಡಳಿತ ಹಳ್ಳಿ ಕಡೆ

• ವಿ.ಎಸ್. ಸುಬ್ರಹ್ಮಣ್ಯ

ಜಿ. ಹೊಸಹಳ್ಳಿ (ದೊಡ್ಡಬಳ್ಳಾಪುರ): ಕಂದಾಯ ಇಲಾಖೆಯ ಕಚೇರಿಗಳಲ್ಲಿ ದಲ್ಲಾಳಿಗಳನ್ನು ಹೊರಗಟ್ಟಿ, ಆಡಳಿತ ವ್ಯವಸ್ಥೆಯನ್ನೇ ಹಳ್ಳಿಗಳಿಗೆ ಕೊಂಡೊಯ್ದು ಸಾಮಾನ್ಯ ಜನರಿಗೆ ನೇರವಾಗಿ ಸರ್ಕಾರದ ಸೇವೆಗಳನ್ನು ಒದಗಿಸುವ ಉದ್ದೇಶದಿಂದ ‘ಜಿಲ್ಲಾಧಿಕಾರಿ ನಡೆ ಹಳ್ಳಿ ಕಡೆ’ ಕಾರ್ಯಕ್ರಮ ಜಾರಿಗೆ ತರಲಾಗಿದೆ ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.

ಜಿ. ಹೊಸಹಳ್ಳಿ ಗ್ರಾಮದಲ್ಲಿ ಶನಿವಾರ ಗ್ರಾಮ ವಾಸ್ತವ್ಯ ಆರಂಭಿಸಿ ‘ಜಿಲ್ಲಾಧಿಕಾರಿ ನಡೆ ಹಳ್ಳಿ ಕಡೆ’ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಮಾಸಾಶನ ಮಂಜೂರಾತಿ, ಪಹಣಿ, ಮ್ಯುಟೇಷನ್ ದಾಖಲೆ ಪಡೆಯಲು, ಪಡಿತರ ಚೀಟಿಗಾಗಿ ಜನರು ಸರ್ಕಾರಿ ಕಚೇರಿಗಳಿಗೆ ಅಲೆದಾಡಬೇಕಾದ ಪರಿಸ್ಥಿತಿ ಇನ್ನೂ ಇದೆ. ತಾಲ್ಲೂಕು ಕಚೇರಿಗಳಿಗೆ ಹೋದರೆ ಹತ್ತಿಪ್ಪತ್ತು ಮಂದಿ ದಲ್ಲಾಳಿಗಳು ಕಣ್ಣಿಗೆ ಬೀಳುತ್ತಾರೆ. ಅವರನ್ನು ಹೊರಗಟ್ಟಿ, ಜನರಿಗೆ ನೇರವಾಗಿ ಸೇವೆ ನೀಡುವುದೇ ನನ್ನ ಗುರಿ’ ಎಂದರು.



ದೊಡ್ಡಬಳ್ಳಾಪುರ ತಾಲ್ಲೂಕಿನ ಜಿ. ಹೊಸಹಳ್ಳಿ ಗ್ರಾಮದಲ್ಲಿ ಶನಿವಾರ ಗ್ರಾಮ ವಾಸ್ತವ್ಯ ನಡೆಸಿದ ಕಂದಾಯ ಸಚಿವ ಆರ್. ಅಶೋಕ ಅವರು ಅಂಗವಿಕಲ ಬಾಲಕಿಯೊಬ್ಬಳ ಕಾಲಿಗೆ ವಿಶೇಷ ಚಪ್ಪಲಿ ತೊಡಿಸುತ್ತಿರುವುದು. ಶಾಸಕ ಟಿ. ವೆಂಕಟರಮಣಯ್ಯ ಇದ್ದರು – ಪ್ರಜಾವಾಣಿ ಚಿತ್ರ/ ಎಂ.ಎಸ್. ಮಂಜುನಾಥ್

ಮೊದಲ ದಿನವೇ ರಾಜ್ಯದಾದ್ಯಂತ ಎಲ್ಲ ತಾಲ್ಲೂಕುಗಳಲ್ಲೂ ಗ್ರಾಮ ವಾಸ್ತವ್ಯ ನಡೆಯುತ್ತಿದೆ. ಜಿಲ್ಲಾಧಿಕಾರಿ, ಉಪ ವಿಭಾಗಾಧಿಕಾರಿ, ತಹಶೀಲ್ದಾರ್‌ಗಳು ಕಂದಾಯ ಇಲಾಖೆಯನ್ನು ಹಳ್ಳಿಗಳಿಗೆ ಕೊಂಡೊಯ್ದು, ಜನರ ಅಹವಾಲು ಆಲಿಸುತ್ತಿದ್ದಾರೆ. ಪ್ರತಿ ತಿಂಗಳು ಈ ಕಾರ್ಯಕ್ರಮ ನಡೆಯಲಿದೆ. ಆಯಾ ಗ್ರಾಮಗಳಲ್ಲಿ ಬಾಕಿ ಇರುವ ಸಮಸ್ಯೆಗಳ ತುರ್ತು ಪರಿಹಾರಕ್ಕೆ ಸಂಪೂರ್ಣ ಪ್ರಯತ್ನ ನಡೆಯಲಿದೆ ಎಂದು ಹೇಳಿದರು.

ಒಂದು ತಿಂಗಳ ಮುಂಚಿತವಾಗಿಯೇ ಗ್ರಾಮ ವಾಸ್ತವ್ಯದ ಹಳ್ಳಿಗಳನ್ನು ಗುರುತಿಸಲಾಗುವುದು. ಪಹಣಿ, ಮ್ಯುಟೇಷನ್ ಸಮಸ್ಯೆಗಳ ಇತ್ಯರ್ಥ, ಪಡಿತರ ಚೀಟಿ ಮಂಜೂರಾತಿ, ಸ್ಮಶಾನ, ವಸತಿ ನಿವೇಶನಗಳಿಗೆ ಅಗತ್ಯ ಜಮೀನು ಮಂಜೂರು, ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಗುರುತಿಸಿ ಮರಳಿ ಕರೆತರುವುದು, ಸಾರ್ವಜನಿಕ ಉದ್ದೇಶಕ್ಕೆ ಅಗತ್ಯವಿರುವ ಜಮೀನು ಗುರುತಿಸಿ, ಮಂಜೂರು ಮಾಡುವುದು ಸೇರಿದಂತೆ ಹಲವು ಕೆಲಸಗಳನ್ನು ಈ ಕಾರ್ಯಕ್ರಮದ ಮೂಲಕ ಮಾಡಲಾಗುವುದು ಎಂದರು.

ಆಡಳಿತ ವ್ಯವಸ್ಥೆಯನ್ನು ಹಳ್ಳಿಗಳಿಗೆ ಕೊಂಡೊಯ್ಯುವ ಕೆಲಸವನ್ನು ಎಲ್ಲ ಜಿಲ್ಲಾಧಿಕಾರಿಗಳೂ ಉತ್ಸುಕತೆಯಿಂದ ಆರಂಭಿಸಿದ್ದಾರೆ. ಮಹಿಳಾ ಅಧಿಕಾರಿಗಳೂ ರಾತ್ರಿ ಗ್ರಾಮದಲ್ಲೇ ವಾಸ್ತವ್ಯ ಮಾಡಲಿದ್ದಾರೆ. ಈ ಕಾರ್ಯಕ್ರಮದಲ್ಲಿ ರಾಜಕೀಯವಿಲ್ಲ. ಬಡವರಿಗೆ, ಸಾಮಾನ್ಯ ಜನರಿಗೆ ಸರ್ಕಾರದ ಸೇವೆಗಳನ್ನು ತ್ವರಿತವಾಗಿ ತಲುಪಿಸುವುದೊಂದೇ ಗುರಿ ಎಂದು ಸಚಿವರು ಹೇಳಿದರು.

ಕಲ್ಯಾಣ ಕರ್ನಾಟಕದಲ್ಲಿ ವಾಸ್ತವ್ಯ

‘ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ಗ್ರಾಮ ವಾಸ್ತವ್ಯ ಮಾಡುತ್ತೇನೆ. ಮುಂದಿನ ತಿಂಗಳು ಕಲ್ಯಾಣ ಕರ್ನಾಟಕದ ಗ್ರಾಮವೊಂದರಲ್ಲಿ ವಾಸ್ತವ್ಯ ಮಾಡಿ, ಅಹವಾಲು ಆಲಿಸುವೆ’ ಎಂದು ಸಚಿವ ಅಶೋಕ ತಿಳಿಸಿದರು.

ಮಲೆನಾಡು, ಕರಾವಳಿ, ಹಳೆ ಮೈಸೂರು ಪ್ರದೇಶ ಸೇರಿದಂತೆ ಎಲ್ಲ ಭಾಗಗಳಿಗೂ ಗ್ರಾಮ ವಾಸ್ತವ್ಯ ಕಾರ್ಯಕ್ರಮದಡಿ ಭೇಟಿ ನೀಡಲಾಗುವುದು. ದೀರ್ಘ ಕಾಲದಿಂದ ಬಾಕಿ ಇರುವ ಸಮಸ್ಯೆಗಳ ಪರಿಹಾರಕ್ಕೆ ಪ್ರಾಮಾಣಿಕ ಪ್ರಯತ್ನ ನಡೆಸಲಾಗುವುದು ಎಂದರು.

22ರಿಂದ ಇಂದ್ರಧನುಷ್ ಲಸಿಕೆ ಅಭಿಯಾನ

ಬೆಂಗಳೂರು: ‘ಮಕ್ಕಳು ಹಾಗೂ ಗರ್ಭಿಣಿಯರಿಗೆ ಏಳು ರೋಗಗಳು ಬಾರದಂತೆ ತಡೆಯಲು ಇದೇ 22ರಿಂದ ಮಾರ್ಚ್ 22 ರವರೆಗೆ ಇಂದ್ರಧನುಷ್ ಲಸಿಕೆ ಅಭಿಯಾನ ನಡೆಯಲಿದೆ’ ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

‘ಎರಡು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ಹಾಗೂ ಗರ್ಭಿಣಿಯರಿಗೆ ಬೆಂಗಳೂರು, ಬಿಬಿಎಂಪಿ ವ್ಯಾಪ್ತಿ, ಬಳ್ಳಾರಿ, ಬಾಗಲಕೋಟೆ, ಬೆಳಗಾವಿ, ಬೀದರ್, ಚಿಕ್ಕಬಳ್ಳಾಪುರ, ದಾವಣಗೆರೆ, ಗದಗ, ಕಲಬುರ್ಗಿ, ಕೊಪ್ಪಳ, ರಾಯಚೂರು, ವಿಜಯಪುರದಲ್ಲಿ ಈ ಲಸಿಕೆ ನೀಡಲಾಗುವುದು’ ಎಂದರು.

‘ಕೇಂದ್ರ ಸರ್ಕಾರ ಇಂದ್ರಧನುಷ್ 3.0 ಅಭಿಯಾನ ಅನುಷ್ಠಾನಗೊಳಿಸಿದೆ. ಈವರೆಗೆ ತಲುಪಲಾಗದ ಪ್ರದೇಶಗಳನ್ನು ಗುರಿಯಾಗಿಟ್ಟು, ವಲಸಿಗರನ್ನು ಹೊಂದಿದ ಸ್ಲಂ, ಇಟ್ಟಿಗೆ ಸುಡುವ ಜಾಗ, ಅಲೆಮಾರಿಗಳು ವಾಸಿಸುವ ಸ್ಥಳ, ಕಟ್ಟಡ ನಿರ್ಮಾಣ ಸ್ಥಳ ಮತ್ತಿತರ ಕಡೆಗಳಲ್ಲಿ ಮಕ್ಕಳಿಗೆ ಲಸಿಕೆ ನೀಡಲಾಗುವುದು. ಡಿಫ್ತೀರಿಯಾ, ವೂಫಿಂಗ್ ಕಾಫ್, ಟೆಟಾನಸ್, ಟ್ಯುಬರ್ ಕ್ಯುಲೋಸಿಸ್, ಪೋಲಿಯೋ, ಮಿಸಲ್ಸ್, ಹೆಪಟೈಟಸ್‌ಗೆ-ಬಿಗೆ ಈ ಲಸಿಕೆ ನೀಡಲಾಗುತ್ತದೆ’ ಎಂದೂ ಹೇಳಿದರು.

ಮರಕ್ಕೆ ಕಾರು ಡಿಕ್ಕಿ, ಬೆಂಕಿ ಚಾಲಕ ಸಜೀವ ದಹನ

ರಾಯಚೂರು: ತಾಲ್ಲೂಕಿನ ಕಲ್ಮಲಾ ಗ್ರಾಮದ ಬಳಿ ರಾಜ್ಯ ಹೆದ್ದಾರಿಯಲ್ಲಿ ಶನಿವಾರ ಮಧ್ಯಾಹ್ನ ಕಾರು ಜಮೀನಿಗೆ ನುಗ್ಗಿ ಮರಕ್ಕೆ ಡಿಕ್ಕಿ ಹೊಡೆದ ರಭಸಕ್ಕೆ ಬೆಂಕಿ ಹೊತ್ತಿಕೊಂಡಿದ್ದು, ಚಾಲಕ ಸಿರವಾರ ತಾಲ್ಲೂಕಿನ ಮಲ್ಲಟ ಗ್ರಾಮದ ಸದಾನಂದಗೌಡ ಮಾಲಿಪಾಟೀಲ (60) ಸಜೀವ ದಹನವಾಗಿದ್ದಾರೆ.

ಮಲ್ಲಟ ಗ್ರಾಮದಿಂದ ರಾಯಚೂರಿನತ್ತ ಬರುವಾಗ ಈ ಅನಾಹುತ ಸಂಭವಿಸಿದೆ. ಕೂಡಲೇ ಸ್ಥಳಕ್ಕೆ ಗ್ರಾಮಸ್ಥರು ಧಾವಿಸಿದರೂ ಬೆಂಕಿ ನೋಡಿ ಅಸಹಾಯಕರಾಗಿದ್ದರು.




ಸದಾನಂದಗೌಡ

ನಂತರ ಅಗ್ನಿಶಾಮಕ ದಳದವರು ಬೆಂಕಿ ನಂದಿಸಿದರು. ರಾಯಚೂರು ಗ್ರಾಮೀಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆರ್ಥಿಕ ನೆರವು: ಬೇಡಿಕೆ ಸಲ್ಲಿಸಿದ ಬಿಎಸ್‌ವೈ

ನೀತಿ ಆಯೋಗದ ಸಭೆಯಲ್ಲಿ ಹಲವು ವಿಷಯಗಳ ಪ್ರಸ್ತಾಪ

ಪ್ರಜಾವಾಣಿ ವಾರ್ತೆ



ಬೆಂಗಳೂರು: ‘ಭದ್ರಾ ಮೇಲ್ದಂಡೆ ಮತ್ತು ಕೃಷ್ಣಾ ಮೇಲ್ದಂಡೆ ಯೋಜನೆಗಳನ್ನು ರಾಷ್ಟ್ರೀಯ ಯೋಜನೆ ಎಂದು ಘೋಷಿಸಬೇಕು. ನದಿ ತಿರುವು ಯೋಜನೆಗಳಿಗೆ ಅನುದಾನ ಒದಗಿಸಬೇಕು. ಕಾಲುವೆಗಳ ಆಧುನೀಕರಣ ಯೋಜನೆಯಡಿ ಸಲ್ಲಿಸಲಾಗಿರುವ ₹ 6,673 ಕೋಟಿ ಮೊತ್ತದ ಪ್ರಸ್ತಾವನೆಗೆ ಮಂಜೂರಾತಿ ನೀಡಬೇಕು’ ಎಂದು ಕೇಂದ್ರ ಸರ್ಕಾರದ ಎದುರು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಬೇಡಿಕೆ ಇಟ್ಟಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ಶನಿವಾರ ನಡೆದ ನೀತಿ ಆಯೋಗದ ಆಡಳಿತ ಮಂಡಳಿಯ ಆರನೇ ಸಭೆಯಲ್ಲಿ ವರ್ಚುವಲ್ ಮೂಲಕ ಭಾಗವಹಿಸಿದ ಮುಖ್ಯಮಂತ್ರಿ, ‘ರಾಜ್ಯದ ಎಲ್ಲ ಸರ್ಕಾರಿ ಕಚೇರಿಗಳಿಗೆ ಇಂಟರ್ನೆಟ್ ಸೌಲಭ್ಯ ಒದಗಿಸಲು ಒಪ್ಟಿಕಲ್ ಫೈಬರ್ ನೆಟ್ ವರ್ಕ್ ರೂಪಿಸಲು ನಿರ್ಧರಿಸಲಾಗಿದೆ. ಅದಕ್ಕೆ ₹ 4,300 ಕೋಟಿ ನೆರವು ನೀಡಬೇಕು’ ಎಂದೂ ಮನವಿ ಮಾಡಿದರು.

‘ಕಾನೂನು ತೊಡಕು ಮತ್ತು ಪರಿಸರ ಹೋರಾಟಗಳ ಕಾರಣಕ್ಕೆ ಮೂಲಸೌಕರ್ಯ ಯೋಜನೆಗಳ ಅನುಷ್ಠಾನ ವಿಳಂಬವಾಗುತ್ತಿವೆ. ನ್ಯಾಯಾಲಯಗಳಲ್ಲಿ ಇಂಥ ವ್ಯಾಜ್ಯಗಳ ತ್ವರಿತ ವಿಲೇವಾರಿಗೆ ವ್ಯವಸ್ಥೆ ರೂಪಿಸಬೇಕು. ನೂತನ ಶಿಕ್ಷಣ ನೀತಿ ಅನುಷ್ಠಾನಕ್ಕೆ ಕೈಗೊಳ್ಳಬೇಕಾಗಿರುವ ಹಲವು ಉಪಕ್ರಮಗಳಿಗೂ ನೆರವು ಒದಗಿಸಬೇಕು’ ಎಂದು ಕೋರಿದರು.

ರಾಜ್ಯದ ಕೆಲವು ಪ್ರಮುಖ ಅಂಶಗಳ ಬಗ್ಗೆ ಪ್ರಧಾನಿಯ ಗಮನಸೆಳೆದ ಮುಖ್ಯಮಂತ್ರಿ, ‘ಖಾಸಗಿ ಸಹಭಾಗಿತ್ವದಲ್ಲಿ ಮೂರು ಬಂದರುಗಳ ಅಭಿವೃದ್ಧಿ, ರೈಲ್ವೆ ಪಾಲುದಾರಿಕೆಯಲ್ಲಿ ಬೆಂಗಳೂರು ಉಪ ನಗರ ರೈಲು ಅಭಿವೃದ್ಧಿ ಯೋಜನೆ, ಅಟಲ್ ಭೂ ಜಲ ಯೋಜನೆಯಡಿ ಅಂತರ್ಜಲ ಕೊರತೆ ಇರುವ 41 ತಾಲ್ಲೂಕುಗಳಲ್ಲಿ ಜಲ ಸಂರಕ್ಷಣೆ ಯೋಜನೆ ಅನುಷ್ಠಾನಗೊಳಿಸಲಾಗುತ್ತಿದೆ. 114 ಹಿಂದುಳಿದ ತಾಲ್ಲೂಕುಗಳ ಸಮಗ್ರ ಅಭಿವೃದ್ಧಿಯನ್ನು ನೀತಿ ಆಯೋಗದ 49 ಮಹತ್ವಾಕಾಂಕ್ಷೆಯ ಮಾನದಂಡಗಳ ಅನ್ವಯ ಕೈಗೊಳ್ಳಲಾಗುತ್ತಿದೆ’ ಎಂದರು.

‘ಆತ್ಮನಿರ್ಭರ್ ಯೋಜನೆಯಡಿ ಜಿಲ್ಲಾ ಕೇಂದ್ರಗಳಲ್ಲಿರುವ ಸರ್ಕಾರಿ ಆಸ್ಪತ್ರೆಗಳಲ್ಲಿ ಸೂಪರ್-ಸ್ಪೆಷಾಲಿಟಿ ಚಿಕಿತ್ಸಾ ಸೌಲಭ್ಯ ಒದಗಿಸಲು ಉದ್ದೇಶಿಸಲಾಗಿದೆ. ಆಯುಷ್ಮಾನ್ ಭಾರತ್ ಯೋಜನೆಯಡಿ ₹ 2,753 ಕೋಟಿ ವೆಚ್ಚದಲ್ಲಿ 13 ಲಕ್ಷ ಜನರಿಗೆ ಚಿಕಿತ್ಸೆ ನೀಡಲಾಗಿದೆ. ಆಯುಷ್ ಪದ್ಧತಿಗೆ ಉತ್ತೇಜನ ನೀಡುವ ಸಮಗ್ರ ಸಾರ್ವಜನಿಕ ಆರೋಗ್ಯ ನೀತಿ ಜಾರಿಗೆ ತರಲಾಗಿದೆ. ಪೌಷ್ಟಿಕತೆ ಕಡಿಮೆ ಇರುವ 16 ಜಿಲ್ಲೆಗಳ 67 ತಾಲ್ಲೂಕುಗಳಲ್ಲಿ ಪೌಷ್ಟಿಕತೆ ಅಭಿವೃದ್ಧಿಗೆ ಒತ್ತು ನೀಡಲಾಗಿದೆ. ಈ ಎಲ್ಲ ಕಾರ್ಯಕ್ರಮಗಳಿಗೆ ಹೆಚ್ಚಿನ ಅನುದಾನ ಒದಗಿಸಬೇಕು’ ಎಂದೂ ಮುಖ್ಯಮಂತ್ರಿ ಮನವಿ ಮಾಡಿದರು.

ಈ ವೇಳೆ ಪ್ರಧಾನಿ, ‘ಸುಲಲಿತ ವಹಿವಾಟ’ಗೆ ಆದ್ಯತೆ ನೀಡಿದಂತೆ, ‘ಸುಲಲಿತ ಜೀವನ’ಕ್ಕೂ ಆದ್ಯತೆ ನೀಡುವಂತೆ ಸಲಹೆ ನೀಡಿದರು.

ಕೇಂದ್ರ ಜಲಶಕ್ತಿ ಸಚಿವರ ಜತೆ ಜಾರಕಿಹೊಳಿ ಚರ್ಚೆ 22ರಂದು

ಬೆಂಗಳೂರು: ರಾಜ್ಯದ ಹಲವು ನೀರಾವರಿ ಯೋಜನೆಗಳಿಗೆ ಸಂಬಂಧಿಸಿದಂತೆ ಕೇಂದ್ರ ಜಲಶಕ್ತಿ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಅವರನ್ನು ಜಲಸಂಪನ್ಮೂಲ ಸಚಿವ ರಮೇಶ ಜಾರಕಿಹೊಳಿ ಸೋಮವಾರ (ಫೆ. 22) ದೆಹಲಿಯಲ್ಲಿ ಭೇಟಿ ಮಾಡಿ ಚರ್ಚೆ ನಡೆಸಲಿದ್ದಾರೆ.

ಅದಕ್ಕೂ ಮೊದಲು (ಫೆ.21), ದೆಹಲಿಯ ಕರ್ನಾಟಕ ಭವನದಲ್ಲಿ ಕೃಷ್ಣಾ, ಕಾವೇರಿ, ಮಹದಾಯಿ ಸೇರಿದಂತೆ ಅಂತರರಾಜ್ಯ ಜಲವಿವಾದಗಳ ಕುರಿತು ಸುಪ್ರೀಂ ಕೋರ್ಟ್‌ನಲ್ಲಿ ಬಾಕಿ ಇರುವ ಪ್ರಕರಣಗಳಿಗೆ ಕುರಿತಂತೆ ಕಾನೂನು ತಜ್ಞರು ಮತ್ತು ತಾಂತ್ರಿಕ ಸಲಹೆಗಾರರ ಜೊತೆ ಅವರು ಸಭೆ ನಡೆಸಲಿದ್ದಾರೆ.

ಸಚಿವರ ಜೊತೆ ಜಲಸಂಪನ್ಮೂಲ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್, ಕಾರ್ಯದರ್ಶಿ ಅನಿಲ್ ಕುಮಾರ್, ನೀರಾವರಿ ನಿಗಮಗಳ ವ್ಯವಸ್ಥಾಪಕ ನಿರ್ದೇಶಕರು ಸಭೆಗಳಲ್ಲಿ ಭಾಗವಹಿಸಲಿದ್ದಾರೆ.

ಆರೋಪಗಳ ಬಗ್ಗೆ ನ್ಯಾಯಾಲಯದ ಆತ್ಮಸಾಕ್ಷಿ ತೃಪ್ತಿಪಡಿಸಿ: ದೆಹಲಿ ಪೊಲೀಸರಿಗೆ ನ್ಯಾಯಾಧೀಶರ ಸೂಚನೆ

‘ಗಲಭೆಗೆ ದಿಶಾ ನಂಟು: ಪುರಾವೆ ಏನಿದೆ?’

ಪ್ರಜಾವಾಣಿ ವಾರ್ತೆ



ನವದೆಹಲಿ: ‘ಗಣರಾಜ್ಯೋತ್ಸವ ದಿನದಂದು ದೆಹಲಿಯಲ್ಲಿ ನಡೆದ ಹಿಂಸಾಚಾರದ ಜತೆಗೆ ಈ ಯುವತಿಗೆ (ದಿಶಾ ರವಿ) ನಂಟು ಇದೆ ಎಂಬುದನ್ನು ತೋರಿಸುವ ಯಾವ ಪುರಾವೆ ನಿಮ್ಮ ಬಳಿ ಇದೆ’ ಎಂದು ಟೂಲ್‌ಕಿಟ್ ಪ್ರಕರಣದಲ್ಲಿ ದೆಹಲಿ ಪೊಲೀಸರ ಪರ ವಾದಿಸಿದ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ. ರಾಜು ಅವರನ್ನು ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ಧರ್ಮೇಂದ್ರ ರಾಣಾ ಪ್ರಶ್ನಿಸಿದ್ದಾರೆ.

ರೈತರ ಪ್ರತಿಭಟನೆಗೆ ಬೆಂಬಲ ಕೋರಿರುವ ಟೂಲ್‌ಕಿಟ್ ಸಿದ್ಧಪಡಿಸಿ ಹಂಚಿಕೊಂಡ ಆರೋಪದಲ್ಲಿ ಬಂಧನಕ್ಕೆ ಒಳಗಾಗಿರುವ ಪರಿಸರ ಕಾರ್ಯಕರ್ತೆ ದಿಶಾ ರವಿ ಅವರ ಜಾಮೀನು ಅರ್ಜಿಯ ವಿಚಾರಣೆ ಶನಿವಾರ ನಡೆಯಿತು. ದಿಶಾ ಮೇಲೆ ಹೊರಿಸಲಾಗಿರುವ ಆರೋಪಗಳ ಬಗ್ಗೆ ನ್ಯಾಯಾಲಯದ ಆತ್ಮಸಾಕ್ಷಿಯನ್ನು ತೃಪ್ತಿಪಡಿಸಬೇಕು ಎಂದು ರಾಜು ಅವರಿಗೆ ನ್ಯಾಯಾಧೀಶರು ಹೇಳಿದರು.

ನಿಷೇಧಿತ ಸಂಘಟನೆ ‘ಸಿಖ್ ಫಾರ್ ಜಸ್ಟಿಸ್’ ನೊಂದಿಗೆ ನಂಟು ಇರುವ ವ್ಯಕ್ತಿಗಳ ಜತೆಗೆ ದಿಶಾ ಅವರು ನಿರಂತರ ಸಂಪರ್ಕದಲ್ಲಿದ್ದರು. ಅವರು ಸಾಕ್ಷ್ಯ ನಾಶಕ್ಕೂ ಯತ್ನಿಸಿದ್ದಾರೆ ಎಂದು ರಾಜು ವಾದಿಸಿದರು.

ಆದರೆ, ‘ಅಂತಹ ವ್ಯಕ್ತಿಗಳ ಜತೆಗೆ ಸಂಪರ್ಕದಲ್ಲಿದ್ದರು ಎಂಬ ಒಂದೇ ಕಾರಣಕ್ಕೆ ದಿಶಾ ಅವರು ಕೂಡ ಆ ವ್ಯಕ್ತಿಗಳಿಗೆ ಇರುವ ಉದ್ದೇಶವನ್ನೇ ಹೊಂದಿದ್ದಾರೆ ಎಂದು ಹೇಳಲು ಸಾಧ್ಯವೇ? ದೇಣಿಗೆ ನೀಡುವಂತೆ ನಾನು ಡಕಾಯಿತನೊಬ್ಬನನ್ನು ಸಂಪರ್ಕಿಸಿದರೆ, ಡಕಾಯಿತಿಯಲ್ಲಿ ನಾನೂ ಭಾಗಿಯಾಗಿದ್ದೇನೆ ಎಂದು ಅರ್ಥವೇ’ ಎಂದು ನ್ಯಾಯಾಧೀಶರು ಪ್ರಶ್ನಿಸಿದರು.

‘ಪೊಯೆಟಿಕ್ ಜಸ್ಟಿಸ್ ಫೌಂಡೇಷನ್’ ಎಂಬ ನಿಷೇಧಿತ ಸಂಘಟನೆಯ ವ್ಯಕ್ತಿಗಳ ಜತೆಗೂಡಿ ದಿಶಾ ಅವರು ಸಂಚು ರೂಪಿಸಿದ್ದಾರೆ. ‘ಇದು (ಟೂಲ್‌ಕಿಟ್) ಮೇಲ್ನೋಟಕ್ಕೆ ಕಾಣಿಸುವಷ್ಟು ನಿರಪಾಯಕಾರಿ ಅಲ್ಲ. ಕೆನಡಾದಲ್ಲಿರುವ ವ್ಯಕ್ತಿಗಳ ಜತೆಗೂಡಿ ಟೂಲ್‌ಕಿಟ್ ಸಿದ್ಧಪಡಿಸುವುದು ಭಾರತೀಯ ದಂಡ ಸಂಹಿತೆಯ 124 ಎ (ದೇಶದ್ರೋಹ) ಅಡಿಯಲ್ಲಿ ಪ್ರಕರಣ ದಾಖಲಿಸುವಂತಹ ಕೃತ್ಯ’ ಎಂದು ರಾಜು ವಾದಿಸಿದರು.

ಪ್ರತ್ಯೇಕ ಖಾಲಿಸ್ತಾನದ ಪರವಾಗಿರುವ ವ್ಯಕ್ತಿಗಳ ಒತ್ತಾಸೆಯಂತೆ, ರೈತರ ಪ್ರತಿಭಟನೆಗೆ ಬೆಂಬಲ ಸೂಚಿಸುವ ಹೆಸರಿನಲ್ಲಿ ಟೂಲ್‌ಕಿಟ್ ರಚಿಸಲಾಗಿದೆ ಎಂಬ ಆರೋಪದಲ್ಲಿ ದಿಶಾ ಅವರನ್ನು ಇದೇ 13ರಂದು ದೆಹಲಿ ಪೊಲೀಸರು ಬಂಧಿಸಿದ್ದಾರೆ.

ರೈತರ ಪ್ರತಿಭಟನೆಗೆ ಬೆಂಬಲ ನೀಡುವ ನೆಪದಲ್ಲಿ ದೇಶವಿರೋಧಿ ಚಟುವಟಿಕೆ ನಡೆಸಲು ಆರೋಪಿ ಬಯಸಿದ್ದರು. ಜಾಗತಿಕ ಮಟ್ಟದಲ್ಲಿ ಪ್ರತಿಭಟನೆಗಳನ್ನು ಹಮ್ಮಿಕೊಳ್ಳುವ ಮೂಲಕ ಗಣರಾಜ್ಯೋತ್ಸವ ದಿನ ಕಾರ್ಯಕ್ರಮವನ್ನು ಹಾಳುಗೆಡವಲು ಅವರೆಲ್ಲರೂ ಜತೆಗೂಡಿ ಪಿತೂರಿ ನಡೆಸಿದ್ದಾರೆ. ಇದು ಕಾಕತಾಳೀಯ ಏನಲ್ಲ, ಯೋಜಿತ ಪಿತೂರಿ. ಇದಕ್ಕಾಗಿ ಅವರು ವಾಟ್ಸ್‌ಆ್ಯಪ್ ಗುಂಪುಗಳನ್ನು ಮಾಡಿಕೊಂಡಿದ್ದಾರೆ; ಝೂಮ್ ಸಭೆಗಳನ್ನು ನಡೆಸಿದ್ದಾರೆ ಎಂದು ಪೊಲೀಸರು ಆರೋಪಿಸಿದ್ದಾರೆ.



ದಿಶಾ ಅವರನ್ನು ಬಿಡುಗಡೆ ಮಾಡಲು ಒತ್ತಾಯಿಸಿ ಸಾಮಾಜಿಕ ಕಾರ್ಯಕರ್ತರು ಹೈದರಾಬಾದ್‌ನಲ್ಲಿ ಶನಿವಾರ ಪ್ರತಿಭಟನೆ ನಡೆಸಿದರು –ಪಿಟಿಐ ಚಿತ್ರ

‘ರೈತರಿಗೆ ಬೆಂಬಲ ದೇಶದ್ರೋಹವೇ?’

ಟೂಲ್‌ಕಿಟ್ ರಚನೆಯು ಯಾವ ದೃಷ್ಟಿಯಲ್ಲಿಯೂ ದೇಶದ್ರೋಹದ ಕೃತ್ಯ ಅಲ್ಲ. ಈ ಪ್ರಕರಣದ ಇನ್ನಿತರ ಆರೋಪಿಗಳಾದ ಶಾಂತನು ಮುಲುಕ್ ಮತ್ತು ನಿಕಿತಾ ಜೇಕಬ್ ಅವರು ಜಾಮೀನು ಪಡೆದುಕೊಂಡಿದ್ದಾರೆ. ತನಿಖೆಗೆ ಸೋಮವಾರ ಹಾಜರಾಗುವಂತೆ ಅವರಿಗೆ ಸೂಚಿಸಲಾಗಿದೆ. ದೆಹಲಿ ಬಿಟ್ಟು ಹೋಗುವಂತಿಲ್ಲ ಎಂಬ ಷರತ್ತಿನೊಂದಿಗೆ ದಿಶಾ ಅವರಿಗೂ ಜಾಮೀನು ನೀಡಬಹುದು ಎಂದು ದಿಶಾ ಪರ ವಕೀಲ ಸಿದ್ಧಾರ್ಥ್ ಅಗರ್‌ವಾಲ್ ವಾದಿಸಿದರು.

‘ದಿಶಾ ಅವರು ಹವಾಮಾನ ಮತ್ತು ಪರಿಸರ ರಕ್ಷಣೆ ಕಾರ್ಯಕರ್ತೆ. ಪ್ರತ್ಯೇಕತಾವಾದಿ ಚಳವಳಿಯ ಜತೆಗೆ ಅವರಿಗೆ ಯಾವುದೇ ಸಂಪರ್ಕ ಇಲ್ಲ. ರೈತರ ಪ್ರತಿಭಟನೆಗೆ ಬೆಂಬಲ ನೀಡುವುದು ದೇಶದ್ರೋಹ ಎಂದಾದರೆ, ನಾನೂ ತಪ್ಪಿತಸ್ಥನೇ. ನಮಗಿರುವ ಭಿನ್ನವಾದ ಅಭಿಪ್ರಾಯ ಹೊಂದುವುದೇ ಸರಿಯಿಲ್ಲ ಎನ್ನುವ ಮೂಲಕ ಚಿಂತನೆಯ ಮಟ್ಟವನ್ನೇ ನಾವು ಕೆಳಕ್ಕೆ ಇಳಿಸುತ್ತಿದ್ದೇವೆ’ ಎಂದು ಅಗರ್‌ವಾಲ್ ಪ್ರತಿಪಾದಿಸಿದರು.

ದೆಹಲಿ ಹಿಂಸಾಚಾರ: 20ಕ್ಕೂ ಹೆಚ್ಚು ಜನರ ಫೋಟೊ ಬಿಡುಗಡೆ

ನವದೆಹಲಿ (ಪಿಟಿಐ): ಗಣರಾಜ್ಯೋತ್ಸವದ ದಿನದಂದು ದೆಹಲಿಯ ಕೆಂಪುಕೋಟೆ ಬಳಿ ನಡೆದ ಹಿಂಸಾಚಾರದಲ್ಲಿ ಭಾಗಿಯಾಗಿದ್ದಾರೆ ಎನ್ನಲಾದ 20ಕ್ಕೂ ಹೆಚ್ಚು ಜನರ ಫೋಟೊಗಳನ್ನು ದೆಹಲಿ ಪೊಲೀಸರು ಶನಿವಾರ ಬಿಡುಗಡೆ ಮಾಡಿದ್ದಾರೆ.

ಹಿಂಸಾಚಾರದ ವಿಡಿಯೊಗಳನ್ನು ಸ್ಕ್ಯಾನ್ ಮಾಡಿ ಅದರಿಂದ ತೆಗೆದ ಫೋಟೊಗಳನ್ನು ಬಿಡುಗಡೆ ಮಾಡಲಾಗಿದೆ.

‘ಫೋಟೊ ಬಿಡುಗಡೆ ಮಾಡಲಾಗಿದ್ದು, ಹಿಂಸಾಚಾರದಲ್ಲಿ ಪಾಲ್ಗೊಂಡವರನ್ನು ಪತ್ತೆ ಹಚ್ಚುವ ಕಾರ್ಯ ಆರಂಭಿಸಿದ್ದೇವೆ’ ಎಂದು ಪೊಲೀಸರು ಹೇಳಿದರು.

ಹಿಂಸಾಚಾರದಲ್ಲಿ ಭಾಗವಹಿಸಿದ್ದಾರೆ ಎನ್ನಲಾದ 200ಕ್ಕೂ ಹೆಚ್ಚು ಜನರ ಫೋಟೊಗಳನ್ನು ಪೊಲೀಸರು ಈ ಮುಂಚೆ ಬಿಡುಗಡೆ ಮಾಡಿದ್ದರು.

ಅಸ್ಸಾಂ: ಅತಿ ಎತ್ತರದ ಶಿವ ದೇಗುಲ ಪ್ರತಿಷ್ಠಾಪನೆಗೆ ಸಜ್ಜು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಸ್ಸಾಂನಲ್ಲಿ ಶಿವಲಿಂಗದ ಆಕಾರದಲ್ಲಿ ನಿರ್ಮಾಣವಾಗಿರುವ 136 ಅಡಿ ಎತ್ತರದ ಮಹಾಮೃತ್ಯುಂಜಯ ದೇವಸ್ಥಾನವು ಉದ್ಘಾಟನೆಗೆ ಸಜ್ಜಾಗಿದೆ. ನಾಗಾಂವ್ ಜಿಲ್ಲೆಯ ಪುರಾಣಿ ಗೋದಾಮ್ ಗ್ರಾಮದಲ್ಲಿರುವ ದೇಗುಲವು ದೇಶದ ಎರಡನೇ ಮಹಾ ಮೃತ್ಯುಂಜಯ ದೇವಸ್ಥಾನ ಎನಿಸಿದೆ. ಈಗಾಗಲೇ ಮಧ್ಯಪ್ರದೇಶದಲ್ಲಿ ಪ್ರಾಚೀನ ಮಹಾಮೃತ್ಯುಂಜಯ ದೇವಾಲಯ ಇದೆ.

ಫೆ. 22ರಿಂದ ಮಾರ್ಚ್ 3ರವರೆಗೆ ಪ್ರತಿಷ್ಠಾಪನಾ ಕೈಂಕರ್ಯಗಳು ನಡೆಯಲಿವೆ. ಫೆ. 27ರಂದು ಮೃತ್ಯುಂಜಯ ದೇವರ ಪ್ರತಿಷ್ಠಾಪನೆ ನೆರವೇರಲಿದೆ. ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ, ಗೃಹಸಚಿವ ಅಮಿತ್ ಶಾ, ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಪಾಲ್ಗೊಳ್ಳಲಿದ್ದಾರೆ.

ಇದು ವಿಶ್ವದ ಅತಿ ಎತ್ತರದ ಶಿವ ದೇವಾಲಯ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ ಎಂದು ಕಾಸರಗೋಡಿನ ಗೋಕುಲಂ ಗೋಶಾಲೆಯ ಪೂಚಕ್ಕಾಡು ವಿಷ್ಣು ಪ್ರಸಾದ್ ಹೆಬ್ಬಾರ್ ಅವರು ಹೇಳಿದ್ದಾರೆ. ಹೆಬ್ಬಾರರ ನೇತೃತ್ವದಲ್ಲಿ ಪರಂಪರಾ ವಿದ್ಯಾಪೀಠದ 250 ವೈದಿಕ ವಿದ್ವಾಂಸರು ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದಾರೆ. ಈ ಪೈಕಿ ಕರ್ನಾಟಕದ 200 ವೈದಿಕರು ಇದ್ದಾರೆ. ಜೊತೆಗೆ ಉತ್ತರ ಭಾರತದ 250 ವೈದಿಕರು ಆಗಮಿಸಲಿದ್ದಾರೆ ಎಂದು ಮಾಹಿತಿ ನೀಡಿದ್ದಾರೆ.

ಇದು ಹಿರಣ್ಯಕಶಿಪು ತಪಸ್ಸು ಮಾಡಿರುವ ಸ್ಥಳ ಎಂಬ ಪ್ರತೀತಿ ಇದೆ. ಈ ಜಾಗದಲ್ಲಿ ಭೃಗು ಗಿರಿ ಮಹಾರಾಜ್ ಎಂಬ ಸಂತ ಚಿಕ್ಕ ಗುಡಿಯಲ್ಲಿ ಶಿವಲಿಂಗ ಪ್ರತಿಷ್ಠಾಪಿಸಿದ್ದರು. ಅವರ ಸಂಕಲ್ಪದಂತೆ ಅವರ ಶಿಷ್ಯರು 17 ವರ್ಷಗಳಲ್ಲಿ ಬೃಹತ್ ದೇವಾಲಯ ನಿರ್ಮಿಸಿದ್ದಾರೆ. ದೇಗುಲ ನಿರ್ಮಾಣ ಹಾಗೂ ಪ್ರತಿಷ್ಠಾಪನಾ ಕಾರ್ಯಕ್ಕೆ ಅಸ್ಸಾಂ ಸರ್ಕಾರ ಸಹಕಾರ ನೀಡಿದೆ.

ದೇಗುಲ ಟ್ರಸ್ಟ್‌ನ ಅಧ್ಯಕ್ಷ, ಹಿರಿಯ ಮುಖಂಡ ಹಿಮಂತ ಬಿಸ್ವ ಶರ್ಮ ನೇತೃತ್ವದ ಸಮಿತಿಯು ಪ್ರತಿಷ್ಠಾಪನಾ ಕಾರ್ಯ ನೆರವೇರಿಸಲಿದೆ. ಶತಚಂಡಿ ಹವನ, ಹತ್ತು ಲಕ್ಷ ಮೃತ್ಯುಂಜಯ ಮಂತ್ರ ಜಪ, ಸಹಸ್ರ ಕಲಶಾಭಿಷೇಕ, ಮಹಾರುದ್ರ ಮತ್ತು ಚತುರ್ವೇದ ಪಾರಾಯಣ ಇತ್ಯಾದಿಗಳು ನೆರವೇರಲಿದೆ. ಕೊಲ್ಲೂರಿನ ಮೂಕಾಂಬಿಕಾ ದೇವಸ್ಥಾನದ ಪ್ರಧಾನ ಅರ್ಚಕ ಡಾ. ಕೆ.ಎನ್. ನರಸಿಂಹ ಅಡಿಗ ಅವರು ಶತಚಂಡಿ ಹವನ ನೆರವೇರಿಸಲಿದ್ದಾರೆ. ತಿರುವನಂತಪುರದ ಅನಂತಶಯನ ದೇವಾಲಯದ ಪ್ರಧಾನ ಅರ್ಚಕರ ಪುತ್ರ ವಿನೀತ ಪಟ್ಟೇರಿ ಅವರು ಪ್ರತಿಷ್ಠಾಂಗ ಕರ್ಮಗಳನ್ನು ನೆರವೇರಿಸುತ್ತಾರೆ.


ಅಸ್ಸಾಂನಲ್ಲಿ ನಿರ್ಮಾಣವಾಗಿರುವ ಮಹಾಮೃತ್ಯುಂಜಯ ದೇವಸ್ಥಾನ

ಡ್ರಗ್ಸ್ ಪ್ರಕರಣ: ಬಿಜೆಪಿ ಯುವ ನಾಯಕಿ ಪಮೇಲಾ ಬಂಧನ



ಕೋಲ್ಕತ್ತ (ಪಿಟಿಐ): ಬಿಜೆಪಿ ಯುವ ನಾಯಕಿ ಪಮೇಲಾ ಗೋಸ್ವಾಮಿ ಮತ್ತು ಅವರ ಸ್ನೇಹಿತ ಪ್ರದೀಪ್ ಕುಮಾರ್ ಡೇ ಅವರನ್ನು 90 ಗ್ರಾಂ ಕೊಕೈನ್ ಹೊಂದಿದ್ದ ಕಾರಣಕ್ಕೆ ಪೊಲೀಸರು ಬಂಧಿಸಿದ್ದಾರೆ.

‘ಇದರಲ್ಲಿ ಪಕ್ಷದ ತಮ್ಮ ಸಹದ್ಯೋಗಿಯಾದ ಮತ್ತು ಕೈಲಾಶ್ ವಿಜಯ ವರ್ಗಿಯಾ ಅವರ ಸಹಾಯಕರಾದ ರಾಕೇಶ್ ಸಿಂಗ್ ಅವರ ಪಿತೂರಿ ಇದೆ. ರಾಕೇಶ್ ಸಿಂಗ್ ಅವರನ್ನು ಬಂಧಿಸಬೇಕು. ಈ ಪ್ರಕರಣವನ್ನು ಸಿಐಡಿಗೆ ವಹಿಸಬೇಕು’ ಎಂದು ಬಂಧಿತೆ ಪಮೇಲಾ ಗೋಸ್ವಾಮಿ ಸಿಟಿ ಕೋರ್ಟ್‌ನಿಂದ ಪೊಲೀಸರು ಕರೆದೊಯ್ಯುವಾಗ ವರದಿಗಾರರಿಗೆ ತಿಳಿಸಿದ್ದಾರೆ.

ಬಿಜೆಪಿಯ ಜನತಾ ಯುವ ಮೋರ್ಚಾ (ಬಿಜೆವೈಎಂ) ರಾಜ್ಯ ಕಾರ್ಯದರ್ಶಿಯಾದ ಪಮೇಲಾ ತಮ್ಮ ವೈಯಕ್ತಿಕ ಭದ್ರತಾ ಸಿಬ್ಬಂದಿಯೂ ಆದ ಪ್ರದೀಪ್ ಕುಮಾರ್ ಡೇ ಜತೆಗೆ ದಕ್ಷಿಣ ಕೋಲ್ಕತ್ತದ ನ್ಯೂ ಅಲಿಪೋರ್ ಪ್ರದೇಶದಲ್ಲಿದ್ದಾಗ ಪಮೇಲಾ ಅವರ ಕೈಚೀಲದಲ್ಲಿ ಸುಮಾರು ಲಕ್ಷ ಮೌಲ್ಯದ ಕೊಕೈನ್ ಪತ್ತೆಯಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ತರುಣ್ ಬರೋಟ್ ಪ್ರಕರಣ ಕೈಬಿಟ್ಟ ನ್ಯಾಯಾಲಯ

ಅಹಮದಾಬಾದ್: ಸಾದಿಕ್ ಜಮಾಲ್ ಮೆಹ್ತಾರ್ ಎನ್‌ಕೌಂಟರ್ ಪ್ರಕರಣದಿಂದ ಮಾಜಿ ಡಿವೈಎಸ್ಪಿ ತರುಣ್ ಬರೋಟ್ ಮತ್ತು ಸಹ ಆರೋಪಿ ನಿವೃತ್ತ ಪೊಲೀಸ್ ಅಧಿಕಾರಿಯನ್ನು ಅಹಮದಾಬಾದ್ ವಿಶೇಷ ಸಿಬಿಐ ನ್ಯಾಯಾಲಯ ಕೈಬಿಟ್ಟಿದೆ.

ಈ ಮೂಲಕ ಇದೇ ಪ್ರಕರಣದಲ್ಲಿ ಆರೋಪಿಗಳಾಗಿದ್ದ ಎಂಟು ಪೊಲೀಸರನ್ನು ಪ್ರಕರಣದಿಂದ ಕೈಬಿಟ್ಟಂತಾಗಿದೆ.

'ಎನ್‌ಕೌಂಟರ್ ಸ್ಪೆಷಲಿಸ್ಟ್' ಎಂದು ಗುರುತಿಸಿಕೊಂಡಿದ್ದ ಬರೋಟ್ ಈ ಪ್ರಕರಣದ ಪ್ರಮುಖ ಆರೋಪಿ ಎಂದು ಸಿಬಿಐ ಆರೋಪಿಸಿತ್ತು. 19 ವರ್ಷದ ಸಾದಿಕ್ ಅವರನ್ನು ಅಕ್ರಮವಾಗಿ ಪೊಲೀಸ್ ವಶಕ್ಕೆ ತೆಗೆದುಕೊಂಡ ಮರುದಿನವೇ ಅವರು ಮೃತಪಟ್ಟಿದ್ದರು ಎಂದು ಸಿಬಿಐ ತಿಳಿಸಿತ್ತು.

‘ನಾನು ಅಮಾಯಕ. ನನ್ನ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಲಾಗಿದೆ. ಹೀಗಾಗಿ ನನ್ನ ಮೇಲಿರುವ ಪ್ರಕರಣವನ್ನು ಕೈಬಿಡಬೇಕು’ ಎಂದು ಕಳೆದ ಅಕ್ಟೋಬರ್‌ನಲ್ಲಿ ಬರೋಟ್ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದರು.

‘ಪಾಕ್ ಜೊತೆ ಸರ್ಕಾರ ಮಾತುಕತೆ ನಡೆಸಲಿ’

ಶ್ರೀನಗರ: ಜಮ್ಮು, ಕಾಶ್ಮೀರದಲ್ಲಿ ಉಗ್ರರ ದಾಳಿಗೆ ಪೊಲೀಸರು ಬಲಿಯಾಗಿರುವ ಘಟನೆ ಕುರಿತು ಕಳವಳ ವ್ಯಕ್ತಪಡಿಸಿರುವ ಪಿಡಿಪಿ ಅಧ್ಯಕ್ಷೆ ಮೆಹಬೂಬಾ ಮುಫ್ತಿ, ‘ಕೇಂದ್ರ ಸರ್ಕಾರ ಪಾಕಿಸ್ತಾನದೊಂದಿಗೆ ಮಾತುಕತೆಗೆ ಮುಂದಾಗಲಿ’ ಎಂದು ಸಲಹೆ ನೀಡಿದ್ದಾರೆ.

ಮೃತ ಪೊಲೀಸ್ ಕಾನ್‌ಸ್ಟೆಬಲ್ ಕುಟುಂಬದವರಿಗೆ ಸಾಂತ್ವಾನ ಹೇಳಲು ಅನಂತನಾಗ್ ಜಿಲ್ಲೆಗೆ ಭೇಟಿ ನೀಡಿದ್ದ ಅವರು, ‘ಮಾತುಕತೆ ಪ್ರಕ್ರಿಯೆಯನ್ನು ಶೀಘ್ರ ಪ್ರಾರಂಭಿಸಬೇಕು. ಕಣಿವೆ ರಾಜ್ಯದ ಸಮಸ್ಯೆಗಳನ್ನು ಬಗೆಹರಿಸಬೇಕು’ ಎಂದು ಹೇಳಿದರು.

ಜಮ್ಮು, ಕಾಶ್ಮೀರದ ಬಾಗಾಟ್ ಪ್ರದೇಶದಲ್ಲಿ ಶುಕ್ರವಾರ ಉಗ್ರರು ನಡೆಸಿದ ದಾಳಿಯಲ್ಲಿ ಇಬ್ಬರು ಪೊಲೀಸ್ ಪೇದೆಗಳು ಮೃತಪಟ್ಟಿದ್ದರು.

2020ರಲ್ಲಿ ದೆಹಲಿಯಲ್ಲಿ 32 ಭಯೋತ್ಪಾದಕರ ಬಂಧನ

ನವದೆಹಲಿ: ಕಳೆದ ವರ್ಷದಲ್ಲಿ ದೆಹಲಿ ಪೊಲೀಸರು 32 ಉಗ್ರರನ್ನು ಬಂಧಿಸಿದ್ದಾರೆ. ಇದು 2016ರ ನಂತರ ಗರಿಷ್ಠ ಸಂಖ್ಯೆಯಾಗಿದೆ ಎಂದು ದೆಹಲಿ ಪೊಲೀಸ್ ತಿಳಿಸಿದೆ.

ದೆಹಲಿ ಪೊಲೀಸರು 2019ರಲ್ಲಿ ಐದು, 2018ರಲ್ಲಿ ಎಂಟು, 2017ರಲ್ಲಿ 11 ಮತ್ತು 2016ರಲ್ಲಿ 16 ಭಯೋತ್ಪಾದಕರನ್ನು ಬಂಧಿಸಿದ್ದರು.

ಕಳೆದ ವರ್ಷ ಐಸಿಸ್ ಉಗ್ರ ಕೇಂದ್ರವನ್ನು ಪತ್ತೆ ಹಚ್ಚಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಯೋಗಿ ಆದಿತ್ಯನಾಥ ಉತ್ತರಾಖಂಡದವರು: ಅಖಿಲೇಶ್ ಯಾದವ್

ಪ್ರಜಾವಾಣಿ ವಾರ್ತೆ

ಲಖನೌ: ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಹೊರಗಿನವರು. ಅವರಿಗೆ ರಾಜ್ಯದ ಬಗ್ಗೆ ಬಹಳ ಕಡಿಮೆ ತಿಳಿವಳಿಕೆ ಇದೆ ಎಂದು ಸಮಾಜವಾದಿ ಪಕ್ಷದ ನಾಯಕ ಅಖಿಲೇಶ್ ಯಾದವ್ ಟೀಕಿಸಿದ್ದಾರೆ.

ಪಕ್ಷದ ಪ್ರಧಾನ ಕಚೇರಿಯಲ್ಲಿ ಪತ್ರಕರ್ತರ ಜತೆ ಮಾತನಾಡಿದ ಅವರು, ‘ಆದಿತ್ಯನಾಥ ಅವರು ಉತ್ತರ ಪ್ರದೇಶದ ಜನರಿಗೆ ತಮ್ಮ ತಾಯ್ನಾಡಿನ ಬಗ್ಗೆ ಮಾಹಿತಿ ನೀಡಬೇಕು. ಆದಿತ್ಯನಾಥ ಅವರು ಸಂತರಾಗುವ ಮೊದಲು ಅವರ ಹೆಸರು ಅಜಯ್ ಬಿಶ್ತ್ ಎಂದಾಗಿತ್ತು. ಅವರು ಉತ್ತರಾಖಂಡದಿಂದ ಬಂದವರು. ಬಿಜೆಪಿಯು ಹೊರಗಿನವರನ್ನು ರಾಜ್ಯದ ಜನತೆಯ ಮೇಲೆ ಹೇರಿಕೆ ಮಾಡಿದೆ’ ಎಂದು ಹೇಳಿದ್ದಾರೆ.

‘ಅವರಿಗೆ (ಯೋಗಿ) ಉತ್ತರ ಪ್ರದೇಶದ ಬಗ್ಗೆ ಹೆಚ್ಚು ಗೊತ್ತಿಲ್ಲ. ಆದ್ದರಿಂದ ಸಮಾಜವಾದಿ ಪಕ್ಷದ ಆಳ್ವಿಕೆ ಕಾಲದಲ್ಲಿ ಮಾಡಿದ ಕೆಲಸಗಳ ಶ್ರೇಯವನ್ನು ತಾವು ಪಡೆಯುತ್ತಿದ್ದಾರೆ’ ಎಂದರು.

ವಲಸೆ ಕಾರ್ಮಿಕರಿಗೆ ಸೌಲಭ್ಯ ಕನ್ನಡಿಯೊಳಗಿನ ಗಂಟು

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರೆಂದರೆ ಬಹುತೇಕ ವಲಸಿಗರೇ ಆಗಿದ್ದಾರೆ. ಅನಕ್ಷರಸ್ಥರು ಹಾಗೂ ಅನ್ಯಭಾಷಿಕರೇ ಹೆಚ್ಚಿರುವ ಈ ವಲಯದ ಅಸಂಘಟಿತರ ಪಾಲಿಗೆ ಸರ್ಕಾರದ ಸೌಲಭ್ಯ ಎಂಬುದು ಕನ್ನಡಿಯೊಳಗಿನ ಗಂಟಾಗಿಯೇ ಉಳಿದಿದೆ.

ಉತ್ತರ ಪ್ರದೇಶ, ಮಧ್ಯ ಪ್ರದೇಶ, ಜಾರ್ಖಂಡ್, ರಾಜಸ್ಥಾನ, ಬಿಹಾರ, ಒಡಿಶಾ, ತ್ರಿಪುರ, ಮೇಘಾಲಯ, ಸಿಕ್ಕಿಂ ರಾಜ್ಯಗಳ ಕಾರ್ಮಿಕರು ಬೆಂಗಳೂರು ಹಾಗೂ ಸುತ್ತಮುತ್ತಲ ಜಿಲ್ಲೆಗಳಿಗೆ ಕೆಲಸ ಅರಸಿ ಬಂದಿದ್ದಾರೆ. ಕಾರ್ಪೆಂಟರ್, ಎಲೆಕ್ಟ್ರಿಕ್, ಟೈಲ್ಸ್, ಬಾರ್ ಬೆಂಡಿಂಗ್, ಪ್ಲಂಬಿಂಗ್ ಕೆಲಸ ಮಾಡುವ ಬಹುತೇಕರು ಈ ವಲಸೆ ಕಾರ್ಮಿಕರೇ. ಇನ್ನು ನಿರ್ಮಾಣ ಕಾಮಗಾರಿಯಲ್ಲಿ ದುಡಿಯುವ ಕಾರ್ಮಿಕರಲ್ಲಿ ಉತ್ತರ ಕರ್ನಾಟಕದ ಹಲವು ಜಿಲ್ಲೆಗಳ ಜನರೂ ಇದ್ದಾರೆ.

ಹೊರ ರಾಜ್ಯಗಳಿಂದ ಬರುವ ವಲಸೆ ಕಾರ್ಮಿಕರು ಮಧ್ಯವರ್ತಿಗಳನ್ನು ಅವಲಂಬಿಸಿರುತ್ತಾರೆ. ಮಧ್ಯವರ್ತಿಗಳು ಬಿಲ್ಡರ್‌ಗಳಿಗೆ ನೇರವಾಗಿ ಕಾರ್ಮಿಕರನ್ನು ಪೂರೈಸುತ್ತಾರೆ. ಇವರು ಕಾರ್ಮಿಕ ಇಲಾಖೆಯ ಸಂಪರ್ಕಕ್ಕೇ ಬರುವುದಿಲ್ಲ. ಕಟ್ಟಡ ಕಾರ್ಮಿಕ ಕಲ್ಯಾಣ ಮಂಡಳಿ ಇದೆ ಎಂಬ ಮಾಹಿತಿಯೂ ಕಾರ್ಮಿಕರಲ್ಲಿ ಇಲ್ಲ

ಕನಿಷ್ಠ ಸೌಲಭ್ಯಗಳಿಲ್ಲದೆ ತುತ್ತಿನ ಚೀಲ ತುಂಬಿಸಿಕೊಳ್ಳಲು ದುಡಿಯುತ್ತಿದ್ದಾರೆ. ಬಹುತೇಕರು ಟೆಂಟ್‌ಗಳಲ್ಲಿ ವಾಸಿಸುತ್ತಿದ್ದರೆ, ಕೆಲವರು ಸಣ್ಣ–ಸಣ್ಣ ಮನೆಗಳನ್ನು ಬಾಡಿಗೆಗೆ ಪಡೆದು ಬದುಕು ಸಾಗಿಸುತ್ತಿದ್ದಾರೆ. ಈ ಕಾರ್ಮಿಕರನ್ನು ಬಿಲ್ಡರ್‌ಗಳು, ಗುಲಾಮರಂತೆ ದುಡಿಸಿಕೊಳ್ಳುತ್ತಿದ್ದಾರೆ.

ಇವರ ಕಲ್ಯಾಣಕ್ಕೆ ಕಾರ್ಮಿಕ ಮಂಡಳಿ ಇದೆ. ಕಟ್ಟಡಗಳ ಮಾಲೀಕರಿಂದ ಸೆಸ್ ರೂಪದಲ್ಲಿ ಸಂಗ್ರಹಿಸುವ ಕಾರ್ಮಿಕ ನಿಧಿಯಲ್ಲಿ ಸದ್ಯ ₹7 ಸಾವಿರ ಕೋಟಿಗೂ ಅಧಿಕ ಹಣ ಇದೆ. ಅದನ್ನು ಕಾರ್ಮಿಕರ ಕಲ್ಯಾಣಕ್ಕೆ ವಿನಿಯೋಗಿಸುವ ಬದಲು ಸರ್ಕಾರವೇ ಅದರ ಮೇಲೆ ಕಳ್ಳಗಣ್ಣಿಟ್ಟು ಅನ್ಯ ಉದ್ದೇಶಕ್ಕೆ ಬಳಕೆ ಮಾಡವ ಪ್ರಯತ್ನವನ್ನು ಆಗಾಗ ಮಾಡುತ್ತಲೇ ಇದೆ.

‘ಲಾಕ್‌ಡೌನ್ ಸಂದರ್ಭದಲ್ಲಿ ನಗರಗಳನ್ನು ತೊರೆದು ತಮ್ಮ ಊರುಗಳತ್ತ ಹೆಜ್ಜೆ ಇಟ್ಟವರಲ್ಲಿ ಬಹುತೇಕರು ಈಗ ವಾಪಸ್ ಬಂದಿದ್ದಾರೆ. ಸಾಕಷ್ಟು ಮಂದಿ ಕಲ್ಯಾಣ ಮಂಡಳಿಯಲ್ಲಿ ಹೆಸರು ನೋಂದಾಯಿಸಿಕೊಂಡಿಲ್ಲ. ನೋಂದಣಿ ಮಾಡಿಸಲು ಕಾರ್ಮಿಕ ಕಲ್ಯಾಣ ಮಂಡಳಿಯಿಂದಲೇ ವಿಶೇಷ ಯೋಜನೆ ರೂಪಿಸಬೇಕು’ ಎಂದು ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಷನ್ ಪ್ರಧಾನ ಕಾರ್ಯದರ್ಶಿ ಕೆ. ಮಹಾಂತೇಶ್ ಹೇಳುತ್ತಾರೆ.

ಲಾಕ್‌ಡೌನ್ ಸಂದರ್ಭದಲ್ಲಿ ಕಾರ್ಮಿಕರಿಗೆ ಆಹಾರ ಸಾಮಗ್ರಿ ಕಿಟ್, ಆಹಾರದ ಪೊಟ್ಟಣ ವಿತರಣೆ, ತಲಾ ₹5 ಸಾವಿರದಂತೆ ವಿತರಣೆ ಮಾಡಿದ ಸಹಾಯಧನ, ಕಾರ್ಮಿಕರನ್ನು ತಮ್ಮ ಊರುಗಳಿಗೆ ಕಳುಹಿಸಲು ಮಾಡಿದ ವೆಚ್ಚ ಸೇರಿ ₹914 ಕೋಟಿ ಖರ್ಚಾಗಿದೆ ಎಂಬುದು ಕಾರ್ಮಿಕ ಕಲ್ಯಾಣ ಮಂಡಳಿಯ ಅಂಕಿ–ಅಂಶ ಹೇಳುತ್ತಿವೆ.

‘ಆದರೆ, ₹5 ಸಾವಿರ ಎಲ್ಲಾ ಕಾರ್ಮಿಕರಿಗೂ ತಲುಪಿಲ್ಲ. ಕೆಲವರಿಗೆ ಎರಡೆರಡು ಬಾರಿ ಸಹಾಯಧನ ದೊರೆತಿದ್ದರೆ, ಇನ್ನೂ ಹಲವರಿಗೆ ಇದು ಸಿಕ್ಕೇ ಇಲ್ಲ. ₹914 ಕೋಟಿ ಖರ್ಚಿನ ಬಗ್ಗೆ ಲೆಕ್ಕಪರಿಶೋಧನೆ ಮಾಡಿಸಬೇಕು ಎಂಬ ಒತ್ತಾಯವನ್ನೂ ಮಾಡುತ್ತಿದ್ದೇವೆ’ ಎಂದು ಮಹಾಂತೇಶ್ ಹೇಳಿದರು.

ವಲಸೆ ಕಾರ್ಮಿಕರು 90 ದಿನಗಳಿಗಿಂತ ಹೆಚ್ಚು ದಿನ ಯಾವುದೇ ಬಿಲ್ಡರ್ ಬಳಿ ಕೆಲಸ ಮಾಡುತ್ತಿದ್ದರೆ, ಅವರನ್ನು ನೋಂದಣಿ ಮಾಡಿಸುವುದು ಬಿಲ್ಡರ್‌ಗಳ ಜವಾಬ್ದಾರಿ. ಆದರೂ, ಎಲ್ಲಾ ಕಾರ್ಮಿಕರನ್ನು ನೋಂದಣಿ ಮಾಡಿಸಲು ಎನ್‌ಜಿಒಗಳ ಸಹಕಾರ ಪಡೆದು ವಿಶೇಷ ಕಾರ್ಯಾಚರಣೆ ಮಾಡಿಸಲು ಉದ್ದೇಶಿಸಲಾಗಿದೆ ಎಂದು ಕಾರ್ಮಿಕ ಕಲ್ಯಾಣ ಮಂಡಳಿ ಅಧಿಕಾರಿಗಳು ಹೇಳುತ್ತಾರೆ.



ಕೊಡಗಿನಲ್ಲಿ ಕೂಲಿ ಕೆಲಸಕ್ಕೆ ತೆರಳಿದ ಕಾರ್ಮಿಕರು (ಸಂಗ್ರಹ ಚಿತ್ರ)

28 ಲಕ್ಷ ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿ ನೋಂದಣಿ ಮಾಡಿಕೊಂಡಿರುವ ಕಾರ್ಮಿಕರ ಸಂಖ್ಯೆ

16.58 ಲಕ್ಷ ಕೋವಿಡ್ ಸಂದರ್ಭದಲ್ಲಿ ತಲಾ ₹5 ಸಾವಿರ ಸಹಾಯ ಧನ ಪಡೆದ ಕಾರ್ಮಿಕರು

₹914 ಕೋಟಿ ಲಾಕ್‌ಡೌನ್ ವೇಳೆ ಕಾರ್ಮಿಕರಿಗೆ ಖರ್ಚು ಮಾಡಿದ ಹಣ

₹7,000 ಕೋಟಿ ಕಾರ್ಮಿಕ ಕಲ್ಯಾಣ ನಿಧಿಯಲ್ಲಿ ಸದ್ಯ ಇರುವ ಹಣ

ಕಾಫಿ ನಾಡಿನಲ್ಲಿ ಹೊರ ರಾಜ್ಯದ ಕಾರ್ಮಿಕರ ಪಡಿಪಾಟಲು

• ಆದಿತ್ಯ ಕೆ.ಎ./ಹರ್ಷವರ್ಧನ ಪಿ.ಆರ್.

ಮಡಿಕೇರಿ/ಮಂಗಳೂರು: ಕೊಡಗು ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಲಾಕ್‌ಡೌನ್ ಬಳಿಕ ಕೃಷಿ ಕಾರ್ಮಿಕರ ಕೊರತೆ ತೀವ್ರವಾಗಿದೆ. ಸ್ಥಳೀಯವಾಗಿ ಕಾರ್ಮಿಕರ ಕೊರತೆಯಿದ್ದು, ಉತ್ತರ ಭಾರತದ ರಾಜ್ಯಗಳಿಂದ ಕಾರ್ಮಿಕರು ವಲಸೆ ಬರುತ್ತಾರೆ.

ಕಾಫಿ ಹಾಗೂ ಕಾಳು ಮೆಣಸಿನ ಧಾರಣೆ ಏರಿಕೆ ಕಂಡ ಬಳಿಕ, ಹೊರ ರಾಜ್ಯಗಳಿಂದ ಬರುವ ಕಾರ್ಮಿಕರ ಸಂಖ್ಯೆ ಹೆಚ್ಚಾಗಿದೆ. ಆದರೆ, ಲಾಕ್‌ಡೌನ್ ಅವಧಿಯಲ್ಲಿ ತಮ್ಮೂರಿಗೆ ತೆರಳಿದ್ದ ಈಶಾನ್ಯ ಭಾರತದ ಕಾರ್ಮಿಕರು ಇನ್ನೂ ವಾಪಸ್ಸಾಗಿಲ್ಲ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ತೋಟ ಕಾರ್ಮಿಕರು 14,489 ಮಂದಿ (ಕಾರ್ಮಿಕ ಇಲಾಖೆ ಪ್ರಕಾರ) ಇದ್ದಾರೆ. ಕೃಷಿ, ತೋಟ ಚಟುವಟಿಕೆಗಳಿಗೆ ಇನ್ನು 15 ಸಾವಿರಕ್ಕೂ ಹೆಚ್ಚು ಕಾರ್ಮಿಕರ ಬೇಡಿಕೆ ಇದೆ.

‘ಕಂಪನಿ ಎಸ್ಟೇಟ್‌ಗಳಲ್ಲಿ (ಟಾಟಾ, ಎಂಆರ್‌ಎಫ್...) ಕಾರ್ಮಿಕರ ಸಮಸ್ಯೆ ಇಲ್ಲ. ಆದರೆ, ಕಂಪನಿಗಳಂತೆ ಸವಲತ್ತುಗಳನ್ನು ಇತರರು ಕೊಡುವುದಿಲ್ಲ. ನಿರಂತರ ಕೆಲಸ ಹಾಗೂ ಕೂಲಿಯೂ ಕಡಿಮೆ ಇರುತ್ತದೆ. ವಲಸೆ ಕಾರ್ಮಿಕರು ವಾಪಸ್ ಬಾರದಿರಲು ಇದೂ ಒಂದು ಕಾರಣ’ ಎಂದು ಯುನೈಟೆಡ್ ಪ್ಲಾಂಟೇಷನ್ ವರ್ಕರ್ಸ್ ಯೂನಿಯನ್ ಪ್ರಧಾನ ಕಾರ್ಯದರ್ಶಿ ಕೆ.ಗುಣಶೇಖರ್ ಹೇಳುತ್ತಾರೆ.

‘ವೇತನ ಕೊಟ್ಟರೂ ಕೆಲಸಕ್ಕೆ ಕೂಲಿಕಾರರು ಸಿಗುತ್ತಿಲ್ಲ. ಸ್ಥಳೀಯ ಕೂಲಿಕಾರರನ್ನು ಅವಲಂಬಿಸಬೇಕಾದ ಸ್ಥಿತಿ ಇದೆ’ ಎಂದು ಕರ್ನಾಟಕ ಬೆಳೆಗಾರರ ಒಕ್ಕೂಟದ (ಕೆಜಿಎಫ್) ಅಧ್ಯಕ್ಷ ಡಾ.ಎಚ್.ಟಿ. ಮೋಹನಕುಮಾರ್ ಹೇಳುತ್ತಾರೆ.

ಲೈನ್ ಮನೆ ವಾಸವೇ ಗತಿ: ‘ಪ್ರತಿವರ್ಷ ಕಾಫಿ, ಕಾಳು ಮೆಣಸು ಕೊಯ್ಲು ಸಂದರ್ಭದಲ್ಲಿ ಹೊರ ರಾಜ್ಯಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಮಿಕರು ಕೊಡಗು ಜಿಲ್ಲೆಗೆ ವಲಸೆ ಬರುತ್ತಾರೆ. ಕಾರ್ಮಿಕರನ್ನು ಕರೆತರಲು ಮ್ಯಾನೇಜರ್‌ಗಳಿದ್ದಾರೆ. ಬಂದ ಕಾರ್ಮಿಕರು, ದೊಡ್ಡ ದೊಡ್ಡ ಕಾಫಿ ಎಸ್ಟೇಟ್‌ನ ಲೈನ್‌ಮನೆಗಳಲ್ಲಿ ನೆಲೆಸುತ್ತಾರೆ. ಕೆಲವು ಎಸ್ಟೇಟ್‌ಗಳಲ್ಲಿ ಉತ್ತಮ ಕೂಲಿ ನೀಡಿದರೆ, ಮತ್ತೆ ಕೆಲವು ತೋಟಗಳಲ್ಲಿ ಸರಿಯಾದ ಕೂಲಿ ಹಣವನ್ನೇ ನೀಡುತ್ತಿಲ್ಲ. ಅವರು ಬದುಕು ಸಾಗಿಸಲು ಹಗಲಿರುಳೂ ಶ್ರಮಿಸುತ್ತಾರೆ’ ಎನ್ನುತ್ತಾರೆ ಕಾರ್ಮಿಕ ಮುಖಂಡ ಭರತ್.

‘ಸಾಕಷ್ಟು ಲೈನ್‌ಮನೆಗಳಲ್ಲಿ ವಿದ್ಯುತ್ ವ್ಯವಸ್ಥೆಯೇ ಇಲ್ಲ. ಸೀಮೆಎಣ್ಣೆ ದೀಪದಲ್ಲಿಯೇ ರಾತ್ರಿ ಕಳೆಯುವ ಸ್ಥಿತಿಯಿದೆ. ಮಳೆಗಾಲದಲ್ಲಿ ಈ ಮನೆಗಳು ಸೋರುತ್ತವೆ. ಈ ಸಂಕಷ್ಟದ ಸಂಕೋಲೆಯಲ್ಲಿ, ಹೊರ ರಾಜ್ಯದ ಕಾರ್ಮಿಕರು ದಿನದೂಡುವ ಸ್ಥಿತಿಯಿದೆ. ಮಾಲೀಕರನ್ನು ಪ್ರಶ್ನೆ ಮಾಡಲು ಸಾಧ್ಯವಾಗುವುದಿಲ್ಲ’ ಎಂದೂ ಅವರು ಹೇಳುತ್ತಾರೆ.

‘ಕೆಲವು ಎಸ್ಟೇಟ್‌ಗಳಲ್ಲಿ ಕಾರ್ಮಿಕರ ದಾಖಲೆ ವಶಕ್ಕೆ ಪಡೆದು, ಮುಂಗಡವಾಗಿ ಒಂದಷ್ಟು ಸಾಲ ನೀಡುತ್ತಾರೆ. ಆ ಸಾಲ ತೀರಿಸಲು ಪ್ರತಿನಿತ್ಯ ಅದೇ ಎಸ್ಟೇಟ್‌ಗೆ ಕೂಲಿಗೆ ತೆರಳಬೇಕು. ಸಾಲ ತೀರಿಸದ ಹೊರತು ದಾಖಲೆ ಪತ್ರಗಳನ್ನು ವಾಪಸ್ ನೀಡುವುದಿಲ್ಲ. ಊರಿಗೆ ಮರಳಲೂ ಸಾಧ್ಯವಾಗುವುದಿಲ್ಲ. ಜೀವನಾಂಶಕ್ಕೆ ಒಂದಷ್ಟು ಹಣ ಗಳಿಸಬಹುದೆಂಬ ಆಸೆಯಿಂದ ಊರು ಬಿಟ್ಟುಬಂದು ಸಂಕಷ್ಟಕ್ಕೆ ಸಿಲುಕಿಕೊಳ್ಳುತ್ತಿದ್ದೇವೆ’ ಎಂದು ನೊಂದ ಕಾರ್ಮಿಕರೊಬ್ಬರು ಅಳಲು ತೋಡಿಕೊಂಡರು.

‘ಕೆಲವು ವರ್ಷಗಳ ಹಿಂದೆ ಜಿಲ್ಲೆಯಲ್ಲಿ ಕಾರ್ಮಿಕರ ಸಮಸ್ಯೆ ತೀವ್ರವಾಗಿತ್ತು. ಅಸ್ಸಾಂ ಮೂಲದ ವಲಸಿಗ ಕಾರ್ಮಿಕರು, ಕೂಲಿ ಕೆಲಸಕ್ಕಾಗಿ ಇತ್ತ ಬರತೊಡಗಿದಂತೆ ಬೆಳೆಗಾರರ ಸಮಸ್ಯೆಗೆ ಒಂದಷ್ಟು ಪರಿಹಾರ ದೊರಕಿತ್ತು. ಕಾಫಿ ಕೊಯ್ಲು, ಮರ ಕಸಿ, ಗೊಬ್ಬರ ಹಾಕುವುದು, ಕಾಫಿ ಗಿಡಗಳ ಕಸಿ... ಹೀಗೆ ಸಾಕಷ್ಟು ಕೆಲಸಕ್ಕೆ ಕಾರ್ಮಿಕರು ಲಭಿಸಿದ್ದು, ನೆರೆಯ ಜಿಲ್ಲೆಗಳಿಂದ ಕಾರ್ಮಿಕರನ್ನು ಕರೆತರುವ ಜವಾಬ್ದಾರಿಯೂ ತಪ್ಪಿತ್ತು. ಕೊರೊನಾ ಸಂಕಷ್ಟದಿಂದ ಅಸ್ಸಾಂ ವಲಸಿಗ ಕಾರ್ಮಿಕರು ಕಳೆದ ಏಪ್ರಿಲ್– ಮೇನಲ್ಲಿ ಊರಿಗೆ ತೆರಳಿದ್ದು, ವಾಪಸ್ ಬಂದಿಲ್ಲ. ಈಗ ತೋಟದಲ್ಲಿ ಕೆಲಸಕ್ಕೆ ತೊಂದರೆಯಾಗಿದೆ’ ಎಂದು ಕುಂಜಿಲದ ಬೆಳೆಗಾರ ಪಿ.ವಿ.ಮಂಜುನಾಥ್ ಹೇಳುತ್ತಾರೆ.

ಬದುಕಲು ವಲಸೆ ಅನಿವಾರ್ಯ

ನಮ್ಮಲ್ಲಿ ಕೂಲಿ ಸಿಗದಿರುವುದರಿಂದ ಮಕ್ಕಳೊಂದಿಗೆ ಕಾಫಿಸೀಮೆ ಅಥವಾ ಬೆಂಗಳೂರಿಗೆ ವಲಸೆ ಹೋಗುತ್ತೇವೆ. ಯುಗಾದಿ, ದೀಪಾವಳಿ ಹಬ್ಬದ ಸಮಯದಲ್ಲಿ ಮಾತ್ರ ಊರಿಗೆ ಬಂದು ಹೋಗುತ್ತೇವೆ. ವಲಸೆ ಹೋದಲ್ಲಿ ತಾತ್ಕಾಲಿಕವಾಗಿ ಪ್ಲಾಸ್ಟಿಕ್ ಅಥವಾ ತಗಡುಗಳನ್ನು ಬಳಸಿ ನಿರ್ಮಿಸಿಕೊಂಡ ಹಂದಿಗೂಡಿನಂತಹ ಗುಡಿಸಲಿನಲ್ಲೇ ನಾಲ್ಕೈದು ಮಂದಿ ವಾಸಿಸುತ್ತೇವೆ. ರಾತ್ರಿ ವೇಳೆ ಬೆಳಕೂ ಇರುವುದಿಲ್ಲ. ಹಾವು–ಚೇಳುಗಳ ನಡುವೆಯೇ ವಾಸಿಸುವುದು ಅನಿವಾರ್ಯ. ಕೆಲವೊಮ್ಮೆ ಮಳೆ ಬಂದಾಗ ಗುಡಿಸಲು ಹಾರಿಹೋಗಿ, ಬಯಲಲ್ಲೇ ಇರಬೇಕಾಗುತ್ತದೆ. ಮಕ್ಕಳು ಶಾಲೆಗೆ ಹೋಗುವುದಿಲ್ಲ. ನಾವು ಕೆಲಸಕ್ಕೆ ಹೋಗಿ ಬರುವವರೆಗೂ ಮಕ್ಕಳು ಗುಡಿಸಲಿನಲ್ಲೇ ಇರುತ್ತಾರೆ.

ನೆಲದಲ್ಲಿ ಕೇಬಲ್ ಕೆಲಸಕ್ಕಾಗಿ ಭೂಮಿ ಅಗೆಯುವಾಗ ಕರೆಂಟ್ ತಗುಲಿ ನಮ್ಮವರು ಸತ್ತುಹೋಗಿದ್ದಾರೆ. ಎರಡು ವರ್ಷಗಳ ಹಿಂದೆ ಶಿವಮೊಗ್ಗದಲ್ಲಿ ಒಳಚರಂಡಿ ಒಳಗೆ ಕೆಲಸ ಮಾಡುತ್ತಿದ್ದಾಗ ಉಸಿರುಗಟ್ಟಿ ನಮ್ಮೂರಿನ ಇಬ್ಬರು ಸತ್ತುಹೋಗಿದ್ದರು. ಯಾವಾಗ ಏನು ಆಗುತ್ತದೆಯೋ ಹೇಳಲು ಸಾಧ್ಯವಿಲ್ಲ. ಹತ್ತಾರು ವರ್ಷಗಳಿಂದ ಇದೇ ಸ್ಥಿತಿಯಲ್ಲೇ ಜೀವನ ನಡೆಸುತ್ತಿದ್ದೇವೆ. ನಾವು ಬದುಕಬೇಕೆಂದರೆ ನೂರಾರು ಮೈಲಿ ದೂರ ಕೆಲಸ ಹುಡುಕಿಕೊಂಡು ವಲಸೆ ಹೋಗುವುದು ಅನಿವಾರ್ಯ. ಇದು ನಮ್ಮ ಹಣೆಬರಹ. ಏನೂ ಮಾಡಲು ಸಾಧ್ಯವಿಲ್ಲ.



ಹಿರಿಯಮ್ಮ, ವಲಸೆ ಮಹಿಳಾ ಕಾರ್ಮಿಕರು, ಬೆಂಚಿಕಟ್ಟೆ ಗ್ರಾಮ, ಜಗಳೂರು ತಾಲ್ಲೂಕು, ದಾವಣಗೆರೆ ಜಿಲ್ಲೆ

ಅವತ್ತಿನ ದುಡಿಮೆ ಅವತ್ತಿಗೆ ಆಗುತ್ತಿದೆ

ನಾವು ಆಂಧ್ರಪ್ರದೇಶದವರು. ಮಾಗಡಿ ಸುತ್ತಲಿನ ಇಟ್ಟಿಗೆ ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಾ ಬದುಕು ಕಟ್ಟಿಕೊಳ್ಳುತ್ತಿದ್ದೇವೆ. ಗಂಡ–ಹೆಂಡತಿ ಇಬ್ಬರೂ ಇಟ್ಟಿಗೆ ತಯಾರಿಸುತ್ತೇವೆ. ತಿಂಗಳಿಗೆ ಇಂತಿಷ್ಟು ದಿನಗಳ ಲೆಕ್ಕದಲ್ಲಿ ಮಾತ್ರ ಕೆಲಸ ಸಿಗುತ್ತಿದೆ. ಎಷ್ಟು ಇಟ್ಟಿಗೆ ಮಾಡುತ್ತೇವೋ ಅದರ ಲೆಕ್ಕದಲ್ಲಿ ಕೂಲಿ ಕೊಡುತ್ತಾರೆ. ಅವತ್ತಿನ ದುಡಿಮೆ ಅವತ್ತಿಗೆ ಆಗುತ್ತಿದೆ. ಸದ್ಯ ಕಾರ್ಖಾನೆಯ ಮಾಲೀಕರು ನೀಡಿರುವ ಶೆಡ್‌ನಲ್ಲೇ ವಾಸ. ಈ ಕಷ್ಟದಲ್ಲೇ ಮಗಳನ್ನು ಪಿಯುಸಿ ಓದಿಸುತ್ತಿದ್ದೇವೆ. ಸ್ಥಳೀಯರೊಬ್ಬರ ಸಹಕಾರದಿಂದ ವಾರದ ಹಿಂದಷ್ಟೇ ರೇಷನ್ ಕಾರ್ಡ್ ಸಿಕ್ಕಿದೆ. ಉಳಿದಂತೆ ಯಾವ ಸರ್ಕಾರಿ ಸವಲತ್ತುಗಳ ಬಗ್ಗೆಯೂ ನಮಗೆ ಗೊತ್ತಿಲ್ಲ.



ಮಾಬು, ಇಟ್ಟಿಗೆ ಕಾರ್ಖಾನೆ ಕಾರ್ಮಿಕ, ಮಾಗಡಿ

ಮಕ್ಕಳ ಹಕ್ಕುಗಳ ಉಲ್ಲಂಘನೆ

ವಲಸೆಯು ಮಕ್ಕಳ ಹಕ್ಕುಗಳ ಉಲ್ಲಂಘನೆಗೂ ಕಾರಣವಾಗುತ್ತಿದೆ. ತಾಯಿಯೊಂದಿಗೆ ಮಕ್ಕಳು ದುಡಿದರೂ ಆ ಹಣ ತಂದೆಯ ಕುಡಿತಕ್ಕೆ ವೆಚ್ಚವಾಗುವುದೇ ಹೆಚ್ಚು. 13–14 ವರ್ಷ ತುಂಬುತ್ತಿದ್ದಂತೆಯೇ ಬಾಲಕಿಯರಿಗೆ ಮದುವೆ ಮಾಡಿಕೊಡುವುದೂ ನಡೆಯುತ್ತಿದೆ. ಕಲಬುರ್ಗಿ, ಬೀದರ್, ಯಾದಗಿರಿ, ರಾಯಚೂರುಗಳನ್ನು ಬಾಲ್ಯವಿವಾಹ ಮುಕ್ತ ಜಿಲ್ಲೆಗಳನ್ನಾಗಿಸಲು ಜಾಗೃತಿ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ.



ಡಾ.ಜಯಶ್ರೀ, ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯೆ

ಕೈ ಕಳೆದುಕೊಂಡು ಬಂದೆ

ನನಗೆ ಆಗ 10 ವರ್ಷ. ಬಡತನದಿಂದಾಗಿ ನನ್ನ ತಂದೆ ತಾಯಿ ಜತೆಗೆ ಮುಂಬೈಗೆ ಹೋದಾಗ ನಾನು ಅಂಗಡಿಯೊಂದರಲ್ಲಿ ತಿಂಗಳಿಗೆ ₹300ಕ್ಕೆ ದುಡಿಯುತ್ತಿದ್ದೆ. ಒಂದು ದಿನ ಅಕಸ್ಮಿಕವಾಗಿ ಅಂಗಡಿಯಲ್ಲಿ ಬಿದ್ದುಬಿಟ್ಟೆ. ಕೈ ಮುರಿಯಿತು. ಚಿಕಿತ್ಸೆಗೆ ಹಣ ಇಲ್ಲದಿದ್ದಾಗ, ತಂದೆ– ತಾಯಿ ಚಿಕ್ಕಪುಟ್ಟ ಚಿಕಿತ್ಸೆ ಕೊಡಿಸಿದರು. ಕೈಯ ಬಾವು ಕಡಿಮೆಯಾಗಲಿಲ್ಲ. ನನ್ನ ಕೈಗೆ ಬಟ್ಟೆ ಸುತ್ತಿದ್ದರು. ಕೆಲವೇ ದಿನಗಳಲ್ಲಿ ಸೆಪ್ಟಿಕ್ ಆಗಿ ಕೈ ಕತ್ತರಿಸಲಾಯಿತು. ಮನೆಗೆ ಹಿರಿಯ ಮಗ ನಾನೇ. ರಟ್ಟೆ ನಂಬಿ ಹೊಟ್ಟೆ ತುಂಬಿಸಿಕೊಳ್ಳಲು ಹೋಗಿ ಕೈಕಳೆದುಕೊಂಡಿದ್ದೇನೆ. ದುಡಿದ ಹಣ ನನ್ನ ಚಿಕಿತ್ಸೆಗೆ ಖರ್ಚು ಮಾಡಿ ಖಾಲಿ ಕೈಲಿ ಊರಿಗೆ ಬಂದಿದ್ದೇವೆ. ನಂತರ ಹಾಸ್ಟೆಲ್‌ನಲ್ಲಿ ಉಳಿದು ಶಿಕ್ಷಣ ಪಡೆದಿದ್ದೇನೆ. ಸಮಾಜ ಕಾರ್ಯ ಸ್ನಾತಕೋತ್ತರ ಪದವಿ ಮುಗಿಸಿದ್ದೇನೆ.



ರಮೇಶ ಜಾಧವ, ಚಿಕ್ಕಲಿಂಗದಳ್ಳಿ ತಾ. ಚಿಂಚೋಳಿ

‘ಎಲ್ಲೂ ಸಲ್ಲದ’ ಶೋಚನೀಯ ಸ್ಥಿತಿ

• ಎಂ. ಮಹೇಶ/ ವೆಂಕಟೇಶ ಜಿ.ಎಚ್

ಬೆಳಗಾವಿ/ಬಾಗಲಕೋಟೆ: ಸಾಮಾಜಿಕ ಭದ್ರತೆ ಇಲ್ಲ. ನಮ್ಮವರು ತಮ್ಮವರೆನ್ನುವವರು ಇಲ್ಲದೆ ತೊಳಲಾಟ. ಹಲವು ಸಮಸ್ಯೆಗಳಿಂದ ಬಳಲುತ್ತಿರುವ ವಲಸೆ ಕಾರ್ಮಿಕರು ‘ಎಲ್ಲೂ ಸಲ್ಲದ’ ಅತಂತ್ರ ಸ್ಥಿತಿಯಲ್ಲಿದ್ದಾರೆ.

‘ಸ್ಥಳೀಯರಲ್ಲದವರು’ ಎನ್ನುವ ಮೂದಲಿಕೆಯ ಅವಮಾನ ಅನುಭವಿಸಬೇಕು. ಸ್ಥಳೀಯರು ಅವರನ್ನು ತಮ್ಮವರೆಂದು ಕಾಣುವುದೇ ಇಲ್ಲ. ಕಾರ್ಮಿಕ ಸಂಘಟನೆಗಳಿಂದಲೂ ಅವರಿಗೆ ಹೆಚ್ಚಿನ ಅನುಕೂಲಗಳು ಸಿಗುವುದು ಅಪರೂಪ. ಅವರಿಗೆ ಅಸ್ತಿತ್ವವಾಗಲಿ, ಪ್ರಾತಿನಿಧ್ಯವಾಗಲಿ ಇಲ್ಲ ಅದರಲ್ಲೂ ಹೊರ ರಾಜ್ಯಗಳ ಈ ಶ್ರಮಿಕರನ್ನು ಸ್ಥಳೀಯರು ‘ಸಂಶಯದ’ ಕಣ್ಣಿನಿಂದ ನೋಡುವುದು ತಪ್ಪಿಲ್ಲ.

‘ಕಾರ್ಮಿಕ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸೇರಿದಂತೆ ವಿವಿಧ 11 ಇಲಾಖೆಗಳು ವಲಸೆ ಕಾರ್ಮಿಕರ ಶ್ರೇಯೋಭಿವೃದ್ಧಿಗೆ ಶ್ರಮಿಸಬೇಕು ಎನ್ನುವುದು ನಿಯಮ. ಆದರೆ, ಅದು ಕಾಗದದಲ್ಲೇ ಉಳಿದಿದೆ. ವಲಸೆ ಕಾರ್ಮಿಕರ ಸುರಕ್ಷತೆಗೆ ಕ್ರಮವಿಲ್ಲ. ಕೆಲಸದ ಸ್ಥಳದಲ್ಲೇ ಮಿತ ಸವಲತ್ತಿನ ನಡುವೆಯೇ ನಿಕೃಷ್ಟ ಬದುಕು ಅವರದ್ದು. ಕಟ್ಟಡ ನಿರ್ಮಾಣ ಕ್ಷೇತ್ರದವರು ಸೇರಿದಂತೆ ಆ ಕಾರ್ಮಿಕರಿಗೆ ಕೆಲವು ಯೋಜನೆಗಳು ಇವೆಯಾದರೂ ಅವು ತಲುಪುವುದೇ ಇಲ್ಲ. ಆ ಅರಿವು ಕೂಡ ಆ ಶ್ರಮಿಕರಿಗೆ ಇರುವುದಿಲ್ಲ. ಆರೋಗ್ಯ ವಿಮೆಯ ಸೌಲಭ್ಯ ಎಲ್ಲರಿಗೂ ಸಿಗುವುದಿಲ್ಲ’ ಎಂದು ಹಿರಿಯ ಅಧಿಕಾರಿಯೊಬ್ಬರು ವಿಷಾದದಿಂದ ಪ್ರತಿಕ್ರಿಯಿಸಿದರು.

‘ವಲಸೆ ಕಾರ್ಮಿಕರಿಗೆ ಕೆಲಸದ ಭದ್ರತೆ–ಸುರಕ್ಷತೆ ಒದಗಿಸುವಲ್ಲಿ ಸರ್ಕಾರದ ಪ್ರಯತ್ನ ಶೂನ್ಯ. ಕನಿಷ್ಠ ವೇತನವೂ ಸಿಗುವುದಿಲ್ಲ. ಇವುಗಳ ಪರಿಹಾರಕ್ಕೆ ಸ್ಪಂದಿಸಬೇಕಿದ್ದ ಕೇಂದ್ರ ಸರ್ಕಾರ ಈ ಬಾರಿಯ ಬಜೆಟ್‌ನಲ್ಲಿ ಅನುದಾನವನ್ನೇ ಇಟ್ಟಿಲ್ಲ. ಕಾರ್ಮಿಕ ಸಂಘಟನೆಗಳ ಹೋರಾಟಕ್ಕೂ ಸರ್ಕಾರ ಮನ್ನಣೆ ನೀಡಿಲ್ಲ. ಇದರಿಂದ ವಲಸೆ ಕಾರ್ಮಿಕರ ಸಂಕಷ್ಟಗಳು ಜಾಸ್ತಿಯಾಗುವ ಸಾಧ್ಯತೆಯೇ ಹೆಚ್ಚಿದೆ’ ಎನ್ನುತ್ತಾರೆ ಬೆಳಗಾವಿಯ ವಕೀಲ ಎನ್.ಆರ್. ಲಾತೂರ.

‘ಸಮಗ್ರ ಶಿಶು ಅಭಿವೃದ್ಧಿ ಯೋಜನೆಗೆ (ಐಸಿಡಿಎಸ್) ಈ ಬಾರಿಯ ಬಜೆಟ್‌ನಲ್ಲಿ ಅನುದಾನ ಕಡಿತಗೊಳಿಸಲಾಗಿದೆ. ಪರಿಣಾಮ, ಪೌಷ್ಟಿಕ ಆಹಾರವಿಲ್ಲದೆ ನರಳುವ ಮಕ್ಕಳ ಸಂಖ್ಯೆ ಹೆಚ್ಚಾಗಲಿದೆ’ ಎಂಬುದು ಬೆಳಗಾವಿಯ ಕಾರ್ಮಿಕ ಮುಖಂಡ ಜಿ.ಎಂ. ಜೈನೆಖಾನ್ ಅವರ ಆತಂಕ.



ಉತ್ತರ ಭಾರತದಿಂದ ಬೆಳಗಾವಿಗೆ ವಲಸೆ ಬಂದಿರುವ ಕಾರ್ಮಿಕರು ವಾಸಿಸುವ ತಾತ್ಕಾಲಿಕ ಟೆಂಟ್‌ನಲ್ಲೇ ಜೀವನೋಪಾಯಕ್ಕಾಗಿ ಬ್ಯಾಟ್ ತಯಾರಿಸುತ್ತಿರುವುದು ಪ್ರಜಾವಾಣಿ ಚಿತ್ರ: ಏಕನಾಥ ಅಗಸಿಮನಿ

ಕೆಲವರು ರೋಗ ವಾಹಕರು...

‘ದುಡಿಯಲು ಹೋಗುವ ಸ್ಥಳದಲ್ಲಿ ಸೊಳ್ಳೆ ಜನ್ಯ ಸಾಂಕ್ರಾಮಿಕಗಳಾದ ಆನೆಕಾಲು ರೋಗ (ಕಾಲು ಬಾವು), ವೃಷಣ ಬಾವು, ಮಲೇರಿಯಾ ರೋಗ ಪೀಡಿತರಾಗಿ ವಾಪಸ್ ಊರಿಗೆ ಮರಳುವವರು ಸೋಂಕು ವಾಹಕರಾಗಿಯೂ ಬದಲಾಗುತ್ತಾರೆ. ಇದು ಸರ್ವೇ ಸಾಮಾನ್ಯ ಎಂಬಂತಾಗಿದೆ’ ಎನ್ನುತ್ತಾರೆ ಬಾಗಲಕೋಟೆ ಜಿಲ್ಲಾ ಮಲೇರಿಯಾ ನಿಯಂತ್ರಣ ಅಧಿಕಾರಿ ಡಾ.ಜಯಶ್ರೀ ಎಮ್ಮಿ.



ಡಾ.ಜಯಶ್ರೀ

‘ದುಡಿಯಲು ಹೋದವರು ಜ್ವರ ಪೀಡಿತರಾಗುತ್ತಿದ್ದಂತೆಯೇ ಇರುವ ಜಾಗದಲ್ಲಿ ಚಿಕಿತ್ಸೆ ಪಡೆಯದೇ ಶುಶ್ರೂಷೆಗೆಂದು ಊರಿಗೆ ಮರಳುತ್ತಾರೆ. ಹೀಗೆ ಬಂದವರಿಗೆ ಕಚ್ಚಿದ ಸೊಳ್ಳೆ ಬೇರೆಯವರಿಗೂ ಕಚ್ಚುವುದರಿಂದ ಸ್ಥಳೀಯವಾಗಿ ಕಾಯಿಲೆ ಸಾಂಕ್ರಾಮಿಕವಾಗಿ ಬದಲಾಗುತ್ತದೆ. ದುಡಿಯಲು ಹೋಗುವವರಲ್ಲಿ ಹೆಣ್ಣು ಮಕ್ಕಳು ವೈಯಕ್ತಿಕ ಆರೋಗ್ಯದ ಕಡೆಗೆ ಗಮನ ಹರಿಸುವುದಿಲ್ಲ. ಹೀಗಾಗಿ ಬಹುತೇಕರು ರಕ್ತಹೀನತೆಯಿಂದ (ಅನಿಮಿಯಾ) ಬಳಲುತ್ತಾರೆ’ ಎಂದೂ ಅವರು ಹೇಳುತ್ತಾರೆ.

‘ಊರಲ್ಲಿ ಹೆಂಡತಿ–ಮಕ್ಕಳನ್ನು ಬಿಟ್ಟು ವರ್ಷಗಟ್ಟಲೇ ದುಡಿಯಲು ಗೋವಾ–ಮಂಗಳೂರು, ಬೆಂಗಳೂರು, ಮಹಾರಾಷ್ಟ್ರಕ್ಕೆ ಗುಳೆ ಹೋಗುವ ಗಂಡಸರ ಪೈಕಿ ಕೆಲವರು ತಮ್ಮ ಲೈಂಗಿಕ ಹಸಿವು ನೀಗಿಸಿಕೊಳ್ಳಲು ಅಲ್ಲಿ ವೇಶ್ಯೆಯರ ಸಂಪರ್ಕ ಬೆಳೆಸುತ್ತಾರೆ. ಈ ವೇಳೆ ಎಚ್‌ಐವಿ ಸೇರಿದಂತೆ ಬೇರೆ ಬೇರೆ ಸೋಂಕು ಹಚ್ಚಿಕೊಂಡು ಬಂದು ಊರಿನಲ್ಲಿ ಹೆಂಡತಿಗೂ ವರ್ಗಾಯಿಸುತ್ತಾರೆ. ಹೀಗಾಗಿ ಏಡ್ಸ್‌ನಂತಹ ಮಾರಕ ಕಾಯಿಲೆಗಳಿಗೆ ಬಹಳಷ್ಟು ಗ್ರಾಮೀಣ ಕುಟುಂಬಗಳು ಬಲಿಯಾಗಿವೆ’ ಎಂದು ಬಾಗಲಕೋಟೆ ಜಿಲ್ಲೆ ಬಾದಾಮಿ ತಾಲ್ಲೂಕಿನಲ್ಲಿ ರೀಚ್ ಸ್ವಯಂಸೇವಾ ಸಂಸ್ಥೆಯ ಸಮುದಾಯ ಸಂಘಟಕಿ ರೇಖಾ ಬಡಿಗೇರ ಹೇಳುತ್ತಾರೆ.



ವಲಸೆ ಕಾರ್ಮಿಕರ ಮಕ್ಕಳಿಗೆ ಇಲಾಖೆಯಿಂದ ಅಂಗನವಾಡಿ ಕೇಂದ್ರಗಳ ಮೂಲಕ ಉಪಾಹಾರ ಒದಗಿಸುವ ಹಾಗೂ ಆರೋಗ್ಯ ತಪಾಸಣೆಗೆ ಒಳಪಡಿಸುವ ಕಾರ್ಯಕ್ರಮವಿದೆ. ಅದು ಸಮರ್ಪಕವಾಗಿ ನಡೆಯುವಂತೆ ನೋಡಿಕೊಳ್ಳಲು ಅಧಿಕಾರಿಗಳಿಗೆ ಸೂಚಿಸಲಾಗುವುದು

ಶಶಿಕಲಾ ಜೊಲ್ಲೆ ಸಚಿವೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ

‘ವಲಸೆ ಕುಟುಂಬಗಳ ಮಕ್ಕಳ ಶೋಷಣೆಯೂ ಹೆಚ್ಚು. ರಕ್ತ ಸಂಬಂಧಗಳಲ್ಲಿಯೇ ವೈವಾಹಿಕ ನಂಟು ಬೆಳೆಸುವುದರಿಂದ ಮಕ್ಕಳು ಅಂಗವೈಕಲ್ಯ ಸೇರಿದಂತೆ ಬೇರೆ ಬೇರೆ ಸಮಸ್ಯೆಗಳಿಂದ ಬಳಲುತ್ತವೆ’ ಎನ್ನುತ್ತಾರೆ ಬಾಗಲಕೋಟೆಯ ಮಕ್ಕಳ ಸಹಾಯವಾಣಿಯ ಶೈಲಜಾ ಕುಮಾರ್.

ಕಟ್ಟಡ ಕೆಲಸಗಳಿಗೆ ಕಾರ್ಮಿಕರ ಕೊರತೆ

ಬೆಂಗಳೂರು, ಮಂಗಳೂರು ಹಾಗೂ ಸುತ್ತಲಿನ ಪ್ರದೇಶಗಳಲ್ಲಿ ನಿರ್ಮಾಣ ಕಾಮಗಾರಿಗೆ ಕಾರ್ಮಿಕರ ಕೊರತೆ ಎದುರಾಗಿದೆ. ಲಾಕ್ ಡೌನ್ ತೆರವಾದ ನಂತರ ಉತ್ತರ ಕರ್ನಾಟಕದ ಕಾರ್ಮಿಕರು ಮರಳಿ ಬಂದು ಕೆಲಸಗಳಲ್ಲಿ ತೊಡಗಿದ್ದಾರೆ. ಆದರೆ ಉತ್ತರ ಭಾರತದ ಕಾರ್ಮಿಕರ ಪೈಕಿ ಕೆಲವೇ ಜನ ಮಾತ್ರ ವಾಪಸು ಬಂದಿದ್ದಾರೆ. ಹೀಗಾಗಿ ಕಟ್ಟಡ ಕೆಲಸಗಳಿಗೆ ಕಾರ್ಮಿಕರ ಕೊರತೆ ತೀವ್ರವಾಗಿದೆ ಎನ್ನುವುದು ಕಟ್ಟಡ ಕಾಮಗಾರಿ ಗುತ್ತಿಗೆದಾರರ ಅಭಿಪ್ರಾಯ.

‘ಲಾಕ್‌ಡೌನ್ ತೆರವಾದ ನಂತರ ಕೆಲಸ ಹೆಚ್ಚಾಗಿದ್ದು, ಹೆಚ್ಚಿನ ಕೂಲಿಯೂ ಸಿಗುತ್ತಿದೆ. ಹೀಗಾಗಿ ನಮ್ಮ ಕಡೆಯಿಂದ ಹೆಚ್ಚಿನ ಜನ ಬರುತ್ತಲೇ ಇದ್ದಾರೆ’ ಎಂದು ದೊಡ್ಡಬಳ್ಳಾಪುರದಲ್ಲಿ ಕೆಲಸ ಮಾಡುತ್ತಿರುವ ವಿಜಯಪುರ ಜಿಲ್ಲೆ ಬಬಲೇಶ್ವರದ ವಲಸೆ ಕಾರ್ಮಿಕ ಶಂಕರ ಹೇಳಿದರು.

‘ಲಾಕ್‌ಡೌನ್ ಬಳಿಕ ದೊಡ್ಡ ಬಿಲ್ಡರ್‌ಗಳು ಸೌಲಭ್ಯಗಳನ್ನು ನೀಡಿ ಕಾರ್ಮಿಕರನ್ನು ಕರೆಯಿಸಿಕೊಂಡಿದ್ದಾರೆ. ಆದರೆ, ಮಧ್ಯಮ ಹಾಗೂ ಸಣ್ಣ ಬಿಲ್ಡರ್‌ಗಳಿಗೆ ಸಮಸ್ಯೆ ಇದೆ. ಆದರೆ, ಲಾಕ್‌ಡೌನ್ ಪೂರ್ವಕ್ಕಿಂತ ಈಗ ಕೂಲಿಕಾರರ ಸಂಖ್ಯೆ ಕಡಿಮೆಯಾಗಿದೆ’ ಎನ್ನುತ್ತಾರೆ ಉದ್ಯಮಿಯೂ ಆಗಿರುವ ಮಾಜಿ ಸಚಿವ ಕೃಷ್ಣ ಜೆ. ಪಾಲೇಮಾರ್.

ವಲಸೆ: ಮಧ್ಯವರ್ತಿಗೆ ಶುಕ್ರದೆಸೆ

ಒಂದನೇ ಪುಟದಿಂದ

ಉದ್ಯೋಗ ಖಾತ್ರಿ: ಜನರಿಗೆ ಅವರ ಊರಿನಲ್ಲೇ ಕೂಲಿ ಕೆಲಸ ನೀಡುವ ಉದ್ಯೋಗ ಖಾತ್ರಿ ಯೋಜನೆ ಜಾರಿಯಲ್ಲಿದೆ. ಆದರೆ, ನಮ್ಮ ರಾಜ್ಯದಲ್ಲಿ ಇದರಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಬಹಳ ಕಡಿಮೆ. ರಾಜ್ಯದಲ್ಲಿ ನರೇಗಾದಲ್ಲಿ ಕೂಲಿಮಾಡುತ್ತಿರುವ ಮಹಿಳೆಯರ ಪ್ರಮಾಣ ಶೇ 49ರಷ್ಟು ಮಾತ್ರ. ಉತ್ತರ ಭಾರತಕ್ಕೆ ಹೋಲಿಸಿದರೆ ಇದು ಅತ್ಯಲ್ಪ. ಈ ಪ್ರಮಾಣವನ್ನು ಶೇ 5ರಷ್ಟಾದರೂ ಹೆಚ್ಚಿಸಲು ನಿರ್ಧರಿಸಿರುವ ರಾಜ್ಯ ಸರ್ಕಾರ, ‘ಮಹಿಳಾ ಕಾಯಕ ಶಕ್ತಿ ಅಭಿಯಾನ’ ಆರಂಭಿಸಿದೆ.

ವಲಸೆ ತಡೆಗೆ ನರೇಗಾ ಸಹಕಾರಿ ಆಗುತ್ತಿಲ್ಲವೇ ಎಂಬ ಪ್ರಶ್ನೆಗೆ, ‘ಲಾಕ್‌ಡೌನ್ ವೇಳೆ ತವರಿಗೆ ವಾಪಸ್ಸಾದ ಕಾರ್ಮಿಕರ ಹೊಟ್ಟೆ ತುಂಬಿಸಿದ್ದು ಉದ್ಯೋಗ ಖಾತ್ರಿ ಯೋಜನೆಯೇ. ಆದರೆ, ಅಧಿಕಾರದಲ್ಲಿರುವವರಲ್ಲಿ ಬದ್ಧತೆಯ ಕೊರತೆ ಹಾಗೂ ಕೆಳಹಂತದಲ್ಲಿಯ ಭ್ರಷ್ಟಾಚಾರದಿಂದಾಗಿ ಈ ಯೋಜನೆ ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳುತ್ತಿಲ್ಲ. ಗ್ರಾಮ ಪಂಚಾಯಿತಿಗಳ ಜಡತ್ವದಿಂದಾಗಿ ಕೆಲವೆಡೆ ವರ್ಷಕ್ಕೆ 100 ದಿನವೂ ಉದ್ಯೋಗ ಸಿಗುತ್ತಿಲ್ಲ. ಕೆಲಸ ಮಾಡಿಸಲು ನಮ್ಮಲ್ಲಿ ಸ್ಥಳಾವಕಾಶವೇ ಇಲ್ಲ ಎಂದು ಬಹುಪಾಲು ಪಿಡಿಒಗಳು ಹೇಳುತ್ತಾರೆ. ಹುಡುಕಿ ನಾವೇ ಹೇಳಿ ಕೆಲಸ ಆರಂಭಿಸಿದ ಉದಾಹರಣೆಗಳೂ ಸಾಕಷ್ಟಿವೆ’ ಎನ್ನುತ್ತಾರೆ ಈ ಯೋಜನೆಯ ಅನುಷ್ಠಾನಕ್ಕೆ ಶ್ರಮಿಸುತ್ತಿರುವ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಘಟಕದ ಉಪಾಧ್ಯಕ್ಷೆ, ಕಲಬುರ್ಗಿಯ ಕೆ.ನೀಲಾ.



ಕಬ್ಬು ಕಟಾವು ಮಾಡುವ ಕಾರ್ಮಿಕರು ವಾಸಿಸುವ ಸ್ಥಳದಲ್ಲಿ ಬಾಲಕಿಯೊಬ್ಬಳು ಪಾತ್ರೆ ತೊಳೆಯುತ್ತಿರುವುದು (ಸಂಗ್ರಹ ಚಿತ್ರ)


ಪದಬಂಧ 4515 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ

3.ಉಪ್ಪನ್ನು ಮಾರುವವನು (4)
5.ರಾಯರಿಂದ ಬಂದಿರುವ ನಿರೂಪ (3)
6.ಗಾಳಿಗಾಗಿ ಮಾಡಿದ ಗವಾಕ್ಷ (4)
8.ಆನಂದಾನುಭವಕ್ಕೆ ಉಂಟಾದ ಅಡ್ಡಿ (4)
12.ಮಂದಿಯ ಒಳಿತು (4)
14.ಇದು ಬೇರೆಯವರ ದುಡ್ಡು (4)
15.ಎಲ್ಲಾ ಬಲ್ಲವನೀ ಪಂಡಿತ (3)
16.ಹಣ್ಣಿನಿಂದ ಮಾಡಿದ ಖಾದ್ಯ (4)

ಮೇಲಿಂದ ಕೆಳಕ್ಕೆ

1. ಬೇರೆಯವರನ್ನು ಆಶ್ರಯಿಸಿರುವವನು (5)
2.ಕರದಲ್ಲಿರುವ ಚಿನ್ನ (4)
3.ಊಟ ಮಾಡದಿರುವುದು (4)
4.ಸುಲಭ ಸಾಧ್ಯವಲ್ಲದುದು (3)
7.ಶ್ರಮ ನಿರ್ವಹಿಸುವುದು (2)
9.ಜನ ಕೊನೆಗಿದ್ದಾಗ ಅರ್ಹ ಕಾಣುತ್ತಾನೆ (3)
10.ಇಂಪಿಲ್ಲದ ಕಂಠ (5)
11.ತೀರಾ ಹತ್ತಿರವಿರುವ ದಡ! (2)
12.ಮಂದಿಯ ಮನಸ್ಸು (4)
13.ನ್ಯಾಯ ಸಮ್ಮತವಾಗಿರುವುದು (4)
14.ಉತ್ತರದವರ ವೇತನ (3)



4514ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಬಾತ್ಮೀದಾರ 3.ಪರಿಚ್ಛೇದ 4.ಮರ 5.ಹಣವಂತ 7.ತಭೂ 8.ಲೋಪ 9.ಮಿತವ್ಯಯ 11.ನಾರಿ 13.ರುಗ್ಣಾಲಯ 14 ಸಂಕಲನ

ಮೇಲಿಂದ ಕೆಳಕ್ಕೆ: 1.ಬಾಕಿ 2.ದಾತಾರ 3.ಪರಿಮಾಣ 4.ಮರುಭೂಮಿ 5.ಹರೆಯ 6.ತಲೋದರಿ 10.ವ್ಯವಸಾಯ 11.ನಾಸಿಕ 12.ಜ್ಞಾನ

ಸುಡೊಕು 4901

				9				8
	1	2		3			6	
		7	4			3		9
2	9				4	6		
1	4							2
			1				9	4
3		9			5		7	
	8			1		9		3
4		1	3		9		8	

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4900 ಸುಡೊಕು

3	4	8	2	7	9	6	5	1
9	6	1	5	8	3	2	7	4
5	7	2	1	6	4	3	9	8
6	9	4	7	3	5	1	8	2
2	8	5	6	9	1	7	4	3
1	3	7	4	2	8	9	6	5
8	5	9	3	1	6	4	2	7
7	1	6	8	4	2	5	3	9
4	2	3	9	5	7	8	1	6

‘ಬಿಜೆಪಿ ಮುಖಂಡರ ಷಡ್ಯಂತ್ರದಿಂದಲೇ ಸೋಲು’

ಮೊಳಕಾಲ್ಮುರು (ಚಿತ್ರದುರ್ಗ): ‘ಬಾದಾಮಿಯಲ್ಲಿ ಸಿದ್ದರಾಮಯ್ಯ ವಿರುದ್ಧ ನಾನು ಸೋಲಲು ಮತದಾರರು ಕಾರಣರಲ್ಲ. ಬಿಜೆಪಿಯ ಕೆಲ ಮುಖಂಡರ ಷಡ್ಯಂತ್ರ ಕಾರಣ’ ಎಂದು ಸಮಾಜ ಕಲ್ಯಾಣ ಸಚಿವ ಬಿ.ಶ್ರೀರಾಮುಲು ಆರೋಪಿಸಿದರು.

ತಾಲ್ಲೂಕಿನ ಕೊಂಡ್ಲಹಳ್ಳಿಯಲ್ಲಿ ಶನಿವಾರ ಸುದ್ದಿಗಾರರ ಜತೆ ಮಾತನಾಡಿ, ‘ರಾಷ್ಟ್ರನಾಯಕರಾದ ನರೇಂದ್ರ ಮೋದಿ, ಅಮಿತ್ ಶಾ ರೀತಿಯಲ್ಲಿ ಸಣ್ಣ ಬೇಡ ಕುಲದಲ್ಲಿ ಹುಟ್ಟಿರುವ ಶ್ರೀರಾಮುಲು ಎರಡು ಕಡೆ ಸ್ಪರ್ಧೆ ಮಾಡುತ್ತಿದ್ದಾರೆ. ಗೆದ್ದರೆ ಮುಂದೆ ನಮಗೇ ಮುಳ್ಳಾಗಬಹುದು ಎಂದು ಕೆಲ ಬಿಜೆಪಿ ಮುಖಂಡರು ನನ್ನ ವಿರುದ್ಧ ಪಿತೂರಿ ನಡೆಸಿ ಸೋಲಿಸಿದರು. ಕೇವಲ 1,400 ಮತಗಳ ಅಂತರದಲ್ಲಿ ನಾನು ಅಲ್ಲಿ ಸೋತೆ. ಮೊಳಕಾಲ್ಮುರಿನ ಜನ ನನ್ನ ಕೈ ಹಿಡಿಯದಿದ್ದರೆ 30 ವರ್ಷಗಳ ನನ್ನ ರಾಜಕೀಯ ಜೀವನ ನಾಶವಾಗುತ್ತಿತ್ತು. ಮೊಳಕಾಲ್ಮುರಿನ ಋಣವನ್ನು ಸಾಯುವ ತನಕ ಮರೆಯುವುದಿಲ್ಲ’ ಎಂದರು.

‘ರಾಜಕಾರಣದಲ್ಲಿ ನಾನು ಎಂದೂ ಹೆದರಿಲ್ಲ. ಎಲ್ಲೋ ಒಂದು ಕಡೆ ನನ್ನ ವಿರುದ್ಧ ಪಿತೂರಿಗಳು ನಡೆಯುತ್ತಿವೆ. ಈ ಬಗ್ಗೆ ಪಕ್ಷದ ವೇದಿಕೆಯಲ್ಲಿ ಮಾತನಾಡುತ್ತೇನೆ’ ಎಂದು ಹೇಳಿದರು.

ಪ್ರಜಾವಾಣಿ ಕ್ವಿಜ್ ಚಾಂಪಿಯನ್‌ಷಿಪ್ ‘ಗ್ರ್ಯಾಂಡ್ ಫಿನಾಲೆ’, ಚಿನ್ಮಯ್ ದ್ವಿತೀಯ

ದಕ್ಷ್‌ಗೆ ಚಾಂಪಿಯನ್ ಪಟ್ಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತಮ ಪೈಪೋಟಿ ಕಂಡುಬಂದ ‘ಪ್ರಜಾವಾಣಿ’ ಆನ್‌ಲೈನ್ ಕ್ವಿಜ್ ಚಾಂಪಿಯನ್‌ಷಿಪ್‌ನ ‘ಗ್ರ್ಯಾಂಡ್ ಫಿನಾಲೆ’ಯಲ್ಲಿ ಬೆಂಗಳೂರು ವಲಯದ ವಿದ್ಯಾರ್ಥಿ ದಕ್ಷ್ ಶೆಟ್ಟರ್ ವಿಜೇತರಾದರು. ಶನಿವಾರ ನಡೆದ ಈ ಫೈನಲ್‌ನಲ್ಲಿ ಮೊದಲ ಸುತ್ತಿನಿಂದಲೇ ಮುನ್ನಡೆ ಸಾಧಿಸಿದ್ದ ದಕ್ಷ್ ಕೊನೆಯವರೆಗೆ ಅದನ್ನು ಉಳಿಸಿಕೊಂಡು ಚಾಂಪಿಯನ್ ಎನಿಸಿದರು.

ಧಾರವಾಡ ವಲಯದ ಚಿನ್ಮಯ್ ಸುತಗಟ್ಟಿ ಅವರಿಗೆ ಎರಡನೇ ಮತ್ತು ದಾವಣಗೆರೆ ವಲಯದ ಆತ್ಮೀಕ್ ಟಿ. ಸೊಗೇದ್ ಅವರಿಗೆ ಮೂರನೇ ಸ್ಥಾನ ಒಲಿಯಿತು.

ಮೊದಲ ಮೂರು ಸ್ಥಾನ ಗಳಿಸಿದ ಈ ವಿದ್ಯಾರ್ಥಿಗಳು ಕ್ರಮವಾಗಿ ₹25 ಸಾವಿರ, ₹15 ಸಾವಿರ ಮತ್ತು ₹10 ಸಾವಿರ ನಗದು ಬಹುಮಾನವನ್ನು ತಮ್ಮದಾಗಿಸಿಕೊಂಡರು.



ಚಿನ್ಮಯ್



ಆತ್ಮೀಕ್

ಕುಲದೀಪ್ ಮಲ್ಯ (ಮೈಸೂರು ವಲಯ), ನಿಧಿ ನರೊನ್ಹಾ (ಮಂಗಳೂರು ವಲಯ), ದಿಶಾ (ಕಲಬುರ್ಗಿ ವಲಯ) ಮತ್ತು ಆರ್. ಎಸ್.ಜೀವಿತಾ (ತುಮಕೂರು ವಲಯ) ಅವರೂ ಅಂತಿಮ ಸುತ್ತಿಗೆ ಆಯ್ಕೆಯಾಗಿದ್ದರು. ಇವರಿಗೆ ಸಂಸ್ಥೆಯ ವತಿಯಿಂದ ಪ್ರಮಾಣ ಪತ್ರ ವಿತರಿಸಲಾಯಿತು. ಕಳೆದ ತಿಂಗಳು ಪೂರ್ವಭಾವಿ ಹಂತದ ಸ್ಪರ್ಧೆಗಳು ಮತ್ತು ಈ ತಿಂಗಳ ಆರಂಭದಲ್ಲಿ ವಲಯ ಮಟ್ಟದ ಫೈನಲ್ ಸ್ಪರ್ಧೆಗಳು ನಡೆದಿದ್ದವು.

ಪ್ರಜಾವಾಣಿ ಆನ್‌ಲೈನ್ ಕ್ವಿಜ್ ಚಾಂಪಿಯನ್ ಶಿಪ್ ಜನವರಿ 20- ಫೆಬ್ರವರಿ 20, 2021

ಕ್ವಿಜ್ ಮಾಸ್ಟರ್ ಮೇಘವಿ ಮಂಜುನಾಥ್ ಸ್ಪರ್ಧೆಯನ್ನು ನಡೆಸಿಕೊಟ್ಟರು.

ಅಂತಿಮ ಸುತ್ತಿನಲ್ಲಿ ಸ್ಪರ್ಧಿಗಳ ನಡುವೆ ಹಣಾಹಣಿ ಏರ್ಪಟ್ಟಿತ್ತು. ಮೊದಲ ಸುತ್ತಿನಲ್ಲೇ 10 ಪಾಯಿಂಟ್ ಮುನ್ನಡೆ ಸಾಧಿಸಿದ್ದ ದಕ್ಷ್ ಒಟ್ಟಾರೆ 85 ಅಂಕಗಳೊಂದಿಗೆ ಅಗ್ರಸ್ಥಾನಕ್ಕೇರಿದರು. ಚಿನ್ಮಯ್ ಹಾಗೂ ಆತ್ಮೀಕ್, ಅಂತಿಮ ಸುತ್ತಿನ ನಂತರ ತಲಾ 70 ಅಂಕ ಗಳಿಸಿದ್ದರು. ಎರಡನೇ ಸ್ಥಾನ ನಿರ್ಧಾರಕ್ಕಾಗಿ ಇವರಿಬ್ಬರಿಗೆ ಟೈಬ್ರೇಕ್ ರೂಪದಲ್ಲಿ ಮತ್ತೊಂದು ಪ್ರಶ್ನೆ ಕೇಳಲಾಯಿತು. ಈ ಪ್ರಶ್ನೆಗೆ ಸರಿಯಾದ ಉತ್ತರ ನೀಡಿದ ಚಿನ್ಮಯ್ ಎರಡನೇ ಸ್ಥಾನ ಗಳಿಸಿದರು.

ಪ್ರತಿ ವರ್ಷ ವೇದಿಕೆ ಮೇಲೆ ನಡೆಯುತ್ತಿದ್ದ ‘ಪ್ರಜಾವಾಣಿ ಕ್ವಿಜ್ ಚಾಂಪಿಯನ್‌ಷಿಪ್’ಅನ್ನು, ಕೋವಿಡ್ ಸಾಂಕ್ರಾಮಿಕದ ಕಾರಣ ಈ ಬಾರಿ ಆನ್‌ಲೈನ್ ಮೂಲಕ ನಡೆಸಲಾಯಿತು. ಈ ಹಿಂದೆ, ತಲಾ ಇಬ್ಬರು ವಿದ್ಯಾರ್ಥಿಗಳನ್ನು ಒಳಗೊಂಡ ತಂಡಗಳು ಸ್ಪರ್ಧೆಯಲ್ಲಿ ಭಾಗವಹಿಸುತ್ತಿದ್ದವು. ಆದರೆ, ಈ ಬಾರಿ ವೈಯಕ್ತಿಕ ನೆಲೆಯಲ್ಲಿ ವಿದ್ಯಾರ್ಥಿಗಳು ಭಾಗವಹಿಸಿದ್ದು, ಕುತೂಹಲಕ್ಕೆ ಕಾರಣವಾಗಿತ್ತು. ಝೂಮ್ ಆ್ಯಪ್ ಮೂಲಕ ಗ್ರ್ಯಾಂಡ್ ಫಿನಾಲೆಯ ವೀಕ್ಷಕರಾಗಿ ಭಾಗವಹಿಸಲು ಸಾರ್ವಜನಿಕರಿಗೂ ಅವಕಾಶ ಕಲ್ಪಿಸಲಾಗಿತ್ತು. ಆಗಾಗ ಅವರಿಗೂ ಪ್ರಶ್ನೆಗಳನ್ನು ಕೇಳಲಾಯಿತು. ಸರಿಯಾದ ಉತ್ತರಗಳನ್ನು ನೀಡಿದವರು ಬಹುಮಾನ ಪಡೆದರು.

ಕ್ವಿಜ್ ಚಾಂಪಿಯನ್‌ಷಿಪ್‌ನ ‘ಗ್ರ್ಯಾಂಡ್ ಫಿನಾಲೆ’ ವಿಜೇತರು

ಸ್ಥಾನ	ವಿಜೇತರು	ಶಾಲೆ	ತರಗತಿ	ಜಿಲ್ಲೆ
ಪ್ರಥಮ	ದಕ್ಷ್ ಶೆಟ್ಟರ್	ಪ್ರೆಸಿಡೆನ್ಸಿ ಶಾಲೆ, ಆರ್.ಟಿ.ನಗರ	10	ಬೆಂಗಳೂರು ನಗರ
ದ್ವಿತೀಯ	ಚಿನ್ಮಯ್ ಸುತಗಟ್ಟಿ	ಪರಿವರ್ತನ್ ಗುರುಕುಲ್ ಹೆರಿಟೇಜ್	9	ಹುಬ್ಬಳ್ಳಿ
ತೃತೀಯ	ಆತ್ಮೀಕ್ ಟಿ.ಸೊಗೇದ್	ನ್ಯಾಷನಲ್ ಹೈಸ್ಕೂಲ್, ಕೋಣಂದೂರು	9	ಶಿವಮೊಗ್ಗ

ಡಿಆರ್‌ಎಫ್‌ಗಳಿಗೆ ಬಡ್ತಿಗೆ ಸಿದ್ಧತೆ • ನ್ಯಾಯಾಲಯದ ತಡೆಯಾಜ್ಞೆಯಿದ್ದರೂ ಪ್ರಕ್ರಿಯೆ

ಅರಣ್ಯ ಇಲಾಖೆ: ಮುಂಬಡ್ತಿಗೆ ತರಾತುರಿ!

• ಗುರು ಪಿ.ಎಸ್.

ಬೆಂಗಳೂರು: ಉಪವಲಯ ಅರಣ್ಯಾಧಿಕಾರಿ ವೃಂದದ ರಾಜ್ಯಮಟ್ಟದ ಜೇಷ್ಠತಾ ಪಟ್ಟಿ ಇನ್ನೂ ಅಂತಿಮಗೊಂಡಿಲ್ಲ. ಜೊತೆಗೆ, ನ್ಯಾಯಾಲಯದ ತಡೆಯಾಜ್ಞೆಯಿದ್ದರೂ ಉಪವಲಯ ಅರಣ್ಯಾಧಿಕಾರಿ ಹುದ್ದೆಯಿಂದ (ಡಿಆರ್‌ಎಫ್) ವಲಯ ಅರಣ್ಯಾಧಿಕಾರಿ (ಆರ್‌ಎಫ್‌ಒ) ಹುದ್ದೆಗೆ ಬಡ್ತಿ ನೀಡುವ ಪ್ರಕ್ರಿಯೆಯನ್ನು ಸದ್ದಿಲ್ಲದೆ ಆರಂಭಿಸಿದೆ ಅರಣ್ಯ ಇಲಾಖೆ.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಪಿಸಿಸಿಎಫ್) ನೇತೃತ್ವದ ಇಲಾಖಾ ಪದೋನ್ನತಿ ಸಮಿತಿ ಮುಂಬಡ್ತಿ ನೀಡುವ ಪ್ರಕ್ರಿಯೆ ಆರಂಭಿಸಿದೆ. 105 ಡಿಆರ್‌ಎಫ್‌ಗಳಿಗೆ ಬಡ್ತಿ ನೀಡುವ ಆದೇಶವನ್ನು ಸೋಮವಾರದಿಂದ (ಫೆ.22) ನೀಡಲು ಸಿದ್ಧತೆ ನಡೆದಿದೆ ಎಂದು ಇಲಾಖೆಯ ಮೂಲಗಳು ‘ಪ್ರಜಾವಾಣಿ’ಗೆ ತಿಳಿಸಿವೆ.

ಅರಣ್ಯ ಇಲಾಖೆಯಿಂದ ಪ್ರಕಟಿಸಿದ್ದ ಆರ್‌ಎಫ್‌ಒ ಜೇಷ್ಠತಾ ಕರಡು ಪಟ್ಟಿಯಲ್ಲಿ ಸಾಕಷ್ಟು ನ್ಯೂನತೆಗಳಿವೆ ಎಂದು ಪರಿಶಿಷ್ಟ ಜಾತಿ, ಪಂಗಡದ ನೌಕರರ ಸಂಘಗಳು ಆಕ್ಷೇಪ ವ್ಯಕ್ತಪಡಿಸಿದ್ದವು. ಎಸ್‌ಸಿ, ಎಸ್‌ಟಿ ಸಮುದಾಯದ 83 ನೌಕರರು ಸೇರಿದಂತೆ 316 ನೌಕರರು ನ್ಯಾಯಯುತವಾಗಿ ಸಿಗಬೇಕಾದ ಸೌಲಭ್ಯದಿಂದ ವಂಚಿತರಾಗಿದ್ದಾರೆ ಎಂದು ಸಂಘಟನೆಗಳು ದೂರಿದ್ದವು.

ನಿವೃತ್ತಿ ಹೊಂದಿದ್ದರೂ ಸಹ ಮುಂಬಡ್ತಿಯಿಂದ ವಂಚಿತರಾದ ಹಿರಿಯ ನೌಕರರಿಗೆ ಬಡ್ತಿಯ ಅರ್ಹತಾ ದಿನಾಂಕ ನೀಡಿ, ಕಾಲ್ಪನಿಕ ವೇತನ ನಿಗದಿ ಪಡಿಸಬೇಕು ಮತ್ತು ಪಿಂಚಣಿಯನ್ನು ಮರು ನಿಗದಿ ಮಾಡಬೇಕು ಎಂದು 1973ರ ಆರ್‌ಪಿಪಿ ಕಾಯ್ದೆ ಹೇಳುತ್ತದೆ. ಈ ಪ್ರಕ್ರಿಯೆಯಲ್ಲಿ ಆ ನಿಯಮ ಪಾಲನೆಯಾಗಿಲ್ಲ ಎಂದು ದೂರಲಾಗಿದೆ.

ಕರ್ನಾಟಕ ಆಡಳಿತಾತ್ಮಕ ನ್ಯಾಯಮಂಡಳಿ (ಕೆಎಟಿ) ಹಿಂದಿನ ತೀರ್ಪಿನ ಅನ್ವಯ, ವಲಯ ಅರಣ್ಯಾಧಿಕಾರಿಗಳ ಪೋಷಕ ವೃಂದವಾಗಿರುವ ವನಪಾಲಕ ಜೇಷ್ಠತಾ ಪಟ್ಟಿಯನ್ನು ರಾಜ್ಯಮಟ್ಟದಲ್ಲಿ ಸಂಯೋಜಿಸಿ ಅಂತಿಮ ಕರಡು ಪ್ರಕಟಿಸಬೇಕಾಗಿತ್ತು. ಆದರೆ, ರಾಜ್ಯಮಟ್ಟದಲ್ಲಿ ಜೇಷ್ಠತಾ ಪಟ್ಟಿ ಪ್ರಕಟಿಸಿದರೆ ತಪ್ಪುಗಳು ಗೊತ್ತಾಗುತ್ತವೆ ಎಂಬ ಕಾರಣದಿಂದ ವೃತ್ತಮಟ್ಟದಲ್ಲಿಯೇ ಸೇವಾ ಹಿರಿತನ ಪಟ್ಟಿ ಸಿದ್ಧಪಡಿಸಿ ಪ್ರಕಟಿಸಲಾಗಿದ್ದು, ತಮಗೆ ಬೇಕಾದವರಿಗೆ ಬಡ್ತಿ ನೀಡಿದ್ದಾರೆ ಎಂದು ಅರಣ್ಯ ಇಲಾಖೆಯ ಎಸ್‌ಸಿ, ಎಸ್‌ಟಿ ನೌಕರರ ಸಂಘ ಆರೋಪ ಮಾಡಿತ್ತು.

ಇದಕ್ಕೆ ಪೂರಕವಾಗಿ ಕೆಎಟಿಯು 2020ರ ಡಿ.20ರಂದು ಈ ಪ್ರಕ್ರಿಯೆಗೆ ತಡೆಯಾಜ್ಞೆಯನ್ನೂ ನೀಡಿತ್ತು.

ಆರೋಪಗಳ ನಂತರ, ಇಲಾಖೆಯ ವಿವಿಧ ವೃಂದಗಳ ಜೇಷ್ಠತಾ ಪಟ್ಟಿಯನ್ನು ಪರಿಷ್ಕರಿಸಲು ಆಗಿನ ಪ್ರಧಾನಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಅಜಯ್ ಮಿಶ್ರಾ ನೇತೃತ್ವದಲ್ಲಿ ಸಮಿತಿ ರಚಿಸಲಾಗಿತ್ತು. ಈ ಸಮಿತಿಯ ಶಿಫಾರಸ್ಸಿನಂತೆಯೇ ಜೇಷ್ಠತಾ ಪಟ್ಟಿ ಪ್ರಕಟಿಸಬೇಕು, ಅಲ್ಲಿಯವರೆಗೆ ಮುಂಬಡ್ತಿ ಪ್ರಕ್ರಿಯೆ ನಡೆಸಬಾರದು ಎಂದು ಹಿಂದಿನ ಅರಣ್ಯ ಸಚಿವ ಆನಂದ್ ಸಿಂಗ್ ಪಿಸಿಸಿಎಫ್ ಹಾಗೂ ಇಲಾಖೆಯ ವಿವಿಧ ವೃತ್ತಗಳ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಸೂಚನೆ ನೀಡಿದ್ದರು.

‘ನ್ಯಾಯಾಲಯದ ತಡೆಯಾಜ್ಞೆ ಮೀರಿ, ಜೇಷ್ಠತಾ ಪಟ್ಟಿ ಅಂತಿಮಗೊಳ್ಳದೇ ಇದ್ದರೂ ಮುಂಬಡ್ತಿ ಪ್ರಕ್ರಿಯೆ ನಡೆಸುತ್ತಿರುವುದು ಅನುಮಾನಕ್ಕೆ ಕಾರಣವಾಗಿದೆ. ಪ್ರಕರಣವನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಬೇಕು. ಸ್ವತಂತ್ರ ಸಂಸ್ಥೆಯಿಂದ ತನಿಖೆ ನಡೆಸಬೇಕು’ ಎಂದು ಸಾಮಾಜಿಕ ಕಾರ್ಯಕರ್ತ ದಿನೇಶ ಕಲ್ಲಹಳ್ಳಿ ಒತ್ತಾಯಿಸಿದ್ದಾರೆ.

‘ನಿಯಮದಂತೆ ಮುಂಬಡ್ತಿ ಪ್ರಕ್ರಿಯೆ’



‘ಬಹಳಷ್ಟು ನೌಕರರು ನಿವೃತ್ತಿಯ ಅಂಚಿನಲ್ಲಿದ್ದಾರೆ. ಅವರಿಗೆ ಅನ್ಯಾಯ ಆಗಬಾರದು ಎಂಬ ಉದ್ದೇಶದಿಂದ ಮುಂಬಡ್ತಿ ಪ್ರಕ್ರಿಯೆಗೆ ಮತ್ತೆ ಚಾಲನೆ ನೀಡಲಾಗಿದೆ. ಇದನ್ನು ಅರಣ್ಯ ಸಚಿವರ ಗಮನಕ್ಕೂ ತಂದಿದ್ದು, ನಿಯಮಾನುಸಾರವಾಗಿಯೇ ಎಲ್ಲ ಪ್ರಕ್ರಿಯೆ ನಡೆಯುತ್ತಿದೆ’ ಎಂದು ಪಿಸಿಸಿಎಫ್ ಸಂಜಯ್ ಮೋಹನ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಅಜಯ್ ಮಿಶ್ರಾ ಸಮಿತಿಯು ಈಗ ಅಸ್ತಿತ್ವದಲ್ಲಿ ಇಲ್ಲ. ಮೂರು–ನಾಲ್ಕು ನೌಕರರಿಗೆ ಬಡ್ತಿ ಸಿಕ್ಕಿಲ್ಲ ಎಂಬ ಕಾರಣದಿಂದ ಆರೋಪ ಮಾಡುತ್ತಿದ್ದಾರೆ. ನಾವು ಎಲ್ಲ ನೌಕರರ ಹಿತಾಸಕ್ತಿಯನ್ನೂ ಗಮನದಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ’ ಎಂದೂ ಅವರು ಹೇಳಿದರು.

1,450 ಎಕರೆ ಕಾಫಿ ಬೆಳೆ ಹಾನಿ

ಪ್ರಜಾವಾಣಿ ವಾರ್ತೆ

ಮಡಿಕೇರಿ: ಕೊಡಗು ಜಿಲ್ಲೆಯ ಶನಿವಾರಸಂತೆ ವ್ಯಾಪ್ತಿಯಲ್ಲಿ ಶುಕ್ರವಾರ ಸುರಿದ ಆಲಿಕಲ್ಲು ಸಹಿತ ಮಳೆಯಿಂದ ಅಪಾರ ಹಾನಿಯಾಗಿದ್ದು, ರೈತರು ಕಂಗಾಲಾಗಿದ್ದಾರೆ. ಬೆಳೆಗಳು ನೆಲಕಚ್ಚಿವೆ. ಕೃಷಿ, ತೋಟಗಾರಿಕೆ ಹಾಗೂ ಕಾಫಿ ಮಂಡಳಿಯ ಅಧಿಕಾರಿಗಳು ಶನಿವಾರ ಸ್ಥಳಕ್ಕೆ ಭೇಟಿ ನೀಡಿ, ಸಮೀಕ್ಷೆ ನಡೆಸಿದರು.

ಅಂಕನಹಳ್ಳಿ, ಗಂಗಾವರ, ಸೀಗೆ ಮರೂರು, ಮೆಣಸ, ಬೆಟ್ಟದಳ್ಳಿ, ಮನೆಹಳ್ಳಿ, ನಾಗವಾರ, ಮೈಲಾಪುರ, ಬಡುಬನಹಳ್ಳಿ, ಅಮ್ಮಳ್ಳಿ, ನಿಡ್ತ, ದೊಡ್ಡಳ್ಳಿ, ಮುಳ್ಳೂರು, ಸಿಡಿಗಳಲೆ, ಕೈಸರವಳ್ಳಿ ಗ್ರಾಮಗಳಲ್ಲಿ 1,450 ಎಕರೆ ಕಾಫಿ, 400 ಎಕರೆ ಕಾಳುಮೆಣಸು ಹಾಗೂ 198 ಎಕರೆಯಲ್ಲಿ ಬೆಳೆದ ಅಡಿಕೆ ನಷ್ಟವಾಗಿದೆ ಎಂದು ಅಧಿಕಾರಿಗಳು ಅಂದಾಜಿಸಿದ್ದಾರೆ.

155 ಎಕರೆ ಜೋಳ, 123 ಎಕರೆ ಹಸಿರು ಮೆಣಸಿನಕಾಯಿ, 95 ಎಕರೆ ಬಾಳೆ, 129 ಎಕರೆ ಶುಂಠಿ , 112 ಎಕರೆಯಲ್ಲಿ ಬೆಳೆದ ಸಿಹಿಗೆಣಸು ಹಾಳಾಗಿದೆ.

ಆಲಿಕಲ್ಲಿನ ಹೊಡೆತಕ್ಕೆ ಕಾಳುಮೆಣಸು ಬಳ್ಳಿ, ಹಸಿರು ಮೆಣಸಿನಕಾಯಿ ಗಿಡಗಳು ನೆಲಕಚ್ಚಿವೆ. ಅಂಕನಹಳ್ಳಿ ಗ್ರಾಮದ ಸರ್ಕಾರಿ ಪ್ರೌಢಶಾಲೆಯ ಚಾವಣಿಗೆ ಹಾನಿಯಾಗಿದೆ. ತೋಟಗಾರಿಕೆ ಇಲಾಖೆಯ ಅಧಿಕಾರಿಗಳು ನಡೆಸಿರುವ ಪ್ರಾಥಮಿಕ ಸಮೀಕ್ಷೆಯ ಪ್ರಕಾರ, ಚಾಮರಾಜನಗರ ಜಿಲ್ಲೆಯಲ್ಲಿ 600 ಎಕರೆ ಬಾಳೆ ನಾಶವಾಗಿದೆ. ಅಂದಾಜು ₹ 3 ಕೋಟಿ ಹಾನಿಯಾಗಿದೆ. 60ಕ್ಕೂ ಹೆಚ್ಚು ತೆಂಗಿನ ಮರಗಳು ಬಿದ್ದಿದ್ದು, ಈರುಳ್ಳಿ ಬೆಳೆಗೂ ಹಾನಿಯಾಗಿದೆ.

ಹಾಸನ ಜಿಲ್ಲೆಯ ಅರಕಲಗೂಡು, ಸಕಲೇಶಪುರ ಹಾಗೂ ಬೇಲೂರು ತಾಲ್ಲೂಕಿನಲ್ಲಿ ಕಾಫಿ, ಮೆಣಸು ಹಾಗೂ ತರಕಾರಿ ಬೆಳೆಗಳು ಅಪಾರ ಪ್ರಮಾಣದಲ್ಲಿ ಹಾನಿಗೀಡಾಗಿದ್ದು, ನಷ್ಟದ ಅಂದಾಜು ಸಿಕ್ಕಿಲ್ಲ. ಚಿಕ್ಕಮಗಳೂರು ಭಾಗದಲ್ಲಿ ಒಣಗಲು ಹಾಕಿದ್ದ ಕಾಫಿ ಕೊಚ್ಚಿಕೊಂಡು ಹೋಗಿದ್ದು, ನಷ್ಟದ ಅಂದಾಜು ತಿಳಿದುಬಂದಿಲ್ಲ.



ಆಲಿಕಲ್ಲು ಹೊಡೆತಕ್ಕೆ ಸಿಕ್ಕ ಮೆಣಸಿನಕಾಯಿ ಗಿಡಗಳು

ಹುಲಿ ದಾಳಿಗೆ ಬಾಲಕ ಬಲಿ

ಪೊನ್ನಂಪೇಟೆ (ಕೊಡಗು): ಸಮೀಪದ ಕುಮಟೂರು ಗ್ರಾಮದ ಪಣಿಯರವರ ಅಯ್ಯಪ್ಪ ಎಂಬ ಬಾಲಕ (14), ಶನಿವಾರ ರಾತ್ರಿ ಹುಲಿ ದಾಳಿಗೆ ಬಲಿಯಾಗಿದ್ದಾನೆ.

ಗ್ರಾಮದ ಕೊಟ್ರಂಗಡ ಬಿದ್ದಪ್ಪ ಅವರ ಲೈನ್‌ಮನೆಯಲ್ಲಿ, ತಂದೆ ಪಣಿಯರವರ ಬಸವ ಅವರೊಂದಿಗೆ ವಾಸವಾಗಿದ್ದ ಅಯ್ಯಪ್ಪ, ಶ್ರೀಮಂಗಲದ ಪದವಿಪೂರ್ವ ಕಾಲೇಜಿನ ಪ್ರೌಢಶಾಲೆಯಲ್ಲಿ ಎಂಟನೇ ತರಗತಿ ಓದುತ್ತಿದ್ದ. ಸೌದೆ ತರಲೆಂದು ಹೋಗಿದ್ದ ವೇಳೆ ಹುಲಿ ದಾಳಿ ನಡೆಸಿದೆ. ಕೊಟ್ರಂಗಡ ಅಶ್ವಥ್ ಅವರ ತೋಟದಲ್ಲಿ ಮೃತದೇಹ ಪತ್ತೆಯಾಗಿದೆ. ಹುಲಿಯ ಕೂದಲು ಮೃತದೇಹದ ಮೇಲೆ ಬಿದ್ದಿದ್ದಾಗಿ ಎಂದು ಸ್ಥಳೀಯರು ತಿಳಿಸಿದ್ದಾರೆ.

ಚುನಾವಣೆಯಲ್ಲಿ ಹೆಚ್ಚು ಸ್ಥಾನ ಬಂದಾಗ ಹೈಕಮಾಂಡ್ ನಿರ್ಧಾರ

‘ಜಮೀರ್ ಹೇಳಿಕೆಯಲ್ಲಿ ತಪ್ಪಿಲ್ಲ’

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ಮುಂದಿನ ಮುಖ್ಯಮಂತ್ರಿ ನೀವೇ ಎಂದು ನನಗೂ ಹಲವು ಅಭಿಮಾನಿಗಳು ವಾಟ್ಸ್‌ಆ್ಯಪ್ ಗ್ರೂಪ್‌ಗಳಲ್ಲಿ ಹಾಗೂ ಸಾಮಾಜಿಕ ಜಾಲತಾಣದಲ್ಲಿ ಪ್ರಚಾರ ಮಾಡುತ್ತಿರುತ್ತಾರೆ. ಹಾಗೆಯೇ ಶಾಸಕ ಜಮೀರ್ ಅಹಮದ್ ಕೂಡ ಅಭಿಮಾನಿಯಾಗಿ, ಮುಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಎಂದು ಹೇಳಿದ್ದಾರೆ. ಇದರಲ್ಲಿ ಯಾವುದೇ ತಪ್ಪಿಲ್ಲ’ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ ಸಮರ್ಥಿಸಿಕೊಂಡರು.

ಇಲ್ಲಿ ಶನಿವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ‘ಮುಂದಿನ ಮುಖ್ಯಮಂತ್ರಿ ಅಭ್ಯರ್ಥಿ ಸಿದ್ದರಾಮಯ್ಯ ಅಥವಾ ಡಿ.ಕೆ. ಶಿವಕುಮಾರ್ ಎಂದು ಹೈಕಮಾಂಡ್ ಎಲ್ಲಿಯೂ ಹೇಳಿಲ್ಲ. ಬರುವ ವಿಧಾನಸಭಾ ಚುನಾವಣೆಯಲ್ಲಿ ಪಕ್ಷವು 113 ಸೀಟುಗಳನ್ನು ಪಡೆದ ನಂತರ ಮುಖ್ಯಮಂತ್ರಿ ಯಾರಾಗಬೇಕು ಎನ್ನುವುದನ್ನು ಹೈಕಮಾಂಡ್ ತೀರ್ಮಾನಿಸುತ್ತದೆ’ ಎಂದು ಹೇಳಿದರು.

‘ಪಕ್ಷಾತೀತವಾಗಿ ಅಹಿಂದ ಸಮಾವೇಶ ನಡೆಸಿದರೆ ನಾವೂ ಬರುತ್ತೇವೆ’ ಎಂಬ ಜಲಸಂಪನ್ಮೂಲ ಸಚಿವ ರಮೇಶ ಜಾರಕಿಹೊಳಿ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ‘ಅಹಿಂದ ಸಮಾವೇಶ ಮಾಡಿದರೆ ಕಾಂಗ್ರೆಸ್ ಪಕ್ಷದ ಆಧಾರದ ಮೇಲೆಯೇ ಮಾಡುತ್ತೇವೆ. ಬರುವುದು, ಬಿಡುವುದು ಅವರಿಗೆ ಬಿಟ್ಟಿದ್ದು. ಆದರೆ, ಆ ರೀತಿಯ ಸಮಾವೇಶದ ಬಗ್ಗೆ ಎಲ್ಲೂ ಚರ್ಚೆಯಾಗಿಲ್ಲ ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಅವರೇ ಹೇಳಿದ್ದಾರೆ’ಎಂದರು.

‘ಶ್ರೀರಾಮಮಂದಿರ ನಿರ್ಮಾಣಕ್ಕೆ ನಿಧಿ ಕೊಡುವುದು ಕೊಡುವವರ ಬಲ;- ತೆಗೆದುಕೊಳ್ಳುವರ ಬಲ. ನಾವೇನೂ ಲೆಕ್ಕ ಕೇಳುವುದಿಲ್ಲ. ನಿಧಿ ನೀಡುವಂತೆ ಆರ್‌ಎಸ್‌ಎಸ್‌ನವರು ನನ್ನ ಬಳಿಗೂ ಬಂದಿದ್ದರು. ಕೊಡಬೇಕೋ, ಬೇಡವೋ ಎನ್ನುವುದನ್ನು ಶೀಘ್ರದಲ್ಲೇ ನಿರ್ಧರಿಸಲಿದ್ದೇನೆ’ ಎಂದು ಪ್ರತಿಕ್ರಿಯಿಸಿದರು.

‘ಸಿದ್ದರಾಮಯ್ಯ ಸಿಎಂ ಆಗಬೇಕು’

ಮೈಸೂರು: ಸಿದ್ದರಾಮಯ್ಯ ಅವರು ಮತ್ತೆ ಮುಖ್ಯಮಂತ್ರಿ ಆಗಬೇಕು ಎಂಬುದು ತಮ್ಮೊಬ್ಬರ ಬಯಕೆಯಲ್ಲ; ಇಡೀ ರಾಜ್ಯದ ಜನರ ಬಯಕೆಯೂ ಅದೇ ಆಗಿದೆ ಎಂದು ಶಾಸಕ ಜಮೀರ್ ಅಹಮ್ಮದ್ ಹೇಳಿದರು.

ಶನಿವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಬಡವರಿಗೆ ಒಳ್ಳೆಯದಾಗಬೇಕಾದರೆ ಸಿದ್ದರಾಮಯ್ಯ ಅವರಿಂದ ಮಾತ್ರ ಸಾಧ್ಯ ಎಂದು ಜನರು ಹೇಳುತ್ತಿದ್ದಾರೆ. ಕಾಂಗ್ರೆಸ್‌ನಲ್ಲಿ ಹೈಕಮಾಂಡ್ ಸಂಸ್ಕೃತಿ ಇದ್ದರೂ, ಸುಮ್ಮನೇ ಯಾರನ್ನೋ ಮುಖ್ಯಮಂತ್ರಿಯಾಗಿ ಮಾಡುವುದಿಲ್ಲ’ ಎಂದರು.

ವಿವಿಧ ಸಮುದಾಯಗಳ ಮೀಸಲಾತಿ ಹೋರಾಟದ ಬಗ್ಗೆ ಪ್ರತಿಕ್ರಿಯಿಸಿದ ಅವರು, ‘ಅಲ್ಪಸಂಖ್ಯಾತರ ಬೇಡಿಕೆಗಳೂ ಸಾಕಷ್ಟಿವೆ. ಆದರೆ ಬಿಜೆಪಿ ಸರ್ಕಾರ ಅವುಗಳನ್ನು ಈಡೇರಿಸುತ್ತದೆ ಎಂದು ನಿರೀಕ್ಷೆ ಮಾಡಬಹುದೇ? ಬಿಜೆಪಿ ಆಡಳಿತದಲ್ಲಿ ಅಲ್ಪಸಂಖ್ಯಾತರು ಹೋರಾಟ ಮಾಡಿದರೆ ಏನು ಪ್ರಯೋಜನ’ ಎಂದು ಪ್ರಶ್ನಿಸಿದರು.

‘ಮುಖ್ಯಮಂತ್ರಿ ಅಭ್ಯರ್ಥಿ ಘೋಷಣೆ ಮಾಡದಂತೆ ಹೈಕಮಾಂಡ್ ತಾಕೀತು’

ಕುಶಾಲನಗರ (ಕೊಡಗು ಜಿಲ್ಲೆ): ‘ಚುನಾವಣೆಗೂ ಮೊದಲೇ ಮುಖ್ಯಮಂತ್ರಿ ಅಭ್ಯರ್ಥಿ ಘೋಷಣೆ ಮಾಡದಂತೆ ಹೈಕಮಾಂಡ್ ತಾಕೀತು ಮಾಡಿದೆ’ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ ಶನಿವಾರ ಇಲ್ಲಿ ಹೇಳಿದರು. ‘ಸಿದ್ದರಾಮಯ್ಯ ಮುಖ್ಯಮಂತ್ರಿ ಅಭ್ಯರ್ಥಿ’ ಎಂದು ಕೆಲವು ಶಾಸಕರು ಹೇಳುತ್ತಿರುವ ಬಗ್ಗೆ, ಸುದ್ದಿಗಾರರ ಕೇಳಿದ ಪ್ರಶ್ನೆಗೆ ಮೇಲಿನಂತೆ ಪ್ರತಿಕ್ರಿಯಿಸಿದರು.

‘ಪರ್ವ ವಿರಾಟ್ ದರ್ಶನ‘ ವಿಚಾರ ಸಂಕಿರಣ ಇಂದು

ಮೈಸೂರು: ರಂಗಾಯಣ ಮತ್ತು ಡಾ.ಎಸ್.ಎಲ್.ಭೈರಪ್ಪ ಸಾಹಿತ್ಯ ಪ್ರತಿಷ್ಠಾನದ ವತಿಯಿಂದ, ಪರ್ವ ಕಾದಂಬರಿ ಹಾಗೂ ರಂಗಪ್ರಸ್ತುತಿ ಕುರಿತಾಗಿ ಇದೇ 21ರಂದು ಮೈಸೂರಿನಲ್ಲಿ, ‘ಪರ್ವ ವಿರಾಟ್ ದರ್ಶನ’ ವಿಚಾರ ಸಂಕಿರಣ ಆಯೋಜಿಸಲಾಗಿದೆ.

‘ಪರ್ವ’ ನಾಟಕ ಪ್ರದರ್ಶನಕ್ಕೆ ಪೂರ್ವಭಾವಿಯಾಗಿ ಭಾನುವಾರ ಬೆಳಿಗ್ಗೆ 10ಕ್ಕೆ ಕಲಾಮಂದಿರದಲ್ಲಿ ನಡೆಯಲಿರುವ ಈ ಕಾರ್ಯಕ್ರಮವನ್ನು ಎಸ್.ಎಲ್. ಭೈರಪ್ಪ ಉದ್ಘಾಟಿಸುವರು. ಇದೇ ಸಂದರ್ಭದಲ್ಲಿ, ಮಾರ್ಚ್ 12, 13 ಮತ್ತು 14ರಂದು ಕಲಾಮಂದಿರದಲ್ಲಿ ಪ್ರದರ್ಶನಗೊಳ್ಳಲಿರುವ ನಾಟಕದ ಟಿಕೆಟ್ ಬಿಡುಗಡೆ ಮಾಡಲಿದ್ದಾರೆ ಎಂದು ರಂಗಾಯಣ ನಿರ್ದೇಶಕ ಅಡ್ಡಂಡ ಸಿ. ಕಾರ್ಯಪ್ಪ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪರ್ವ ಕಾದಂಬರಿಯ ರಷ್ಯನ್ ಮತ್ತು ಮ್ಯಾಂಡರಿನ್ ಭಾಷೆಯ ಆವೃತ್ತಿಯನ್ನು ಶತಾವಧಾನಿ ಆರ್. ಗಣೇಶ್ ಬಿಡುಗಡೆ ಮಾಡಲಿದ್ದು, ‘ಪರ್ವ ವಿರಾಟ್ ದರ್ಶನ’ ಕುರಿತು ಉಪನ್ಯಾಸ ನೀಡುವರು. ‘ಪರ್ವ ಚಿಗುರೊಡೆದ ಬಗೆ’ ಕುರಿತು ನಾಟಕ ನಿರ್ದೇಶಕ ಪ್ರಕಾಶ ಬೆಳವಾಡಿ ಮಾತನಾಡಲಿದ್ದಾರೆ. ಮಧ್ಯಾಹ್ನ 2.30ಕ್ಕೆ ‘ಪರ್ವ– ನಾಲ್ಕು ದಶಕದ ನೆನಪು’ಗಳನ್ನು ಎಸ್.ಎಲ್.ಭೈರಪ್ಪ ಹಂಚಿಕೊಳ್ಳಲಿದ್ದಾರೆ. ಎಸ್.ಎಲ್.ಭೈರಪ್ಪ ಸಾಹಿತ್ಯ ಪ್ರತಿಷ್ಠಾನದ ಕಾರ್ಯದರ್ಶಿ ಡಾ.ಜಿ.ಎಲ್.ಶೇಖರ್, ರಂಗಾಯಣ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ ಪಾಲ್ಗೊಳ್ಳುವರು. ವಿಚಾರ ಸಂಕಿರಣದಲ್ಲಿ ಭಾಗವಹಿಸಲು 600 ಮಂದಿ ಹೆಸರು ನೋಂದಾಯಿಸಿಕೊಂಡಿದ್ದಾರೆ ಎಂದು ತಿಳಿಸಿದ್ದಾರೆ.

‘ಸ್ಟಾರ್ ಹೋಟೆಲ್‌ಗಳಿಗೆ ಕೈಗಾರಿಕೆ ಸ್ಥಾನಮಾನ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೋವಿಡ್‌ನಿಂದ ನಲುಗಿರುವ ಪ್ರವಾಸೋದ್ಯಮ ವಲಯದ ಚೇತರಿಕೆಗೆ ಪೂರಕವಾಗುವಂತೆ ಸ್ಟಾರ್ ವರ್ಗೀಕೃತ ಹೋಟೆಲ್‌ಗಳಿಗೆ ಕೈಗಾರಿಕೆಯ ಸ್ಥಾನಮಾನ ನೀಡಲು ರಾಜ್ಯ ಸಚಿವ ಸಂಪುಟ ಸಭೆ ನಿರ್ಧಾರ ಕೈಗೊಂಡಿದೆ’ ಎಂದು ಪ್ರವಾಸೋದ್ಯಮ ಸಚಿವ ಸಿ.ಪಿ. ಯೋಗೇಶ್ವರ್ ಹೇಳಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, ‘ಕೈಗಾರಿಕೆಗಳ ರೀತಿಯಲ್ಲಿ ಹೋಟೆಲ್ ಕ್ಷೇತ್ರಕ್ಕೂ ಆಸ್ತಿ ತೆರಿಗೆ ಮತ್ತು ವಿದ್ಯುತ್ ದರದಲ್ಲಿ ರಿಯಾಯಿತಿ ನಿಗದಿಪಡಿಸಲು ಸಂಪುಟ ಸಭೆ ಅನುಮೋದನೆ ನೀಡಿದೆ. ಕೇಂದ್ರ ಸರ್ಕಾರದಿಂದ ಅನುಮೋದನೆಗೊಂಡಿರುವ ಸ್ಟಾರ್ ವರ್ಗೀಕೃತ ಹೋಟೆಲ್‌ಗಳಿಗೆ ಈ ರಿಯಾಯಿತಿ ಅನ್ವಯವಾಲಿದೆ’ ಎಂದರು.

‘ಕೈಗಾರಿಕೆ ಸ್ಥಾನಮಾನ ನೀಡುವುದರಿಂದ ಸ್ಟಾರ್ ವರ್ಗೀಕೃತ ಹೋಟೆಲ್‌ಗಳು, ಕೈಗಾರಿಕೆ ಹಾಗೂ ವಾಣಿಜ್ಯ ವಿದ್ಯುತ್ ದರಗಳ ವ್ಯತ್ಯಾಸದ ಮೊತ್ತದ ರಿಯಾಯಿತಿಯನ್ನು ಐದು ವರ್ಷ ಪಡೆಯಲಿವೆ. ಅದೇ ರೀತಿ, ಆಸ್ತಿ ತೆರಿಗೆಯಲ್ಲಿ ಐದು ವರ್ಷಗಳಿಗೆ ಹೋಟೆಲ್ ಕಟ್ಟಡಕ್ಕೆ ಅನ್ವಯವಾಗುವ ಆಸ್ತಿ ತೆರಿಗೆ ಹಾಗೂ ಉದ್ಯಮ ಕಟ್ಟಡಕ್ಕೆ ಅನ್ವಯವಾಗುವ ಆಸ್ತಿ ತೆರಿಗೆಯ ವ್ಯತ್ಯಾಸದ ಮೊತ್ತದ ರಿಯಾಯಿತಿ ಪಡೆಯಲಿವೆ’ ಎಂದು ವಿವರಿಸಿದರು.

‘ರಾಜ್ಯದಲ್ಲಿ 62 ಸ್ಟಾರ್ ವರ್ಗೀಕೃತ ಹೋಟೆಲ್‌ಗಳನ್ನು ಕೇಂದ್ರ ಗುರುತಿಸಿದ್ದು, ಅವುಗಳನ್ನು ಕೈಗಾರಿಕೆ ವ್ಯಾಪ್ತಿಗೆ ತರಲಾಗುತ್ತಿದೆ ಕೈಗಾರಿಕೆ, ಇಂಧನ, ನಗರಾಭಿವೃದ್ಧಿ ಇಲಾಖೆ ಹಾಗೂ ಮಹಾನಗರ ಪಾಲಿಕೆಗಳ ಜೊತೆ ಸಭೆ ನಡೆಸಿದ ಬಳಿಕ ಈ ಬಗ್ಗೆ ಸರ್ಕಾರಿ ಆದೇಶ ಹೊರಡಿಸಲಾಗುವುದು. ಈ ಹೋಟೆಲ್‌ಗಳಿಗೆ ಹೋಗುವ ಗ್ರಾಹಕರಿಗೂ ರಿಯಾಯಿತಿ ದೊರಕುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು’ ಎಂದರು.

ರಾಜ್ಯದ ಐತಿಹಾಸಿಕ ಪ್ರವಾಸಿ ತಾಣಗಳನ್ನು ವಿಶ್ವ ದರ್ಜೆಗೇರಿಸಿ ದೇಶ-ವಿದೇಶಗಳಿಂದ ಪ್ರವಾಸಿಗರನ್ನು ಆಕರ್ಷಿಸಲು ಕ್ರಿಯಾ ಯೋಜನೆ ಸಿದ್ಧಪಡಿಸುವಂತೆ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದ್ದಾಗಿ ಅವರು ಹೇಳಿದರು.

ಹಂಪಿಯಲ್ಲಿ ಸ್ಟಾರ್ ಹೋಟೆಲ್

‘ಬಾದಾಮಿ, ಹಂಪಿ, ವಿಜಯಪುರ ಮತ್ತು ಬೇಲೂರುಗಳಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ವತಿಯಿಂದ ನಾಲ್ಕು ತ್ರಿ ಸ್ಟಾರ್ ಹೋಟೆಲ್‌ಗಳನ್ನು ನಿರ್ಮಿಸಲಾಗುವುದು’ ಎಂದು ಸಚಿವ ಯೋಗೇಶ್ವರ್ ಹೇಳಿದರು.

‘ನಂದಿ ಗಿರಿಧಾಮ, ಜೋಗ್ ಫಾಲ್ಸ್, ಕೊಡಚಾದ್ರಿ, ಕೆಮ್ಮಣ್ಣುಗುಂಡಿಯ ಅಭಿವೃದ್ಧಿಗೆ ನಿರ್ಧರಿಸಿದ್ದೇವೆ. ಅದೇ ರೀತಿ ಬಾದಾಮಿ, ಪಟ್ಟದಕಲ್ಲು ಪಾರಂಪರಿಕ ತಾಣವಾಗಿ ಅಭಿವೃದ್ಧಿಗೂ ರೂಪುರೇಷೆ ನಡೆದಿದೆ. ಬಾದಾಮಿ ಕ್ಷೇತ್ರದ ಶಾಸಕ ಸಿದ್ದರಾಮಯ್ಯ ಜೊತೆಗೂ ಚರ್ಚಿಸಿದ್ದೇನೆ’ ಎಂದರು.

‘ಅಣೆಕಟ್ಟೆಗಳಲ್ಲಿ ಜಲಕ್ರೀಡೆಗಳ ಚಟುವಟಿಕೆ ಅಭಿವೃದ್ಧಿಪಡಿಸಲಾಗುವುದು. ನಂದಿ ಗಿರಿಧಾಮಕ್ಕೆ ರೋಪ್ ವೇ ಯೋಜನೆ ರೂಪಿಸಲು ಖಾಸಗಿ ಕಂಪನಿ ಮುಂದಾಗಿದೆ’ ಎಂದರು.



ಒನಕೆ ಪ್ರತಿಭಟನೆ

‘ಮದ್ಯ ನಿಷೇಧ ಆಂದೋಲನ ಕರ್ನಾಟಕ’ ಸಂಘಟನೆಯ ನೇತೃತ್ವದಲ್ಲಿ ಮಹಿಳೆಯರು ಅಕ್ರಮ ಮದ್ಯ ಮಾರಾಟ ತಡೆಗೆ ಆಗ್ರಹಿಸಿ ಶನಿವಾರ ರಾಯಚೂರಿನಲ್ಲಿ ಒನಕೆ ಹಿಡಿದು ಅಬಕಾರಿ ಇಲಾಖೆಯ ಉಪ ಆಯುಕ್ತರ ಕಚೇರಿ ಎದುರು ಧರಣಿ ನಡೆಸಿದರು. ಆಂದೋಲನದ ಸಂಚಾಲಕಿ ವಿದ್ಯಾ ಪಾಟೀಲ, ಮೋಕ್ಷಮ್ಮ, ಗೌರಮ್ಮ, ಈರಮ್ಮ, ಭೀಮಮ್ಮ, ಪಾರ್ವತಿ ಇದ್ದರು

‘ಮುಖ್ಯಮಂತ್ರಿಯಿಂದ ಜಾತೀಯತೆ ಪೋಷಣೆ’

ಪ್ರಜಾವಾಣಿ ವಾರ್ತೆ

ಮೈಸೂರು: ‘ಕರ್ನಾಟಕದಲ್ಲಿ ಜಾತೀಯತೆ ಪೋಷಿಸುವ ಕೆಲಸವನ್ನು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಬಹಳ ಚೆನ್ನಾಗಿ ಮಾಡುತ್ತಿದ್ದಾರೆ. ‘ಜನರಿಂದ, ಜನರಿಗಾಗಿ, ಜನರಿಗೋಸ್ಕರ’ ಎಂಬ ಘೋಷವಾಕ್ಯದಡಿ ಸರ್ಕಾರ ನಡೆಯುತ್ತಿಲ್ಲ. ‘ಲಿಂಗಾಯತರಿಂದ, ಲಿಂಗಾಯತರಿಗಾಗಿ, ಲಿಂಗಾಯತರಿಗೋಸ್ಕರ’ ಇರುವ ಸರ್ಕಾರ ಇದು’ ಎಂದು ಮಾಜಿ ಅಡ್ವೊಕೇಟ್ ಜನರಲ್ ಪ್ರೊ.ರವಿವರ್ಮ ಕುಮಾರ್ ಟೀಕಿಸಿದರು.

ಮೈಸೂರು ವಿಶ್ವವಿದ್ಯಾಲಯ ಡಾ.ಬಿ. ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರದ ವತಿಯಿಂದ ಶನಿವಾರ ನಡೆದ, ಅಂತರರಾಷ್ಟ್ರೀಯ ಸಾಮಾಜಿಕ ನ್ಯಾಯ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಯಡಿಯೂರಪ್ಪ ಅವರು 16 ಜಾತಿಗಳ ಅಭಿವೃದ್ಧಿ ಮಂಡಳಿ ರಚಿಸಿ, ರಾಜ್ಯದ ಬೊಕ್ಕಸದಿಂದ ಸಾಕಷ್ಟು ಹಣ ಕೊಟ್ಟಿದ್ದಾರೆ. ಅವರ ಜಾತಿಗೆ ₹500 ಕೋಟಿ ಮೀಸಲಿಟ್ಟಿದ್ದಾರೆ. ಜಾತೀಯತೆಯನ್ನು ರಾಜಾರೋಷವಾಗಿ ಪೋಷಿಸುತ್ತಿದ್ದಾರೆ. ಸಂವಿಧಾನ ವಿರೋಧಿ ಚಟುವಟಿಕೆ ನಡೆಯುತ್ತಿದೆ’ ಎಂದು ಕಿಡಿಕಾರಿದರು.

ಒಂದೊಂದು ಜಾತಿಯ ಮಠಗಳಿಗೆ ಇಂತಿಷ್ಟು ಹಣ ನೀಡಲಾಗಿದೆ. ಜನರ ದುಡ್ಡನ್ನು ಜಾತಿಗಳಿಗಾಗಿ ಮುಡುಪಾಗಿಟ್ಟಿರುವ ರಾಜ್ಯ ಸರ್ಕಾರದ ನೀತಿಯೇ ಇಂದು ನಡೆಯುತ್ತಿರುವ ಮೀಸಲಾತಿ ಚಳವಳಿಗಳಿಗೆ ಕಾರಣ. ಜಾತ್ಯತೀತ ಸರ್ಕಾರ ಇದ್ದಿದ್ದರೆ ಇಂತಹ ಚಳವಳಿಯೇ ನಡೆಯುತ್ತಿರಲಿಲ್ಲ ಎಂದರು.

25 ವರ್ಷಗಳ ಹಿಂದೆ

ಬುಧವಾರ, 21-2-1996

• **ಬೂಟಾ, ನೇತಂ ರಾಜೀನಾಮೆ: ನಾಳೆ ಇನ್ನಷ್ಟು ಸಚಿವರ ವಿರುದ್ಧ ಆರೋಪ**

ನವದೆಹಲಿ, ಫೆ.20(ಪಿಟಿಐ): ‘ಬಹುಕೋಟಿ ಜೈನ್ ಹವಾಲ ಹಗರಣ’ ಇಂದು ಇನ್ನಿಬ್ಬರು ಕೇಂದ್ರ ಸಚಿವರನ್ನು ‘ಬಲಿ’ ತೆಗೆದುಕೊಂಡಿದೆ. ಜೈನ್ ಡೈರಿಯಲ್ಲಿ ಹೆಸರು ನಮೂದಾಗಿದೆ ಎನ್ನಲಾದ ಕೇಂದ್ರ ನಾಗರಿಕ ಪೂರೈಕೆ ಸಚಿವ ಬೂಟಾ ಸಿಂಗ್ ಮತ್ತು ಕೃಷಿ ಖಾತೆಯ ರಾಜ್ಯ ಸಚಿವ ಅರವಿಂದ ನೇತಂ ಅವರು ಇಂದು ಸಚಿವ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ.

ಹವಾಲ ಹಗರಣದಲ್ಲಿ ಬೂಟಾಸಿಂಗ್ ಮತ್ತು ಅರವಿಂದ ನೇತಂ ಅವರ ಮೇಲೂ ಸಿಬಿಐ ಆರೋಪಪಟ್ಟಿ ಸಲ್ಲಿಸಲಿದೆ ಎಂಬ ಸುದ್ದಿಯ ಹಿನ್ನೆಲೆಯಲ್ಲಿ ಈ ಇಬ್ಬರು ಸಚಿವರು ರಾಜೀನಾಮೆ ನೀಡಿದ್ದಾರೆ.

50 ವರ್ಷಗಳ ಹಿಂದೆ

ಭಾನುವಾರ, 21-2-1971

• **ಪಳಗಿದ ಪೈಲ್ವಾನ್ ಎದುರು ಹೊಸ ಪ್ರಭಾವಶಾಲಿ**

ಹೊಸಕೋಟೆ, ಫೆ.20: ಮಲ್ಲೇಶ್ವರದಿಂದ ಮಾಲೂರವರೆಗೆ 30 ಮೈಲಿ ಹರಡಿರುವ ಹೊಸಕೋಟೆ ಲೋಕಸಭೆ ಕ್ಷೇತ್ರದಲ್ಲಿ ಚುನಾವಣೆ ಪ್ರಚಾರದ ಕಾವು ಇನ್ನೂ ಈಗ ತಾನೆ ಏರುತ್ತಿದೆ.

ಈ ಲೋಕಸಭೆ ಕ್ಷೇತ್ರ ಬೆಂಗಳೂರು ನಗರದ ಮಲ್ಲೇಶ್ವರ, ಬೆಂಗಳೂರು ಜಿಲ್ಲೆಯ ವರ್ತೂರು, ಉತ್ತರಹಳ್ಳಿ, ಯಲಹಂಕ, ದೊಡ್ಡಬಳ್ಳಾಪುರ, ದೇವನಹಳ್ಳಿ ಮತ್ತು ಹೊಸಕೋಟೆ, ಕೋಲಾರ ಜಿಲ್ಲೆಯ ಮಾಲೂರು ಈ ಎಂಟು ವಿಧಾನಸಭೆ ಕ್ಷೇತ್ರಗಳನ್ನೊಳಗೊಂಡಿದ್ದು ಯಲಹಂಕ, ದೇವನಹಳ್ಳಿ, ಹೊಸಕೋಟೆ ಮತ್ತು ಮಾಲೂರು ಕ್ಷೇತ್ರಗಳಲ್ಲಿ ಪ್ರಚಾರ ಸಾಕಷ್ಟು ಚುರುಕುಗೊಂಡಿದೆ.

ಗುಂಡಣ್ಣ



‘ಬೌದ್ಧ, ಜೈನ ಧರ್ಮದ ಪಾಠ ಕೈ ಬಿಟ್ಟಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದ ಆರನೇ ತರಗತಿಯ ಸಮಾಜ ವಿಜ್ಞಾನ ಪಠ್ಯದಿಂದ ಬೌದ್ಧ, ಜೈನ ಧರ್ಮಗಳ ಪರಿಚಯ ಪಾಠಗಳನ್ನು ಕೈ ಬಿಟ್ಟಿಲ್ಲ’ ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್. ಸುರೇಶ್‌ಕುಮಾರ್ ಎಂದು ಹೇಳಿದ್ದಾರೆ

‘ಬೌಧ ಧರ್ಮ ಮತ್ತು ಜೈನ ಧರ್ಮದ ಕುರಿತ ಪಾಠವನ್ನು ಕೈಬಿಡುವ ಪ್ರಶ್ನೆಯೇ ಇಲ್ಲ’ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

‘ಆರನೇ ತರಗತಿಯ ಸಮಾಜವಿಜ್ಞಾನ ಭಾಗ–1ರ ಪಾಠದ ಪೀಠಿಕಾ ರೂಪದ ವಿವರಣೆಯಲ್ಲಿ ಅನಗತ್ಯ ಮತ್ತು ಆರನೇ ತರಗತಿಯ ಮಕ್ಕಳ ವಯೋಮಾನಕ್ಕೆ ಮೀರಿದ ಪಠ್ಯಾಂಶ ಇದೆ ಎಂಬ ಅನೇಕರ ಅಭಿಪ್ರಾಯಗಳಿಗೆ ಪೂರಕವಾಗಿ, ಅದನ್ನು ಕೈಬಿಡಲು ನಿರ್ಧರಿಸಲಾಗಿದೆ. ಆದರೆ, ಬೌದ್ಧ, ಜೈನ ಧರ್ಮಗಳ ಪರಿಚಯ ಪಾಠಗಳಿಗೆ ಕೊಕ್ ನೀಡಿಲ್ಲ’ ಎಂದೂ ಅವರು ತಿಳಿಸಿದ್ದಾರೆ.

‘2016–17ನೇ ಸಾಲಿನಲ್ಲಿ ಪಠ್ಯಪುಸ್ತಕ ಪರಿಷ್ಕರಣೆಗೊಂಡಂದಿನಿಂದ ಪಠ್ಯಗಳು ಜಾರಿಯಲ್ಲಿವೆ. ನಮ್ಮ ಮಕ್ಕಳಲ್ಲಿ ಅನಗತ್ಯ ದ್ವೇಷದ ಭಾವನೆ ಬಿತ್ತಬಾರದು ಎನ್ನುವ ಸದುದ್ದೇಶದಿಂದ ಈ ನಿರ್ಣಯಗಳನ್ನು ತೆಗೆದುಕೊಳ್ಳಲಾಗಿದೆ’ ಎಂದೂ ಸ್ಪಷ್ಟಪಡಿಸಿದ್ದಾರೆ.

‘1ರಿಂದ 10ನೇ ತರಗತಿಯ ಸಮಾಜವಿಜ್ಞಾನ ಮತ್ತು ಭಾಷಾ ವಿಷಯಗಳ ಯಾವುದೇ ಪಠ್ಯಗಳಲ್ಲಿ ಇರಬಹುದಾದ ಯಾವುದೇ ಸಮುದಾಯದ ಭಾವನೆಗಳಿಗೆ ಧಕ್ಕೆ ತರಬಹುದಾದ ವಿಷಯಗಳ ಕುರಿತು ಶಿಕ್ಷಕರು ಹಾಗೂ ತಜ್ಞರುಗಳನ್ನು ಒಳಗೊಂಡ ಸಮಿತಿ ರಚಿಸಿ, ಅವರಿಂದ ವರದಿ ಪಡೆದು ಕ್ರಮ ತೆಗೆದುಕೊಳ್ಳಲು ಕೂಡಾ ಉದ್ದೇಶಿಸಲಾಗಿದೆ’ ಎಂದೂ ಅವರು ತಿಳಿಸಿದ್ದಾರೆ.

ಭಾರತ–ಚೀನಾ ನಡುವೆ 10ನೇ ಸುತ್ತಿನ ಕಮಾಂಡರ್ ಮಟ್ಟದ ಮಾತುಕತೆ; ಉದ್ವಿಗ್ನತೆಯನ್ನು ತಗ್ಗಿಸುವುದು ಮಾತುಕತೆಯ ಮುಖ್ಯ ಉದ್ದೇಶ

ಗಡಿಯಿಂದ ಸೈನಿಕರ ವಾಪಸ್‌ಗೆ ಭಾರತ ಒತ್ತಾಯ

ನವದೆಹಲಿ (ಪಿಟಿಐ/ಎಎಫ್‌ಪಿ): ಗಡಿಯ ಕೆಲವೆಡೆಗಳಲ್ಲಿ ನಿಯೋಜಿಸಿರುವ ಸೈನಿಕರನ್ನು ಹಿಂದಕ್ಕೆ ಕರೆಸಿಕೊಳ್ಳಬೇಕು ಎಂಬ ಪ್ರಸ್ತಾವವನ್ನು ಭಾರತವು ಚೀನಾದ ಮುಂದೆ ಇರಿಸಿದೆ. ಭಾರತ–ಚೀನಾ ನಡುವಿನ ಕಮಾಂಡರ್ ಮಟ್ಟದ 10ನೇ ಸುತ್ತಿನ ಮಾತುಕತೆ ಶನಿವಾರ ನಡೆಯಿತು. ಪೂರ್ವ ಲಡಾಖ್‌ನ ಹಾಟ್ ಸ್ಪ್ರಿಂಗ್ಸ್, ಗೊಗ್ರಾ ಮತ್ತು ದೆಪ್ಸಾಂಗ್‌ನಲ್ಲಿರುವ ಸೇನೆಯನ್ನು ಹಿಂಪಡೆಯುವ ಮೂಲಕ ಈ ಪ್ರದೇಶದಲ್ಲಿನ ಉದ್ವಿಗ್ನತೆಯನ್ನು ತಗ್ಗಿಸುವುದು ಮಾತುಕತೆಯ ಉದ್ದೇಶವಾಗಿತ್ತು ಎಂದು ಮೂಲಗಳು ತಿಳಿಸಿವೆ.

ಒಪ್ಪಂದದ ಭಾಗವಾಗಿ ಪ್ಯಾಂಗಾಂಗ್ ಸರೋವರ ಪ್ರದೇಶಗಳ ಉತ್ತರ ಮತ್ತು ದಕ್ಷಿಣ ದಂಡೆಗಳಿಂದ ಸೈನಿಕರನ್ನು ಹಿಂದಕ್ಕೆ ಕರೆಸಿಕೊಳ್ಳುವ ಪ್ರಕ್ರಿಯೆಯನ್ನು ಚೀನಾ ಮತ್ತು ಭಾರತೀಯ ಸೇನೆಗಳು ಪೂರ್ಣಗೊಳಿಸಿದ ಎರಡು ದಿನಗಳ ನಂತರ ಕೋರ್ ಕಮಾಂಡರ್ ಮಟ್ಟದ ಮಾತುಕತೆ ನಡೆಯಿತು. ನೈಜ ನಿಯಂತ್ರಣ ರೇಖೆಯ ಚೀನಾದ ಬದಿಯಲ್ಲಿರುವ ಮೊಲ್ಡೊ ಗಡಿ ಬಿಂದುವಿನಲ್ಲಿ ಶನಿವಾರ ಬೆಳಿಗ್ಗೆ 10 ಗಂಟೆಗೆ ಸಭೆ ಪ್ರಾರಂಭವಾಯಿತು ಎಂದು ಮೂಲಗಳು ತಿಳಿಸಿವೆ.

ಕಳೆದ 9 ತಿಂಗಳಿನಿಂದ ಬಿಗುವಿನ ಸ್ಥಿತಿಗೆ ಕಾರಣವಾಗಿದ್ದ ಹಾಟ್ ಸ್ಪ್ರಿಂಗ್ಸ್, ಗೊಗ್ರಾ ಮತ್ತು ದೆಪ್ಸಾಂಗ್‌ನಲ್ಲಿ ತ್ವರಿತವಾಗಿ ಸೇನೆಯನ್ನು ವಾಪಸ್ ಕರೆಸಿಕೊಳ್ಳಬೇಕು ಎಂದು ಭಾರತ ಪ್ರಸ್ತಾವ ಇರಿಸಿತು. ಮಾತುಕತೆಯ ಮುಖ್ಯ ಉದ್ದೇಶ ಇದೇ ಆಗಿತ್ತು.

ಫೆಬ್ರುವರಿ 10ರಂದು ಸೇನಾ ವಾಪಸಾತಿ ಪ್ರಕ್ರಿಯೆ ಶುರುವಾಗಿತ್ತು. ಎರಡೂ ಸೇನೆಗಳು ಈಗ ಹಿಂದೆ ಸರಿದಿವೆ. ಸೇನಾ ವಾಪಸಾತಿ ನಡೆದ 48 ಗಂಟೆಯ ಒಳಗೆ ಮತ್ತೊಂದು ಸುತ್ತಿನ ಸಭೆ ನಡೆಯಲಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಸಂಸತ್ತಿಗೆ ತಿಳಿಸಿದ್ದರು. ಅದರ ಪ್ರಕಾರ ಮಾತುಕತೆ ನಡೆಯಿತು.

ಶನಿವಾರದ ಮಾತುಕತೆಯಲ್ಲಿ ಭಾರತೀಯ ನಿಯೋಗದ ನೇತೃತ್ವವನ್ನು ಲೇಹ್ ಮೂಲದ 14 ಕೋರ್‌ನ ಕಮಾಂಡರ್ ಲೆಫ್ಟಿನೆಂಟ್ ಜನರಲ್ ಪಿ.ಜಿ.ಕೆ ಮೆನನ್ ವಹಿಸಿದ್ದರು. ಚೀನಾ ಸೇನೆಯ ದಕ್ಷಿಣ ಕ್ಸಿನ್‌ಜಿಯಾಂಗ್ ಮಿಲಿಟರಿ ಜಿಲ್ಲೆಯ ಕಮಾಂಡರ್ ಮೇಜರ್ ಜನರಲ್ ಲಿಯು ಲಿನ್ ಅವರು ಚೀನಾದ ಕಡೆಯ ನೇತೃತ್ವ ವಹಿಸಿದ್ದರು.



ಭಾರತ–ಚೀನಾ ಸೈನಿಕರ ನಡುವೆ ಘರ್ಷಣೆ ನಡೆದ ಗಾಲ್ವನ್ ಕಣಿವೆಯ ದೃಶ್ಯವನ್ನು ಚೀನಾದ ಸರ್ಕಾರಿ ಸ್ವಾಮ್ಯದ ಮಾಧ್ಯಮ ಬಿಡುಗಡೆ ಮಾಡಿದೆ



ಚೀನಾದ ಸರ್ಕಾರಿ ಸ್ವಾಮ್ಯದ ಮಾಧ್ಯಮ ಬಿಡುಗಡೆ ಮಾಡಿದ ವಿಡಿಯೊದಲ್ಲಿ ವ್ಯಕ್ತಿಯೊಬ್ಬರಿಗೆ ಚೀನಾ ಸೈನಿಕರು ಚಿಕಿತ್ಸೆ ನೀಡುತ್ತಿರುವ ದೃಶ್ಯವಿದೆ– ಎಎಫ್‌ಪಿ ಚಿತ್ರಗಳು

ವಿಡಿಯೊ ಹಂಚಿಕೊಂಡ ಚೀನಾ

(ಬೀಜಿಂಗ್ ವರದಿ): ಕಳೆದ ವರ್ಷ ಗಡಿಯಲ್ಲಿ ಭಾರತ ಹಾಗೂ ಚೀನಾ ಸೈನಿಕರ ನಡುವೆ ನಡೆದ ಘರ್ಷಣೆಯದ್ದು ಎನ್ನಲಾದ ವಿಡಿಯೊವನ್ನು ಚೀನಾದ ಸರ್ಕಾರಿ ಸುದ್ದಿಸಂಸ್ಥೆ ಬಿಡುಗಡೆ ಮಾಡಿದೆ.

ಘರ್ಷಣೆಯಲ್ಲಿ ಚೀನಾ ಕಡೆಯ ನಾಲ್ವರು ಸೈನಿಕರು ಹತರಾಗಿದ್ದಾರೆ ಎಂದು ಚೀನಾ ಶುಕ್ರವಾರವಷ್ಟೇ ಬಹಿರಂಗಪಡಿಸಿತ್ತು. ಈ ಘಟನೆಯಲ್ಲಿ ಭಾರತವು 20 ಸೈನಿಕರನ್ನು ಕಳೆದುಕೊಂಡಿತ್ತು.

ಹಿಮಾವೃತ ಕಾರಕೋರಂ ಪರ್ವತ ಸಾಲಿನಲ್ಲಿ ಚೀನಾದ ಸೈನಿಕರ ಕಡೆಗೆ ಕಟ್ಟಿಗೆ ಹಾಗೂ ಗುರಾಣಿ ಹಿಡಿದಿದ್ದ ಭಾರತೀಯ ಸೈನಿಕರ ದಂಡು ಸಂಚರಿಸುತ್ತಿರುವ ದೃಶ್ಯವು ಶನಿವಾರ ಬಿಡುಗಡೆ ಮಾಡಲಾದ ವಿಡಿಯೊದಲ್ಲಿದೆ. ದ್ವಿಪಕ್ಷೀಯ ಒಪ್ಪಂದದ ಪ್ರಕಾರ ಎರಡೂ ಕಡೆಯ ಸೈನಿಕರು ಬಂದೂಕುಗಳನ್ನು ಬಳಸುವಂತಿಲ್ಲ. ಹೀಗಾಗಿ ಈ ಭಾಗದಲ್ಲಿ ದೊಣ್ಣೆ, ಕಲ್ಲು ಹಿಡಿದು ಸೈನಿಕರು ಹೊಡೆದಾಡುತ್ತಾರೆ.

‘ಅವರು ಈಗ ಇಲ್ಲಿನ ಮತ್ತೊಂದು ಹೊಸ ಟೆಂಟ್‌ಗೆ ಸ್ಥಳಾಂತರವಾಗಿದ್ದಾರೆ’ ಎಂದು ಚೀನಾದ ಒಬ್ಬ ಸೈನಿಕ ಹೇಳಿರುವ ಧ್ವನಿ ವಿಡಿಯೊದಲ್ಲಿ ಇದೆ. ಚೀನಾದ ಸೈನಿಕರನ್ನು ‘ಪ್ರಚೋದಿಸಲು’ ಭಾರತೀಯ ಸೈನಿಕರು ಗಡಿ ದಾಟಿ ಬಂದಿದ್ದಾರೆ ಎಂಬುದನ್ನು ತೋರಿಸುವುದು ವಿಡಿಯೊ ಬಿಡುಗಡೆಯ ಹಿಂದಿನ ಉದ್ದೇಶ ಎನ್ನಲಾಗಿದೆ.

ಮತ್ತೊಂದು ವಿಡಿಯೊ ತುಣುಕಿನಲ್ಲಿ ಎರಡೂ ಕಡೆಯ ಸೈನಿಕರು ಕತ್ತಲೆಯಲ್ಲಿ ಘರ್ಷಣೆಯಲ್ಲಿ ತೊಡಗಿರುವುದು ಕಂಡುಬರುತ್ತದೆ. ನೆಲದ ಮೇಲೆ ರಕ್ತ ಸೋರುತ್ತಾ ಬಿದ್ದಿದ್ದ ಒಬ್ಬ ವ್ಯಕ್ತಿಗೆ ಚೀನಾದ ಸೈನಿಕರು ಚಿಕಿತ್ಸೆ ನೀಡುತ್ತಿರುವ ದೃಶ್ಯವೂ ಇದೆ.



ಚುನಾವಣೆಗೆ ಭದ್ರತಾ ವ್ಯವಸ್ಥೆ

ಅರೆಸೇನಾ ಪಡೆಯ ಯೋಧರು ಶನಿವಾರ ಕೋಲ್ಕತ್ತದ ಚಿತ್ತಾಪುರ ಯಾರ್ಡ್‌ಗೆ ವಿಶೇಷ ರೈಲಿನಲ್ಲಿ ಬಂದಿಳಿದರು. ಪಶ್ಚಿಮಬಂಗಾಳದಲ್ಲಿ ಮುಂಬರುವ ವಿಧಾನಸಭೆ ಚುನಾವಣೆಗಾಗಿ ರಾಜ್ಯದ ವಿವಿಧೆಡೆ ಸೇನಾಪಡೆ ಯೋಧರನ್ನು ನಿಯೋಜಿಸಲಾಗಿದೆ. ಪಿಟಿಐ ಚಿತ್ರ


ಮಾಲ್ಡೀವ್ಸ್‌ಗೆ ₹290 ಕೋಟಿ ಸಾಲ ನೀಡಿದ ಭಾರತ

ಮಾಲೆ (ಪಿಟಿಐ): ಮಾಲ್ಡೀವ್ಸ್ ದೇಶದ ಕ್ರೀಡಾ ಮೂಲಸೌಕರ್ಯ ವೃದ್ಧಿಸುವ ಉದ್ದೇಶದಿಂದ ಭಾರತವು ಮಾಲ್ಡೀವ್ಸ್‌ಗೆ ₹290.20 ಕೋಟಿ ಸಾಲ ನೀಡಿದೆ.

ಇಲ್ಲಿನ ಎಕುವೇನಿ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ವಿದೇಶಾಂಗ ಸಚಿವ ಎಸ್. ಜೈಶಂಕರ್ ಈ ವಿಷಯ ಪ್ರಕಟಿಸಿದರು.

ಮಾಲ್ಡೀವ್ಸ್ ಮತ್ತು ಮಾರಿಷಸ್ ಪ್ರವಾಸ ಕೈಗೊಂಡಿರುವ ಜೈಶಂಕರ್ ಅವರು ಇದಕ್ಕೂ ಮೊದಲು ಮಾಲ್ಡೀವ್ಸ್‌ಗೆ ಹೆಚ್ಚುವರಿ ಒಂದು ಲಕ್ಷ ಕೊರೊನಾ ಲಸಿಕೆಗಳನ್ನು ಹಸ್ತಾಂತರಿಸಿದರು.

‘ಮಾಲ್ಡೀವ್ಸ್ ಜನರ ಹಿತಾಸಕ್ತಿಗಳು ಮತ್ತು ಆಕಾಂಕ್ಷೆಗಳನ್ನು ಈಡೇರಿಸುವ ಉದ್ದೇಶದ ಕ್ರೀಡಾ ಮೂಲಸೌಕರ್ಯಗಳ ಅಭಿವೃದ್ಧಿಗೆ ಭಾರತವು ₹290.20 ಕೋಟಿ ಸಾಲವಾಗಿ ನೀಡುತ್ತಿರುವುದನ್ನು ಘೋಷಿಸಲು ನನಗೆ ತುಂಬಾ ಸಂತೋಷವಾಗಿದೆ’ ಎಂದು ಜೈಶಂಕರ್ ಹೇಳಿದರು.



ಎಸ್. ಜೈಶಂಕರ್

‘ಮಾಲ್ಡೀವ್ಸ್ ಜನರು ಅಪಾರ ಕ್ರೀಡಾ ಪ್ರತಿಭೆ ಹೊಂದಿದ್ದಾರೆ. ಅಧ್ಯಕ್ಷ ಇಬ್ರಾಹಿಂ ಮೊಹಮ್ಮದ್ ಸೊಲಿಹ್ ಅವರು ಕ್ರೀಡೆಗಳಿಗೆ ನೀಡಿದ ಹೆಚ್ಚಿನ ಆದ್ಯತೆಯನ್ನು ನಮ್ಮ ದೇಶ ಗಮನಿಸಿದೆ. ಅವರ ಪ್ರಯತ್ನದಲ್ಲಿ ಭಾರತವು ವಿಶ್ವಾಸಾರ್ಹ ಪಾಲುದಾರ’ ಎಂದು ಅವರು ಹೇಳಿದರು.

ಇದೇ ವೇಳೆ ಮಾಲ್ಡೀವ್ಸ್ ವಿದೇಶಾಂಗ ಸಚಿವ ಅಬ್ದುಲ್ಲಾ ಶಾಹಿದ್ ಅವರೊಂದಿಗೆ ಮಾತುಕತೆ ನಡೆಸಿದ ಸಚಿವರು, ಮಾಲ್ಡೀವ್ಸ್ ಜತೆಗೆ ಭಾರತವು ದ್ವಿಪಕ್ಷೀಯ ಸಂಬಂಧವನ್ನು ಮತ್ತಷ್ಟು ಬಲಪಡಿಸಲು ಒತ್ತುಕೊಡಲಿದೆ ಎಂದು ತಿಳಿಸಿದ್ದಾರೆ.

‘ಭಾರತವು ದೊಡ್ಡಪ್ರಮಾಣದಲ್ಲಿ ಕೋವಿಡ್ ಲಸಿಕೆ ಪೂರೈಸಿರುವ ದೇಶವೆಂದರೆ ಮಾಲ್ಡೀವ್ಸ್. ಭಾರತ ತಯಾರಿಸಿದ ಲಸಿಕೆಗಳನ್ನು ಪಡೆದ ಮೊದಲ ದೇಶವೂ ಮಾಲ್ಡೀವ್ಸ್ ಆಗಿದೆ. ಪ್ರಧಾನಿ ಮೋದಿಯವರ ‘ನೆರೆಹೊರೆಯ ಮೊದಲ ನೀತಿ’ಯಲ್ಲಿ ಮಾಲ್ಡೀವ್ಸ್‌ಗೆ ಅಗ್ರಸ್ಥಾನವಿದೆ. ನಮ್ಮ ಸಮಯ ಪರೀಕ್ಷಿತ ಸಂಬಂಧವು ಇಂದು ಉಭಯ ರಾಷ್ಟ್ರಗಳ ದ್ವಿಪಕ್ಷೀಯ ಸಂಬಂಧವನ್ನು ಇನ್ನಷ್ಟು ಬಲಪಡಿಸಿದೆ’ ಎಂದು ಸಚಿವರು ಹೇಳಿದರು.

ಜೈಶಂಕರ್ ಅವರು ಈ ಭೇಟಿಯ ಸಮಯದಲ್ಲಿ, ಭಾರತೀಯ ಅನುದಾನದಲ್ಲಿ ಕೈಗೊಂಡ ಹಲವು ಯೋಜನೆಗಳನ್ನು ಉದ್ಘಾಟಿಸಲಿದ್ದಾರೆ. ಉಭಯ ದೇಶಗಳ ನಡುವೆ ಹಲವು ಒಪ್ಪಂದಗಳನ್ನೂ ಮಾಡಿಕೊಳ್ಳಲಿದ್ದಾರೆ ಎಂದು ಮಾಲ್ಡೀವ್ಸ್ ವಿದೇಶಾಂಗ ಸಚಿವಾಲಯ ತಿಳಿಸಿದೆ.

ಅಲ್ಲದೇ ಮಾಲ್ಡೀವ್ಸ್ ಅಧ್ಯಕ್ಷ ಇಬ್ರಾಹಿಂ ಮೊಹಮ್ಮದ್ ಸೊಲಿಹ್, ಸ್ಪೀಕರ್ ಮೊಹಮ್ಮದ್ ನಶೀದ್ ಅವರನ್ನು ಜೈಶಂಕರ್ ಭೇಟಿ ಮಾಡಲಿದ್ದಾರೆ. ರಕ್ಷಣಾ, ಹಣಕಾಸು, ಆರ್ಥಿಕ ಅಭಿವೃದ್ಧಿ, ಯೋಜನೆ ಮತ್ತು ಮೂಲಸೌಕರ್ಯದ ಬಗ್ಗೆಯೂ ಸಚಿವರೊಂದಿಗೆ ಚರ್ಚೆ ನಡೆಸಲಿದ್ದಾರೆ.

4 ರಾಜ್ಯಗಳಲ್ಲಿ ಕೋವಿಡ್ ಉಲ್ಬಣ: ಆತಂಕ

ನವದೆಹಲಿ: ಮಹಾರಾಷ್ಟ್ರ, ಪಂಜಾಬ್, ಛತ್ತೀಸಗಡ ಹಾಗೂ ಮಧ್ಯಪ್ರದೇಶದಲ್ಲಿ ಕೋವಿಡ್–19 ಪ್ರಕರಣಗಳು ಕೆಲವು ದಿನಗಳಿಂದ ಏರುಗತಿಯಲ್ಲಿವೆ. ಈ ಮಧ್ಯೆ ಕೇರಳದಲ್ಲಿ ನಿತ್ಯವೂ ಸಾವಿರಾರು ಪ್ರಕರಣಗಳು ವರದಿಯಾಗುತ್ತಿವೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಶನಿವಾರ ಕಳವಳ ವ್ಯಕ್ತಪಡಿಸಿದೆ.

ಮಹಾರಾಷ್ಟ್ರದಲ್ಲಿ ಏರುಗತಿಯಲ್ಲಿದ್ದ ಪ್ರಕರಣಗಳು ನವೆಂಬರ್–ಡಿಸೆಂಬರ್ ವೇಳೆಗೆ ಕಡಿಮೆಯಾಗಲು ಆರಂಭಿಸಿ, ಫೆಬ್ರುವರಿ ಮಧ್ಯಭಾಗದವರೆಗೂ ಇಳಿಕೆಯಾಗುತ್ತಲೇ ಇದ್ದವು. ಆದರೆ ಫೆ.16ರಿಂದ ಈ ಸಂಖ್ಯೆ ಮತ್ತೆ ಏರುಮುಖವಾಗಿದೆ. ಜನವರಿ 1ರ ಬಳಿಕ ಶನಿವಾರ 6 ಸಾವಿರ ಪ್ರಕರಣ ಪತ್ತೆಯಾಗಿದೆ.

ಪಂಜಾಬ್‌ನಲ್ಲೂ ಫೆಬ್ರುವರಿ ಆರಂಭದಿಂದ ಪ್ರತಿನಿತ್ಯ ಸುಮಾರು 400 ಪ್ರಕರಣಗಳು ಹೊರಬರುತ್ತಿವೆ. ಮಧ್ಯಪ್ರದೇಶ ಹಾಗೂ ಛತ್ತೀಸಗಡದಲ್ಲಿ ಕಳೆದ ವಾರಕ್ಕೆ ಹೋಲಿಸಿದರೆ ಈ ವಾರ ಏರಿಕೆ ಕಂಡುಬಂದಿದೆ.

ಕೇರಳದಲ್ಲಿ ಸದ್ಯ ಪ್ರಕರಣಗಳು ಇಳಿಮುಖವಾಗಿವೆ. ಆದರೆ ಮಹಾರಾಷ್ಟ್ರ ಹೊರತುಪಡಿಸಿದರೆ ಅತಿಹೆಚ್ಚು ಪ್ರಕರಣಗಳು ಈ ರಾಜ್ಯದಲ್ಲಿ ವರದಿಯಾಗುತ್ತಿವೆ. 24 ಗಂಟೆಯಲ್ಲಿ ಇಲ್ಲಿ 4,500 ಕೊರೊನಾ ವೈರಸ್ ಸೋಂಕಿತರು ಪತ್ತೆಯಾಗಿದ್ದಾರೆ.

ಫೆಬ್ರವರಿ 20ರವರೆಗಿನ ಮಾಹಿತಿ ಪ್ರಕಾರ, ಶೇ 35ಕ್ಕಿಂತ ಹೆಚ್ಚು ಆರೋಗ್ಯ ಕಾರ್ಯಕರ್ತರು ಕೋವಿಡ್ ಲಸಿಕೆಯ ಮೊದಲ ಡೋಸ್ ಪಡೆದಿಲ್ಲ ಎಂದು ಸಚಿವಾಲಯ ತಿಳಿಸಿದೆ.

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ ವರ್ಲ್ಡೋಮೀಟರ್

	ವಿಶ್ವ	ಭಾರತ	ರಾಜ್ಯ
ಒಟ್ಟು ಪ್ರಕರಣ / ಒಟ್ಟು ಸೋಂಕಿತರು	11.13 ಕೋಟಿ	1.098 ಕೋಟಿ	9,47,736
ಸಕ್ರಿಯ ಪ್ರಕರಣ	2.26 ಕೋಟಿ	1.38 ಲಕ್ಷ	5,978
ಗುಣಮುಖ	8.62 ಕೋಟಿ	1.06 ಕೋಟಿ	9,29,447
ಸಾವು	24.65 ಲಕ್ಷ	1.56 ಲಕ್ಷ	12,292
ದಿನದ ವರದಿ: ಹೊಸ ಪ್ರಕರಣ	4.03 ಲಕ್ಷ	13,918	490
ದಿನದ ವರದಿ: ಗುಣಮುಖ	3.66 ಲಕ್ಷ	10,210	389
ದಿನದ ವರದಿ: ಸಾವು	11,360	44	05

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ): 78,640 ಅಮೆರಿಕ; 51,067 ಬ್ರೆಜಿಲ್; 24,116 ಫ್ರಾನ್ಸ್

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ): 92.92 ಅಮೆರಿಕ; 32.29 ಫ್ರಾನ್ಸ್; 16.44 ಬ್ರಿಟನ್

ಎಲ್ಲಿ ಹೆಚ್ಚು ಸಾವು: 51,713 ಮಹಾರಾಷ್ಟ್ರ; 12,451 ತಮಿಳುನಾಡು; 10,898 ದೆಹಲಿ

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ): 20.87 ಮಹಾರಾಷ್ಟ್ರ; 10.30 ಕೇರಳ; 8.89 ತಮಿಳುನಾಡು

127 ಐಸಿಯುನಲ್ಲಿ ಇರುವವರು

ಪ್ರಜಾವಾಣಿ ಗ್ರಾಫಿಕ್ಸ್

ಲಸಿಕೆ ಹಗರಣ: ಅರ್ಜೆಂಟೀನಾದ ಆರೋಗ್ಯ ಸಚಿವ ರಾಜೀನಾಮೆ

ಬ್ಯೂನಸ್ ಐರಿಸ್, ಅರ್ಜೆಂಟೀನಾ (ಎಪಿ): ಸಚಿವರೊಬ್ಬರನ್ನು ವಿನಂತಿಸಿಕೊಂಡ ನಂತರ ಆದ್ಯತೆಯ ಕೊರೊನಾ ಲಸಿಕೆಯನ್ನು ತಮಗೆ ನೀಡಲಾಯಿತು ಎಂದು ಸ್ಥಳೀಯ ಪತ್ರಕರ್ತ ಹೊರಾಸಿಯೊ ವರ್ಬಿಟ್ಸ್ಕಿ ಎಂಬವರು ತಮ್ಮ ಅಂಕಣ ಮತ್ತು ರೇಡಿಯೊ ಸಂದರ್ಶನದಲ್ಲಿ ಬಹಿರಂಗಪಡಿಸಿದ ಬೆನ್ನಲ್ಲೇ ಅರ್ಜೆಂಟೀನಾದ ಅಧ್ಯಕ್ಷ ಆಲ್ಬರ್ಟೊ ಫರ್ನಾಂಡೀಸ್ ಶುಕ್ರವಾರ ಆರೋಗ್ಯ ಸಚಿವರನ್ನು ವಜಾಗೊಳಿಸಿದ್ದಾರೆ.

ಸರ್ಕಾರದ ಕೋವಿಡ್ ಕಾರ್ಯತಂತ್ರದ ಉಸ್ತುವಾರಿ ವಹಿಸಿದ್ದ ಗೈನ್ಸ್ ಗೊನ್ಸಾಲೆಜ್ ಗಾರ್ಸಿಯಾ ಅವರಿಗೆ ರಾಜೀನಾಮೆ ಸಲ್ಲಿಸುವಂತೆ ಅಧ್ಯಕ್ಷರು ಸೂಚಿಸಿದ್ದಾರೆ ಎಂದು ಹೆಸರು ಬಹಿರಂಗಪಡಿಸಲು ಬಯಸದ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಆರೋಗ್ಯ ಸಚಿವಾಲಯದಲ್ಲಿ ಗೈನ್ಸ್ ಅವರ ನಂತರದ ಸ್ಥಾನದಲ್ಲಿದ್ದ ಕಾರ್ಲಾ ವಿಝೊಟ್ಟಿ ಸಚಿವರಾಗಿ ಅಧಿಕಾರ ವಹಿಸಿಕೊಳ್ಳಲಿದ್ದಾರೆ ಎಂದು ಸುದ್ದಿಸಂಸ್ಥೆ ಟೆಲಮ್ ತಿಳಿಸಿದೆ.

ಆರೋಗ್ಯ ಸಿಬ್ಬಂದಿಗೆ ಕೊರೊನಾ ಲಸಿಕೆ ನೀಡುವುದಕ್ಕೂ ಮೊದಲೇ 400ಕ್ಕೂ ಹೆಚ್ಚು ರಾಜಕೀಯ ವ್ಯಕ್ತಿಗಳು ಮತ್ತು ಪ್ರಭಾವಿಗಳು ಕದ್ದುಮುಚ್ಚಿ ಲಸಿಕೆ ಪಡೆದಿರುವ ಹಗರಣ ನಡೆದಿದೆ.

ವೈದ್ಯರು, ಆರೋಗ್ಯ ಸಿಬ್ಬಂದಿ ಮತ್ತು ಹಿರಿಯ ನಾಗರಿಕರಿಗೆ ಮೊದಲ ಆದ್ಯತೆಯಲ್ಲಿ ಕೊರೊನಾ ಲಸಿಕೆ ಹಾಕಲಾಗುತ್ತಿದೆ. ಆದರೆ, ಈ ಆದ್ಯತಾ ಗುಂಪಿನಲ್ಲಿ ಇಲ್ಲದ ಮೇಯರ್‌ಗಳು, ಶಾಸಕರು, ಸಾಮಾಜಿಕ ಕಾರ್ಯಕರ್ತರು ಮತ್ತು ರಾಜಕಾರಣಿಗಳ ಹತ್ತಿರದವರಿಗೂ ಕೊರೊನಾ ಲಸಿಕೆ ನೀಡಿರುವ ವರದಿಗಳು ಬಂದಿರುವ ಕಾರಣಕ್ಕೆ ಆರೋಗ್ಯ ಸಚಿವರನ್ನು ಹುದ್ದೆಯಿಂದ ಕಿತ್ತುಹಾಕಲಾಗಿದೆ ಎನ್ನಲಾಗಿದೆ.

‘ಅಧ್ಯಕ್ಷರ ಸೂಚನೆ ಮೇರೆಗೆ ರಾಜೀನಾಮೆ ಸಲ್ಲಿಸಿರುವೆ. ಆದ್ಯತಾ ಗುಂಪಿನಲ್ಲಿದ್ದವರಿಗೆ ಮಾತ್ರ ಲಸಿಕೆ ನೀಡಲಾಗಿದೆ. ಆದರೆ, ತಪ್ಪು ತಿಳಿವಳಿಕೆಯಿಂದ ನನ್ನನ್ನು ಬಲವಂತವಾಗಿ ವಜಾಗೊಳಿಸಲಾಗಿದೆ’ ಎಂದು ಗೈನ್ಸ್ ಗೊನ್ಸಾಲೆಜ್ ಗಾರ್ಸಿಯಾ ಟ್ವೀಟ್ ಮಾಡಿದ್ದಾರೆ.

ವಿಧಾನಸಭಾ ಚುನಾವಣೆ ಘೋಷಣೆ ಪ್ರಕಟಿಸಿದ ಟಿಎಂಸಿ

ಕೋಲ್ಕತ್ತ (ಪಿಟಿಐ): ‘ಬಾಂಗ್ಲಾ ನಿಜರ್ ಮೆಯೆಕ್ಕೆ ಚಾಯೆ‘ (ಬಂಗಾಳ ತನ್ನದೇ ಮಗಳನ್ನು ಬಯಸುತ್ತದೆ) – ಇದು ತೃಣಮೂಲ ಕಾಂಗ್ರೆಸ್ ಪಕ್ಷದ ಮುಂಬರುವ ವಿಧಾನಸಭಾ ಚುನಾವಣೆಯ ಘೋಷಣೆ.

ಪಶ್ಚಿಮ ಬಂಗಾಳದಲ್ಲೀಗ ರಾಜ್ಯದ ಒಳಗಿನವರು ಮತ್ತು ಹೊರಗಿನವರು ಎಂಬುದರ ಕುರಿತು ಚರ್ಚೆ ನಡೆಯುತ್ತಿರುವ ಹೊತ್ತಿನಲ್ಲಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಯವರನ್ನು ಬಂಗಾಳದ ಮಗಳಾಗಿ ಬಿಂಬಿಸಲು ಟಿಎಂಸಿ ಶನಿವಾರ ಈ ಘೋಷಣೆ ಪ್ರಕಟಿಸಿದೆ.

ಪಕ್ಷದ ಘೋಷಣೆ ಪ್ರಕಟಿಸಿದ ನಂತರ, ಬಂಗಾಳಿ ಭಾಷೆಯಲ್ಲಿರುವ ಘೋಷಣೆಯನ್ನು ಭಾಷಾಂತರಿಸಿ, ಆ ಘೋಷಣೆ ಜತೆಗೆ, ಮಮತಾ ಬ್ಯಾನರ್ಜಿ ಅವರ ಚಿತ್ರವನ್ನೊಳಗೊಂಡ ಫಲಕಗಳನ್ನು ನಗರದ ಟಿಎಂಸಿ ಕಚೇರಿ ಸೇರಿದಂತೆ ಕೋಲ್ಕತ್ತದಾದ್ಯಂತ ಹಾಕಲಾಗಿದೆ.

ಬಿಜೆಪಿ ನಾಯಕ ವಿಜಯ ವರ್ಗಿಯಾ ಮಾತನಾಡಿ, ಮಮತಾಗೆ ಗೆಲ್ಲುವ ವಿಶ್ವಾಸವಿದ್ದರೆ ನಂದಿಗ್ರಾಮದಿಂದ ಸ್ಪರ್ಧಿಸಲಿ ಎಂದು ಸವಾಲು ಹಾಕಿದ್ದಾರೆ.

ಈಗಾಗಲೇ ರಾಜ್ಯದಾದ್ಯಂತ ಬಿಜೆಪಿ ಮತ್ತು ತೃಣಮೂಲ ಕಾಂಗ್ರೆಸ್ ಪಕ್ಷಗಳು ಭರಾಟೆಯಿಂದ ಚುನಾವಣಾ ಪ್ರಚಾರ ನಡೆಸುತ್ತಿದ್ದು, ಮತದಾರರನ್ನು ಸೆಳೆಯಲು ಪ್ರಯತ್ನ ನಡೆಸುತ್ತಿದ್ದಾರೆ.

ಮಂಗಳಗ್ರಹದಿಂದ ಚಿತ್ರಗಳನ್ನು ರವಾನಿಸಿದ ‘ಪರ್ಸಿವಿಯರೆನ್ಸ್’

ಕೇಪ್ ಕೆನವರೆಲ್ (ಫ್ಲಾರಿಡಾ, ಎಪಿ): ಮಂಗಳ ಗ್ರಹದ ಅಧ್ಯಯನಕ್ಕಾಗಿ ನಾಸಾ ಕಳುಹಿಸಿರುವ ಪರ್ಸಿವಿಯರೆನ್ಸ್ ರೋವರ್ ಶುಕ್ರವಾರ ಮಂಗಳ ಗ್ರಹದ ಮೇಲೆ ಇಳಿಯುವಾಗ ತೀರಾ ಹತ್ತಿರದಿಂದ ಸೆರೆ ಹಿಡಿದಿರುವ ಚಿತ್ರಗಳನ್ನು ನಾಸಾದ ವಿಜ್ಞಾನಿಗಳು ಬಿಡುಗಡೆ ಮಾಡಿದ್ದಾರೆ.

ಆ ಚಿತ್ರಗಳಲ್ಲಿ ಕಾಣುತ್ತಿರುವ ಮಂಗಳ ಗ್ರಹದ ಕೆಂಪು ದೂಳಿನ ಮೇಲ್ಮೈ ಪರಿಚಯಿಸುವ ದೃಶ್ಯಗಳು ನಾಸಾ ವಿಜ್ಞಾನಿ ಗಳನ್ನೇ ಮೂಕವಿಸ್ಮಿತರನ್ನಾಗಿಸಿದೆ. ಪರ್ಸಿವಿಯರೆನ್ಸ್ ರೋವರ್ ಹೊತ್ತ ನೌಕೆ ಯಶಸ್ವಿಯಾಗಿ ಮಂಗಳ ಗ್ರಹದ ಅಂಗಳವನ್ನು ಸ್ಪರ್ಶಿಸಿದ 24 ಗಂಟೆಗಳ ನಂತರ ರೋವರ್ ಕಳುಹಿಸಿದ ಚಿತ್ರಗಳನ್ನು ನಾಸಾ ಬಿಡುಗಡೆ ಮಾಡಿದೆ.

ಈ ರೋವರ್, ಮಂಗಳ ಗ್ರಹದಲ್ಲಿ ಪುರಾತನ ಕಾಲದಲ್ಲಿ ಜೀವಿಗಳು ನೆಲೆಸಿದ್ದವೇ ಎಂಬುದರ ಕುರಿತು ಅಧ್ಯಯನ ನಡೆಸಲು ನೆರವಾಗಲಿದೆ. ಭೂಮಿಗೆ ಮರಳಲು ಅಧ್ಯಯನಕ್ಕಾಗಿ ಶಿಲಾ ಮಾದರಿಗಳನ್ನು ಅದು ಸಂಗ್ರಹಿಸಿ ತರಲಿದೆ.



ನಾಸಾ ಪರ್ಸಿವಿಯರೆನ್ಸ್ ರೋವರ್‌ನ ಕೆಳಭಾಗದಲ್ಲಿ ಜೋಡಿಸಲಾಗಿರುವ ಹಜಾರ್ಡ್ ಕ್ಯಾಮೆರಾದಿಂದ ಕಳುಹಿಸಿದ ಹೈರೆಸಲ್ಯೂಷನ್ ಚಿತ್ರ

ನಾಸಾ ಕಳುಹಿಸಿರುವ ವಿಶೇಷ ನೌಕೆಯಲ್ಲಿ 25 ಕ್ಯಾಮೆರಾ ಮತ್ತು ಎರಡು ಮೈಕ್ರೋಫೋನ್‌ಗಳನ್ನು ಜೋಡಿಸಲಾಗಿದ್ದು, ಇದರಲ್ಲಿ ಕೆಲವನ್ನು, ನೌಕೆ ಗ್ರಹದ ಮೇಲೆ ಇಳಿಯುವಾಗ ಚಾಲನೆಯಲ್ಲಿಡಲಾಗಿತ್ತು.

ರೋವರ್ ಕಳುಹಿಸಿರುವ ಚಿತ್ರಗಳಲ್ಲಿ ನೌಕೆ ಮಂಗಳ ಗ್ರಹದ ಮೇಲಿನಿಂದ ಆರೂವರೆ ಅಡಿ ಎತ್ತರದಲ್ಲಿ ತೆಗೆದಿರುವ ಗ್ರಹದ ಮೇಲ್ಮೈ ಚಿತ್ರಗಳಿವೆ. ಕ್ಯಾಲಿಫೋರ್ನಿಯಾದ ಪಾಸಡೆನಾದಲ್ಲಿರುವ ನಾಸಾದ ಜೆಟ್ ಪ್ರೊಪಲ್ಷನ್ ಲ್ಯಾಬೊರೇಟರಿ ಮುಂದಿನ ಕೆಲವು ದಿನಗಳಲ್ಲಿ ಇನ್ನೂ ಹೆಚ್ಚಿನ ಫೋಟೊಗಳ ಜತೆಗೆ, ಆಡಿಯೊ ರೆಕಾರ್ಡಿಂಗ್ ಸಹ ನೀಡಲಿದೆ.

ಉನ್ನಾವ್: ಉದಿತ್ ಮೇಲೆ ಎಫ್‌ಐಆರ್

ಉನ್ನಾವ್ (ಉತ್ತರಪ್ರದೇಶ) (ಪಿಟಿಐ): ಉನ್ನಾವ್ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿಯ ಇಬ್ಬರು ಹುಡುಗಿಯರ ಸಾವಿಗೆ ಸಂಬಂಧಿಸಿ ದಿಕ್ಕುತಪ್ಪಿಸುವಂತಹ ಟ್ವೀಟ್ ಮಾಡಿದ್ದ ಆರೋಪದ ಮೇಲೆ ಕಾಂಗ್ರೆಸ್ ಮುಖಂಡ ಉದಿತ್ ರಾಜ್ ವಿರುದ್ಧ ಶನಿವಾರ ಪ್ರಕರಣ ದಾಖಲಾಗಿದೆ.

ಉದಿತ್ ನಕಲಿ ಸುದ್ದಿಗಳನ್ನು ಹರಡಿದ್ದಾರೆ ಎಂದು ಪೊಲೀಸರು ಆರೋಪಿಸಿದ್ದಾರೆ.

ಮಾನವ ಹಕ್ಕು ಉಲ್ಲಂಘನೆಯ 11 ಸಾವಿರ ಪ್ರಕರಣ ದಾಖಲು

ನವದೆಹಲಿ: 2020–21ರ ಅವಧಿಯಲ್ಲಿ ಮಾನವ ಹಕ್ಕುಗಳ ಉಲ್ಲಂಘನೆಯ 11 ಸಾವಿರಕ್ಕೂ ಹೆಚ್ಚು ದೂರುಗಳು ಪೊಲೀಸರ ವಿರುದ್ಧ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗಕ್ಕೆ (ಎನ್‌ಎಚ್‌ಆರ್‌ಸಿ) ಸಲ್ಲಿಕೆಯಾಗಿವೆ. ಇದರಲ್ಲಿ ಶೇ 48ರಷ್ಟು ಪ್ರಕರಣಗಳು ಉತ್ತರಪ್ರದೇಶದವೇ ಆಗಿದ್ದು, ಈ ಕುಖ್ಯಾತಿಯ ಪಟ್ಟಿಯಲ್ಲಿ ಉತ್ತರಪ್ರದೇಶ ಅಗ್ರಸ್ಥಾನದಲ್ಲಿದೆ.

2020-21ರ ಜನವರಿ 15ರವರೆಗೆ ಉತ್ತರಪ್ರದೇಶದಲ್ಲಿ 5,338 ದೂರುಗಳು, ದೆಹಲಿಯಲ್ಲಿ 940, ತಮಿಳುನಾಡು 575, ಅಸ್ಸಾಂ 562, ಹರಿಯಾಣದಲ್ಲಿ 408 ದೂರುಗಳು ಹಾಗೂ ಕರ್ನಾಟಕದಲ್ಲಿ 175 ದೂರುಗಳು ದಾಖಲಾಗಿವೆ. ಈ ಅವಧಿಯಲ್ಲಿ ಎನ್‌ಎಚ್‌ಆರ್‌ಸಿಗೆ ಒಂದೇ ಒಂದು ದೂರುಗಳು ಬಾರದ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶವೆಂದರೆ ಸಿಕ್ಕಿಂ ಮತ್ತು ಲಕ್ಷದ್ವೀಪ.

ರಾಜ್ಯಸಭೆಯಲ್ಲಿ ನೀಡಿದ ಲಿಖಿತ ಉತ್ತರದಲ್ಲಿ ಕೇಂದ್ರ ಗೃಹ ಖಾತೆಯ ರಾಜ್ಯ ಸಚಿವ ಜಿ. ಕಿಶನ್ ರೆಡ್ಡಿ ಈ ಮಾಹಿತಿ ನೀಡಿದ್ದಾರೆ.

ಎನ್‌ಎಚ್‌ಆರ್‌ಸಿ 784 ಪ್ರಕರಣಗಳಲ್ಲಿ ₹20.42 ಕೋಟಿ ಪರಿಹಾರ ನೀಡಲು ಶಿಫಾರಸು ಮಾಡಿದೆ. ಅಲ್ಲದೇ 48 ಪ್ರಕರಣಗಳಲ್ಲಿ ಶಿಸ್ತು ಕ್ರಮ ಮತ್ತು ಕಾನೂನು ಕ್ರಮ ಜರುಗಿಸಲಾಗಿದೆ ಎಂದು ಹೇಳಿದ್ದಾರೆ.

ಒಂದು ವಿಶ್ಲೇಷಣೆಯ ಪ್ರಕಾರ ಕಳೆದ ಮೂರು ವರ್ಷಗಳಿಗೆ ಹೋಲಿಸಿದರೆ ಪ್ರಕರಣಗಳ ಸಂಖ್ಯೆ ಕಡಿಮೆಯಾಗಿದೆ. 2019–20ರಲ್ಲಿ 17,229 ದೂರುಗಳು ದಾಖಲಾಗಿದ್ದರೆ, 2018–19ರಲ್ಲಿ 28,342 ದೂರುಗಳಿಗೆ ಏರಿಕೆಯಾಗಿತ್ತು. 2017–18ರಲ್ಲಿ 26,391 ದೂರುಗಳು ದಾಖಲಾಗಿದ್ದವು. ಈ ಮೂರು ವರ್ಷಗಳ ಅವಧಿಯಲ್ಲಿ ಅತೀ ಹೆಚ್ಚು ದೂರುಗಳು ಬಂದಿರುವುದು ಉತ್ತರಪ್ರದೇಶದಲ್ಲೇ ಎನ್ನುವುದು ಗಮನಿಸಬೇಕಾದ ಸಂಗತಿ.

ರಿಷಿಗಂಗಾದಲ್ಲಿನ ಕೃತಕ ಸರೋವರ ಪರಿಶೀಲನೆಗೆ ತಂಡ

ರೈನಿ (ಉತ್ತರಾಖಂಡ, ಪಿಟಿಐ): ಉತ್ತರಾಖಂಡದ ಜೋಶಿಮಠದ ಬಳಿ ಇತ್ತೀಚೆಗೆ ನೀರ್ಗಲ್ಲು ಕುಸಿತದ ನಂತರ, ರಿಷಿಗಂಗಾ ಮೇಲೆ ರೂಪುಗೊಂಡಿರುವ ಕೃತಕ ಸರೋವರದಿಂದ ಯಾವ ರೀತಿ ಅಪಾಯವಾಗಬಹುದು ಎಂಬುದನ್ನು ಪರೀಕ್ಷಿಸುವುದಕ್ಕಾಗಿ ಶನಿವಾರ ಸಂಶೋಧನಾ ತಂಡವೊಂದು ಪಾಂಗ್ ಹಳ್ಳಿಗೆ ಬಂದಿದೆ.

ಅಧ್ಯಯನದ ಸಂಬಂಧ ರಚನೆಯಾಗಿರುವ ಜಿಯಾಲಾಜಿಕಲ್ ಸರ್ವೆ ಆಫ್ ಇಂಡಿಯಾ ಮತ್ತು ಉತ್ತರಾಖಂಡ ಬಾಹ್ಯಾಕಾಶ ಅನ್ವಯಿಕ ಕೇಂದ್ರದಿಂದ ತಲಾ ನಾಲ್ಕು ವಿಜ್ಞಾನಿಗಳನ್ನೊಳಗೊಂಡ ಯುಎಸ್‌ಎಸಿ ನಿರ್ದೇಶಕ ಎಂಪಿಎಸ್ ಬಿಷ್ಟ್ ನೇತೃತ್ವದ ಸಂಶೋಧನಾ ತಂಡ ಶನಿವಾರ ಸಂಜೆ ಅಥವಾ ಭಾನುವಾರ ಕಾಲ್ನಡಿಗೆಯಲ್ಲಿ ಸರೋವರವನ್ನು ತಲುಪಲು ಪ್ರಯತ್ನಿಸುತ್ತಿದೆ.

ಇತ್ತೀಚೆಗೆ ನೀರ್ಗಲ್ಲು ಕುಸಿತದಿಂದ ಸಂಭವಿಸಿದ ಪ್ರವಾಹದಿಂದಾಗಿ ರೈನಿ ಗ್ರಾಮ ಪಂಚಾಯತ್ ಸುತ್ತಮುತ್ತಲಿನ ಪ್ರದೇಶಗಳಲ್ಲಿನ ರಸ್ತೆಗಳು ಹಾಳಾಗಿದ್ದು, ಜೌಗು ಪ್ರದೇಶಗಳಾಗಿ ಮಾರ್ಪಟ್ಟಿವೆ.

ಕಾವೇರಿ: ತಮಿಳುನಾಡು ವಿರುದ್ಧ ಚಕಾರವೆತ್ತದ ರಾಜ್ಯ

ಒಂದನೇ ಪುಟದಿಂದ

ಕಾವೇರಿಯ ಹೆಚ್ಚುವರಿ ನೀರು ಬಳಸಿ ಬೆಂಗಳೂರು ಗ್ರಾಮಾಂತರ, ರಾಮನಗರ, ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಗಳ ಜನರ ಕುಡಿಯುವ ನೀರಿನ ಸಮಸ್ಯೆ ನೀಗಿಸಲು ರಾಜ್ಯ ಸರ್ಕಾರ ರೂಪಿಸಿರುವ ‘ಮೇಕೆದಾಟು’ ಮತ್ತು ‘ಮಾರ್ಕಂಡೇಯ’ ಯೋಜನೆಗಳಿಗೂ ತಮಿಳುನಾಡು ಸುಪ್ರೀಂ ಕೋರ್ಟ್‌ನಲ್ಲಿ ಆಕ್ಷೇಪಣೆ ಸಲ್ಲಿಸಿದೆ.

ಅಪಾಯದ ಕರೆಗಂಟೆ: ಕಾವೇರಿಯ ಹೆಚ್ಚುವರಿ ನೀರಿನ ಮೇಲೆ ಕಣ್ಣಿಟ್ಟಿರುವ ತಮಿಳುನಾಡು, ಈ ಯೋಜನೆ ಕೈಗೆತ್ತಿಕೊಂಡ ನಂತರ ಕರ್ನಾಟಕದ ಯೋಜನೆಗಳಿಗೆ ನೀರು ಒದಗಿಸದಂತೆ ನ್ಯಾಯಾಲಯದಲ್ಲಿ ವಾದಿಸಲಿದೆ.

‘ಇದರಿಂದ ನದಿ ಕಣಿವೆಯ ಮೇಲ್ಭಾಗದ ರಾಜ್ಯವಾದ ಕರ್ನಾಟಕದ ಪ್ರಸ್ತಾವಿತ ಯೋಜನೆಗಳಿಗೆ ತಡೆ ಬೀಳುವ ಅಪಾಯ ಇದೆ’ ಎಂದು ರಾಜ್ಯದ ಜಲವಿವಾದ ಕಾನೂನು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಇಂದು ಸಭೆ; ಚರ್ಚೆ ಸಾಧ್ಯತೆ: ನವದೆಹಲಿಯ ಕರ್ನಾಟಕ ಭವನದಲ್ಲಿ ಭಾನುವಾರ ರಾಜ್ಯದ ಜಲವಿವಾದ ಕಾನೂನು ತಂಡದ ಸದಸ್ಯರು ಮತ್ತು ಇಲಾಖೆಯ ಅಧಿಕಾರಿಗಳ ಸಭೆ ಆಯೋಜಿಸಿರುವ ಜಲಸಂಪನ್ಮೂಲ ಸಚಿವ ರಮೇಶ ಜಾರಕಿಹೊಳಿ, ತಮಿಳುನಾಡು ಆರಂಭಿಸಲಿರುವ ಯೋಜನೆಯ ಸಾಧಕ–ಬಾಧಕಗಳ ಕುರಿತು ಚರ್ಚೆ ನಡೆಸುವ ಸಾಧ್ಯತೆ ಇದೆ.

ಸುಪ್ರೀಂ ಕೋರ್ಟ್‌ನಲ್ಲಿ ಬಾಕಿ ಇರುವ ರಾಜ್ಯದ ಜಲವಿವಾದ ಪ್ರಕರಣಗಳ ಕುರಿತೂ ಈ ಸಂದರ್ಭದಲ್ಲಿ ಚರ್ಚೆ ನಡೆಯಲಿದೆ. ಸೋಮವಾರ ಕೇಂದ್ರದ ಜಲಶಕ್ತಿ ಸಚಿವ ಗಜೇಂದ್ರಸಿಂಗ್ ಶೆಖಾವತ್ ಅವರನ್ನು ಭೇಟಿ ಮಾಡಲಿರುವ ಜಾರಕಿಹೊಳಿ, ತಮಿಳುನಾಡಿನ ಯೋಜನೆಯ ಬಗ್ಗೆ ಪ್ರಸ್ತಾಪಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ತಮಿಳುನಾಡು ರೂಪಿಸಿರುವ ಯೋಜನೆ

ಒಂದನೇ ಪುಟದಿಂದ

ಯೋಜನೆಯ 2ನೇ ಹಂತದಲ್ಲಿ ದಕ್ಷಿಣ ವೆಲ್ಲಾರು ನದಿಯಿಂದ ವೈಗೈ ನದಿವರೆಗೆ 109 ಕಿಲೋಮೀಟರ್ ಉದ್ದದ ಕಾಲುವೆ ನಿರ್ಮಿಸಿ ಪುದುಕೋಟೆ, ಶಿವಗಂಗೈ ಮತ್ತು ರಾಮನಾಥಪುರಂ ಜಿಲ್ಲೆಗಳಲ್ಲಿನ 220 ಕೆರೆಗಳ ಭರ್ತಿ ಮತ್ತು 23,245 ಎಕರೆ ಭೂಮಿಗೆ ನೀರಾವರಿ ಒದಗಿಸಲಾಗುತ್ತದೆ.

ವೈಗೈ ನದಿಯಿಂದ ಗುಂಡಾರು ನದಿಗೆ 34 ಕಿಲೋಮೀಟರ್ ಅಂತರದ ಕಾಲುವೆ ನಿರ್ಮಿಸಿ ವಿರುಧುನಗರ ಮತ್ತು ರಾಮನಾಥಪುರಂ ಜಿಲ್ಲೆಗಳಿಗೆ ನೀರು ಹರಿಸುವ ಮೂಲಕ 492 ಕೆರೆಗಳ ಭರ್ತಿ ಹಾಗೂ 44,547 ಎಕರೆ ಭೂಮಿಗೆ ನೀರಾವರಿ ಒದಗಿಸುವುದು ಯೋಜನೆಯ 3ನೇ ಹಂತದ ಉದ್ದೇಶವಾಗಿದೆ.

ಅಲ್ಲದೆ, ನೀರಾವರಿ ಪ್ರದೇಶ ವಿಸ್ತರಣೆ ಉದ್ದೇಶದೊಂದಿಗೆ ಅಂದಾಜು ₹ 3,400 ಕೋಟಿ ವೆಚ್ಚದಲ್ಲಿ ನಿರ್ಮಿಸಲಾದ ಕಾಲುವೆಗಳನ್ನೂ ಪಳನಿಸ್ವಾಮಿ ಉದ್ಘಾಟಿಸಲಿದ್ದಾರೆ.

ಪ್ರಧಾನಿಯಿಂದಲೂ ಚಾಲನೆ: ಕೇಂದ್ರ ಸರ್ಕಾರದ ಆರ್ಥಿಕ ನೆರವಿನ ಈ ಯೋಜನೆಗೆ ಪ್ರಧಾನಿ ನರೇಂದ್ರ ಮೋದಿ ಅವರು ಮಾರ್ಚ್ ಮೊದಲ ವಾರ ಮತ್ತೊಮ್ಮೆ ಚಾಲನೆ ನೀಡಲಿದ್ದಾರೆ.

ಪ್ರಧಾನಿಯವರು ಇತ್ತೀಚೆಗೆ ತಮಿಳುನಾಡಿಗೆ ಭೇಟಿ ನೀಡಿದ ಸಂದರ್ಭದಲ್ಲೇ ಈ ಯೋಜನೆಗೆ ಅಧಿಕೃತವಾಗಿ ಚಾಲನೆ ನೀಡಬೇಕಿತ್ತು. ಆದರೆ, ಅನಿವಾರ್ಯ ಕಾರಣಗಳಿಂದ ಕಾರ್ಯಕ್ರಮ ರದ್ದಾಗಿದೆ.

ರಾಜ್ಯಕ್ಕೆ ಮಾರಕವಾಗಲಿರುವ ಈ ಯೋಜನೆಯ ಬಗ್ಗೆ ರಾಜ್ಯ ಸರ್ಕಾರಕ್ಕೆ ಮಾಹಿತಿ ಇದ್ದರೂ ಆಕ್ಷೇಪಣೆ ಸಲ್ಲಿಸಲು ಹಾಗೂ ಕಾನೂನು ಹೋರಾಟ ರೂಪಿಸುವ ನಿಟ್ಟಿನಲ್ಲಿ ಕ್ರಮ ಕೈಗೊಂಡಿಲ್ಲ ಎಂದು ಆರೋಪವೂ ಕೇಳಿಬರುತ್ತಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಜಿಎಸ್‌ಟಿ ಪರಿಹಾರ: ಈವರೆಗೆ ₹ 1 ಲಕ್ಷ ಕೋಟಿ ಬಿಡುಗಡೆ



ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು 2020ರ ಅಕ್ಟೋಬರ್ 23ರಿಂದ ಇಲ್ಲಿಯವರೆಗೆ ರಾಜ್ಯಗಳಿಗೆ ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಒಟ್ಟಾರೆ ₹ 1 ಲಕ್ಷ ಕೋಟಿಗಳಷ್ಟು ಜಿಎಸ್‌ಟಿ ಪರಿಹಾರ ಮೊತ್ತ ಬಿಡುಗಡೆ ಮಾಡಿದೆ ಎಂದು ಹಣಕಾಸು ಸಚಿವಾಲಯ ಮಾಹಿತಿ ನೀಡಿದೆ.

23 ರಾಜ್ಯಗಳು ಮತ್ತು 3 ಕೇಂದ್ರಾಡಳಿತ ಪ್ರದೇಶಗಳಿಗೆ 17ನೇ ವಾರದ ಕಂತಿನ ಭಾಗವಾಗಿ ₹ 5 ಸಾವಿರ ಕೋಟಿಯನ್ನು ಶುಕ್ರವಾರ ಬಿಡುಗಡೆ ಮಾಡಲಾಗಿದೆ. ಈ ಮೂಲಕ ಒಟ್ಟಾರೆ ಮೊತ್ತವು ₹ 1 ಲಕ್ಷ ಕೋಟಿಗಳಿಗೆ ತಲುಪಿದೆ.

ಅರುಣಾಚಲ ಪ್ರದೇಶ, ಮಣಿಪುರ, ಮಿಜೋರಾಂ, ನಾಗಾಲ್ಯಾಂಡ್ ಮತ್ತು ಸಿಕ್ಕಿಂ ರಾಜ್ಯಗಳಲ್ಲಿ ಜಿಎಸ್‌ಟಿ ಜಾರಿಯಿಂದ ವರಮಾನದಲ್ಲಿ ಕೊರತೆ ಎದುರಾಗಿಲ್ಲ ಎಂದು ಸಚಿವಾಲಯ ತಿಳಿಸಿದೆ.

ಜಿಎಸ್‌ಟಿ ಜಾರಿಗೊಳಿಸುವುದರಿಂದ ರಾಜ್ಯಗಳಿಗೆ ಆಗುವ ವರಮಾನ ಕೊರತೆ ತುಂಬಿಕೊಡಲು ಕೇಂದ್ರ ಸರ್ಕಾರವು 2020ರ ಅಕ್ಟೋಬರ್‌ನಲ್ಲಿ ವಿಶೇಷ ಸಾಲ ಯೋಜನೆಯನ್ನು ರೂಪಿಸಿದೆ. ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಪರವಾಗಿ ಕೇಂದ್ರ ಸರ್ಕಾರವು ಈ ಯೋಜನೆಯಡಿ ಸಾಲ ಸಂಗ್ರಹಿಸುತ್ತಿದೆ.

ಶೇ 4.83ರ ಸರಾಸರಿ ಬಡ್ಡಿದರದಲ್ಲಿ ಸರ್ಕಾರವು ₹ 1 ಲಕ್ಷ ಕೋಟಿ ಸಾಲ ಪಡೆದಿದ್ದು ಅದರಲ್ಲಿ ₹ 91,460.34 ಕೋಟಿಯನ್ನು ರಾಜ್ಯಗಳಿಗೆ ಹಾಗೂ ಮೂರು ಕೇಂದ್ರಾಡಳಿತ ಪ್ರದೇಶಗಳಿಗೆ ಒಟ್ಟಾರೆ ₹ 8,539.66 ಕೋಟಿ ಬಿಡುಗಡೆ ಮಾಡಲಾಗಿದೆ ಎಂದು ತಿಳಿಸಿದೆ.

ಕರ್ನಾಟಕಕ್ಕೆ ₹ 11,072 ಕೋಟಿ: 'ರಾಜ್ಯ ಸರ್ಕಾರಕ್ಕೆ ₹ 12,470 ಕೋಟಿ ಪರಿಹಾರ ಮೊತ್ತ ಬರಬೇಕಿದ್ದು ಅದರಲ್ಲಿ ಇಲ್ಲಿಯವರೆಗೆ ₹ 11,072 ಕೋಟಿ ಬಂದಿದೆ' ಎಂದು ಎಫ್‌ಕೆಸಿಸಿಐನ ಜಿಎಸ್‌ಟಿ ಸಮಿತಿ ಅಧ್ಯಕ್ಷ ಬಿ.ಟಿ. ಮನೋಹರ್ ಅವರು ಪ್ರಜಾವಾಣಿಗೆ ಮಾಹಿತಿ ನೀಡಿದರು.

ದಾನ ಸ್ವಯಂಪ್ರೇರಿತ ಆಗಿರಬೇಕು: ಪ್ರೇಮ್‌ಜಿ

ನವದೆಹಲಿ (ಪಿಟಿಐ): 'ದಾನ ಅಥವಾ ಸಮಾಜಕ್ಕೆ ಕೊಡುಗೆ ನೀಡುವುದು ಸ್ವಯಂಪ್ರೇರಿತವಾಗಿರಬೇಕು' ಎಂದು ವಿಪ್ರೊ ಸಂಸ್ಥಾಪಕ ಅಜೀಂ ಪ್ರೇಮ್‌ಜಿ ಅವರು ಅಭಿಪ್ರಾಯಪಟ್ಟಿದ್ದಾರೆ.

ಆಲ್ ಇಂಡಿಯಾ ಮ್ಯಾನೇಜ್‌ಮೆಂಟ್ ಅಸೋಸಿಯೇಷನ್ (ಎಐಎಂಎ) ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಕಂಪನಿಗಳು ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ನಿರ್ವಹಿಸುವುದನ್ನು ಕಾನೂನಾತ್ಮಕವಾಗಿ ಕಡ್ಡಾಯ ಮಾಡುವುದು ಸರಿಯಲ್ಲ. ಅದು ಸ್ವಯಂ ಪ್ರೇರಿತವಾಗಿರಬೇಕು ಎನ್ನುವುದು ನನ್ನ ವೈಯಕ್ತಿಕ ಅಭಿಪ್ರಾಯ' ಎಂದು ಅವರು ಹೇಳಿದ್ದಾರೆ.

'ಆದರೆ, ಪ್ರಸ್ತುತ ಸಿಎಸ್‌ಆರ್ ಕಾನೂನಾತ್ಮಕ ಹೊಣೆಗಾರಿಕೆಯಾಗಿದ್ದು, ಇದನ್ನು ಎಲ್ಲಾ ಕಂಪನಿಗಳೂ ಅನುಸರಿಸಲೇಬೇಕಿದೆ' ಎಂದು ಅವರು ತಿಳಿಸಿದ್ದಾರೆ.

2020ರಲ್ಲಿ ಕೋವಿಡ್ ಸಾಂಕ್ರಾಮಿಕ ನಿಯಂತ್ರಿಸಲು ಅವರು ಒಟ್ಟಾರೆ ₹ 7,904 ಕೋಟಿ ದಾನ ಮಾಡಿದ್ದರು. ಪ್ರೇಮ್‌ಜಿ ಅವರಿಗೆ ಎಐಎಂಎ ಜೀವಮಾನ ಸಾಧನೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಧರ್ಮೇಂದ್ರ ಪ್ರಧಾನ್ ರಾಜೀನಾಮೆಗೆ ಭಾರತೀಯ ಯುವ ಕಾಂಗ್ರೆಸ್ ಆಗ್ರಹ

ತೈಲ ಬೆಲೆ ಏರಿಕೆ ಖಂಡಿಸಿ ಪ್ರತಿಭಟನೆ

ನವದೆಹಲಿ (ಪಿಟಿಐ): ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಕೆ ಖಂಡಿಸಿ ಭಾರತೀಯ ಯುವ ಕಾಂಗ್ರೆಸ್ (ಐವೈಸಿ) ಕಾರ್ಯಕರ್ತರು ಶನಿವಾರ ಶಾಸ್ತ್ರಿ ಭವನದ ಬಳಿ ಪ್ರತಿಭಟಿಸಿದರು. ಅಲ್ಲದೆ ಪೆಟ್ರೋಲಿಯಂ ಸಚಿವ ಧರ್ಮೇಂದ್ರ ಪ್ರಧಾನ್ ಅವರು ರಾಜೀನಾಮೆ ನೀಡಬೇಕು ಎಂದು ಪ್ರತಿಭಟನಕಾರರು ಆಗ್ರಹಿಸಿದರು.

ಪ್ರತಿಭಟನ ನಿರತ ಕಾರ್ಯಕರ್ತರು 'ಅಬ್ ಕೀ ಬಾರ್ ಪೆಟ್ರೋಲ್ 100ಕೆ ಪಾರ್' ಮತ್ತು 'ಮೋದಿ ಹೇ ತೋ ಮಹಂಗಾಯಿ ಹೇ' ಎಂಬ ಘೋಷಣೆಗಳನ್ನು ಕೂಗಿದರು. ಆರ್‌.ಪಿ ರಸ್ತೆಯ ಶಾಸ್ತ್ರಿ ಭವನದಲ್ಲಿರುವ ಪೆಟ್ರೋಲಿಯಂ ಸಚಿವಾಲಯದತ್ತ ಹೋಗುತ್ತಿದ್ದ ವೇಳೆ ಪೊಲೀಸರು ಪ್ರತಿಭಟನಕಾರರನ್ನು ತಡೆದರು.

ಕಾಂಗ್ರೆಸ್ ಯುವ ಘಟಕದ ಅಧ್ಯಕ್ಷ ಶ್ರೀನಿವಾಸ್ ಬಿ.ವಿ ಸೇರಿದಂತೆ ಹಲವು ಸದಸ್ಯರು ಹಾಗೂ ನಾಯಕರನ್ನು ಪೊಲೀಸರು ಬಂಧಿಸಿದ್ದು, ವಿವಿಧ ಪೊಲೀಸ್ ಠಾಣೆಗೆ ಕರೆದೊಯ್ದಿದ್ದಾರೆ ಎಂದು ಐವೈಸಿಯ ಮುಖಂಡ ರಾಹುಲ್ ರಾವ್ ಅವರು ತಿಳಿಸಿದರು.

'ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಕೆ ವಿರುದ್ಧ ಪ್ರತಿಭಟಿಸುತ್ತಿದ್ದ ಬಿಜೆಪಿ ನಾಯಕರು ಈಗ ಮೌನವಾಗಿದ್ದಾರೆ. ದೇಶದ ಹಲವೆಡೆ ಪೆಟ್ರೋಲ್ ಬೆಲೆ ಲೀಟರ್‌ಗೆ ₹100 ಆಗಿದೆ. ಆದರೂ ಮೋದಿ ಸರ್ಕಾರ, ಜನರ ಸಮಸ್ಯೆಗಳನ್ನು ಪರಿಹರಿಸಲು ಏನೂ ಕ್ರಮಕೈಗೊಳ್ಳುತ್ತಿಲ್ಲ. ಹಾಗಾಗಿ ಪೆಟ್ರೋಲಿಯಂ ಸಚಿವ ಧರ್ಮೇಂದ್ರ ಪ್ರಧಾನ್ ಈ ಕೂಡಲೇ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು' ಎಂದು ಅವರು ಆಗ್ರಹಿಸಿದರು.

'ಒಳ್ಳೆಯ ದಿನಗಳ ಭರವಸೆ ನೀಡಿ, ಮೋದಿ ಅವರು ಅಧಿಕಾರಕ್ಕೆ ಬಂದರು. ಆದರೆ ಈಗ ಅವರು ನೀಡಿದ್ದ ಭರವಸೆಗಳನ್ನು ಮುರಿಯುತ್ತಿದ್ದಾರೆ' ಎಂದು ಅವರು ದೂರಿದರು.



ಇಂಧನ ದರ ಏರಿಕೆಯನ್ನು ಖಂಡಿಸಿ ಭಾರತೀಯ ಯುವ ಕಾಂಗ್ರೆಸ್ ಕಾರ್ಯಕರ್ತರು ಶನಿವಾರ ದೆಹಲಿಯಲ್ಲಿ ಪ್ರತಿಭಟನೆ ನಡೆಸಿದರು –ಎಎಫ್‌ಪಿ ಚಿತ್ರ

12ನೇ ದಿನವೂ ಹೆಚ್ಚಳ

ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ದೇಶದಾದ್ಯಂತ ಸತತ 12ನೇ ದಿನವೂ ಪೆಟ್ರೋಲ್, ಡೀಸೆಲ್ ದರ ಹೆಚ್ಚಿಸಿವೆ. 12 ದಿನಗಳಲ್ಲಿ ಪೆಟ್ರೋಲ್ ದರ ಲೀಟರಿಗೆ ₹ 3.63ರಷ್ಟು ಹಾಗೂ ಡೀಸೆಲ್ ದರ ಲೀಟರಿಗೆ ₹ 3.84ರಷ್ಟು ಏರಿಕೆ ಆಗಿದೆ.

ಮುಂಬೈನಲ್ಲಿ ಪೆಟ್ರೋಲ್ ದರ ₹ 97ಕ್ಕೆ ಮತ್ತು ದೆಹಲಿಯಲ್ಲಿ ₹ 90.58ಕ್ಕೆ ಏರಿಕೆಯಾಗಿದೆ. ಡೀಸೆಲ್ ದರ ಮುಂಬೈನಲ್ಲಿ ₹ 88.06ಕ್ಕೆ ಮತ್ತು ದೆಹಲಿಯಲ್ಲಿ ₹ 80.97ಕ್ಕೆ ಏರಿಕೆ ಕಂಡಿದೆ.

ಬೆಂಗಳೂರಿನಲ್ಲಿ ಶನಿವಾರ ಇಂಧನ ದರ ಪ್ರತಿ ಲೀಟರಿಗೆ 40 ಪೈಸೆಗಳಷ್ಟು ಹೆಚ್ಚಾಗಿದ್ದು, ಪೆಟ್ರೋಲ್ ದರ ಲೀಟರಿಗೆ ₹ 93.61 ಮತ್ತು ಡೀಸೆಲ್ ದರ ₹ 85.84ರಂತೆ ಮಾರಾಟವಾಗಿದೆ.

ಎಂಎಸ್‌ಪಿ: ಭತ್ತ ಖರೀದಿ

ನವದೆಹಲಿ (ಪಿಟಿಐ): ಮುಂಗಾರು ಮಾರುಕಟ್ಟೆ ಅವಧಿಯಲ್ಲಿ ಕನಿಷ್ಠ ಬೆಂಬಲ ಬೆಲೆಯಡಿ (ಎಂಎಸ್‌ಪಿ) ಕೇಂದ್ರ ಸರ್ಕಾರವು ಇದುವರೆಗೆ ಒಟ್ಟಾರೆ ₹ 1.23 ಲಕ್ಷ ಕೋಟಿ ಮೌಲ್ಯದ 651 ಲಕ್ಷ ಟನ್‌ಗಳಷ್ಟು ಭತ್ತ ಖರೀದಿಸಿದೆ.

ಹೂಡಿಕೆ ಹೆಚ್ಚಿಸಿ: ಉದ್ಯಮ ವಲಯಕ್ಕೆ ಮನವಿ



ನವದೆಹಲಿ (ಪಿಟಿಐ): 'ಸದ್ಯದ ಆರ್ಥಿಕ ಬಿಕ್ಕಟ್ಟಿನ ಸಂದರ್ಭದಲ್ಲಿ ಹೊಸದಾಗಿ ಹೂಡಿಕೆ ಮಾಡುವ ಧೈರ್ಯ ತೋರಿಸುವ ಮೂಲಕ ಜಾಗತಿಕವಾಗಿ ಭಾರತವನ್ನು ಅತ್ಯಂತ ವೇಗವಾಗಿ ಬೆಳವಣಿಗೆ ಕಾಣುವ ಆರ್ಥಿಕತೆಯನ್ನಾಗಿಸುವಂತೆ' ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ವಾಣಿಜ್ಯೋದ್ಯಮಿಗಳಿಗೆ ಮನವಿ ಮಾಡಿದ್ದಾರೆ.

ಆಲ್ ಇಂಡಿಯಾ ಮ್ಯಾನೇಜ್‌ಮೆಂಟ್ ಅಸೋಸಿಯೇಷನ್ (ಎಐಎಂಎ) ಕಾರ್ಯಕ್ರಮದಲ್ಲಿ ಉದ್ಯಮ ವಲಯದ ಮುಖಂಡರೊಂದಿಗೆ ಮಾತನಾಡಿದ ಅವರು, 'ಹೂಡಿಕೆ ಉತ್ತೇಜಿಸಲು ಕೇಂದ್ರ ಸರ್ಕಾರವು ಕಾರ್ಪೊರೇಟ್ ತೆರಿಗೆ ದರ ಕಡಿತದಂತಹ ಹಲವು ಉತ್ತೇಜನಾ ಕ್ರಮಗಳನ್ನು ತೆಗೆದುಕೊಂಡಿದೆ. ಇವುಗಳ ಪ್ರಯೋಜನ ಪಡೆದುಕೊಂಡು ಹೆಚ್ಚಿನ ಹೂಡಿಕೆ ಮಾಡಿ' ಎಂದು ಅವರು ಕೇಳಿದ್ದಾರೆ.

'ಭಾರತವನ್ನು ಅತ್ಯಂತ ವೇಗವಾಗಿ ಬೆಳವಣಿಗೆ ಕಾಣುತ್ತಿರುವ ಆರ್ಥಿಕತೆಗಳಲ್ಲಿ ಒಂದಾಗಿಸಲು ಸಾಧ್ಯವಿದೆ ಎನ್ನುವುದನ್ನು ತೋರಿಸಲು ಖಾಸಗಿ ಹೂಡಿಕೆದಾರರು ಮತ್ತು ಖಾಸಗಿ ಉದ್ಯಮಗಳು ಮುಂದೆ ಬರುವಂತೆ' ಕೋರಿದ್ದಾರೆ.

'ಉದ್ಯಮಗಳ ವಿಸ್ತರಣೆ ಆಗಬೇಕು, ಆರ್ಥಿಕತೆಗೆ ಅಗತ್ಯ ಇರುವ ಉತ್ಪನ್ನಗಳು ಹೆಚ್ಚು ಉತ್ಪಾದನೆ ಆಗಬೇಕು. ಕಾರ್ಪೊರೇಟ್ ತೆರಿಗೆ ದರ ಕಡಿತದ ಬಳಿಕ ಉದ್ಯಮಗಳ ವಿಸ್ತರಣೆ ಆಗುವುದನ್ನು ಎದುರು ನೋಡುತ್ತಿದ್ದೇನೆ. ಖಾಸಗಿ ವಲಯದಲ್ಲಿ ಹೆಚ್ಚಿನ ಹೂಡಿಕೆ ಆಗುವುದನ್ನು ಕಾಯುತ್ತಿದ್ದೇನೆ' ಎಂದು ತಿಳಿಸಿದ್ದಾರೆ.

ದಿನ ಭವಿಷ್ಯ

ಭಾನುವಾರ 21 ಫೆಬ್ರುವರಿ 2021

ಶಾರ್ವರಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ಮಾಘ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಶತಬಿಷ ನವಮೀ ಗಂ. 14-35 (ಹ. 12-37) ಭಾನುವಾರ ನಿತ್ಯ ನಕ್ಷತ್ರ ಮೃಗಶಿರ ಗಂ 60-00 (ದಿನಪೂರ್ತಿ) ವಿಷ್ಕಂಭ ನಾಮ ಯೋಗ ಗಂ 51-10 ಕೌಲವ ಕರಣ ಗಂ 14-35 ವಿಷ. ಗಂ. 13-34 ಅಮೃತ ಗಂ. 39-34 : ರಾಹುಕಾಲ: ಮ. ಗಂ. 4-30 ರಿಂದ 6-00 ಗುಳಿಕ ಮ. ಕಾಲ ಗಂ 3-00ರಿಂದ 4-30 ಯಮಗಂಡ ಕಾಲ ಮ. ಗಂ 12-00 ರಿಂದ 1-30 ಸೂರ್ಯೋದಯ: 6-44 ಸೂರ್ಯಾಸ್ತ: 6-23. ಅದೃಷ್ಟ ಸಂಖ್ಯೆ 4, 8

ಮೇಷ: ನಿರುದ್ಯೋಗಿಗಳಿಗೆ ಖಾಸಗಿ ಕಂಪನಿಗಳಲ್ಲಿ ಅವಕಾಶ ದೊರಕುವ ಸಾಧ್ಯತೆ. ಕೋರ್ಟ್ ಕಚೇರಿ ಕೆಲಸ ಕಾರ್ಯಗಳಲ್ಲಿ ಯಶಸ್ಸು ದೊರಕಲಿದೆ. ಮನೆ ನಿರ್ಮಾಣ ಕಾರ್ಯಕ್ಕೆ ಚಾಲನೆ ನೀಡುವ ಸಾಧ್ಯತೆ.

ವೃಷಭ: ವಿಶ್ವಾಸದಿಂದ ಸಮಸ್ಯೆಗಳನ್ನು ಎದುರಿಸಿ, ಯಶಸ್ಸು ನಿಮ್ಮದಾಗಲಿದೆ. ಕುಟುಂಬದಲ್ಲಿ ಹೊಂದಾಣಿಕೆಯ ಕೊರತೆ ತಲೆದೋರುವ ಸಾಧ್ಯತೆ. ಸಮಾಧಾನದಿಂದಾಗಿ ಸಾಮರಸ್ಯ ಕಂಡುಕೊಳ್ಳಬಹುದು.

ಮಿಥುನ: ವ್ಯಾಪಾರ ವಿಸ್ತರಣೆಗೆ ಸಕಾಲ. ಆರ್ಥಿಕ ಪ್ರಗತಿಯಿಂದ ಮನೆಯಲ್ಲಿ ಸಂತಸದ ವಾತಾವರಣ ಮೂಡಿಬರಲಿದೆ. ಸಹೋದರರಿಂದ ಧನ ಸಹಾಯ ನಿರೀಕ್ಷಿಸಬಹುದು.

ಕರ್ಕಾಟಕ: ಚಿನ್ನ, ತಾಮ್ರ ಮುಂತಾದ ಲೋಹಗಳ ಉದ್ಯಮಿಗಳಿಗೆ ಹೆಚ್ಚಿನ ಪ್ರಗತಿ. ಕಲಾವಿದರಿಗೆ ಕನಸು ನನಸಾಗುವ ದಿನ. ವಿದೇಶ ಪ್ರಯಾಣಕ್ಕೆ ಸಿದ್ಧತೆ ನಡೆಸುವಿರಿ.

ಸಿಂಹ: ವಿದ್ಯಾರ್ಥಿಗಳು, ಕ್ರೀಡಾಪಟುಗಳಿಗೆ ಯಶಸ್ಸಿನ ಕಿರೀಟ ಲಭ್ಯವಾಗುವ ಸಾಧ್ಯತೆ. ರಾಜಕೀಯದಲ್ಲಿರುವವರಿಗೆ ಸೂಕ್ತ ಸ್ಥಾನಮಾನ ದೊರಕಲಿದೆ. ದೈವಾನುಗ್ರಹಕ್ಕಾಗಿ ಕುಲದೇವತಾ ದರ್ಶನ ಮಾಡುವುದು ಉತ್ತಮ.

ಕನ್ಯಾ: ರೇಷ್ಮೆ ನೇಕಾರರಿಗೆ ಉತ್ತಮ ಅವಕಾಶಗಳು ಲಭ್ಯ. ಸರಕಾರಿ ಕೆಲಸಗಳಿಗೆ ಹಣ ಖರ್ಚಾದರೂ ಕಾರ್ಯಾನುಕೂಲ ವಾಗಲಿದೆ. ಭೂ ವ್ಯವಹಾರ ನಡೆಸುತ್ತಿರುವವರಿಗೆ ಯಶಸ್ಸು ದೊರಕಲಿದೆ. ಮಹಿಳೆಯರಿಗೆ ಇಷ್ಟಾರ್ಥ ಸಿದ್ಧಿಯಾಗಲಿದೆ

ತುಲಾ: ನೌಕರರಿಗೆ ಪರಿಶ್ರಮಕ್ಕೆ ತಕ್ಕ ಪ್ರತಿಫಲ. ವಾಹನ ಖರೀದಿ ಮಾಡುವ ಸಾಧ್ಯತೆ ಸ್ಪಷ್ಟ ಗೋಚರವಾಗುತ್ತಿದೆ. ಅವಿವಾಹಿತರಿಗೆ ಉತ್ತಮ ಸಂಗಾತಿ ಪ್ರಾಪ್ತವಾಗುವ ಸಾಧ್ಯತೆ. ಸಂತಸದ ವಾತಾವರಣ ಮೂಡಲಿದೆ.

ವೃಶ್ಚಿಕ: ಪ್ರಸ್ತುತ ನಿರ್ವಹಿಸುತ್ತಿರುವ ಕೆಲಸ ಉದ್ಯೋಗದಲ್ಲಿ ಹೆಚ್ಚಿನ ಪ್ರಗತಿಯನ್ನು ಕಾಣುವಿರಿ. ನಿಮ್ಮ ವ್ಯವಹಾರಕ್ಷೇತ್ರವನ್ನು ವಿಸ್ತರಿಸಲು ಸ್ನೇಹಿತರ ಸಹಾಯ ದೊರಕುವ ಸಾಧ್ಯತೆ ಕಂಡುಬರುತ್ತಿದೆ.

ಧನು: ವೈದ್ಯಕೀಯ ರಂಗದಲ್ಲಿರುವವರಿಗೆ ಯಶಸ್ಸಿನೊಂದಿಗೆ ಹೆಚ್ಚಿನ ಲಾಭವೂ ಪ್ರಾಪ್ತವಾಗುವುದು. ನೌಕರವರ್ಗದವರಿಗೆ ಮುಂಬಡ್ತಿ, ಸ್ಥಾನ ಬದಲಾವಣೆಯಾಗುವ ಸಾಧ್ಯತೆ.

ಮಕರ: ವ್ಯಾಪಾರಿಗಳಿಗೆ ಶ್ರಮಕ್ಕೆ ತಕ್ಕ ಪ್ರತಿಫಲ. ಆತ್ಮವಿಶ್ವಾಸದಿಂದ ಸಮಸ್ಯೆಗಳಿಗೆ ಮುಕ್ತಿಯನ್ನು ಕಂಡುಕೊಳ್ಳಲಿದ್ದೀರಿ. ಆರೋಗ್ಯದಲ್ಲಿ ಸುಧಾರಣೆ. ಪ್ರವಾಸ ಅಥವಾ ಕ್ಷೇತ್ರದರ್ಶನಗಳಿಂದ ಮನೋಲ್ಲಾಸ ದೊರಕಲಿದೆ.

ಕುಂಭ: ಸಮಯವರಿತು ಕಾರ್ಯ ಸಾಧನೆ ಮಾಡಲು ನಿಶ್ಚಯಿಸುವಿರಿ. ಮದುವೆ ಸಿದ್ಧತೆಗಳಿಗಾಗಿ ಪ್ರಯಾಣ ಮಾಡಬೇಕಾದೀತು. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ದೊರಕಲಿದೆ.

ಮೀನ: ಧನಾದಾಯದ ಹೂಡಿಕೆ ಯೋಜನೆಗಳ ಹುಡುಕಾಟದಲ್ಲಿ ಯಶಸ್ಸನ್ನು ಕಾಣುವಿರಿ. ಆರ್ಥಿಕ ಉನ್ನತಿಯಿಂದ ಹೊಸ ಕಾರ್ಯಗಳಲ್ಲಿ ಮುನ್ನಡೆ ಕಂಡುಕೊಳ್ಳುವಿರಿ. ಮನಸ್ಸಿಗೆ ನೆಮ್ಮದಿ ನೀಡುವ ಸುದ್ದಿ ಕೇಳಲಿದ್ದೀರಿ.

ನಿಮ್ಮ ಜನ್ಮದಿನ 21-ಫೆಬ್ರುವರಿ ಈ ದಿನವು ಅತ್ಯಂತ ಶುಭಕರವಾಗಿದ್ದು, ಸ್ನೇಹಿತರಿಂದ ಬರಬೇಕಾದ ಬಾಕಿ ಹಣ ಸಕಾಲದಲ್ಲಿ ದೊರೆತು ಕಾರ್ಯಾನುಕೂಲವಾಗಲಿದೆ. ಪ್ರಯಾಣ ಅನುಕೂಲಕರವೆನಿಸಲಿದೆ. ಮನೆ, ನಿರ್ಮಾಣ ಗುತ್ತಿಗೆದಾರರಿಗೆ ಹೆಚ್ಚಿನ ಆದಾಯ ಹಾಗೂ ನೂತನ ಗುತ್ತಿಗೆಗಳು ದೊರೆಯುವ ಸಾಧ್ಯತೆ.

ಮುಂಬೈ ಧಾರಣೆ

ಶೇಂಗಾ

20-2-2021

ಜಾವಾ 70/80(ಹೊಸ)	10850-10900
ಜಾವಾ 80/90(ಹೊಸ)	10350-10400
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	8800-8900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1480 (1470)
ಒಂದು ವಾರದ ಡೆಲಿವರಿ	1475 (1460)
ಸೋಯಾ ಕಚ್ಚಾ	1115 (1465)
ಪಾಮ್ ವಾರದ ಡೆಲಿವರಿ	1118 (1118)
ಸೂರ್ಯಕಾಂತಿ ಎಣ್ಣೆ ಕಚ್ಚಾ	1440 (1410)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

46,400 (45,950)

ಬೆಳ್ಳಿ ಕೆ.ಜಿ

69,000 (68,450)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹450
12 ಮೊಟ್ಟೆಗೆ	₹60

ಮೈಸೂರು

100 ಮೊಟ್ಟೆಗೆ	₹453

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1470 (1470)
ಸೋಯಾ (ರಿಫೈನ್ಡ್)	₹1150 (1110)
ಸೂರ್ಯಕಾಂತಿ (ರಿಫೈನ್ಡ್)	₹1480(1440)
ಪಾಮೋಲಿನ್	₹1120 (1120)

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ

ಬಂಟ್ವಾಳ

ಕೋಕ	10000-22500
ಹೊಸತು	23500-42500
ಹಳತು	42500-51000

ಚಿತ್ರದುರ್ಗ

ಆಪಿ	42719-43129
ಬೆಟ್ಟೆ	33249-33699
ಕೆಂಪುಗೋಟು	29409-29810
ರಾಶಿ	42239-42669

ಕಾರ್ಕಳ

ಹೊಸತು	35000-42500
ಹಳತು	45000-51500

ಪುತ್ತೂರು

ಕೋಕ	9500-24000
ಹೊಸತು	29000-42500

ಸಿದ್ದಾಪುರ

ಬಿಳಿಗೋಟು	22699-29899
ಚಾಲಿ	36099-41099
ಕೋಕ	21460-28699
ಕೆಂಪುಗೋಟು	27199-30369
ರಾಶಿ	40209-42699
ತಟ್ಟಿಬೆಟ್ಟೆ	28699-41599

ಶಿರಸಿ

ಬೆಟ್ಟೆ	24699-39699
ಬಿಳಿಗೋಟು	12699-30899
ಚಾಲಿ	28499-42216
ರಾಶಿ	36399-44280

ಮೂಡಿಗೆರೆ ಕಾಫಿ

	ಮುದ್ರೆಮನೆ
ಎಪಿ	10000
ಎಸಿ	4005
ಆರ್‌ಪಿ	5200
ಆರ್‌ಸಿ	3000

ಈ ತಾರತಮ್ಯ ತರವೇ?

ಎಲ್.ಹನುಮಂತಯ್ಯ

> ಹಿಂದೂ ರಾಷ್ಟ್ರದ ಕಲ್ಪನೆಯಿಂದ ನೀತಿ ನಿರೂಪಣೆಗೆ ನಿಂತರೆ ಕ್ರೈಸ್ತ ಇಲ್ಲವೇ ಇಸ್ಲಾಂಗೆ ಮತಾಂತರಗೊಂಡ ದಲಿತರಿಗೆ ಮೀಸಲಾತಿ ನೀಡಿಕೆ ಅಪಥ್ಯವಾಗಬಹುದು. ಆದರೆ, ಎಲ್ಲರ ಹಿತದೃಷ್ಟಿಯಿಂದ ಮೂಲ ಅಸ್ಪೃಶ್ಯ ಸಮುದಾಯದವರು ಯಾವುದೇ ಧರ್ಮಕ್ಕೆ ಮತಾಂತರವಾದರೂ ಅವರಿಗೆ ಮೀಸಲಾತಿ ನೀಡುವುದು ಸರಿಯಾದ ತೀರ್ಮಾನವಲ್ಲವೇ?

ಕ್ರೈಸ್ತ ಇಲ್ಲವೆ ಇಸ್ಲಾಂ ಧರ್ಮಕ್ಕೆ ಮತಾಂತರಗೊಂಡ ದಲಿತರಿಗೆ ಮೀಸಲಾತಿ ಸೌಲಭ್ಯ ನೀಡುವ ಸಂಬಂಧ ನಡೆದಿರುವ ಚರ್ಚೆ ಇಂದು-ನಿನ್ನೆಯದಲ್ಲ. ಮೊನ್ನೆ ರಾಜ್ಯಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರ ನೀಡಿದ ಕಾನೂನು ಸಚಿವರು, ಮತಾಂತರಗೊಂಡ ದಲಿತರಿಗೆ ಮೀಸಲಾತಿ ಸೌಲಭ್ಯ ಕಲ್ಪಿಸಲು ಸಾಧ್ಯವಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಹಿಂದೂ ಧರ್ಮದಿಂದ ಬೇರೆ ಧರ್ಮಕ್ಕೆ ಮತಾಂತರಗೊಂಡ ದಲಿತರು ಪರಿಶಿಷ್ಟ ಜಾತಿಯಲ್ಲಿ ಮುಂದುವರಿಯುವುದಿಲ್ಲ ಎಂಬ ಸಂವಿಧಾನದ ಉಲ್ಲೇಖವನ್ನು ಅವರು ಎತ್ತಿ ತೋರಿಸಿದ್ದಾರೆ.

ಮತಾಂತರ ಕುರಿತ ಚರ್ಚೆ ಶತಮಾನಗಳಷ್ಟು ಹಳೆಯದು. ಹಿಂದೂ ಧರ್ಮದಲ್ಲಿರುವ ಶ್ರೇಣೀಕೃತ ಜಾತಿ ವ್ಯವಸ್ಥೆಯ ಕಾರಣದಿಂದಾಗಿ ಮತಾಂತರ ಹನ್ನೆರಡನೇ ಶತಮಾನದಲ್ಲಿ ಒಂದು ಆಂದೋಲನವಾಗಿ ನಡೆಯಿತು. ಅದಕ್ಕಿಂತಲೂ ಮೊದಲು ಬೌದ್ಧ ಧರ್ಮ ಸ್ಥಾಪನೆಯಾದಾಗ ಅದರ ವೈಚಾರಿಕ ತರ್ಕ, ಚಿಂತನೆಗಳಿಂದ ರಾಜರುಗಳೇ ಬೌದ್ಧ ಧರ್ಮದ ಅನುಯಾಯಿಗಳಾದ ಇತಿಹಾಸ ಕೂಡ ನಮ್ಮಲ್ಲಿದೆ. ಅಂಬೇಡ್ಕರ್ ಅವರು 1956ರಲ್ಲಿ ತಮ್ಮ ಅನುಯಾಯಿಗಳೊಂದಿಗೆ ಲಕ್ಷಾಂತರ ಸಂಖ್ಯೆಯಲ್ಲಿ ಬೌದ್ಧ ಧರ್ಮ ಸ್ವೀಕಾರ ಮಾಡಿದರು. ಪರಿಶಿಷ್ಟ ಜಾತಿಗಳ ಲಕ್ಷಾಂತರ ಜನ ಈಗಲೂ ಬೌದ್ಧ ಧರ್ಮದ ಅನುಯಾಯಿಗಳು.

ಒಂದು ಕಾಲದಲ್ಲಿ ಮತಾಂತರ ಆಗುವುದೆಂದರೆ ಬಿಡುಗಡೆ ಎಂಬ ಅಭಿಪ್ರಾಯವಿತ್ತು. ಹಿಂದೂ ಧರ್ಮದ ಜಾತಿ ಅಸಮಾನತೆ, ಅಸ್ಪೃಶ್ಯ ಆಚರಣೆ, ವರ್ಣಾಶ್ರಮ ಧರ್ಮದ ಪಾಲನೆ ತಳಸಮುದಾಯಗಳನ್ನು ಮತಾಂತರವಾಗಲು ಪ್ರೇರೇಪಿಸುತ್ತಿದ್ದವು. ಮುಸ್ಲಿಂ ದೊರೆಗಳು ನಮ್ಮ ದೇಶವನ್ನು ಆಳುತ್ತಿದ್ದಾಗ ಶೋಷಣೆಗೆ ಒಳಗಾಗಿದ್ದ ತಳಸಮುದಾಯಗಳು, ವಿಶೇಷವಾಗಿ ಪರಿಶಿಷ್ಟ ಜಾತಿಗಳ ಜನ ಇಸ್ಲಾಂಗೆ ಮತಾಂತರ ಆಗಿರುವುದುಂಟು.



ಕ್ರೈಸ್ತ ಮಿಶನರಿಗಳು ಭಾರತಕ್ಕೆ ಬಂದ ಕಾಲದಿಂದ ಅವು ಶೋಷಿತ ಸಮುದಾಯಗಳ ಅಭಿವೃದ್ಧಿಗೆ ಕೆಲಸ ಮಾಡಲಾರಂಭಿಸಿದವು. ಹಿಂದೂ ಧರ್ಮದಲ್ಲಿ ದೇವಸ್ಥಾನ ಪ್ರವೇಶ ನಿರ್ಬಂಧಿಸಿದವರಿಗೆ ಸಮಾನ ಪ್ರಾರ್ಥನೆಯ ಅವಕಾಶ ನೀಡುತ್ತಿದ್ದ ಚರ್ಚ್‌ಗಳು ಆರಂಭವಾದವು. ಚರ್ಚ್‌ಗಳಲ್ಲಿ ಸಮಾನ ಅವಕಾಶವಿದೆಯೆಂದು ತಿಳಿದು ಕೆಲವರು ಕ್ರೈಸ್ತ ಧರ್ಮಕ್ಕೆ ಮತಾಂತರವಾದದ್ದಿದೆ. ಇದರಲ್ಲೂ ಅಸ್ಪೃಶ್ಯ ಸಮುದಾಯದವರೇ ಹೆಚ್ಚಿನ ಸಂಖ್ಯೆಯಲ್ಲಿ ಮತಾಂತರವಾಗಿದ್ದಾರೆ. ಅಂಬೇಡ್ಕರ್ ಅವರು ಮತಾಂತರವನ್ನು ಸ್ವಾಭಿಮಾನದ ಸಂಕೇತ ಎಂದು ಕರೆಯುತ್ತಾರೆ. ಬಿಡುಗಡೆಯ ಮೊದಲ ಹೆಜ್ಜೆ ಎಂದೂ ಗುರುತಿಸುತ್ತಾರೆ.

ಧಾರ್ಮಿಕ ಮತಾಂತರವಾದ ಅಸ್ಪೃಶ್ಯ ಸಮುದಾಯಗಳಲ್ಲಿ ಸ್ವಾಭಿಮಾನದ ಬೆಳೆ ಚಿಗುರದಿದ್ದರೂ ಅವು ಜಾತಿ ತುಳಿತದಿಂದ ತಪ್ಪಿಸಿಕೊಳ್ಳಲು ಸುಲಭ ಮಾರ್ಗವಾಯಿತೆಂಬುದು ಹೆಚ್ಚು ಸಮಂಜಸ. ಧಾರ್ಮಿಕ ಮತಾಂತರದ ನಂತರದಲ್ಲಿ ಅವರ ನಂಬಿಕೆ ಬದಲಾದವೇ ಹೊರತು ಸಾಮಾಜಿಕ, ಶೈಕ್ಷಣಿಕ, ಆರ್ಥಿಕ, ಸ್ಥಿತಿಗಳು ಬದಲಾಗಲಿಲ್ಲ .

ಸ್ವಾತಂತ್ರ್ಯಾನಂತರದಲ್ಲಿ ಅಂಬೇಡ್ಕರ್ ಪ್ರಭಾವದಿಂದ ಬೌದ್ಧ ಧರ್ಮಕ್ಕೆ ಮತಾಂತರಗೊಂಡ ಶೋಷಿತರು ಹೆಚ್ಚಿನ ಸಂಖ್ಯೆಯಲ್ಲಿದ್ದರೂ ಅವರ ಆರ್ಥಿಕ, ಸಾಮಾಜಿಕ ಸ್ಥಿತಿಗಳು ಸುಧಾರಿಸಲಿಲ್ಲ. ಬೌದ್ಧ ಧರ್ಮಕ್ಕೆ ಸೇರಿದವರು ದಲಿತ ಬೌದ್ಧರು, ಕ್ರೈಸ್ತ ಧರ್ಮಕ್ಕೆ ಸೇರಿದವರು ದಲಿತ ಕ್ರೈಸ್ತರು, ಇಸ್ಲಾಂ ಧರ್ಮಕ್ಕೆ ಸೇರಿದವರು ದಲಿತ ಮುಸ್ಲಿಮರಾದರೇ ಹೊರತು ಅವರಿಗೆ ಪೂರ್ಣವಾಗಿ ತಮ್ಮ ಪೂರ್ವಾಶ್ರಮದ ಕಳಂಕದಿಂದ (ಸ್ಟಿಗ್ಮಾ) ಹೊರಬರಲಾಗಲೇ ಇಲ್ಲ.

ಹಾಗೆ ನೋಡಿದರೆ ಹನ್ನೆರಡನೇ ಶತಮಾನದಲ್ಲಿ ಬಸವಣ್ಣನವರ ಪ್ರಭಾವದಿಂದ ಮತಾಂತರವಾದ ಅನೇಕ ತಳಸಮುದಾಯಗಳು ಕಾಲಾಂತರದಲ್ಲಿ ಆ ಶಾಪದಿಂದ ಮುಕ್ತವಾಗಿವೆ ಎನ್ನಬಹುದು. ಅಲ್ಲದೇ ತನ್ನೊಳಗೆ ವಿಲೀನಗೊಂಡ ಎಲ್ಲಾ ಸಮುದಾಯಗಳೂ ತಾವು ನಡೆಸುತ್ತಿದ್ದ ವೃತ್ತಿಯಿಂದ ಗುರುತಿಸಲ್ಪಟ್ಟವು. ಅಲ್ಲಿಯೂ ಜಾತಿಸೂಚಕಗಳು ಉಳಿದುಕೊಂಡರೂ ಲಿಂಗಾಯತವೆಂಬ ಆಲದ ಕೆಳಗೆ ಒಂದಾದ ಚರಿತ್ರೆ ನಮ್ಮ ಮುಂದಿದೆ.ಆದರೆ, ಲಿಂಗಾಯತವೇ ಒಂದು ಜಾತಿಯಾಗಿ, ಸುತ್ತ ಕಟ್ಟಿಕೊಂಡ ಗೋಡೆಯಿಂದ ತನಗೆ ತಾನೇ ಅಸ್ಪೃಶ್ಯ ಸಮುದಾಯವಾಗಿ, ಉಳಿದವರನ್ನು ಒಳಗೊಳ್ಳಲಾಗದ, ಸಾಮಾಜಿಕವಾಗಿ ಮೇಲರಿಮೆಯನ್ನು ಬೆಳೆಸಿಕೊಂಡ ಸಮುದಾಯ. ಸದ್ಯದ ಪರಿಸ್ಥಿತಿಯಲ್ಲೇ ಲಿಂಗಾಯತರಲ್ಲಿನ ಒಳಪಂಗಡಗಳು ಮೀಸಲಾತಿಗಾಗಿ ಹೋರಾಟ ನಡೆಸುತ್ತಿರುವುದು ನಮಗೆಲ್ಲ ತಿಳಿದಿದೆ.

ಪರಿಶಿಷ್ಟರಲ್ಲಿ ಕ್ರೈಸ್ತರಾದವರಿಗೆ ದಲಿತ ಕ್ರೈಸ್ತರೆಂದು ಕರೆದು ಪ್ರತ್ಯೇಕ ಚರ್ಚ್‌ಗಳನ್ನು ಕಟ್ಟಿರುವುದು ವಾಸ್ತವ. ದಲಿತ ಮುಸ್ಲಿಮರು ಸಂಖ್ಯೆಯಲ್ಲಿ ಕಡಿಮೆಯಿದ್ದರೂ ತಮ್ಮ ಆರ್ಥಿಕ, ಸಾಮಾಜಿಕ ಪರಿಸ್ಥಿತಿಯಿಂದ ಆ ಧರ್ಮದ ತಳಸ್ತರದಲ್ಲಿದ್ದಾರೆ. ಅವರಿಗೆ ಮೇಲುಸ್ತರದ ಮುಸ್ಲಿಂ ಸಮುದಾಯದ ಕೊಡುಕೊಳ್ಳುವಿಕೆ ಇಲ್ಲ. ದಲಿತ ಬೌದ್ಧರದೇ ಜಾತಿಯಾಗಿ ಕೊಡುಕೊಳ್ಳುವಿಕೆಯು ತಮ್ಮ ಸಮುದಾಯದೊಳಗೇ ನಡೆದಿರುವುದು ಸತ್ಯ ಸಂಗತಿ.

ಮತಾಂತರವಾದ ದಲಿತರು ಮೀಸಲಾತಿಯನ್ನು ಪಡೆಯಬಹುದೇ ಎಂಬ ಚರ್ಚೆ ಕೋರ್ಟಿನ ಮೆಟ್ಟಿಲೇರಿರುವುದುಂಟು. ಅದರಲ್ಲಿ ಒಮ್ಮೆ ಮತಾಂತರವಾದರೆ ಅವರ ಧಾರ್ಮಿಕ/ ಜಾತಿಯ ಸವಲತ್ತನ್ನು ಬಿಟ್ಟುಕೊಡಬೇಕಾಗುತ್ತದೆಂದು ಅನೇಕ ತೀರ್ಪುಗಳು ಬಂದಿವೆ. ಬೌದ್ಧರಾದವರಿಗೆ ಮೀಸಲು ಸೌಲಭ್ಯವನ್ನು ಮುಂದುವರೆಸಲು ಭಾರತೀಯ ಪಾರ್ಲಿಮೆಂಟು ತಿದ್ದುಪಡಿಯನ್ನು ತಂದಿದೆ. ಆದರೆ, ಕ್ರೈಸ್ತರಾದವರಿಗೆ, ಮುಸ್ಲಿಂ ಆದವರಿಗೆ ಮೀಸಲಾತಿ ಸೌಲಭ್ಯವನ್ನು ವಿಸ್ತರಿಸಲು ಸಾಧ್ಯವಿಲ್ಲವೆಂಬ ನಿಲುವನ್ನು ತಳೆಯಲಾಗಿದೆ.

ಧಾರ್ಮಿಕವಾಗಿ ಕ್ರೈಸ್ತರಾದರೂ ಅವರ ಸಾಮಾಜಿಕ, ಆರ್ಥಿಕ ಸ್ಥಿತಿಗಳಲ್ಲಿ ಯಾವುದೇ ವ್ಯತ್ಯಾಸವಾಗದಿರುವುದು ನಮ್ಮ ಮುಂದಿನ ಸತ್ಯ. ಧಾರ್ಮಿಕ ಬದಲಾವಣೆಯಿಂದ ಹೆಸರು ಬದಲಾಯಿತೇ ಹೊರತು ಸಾಮಾಜಿಕ ಸ್ಥಿತಿಗತಿಯಲ್ಲಿ ಸುಧಾರಣೆಯಾಗಿಲ್ಲವೆಂಬ ನಿಜಸಂಗತಿ ನಮ್ಮ ಎದುರಿಗಿದೆ. ವೃತ್ತಿಯಿಂದ ಕೂಡ ಬದಲಾವಣೆಗಳಾಗಿಲ್ಲ. ಚರ್ಮಕಾರ ಕ್ರೈಸ್ತ ಚರ್ಮಕಾರನಾಗಿದ್ದಾನೆ. ಕುಂಬಾರ, ತಿಗಳ, ಅಂಬಿಗ ಮುಂತಾದ ಜಾತಿಗಳು ತಾವು ಇದ್ದಂತೆಯೇ ಮುಂದುವರಿದಿದ್ದರಿಂದ ಸಾಮಾಜಿಕ ಸ್ಥಿತಿಯಲ್ಲಿ ಸುಧಾರಣೆಯಾಗಲಿಲ್ಲ.

ಅಸ್ಪೃಶ್ಯತೆ ಶಾಪದಿಂದ ಸ್ವಲ್ಪ ಮಟ್ಟಿಗೆ ವಿಮೋಚನೆ ಆದರೂ ಸಾಮಾಜಿಕ ಸ್ಥಿತಿಗತಿಗಳು ಹಾಗೆಯೇ ಮುಂದುವರಿದ ಕಾರಣ ಮೀಸಲಾತಿ ನೀಡಬೇಕೆಂದು ಆ ವರ್ಗಗಳು ಕೇಳಿಕೊಳ್ಳುತ್ತಿವೆ. ತಳಸಮುದಾಯಗಳು ತಮ್ಮ ಮೇಲಿನ ಜಾತಿ ತಾರತಮ್ಯದಿಂದ ವಿಮೋಚನೆಗಾಗಿ ಧರ್ಮಾಂತರವಾದರೆ ಮೀಸಲಾತಿ ನೀಡಬೇಕಾದುದು ಸಂವಿಧಾನ ಬದ್ಧವಾದ ಆಶಯವಲ್ಲವೇ ಎಂದು ಕೇಳುವವರೂ ಇದ್ದಾರೆ.

ತಮ್ಮ ವೈಯಕ್ತಿಕ, ಸ್ವಾಭಿಮಾನದ ಕಾರಣಕ್ಕಾಗಿ ಮತಾಂತರವಾದವರು, ಮೀಸಲಾತಿಯ ಕಾರಣಕ್ಕಾಗಿ ಘರ್ ವಾಪಸಿ ಆದವರೂ ಇದ್ದಾರೆ. ಮುಸ್ಲಿಂ ಧರ್ಮಕ್ಕೆ ಮತಾಂತರವಾಗಿದ್ದ ಮಹಮ್ಮದ್ ಸಾದಿಕ್ ಎಂಬುವವರು ಮತ್ತೆ ತಮ್ಮ ಮೂಲಜಾತಿಗೆ ಮರು ಮತಾಂತರವಾಗಿ ಸಂಸದರಾಗಿ ಮೀಸಲು ಕ್ಷೇತ್ರದಿಂದ ಆಯ್ಕೆಯಾದ ಉದಾಹರಣೆಯಿದೆ. ಸಿಖ್ ಧರ್ಮಕ್ಕೆ ಮತಾಂತರವಾದವರು ಮೂಲ ಅಸ್ಪೃಶ್ಯ ಎನಿಸಿಕೊಂಡ ಜಾತಿಗೆ ಮರುಮತಾಂತರವಾದ ಉದಾಹರಣೆಗಳಿವೆ.

ಆಳುವ ವರ್ಗಗಳು ಮತಾಂತರವಾದವರಿಗೆ ಮೀಸಲು ಸೌಲಭ್ಯ ನೀಡಬಾರದೆಂಬ ನಿಲುವು ತಳೆದಿವೆ. ಇದರಿಂದ ಮತಾಂತರವನ್ನು ತಡೆಗಟ್ಟಬಹುದೆಂಬ ಉದ್ದೇಶವಿದೆ. ಸಂವಿಧಾನದಲ್ಲಿ ಇತ್ತೀಚಿನ ತಿದ್ದುಪಡಿ ಮೂಲಕ ಆರ್ಥಿಕವಾಗಿ ಹಿಂದುಳಿದವರಿಗೆ ಶೇ 10ರಷ್ಟು ಮೀಸಲಾತಿ ನೀಡಬಹುದಾದರೆ ಮತಾಂತರವಾದವರ ಆರ್ಥಿಕ, ಸಾಮಾಜಿಕ ಸ್ಥಿತಿ ದುರ್ಬಲವಾಗಿದ್ದರೆ ಅವರಿಗೆ ಪರಿಶಿಷ್ಟ ಜಾತಿಯಲ್ಲಿ ಮೀಸಲಾತಿ ನೀಡಿದರೆ ತಪ್ಪೇನು? ಇದು ಸಂವಿಧಾನಾತ್ಮಕವಲ್ಲವೇ ಎಂಬ ವಾದವನ್ನೂ ಮಂಡಿಸುತ್ತಿದ್ದಾರೆ.

ಸುಪ್ರೀಂ ಕೋರ್ಟಿನ ಮುಂದೆ ವಾದ-ವಿವಾದಗಳು ನಡೆಯುತ್ತಿವೆ. ಸದ್ಯ ಕೆಲವು ರಾಜ್ಯಗಳು, ನಂಬಿಕೆಯಿಂದ ಮತಾಂತರವಾಗಿ ದಾಖಲೆಗಳಲ್ಲಿ ಪರಿಶಿಷ್ಟ ಜಾತಿಯೇ ನಮೂದಾಗಿದ್ದರೆ ಅವರನ್ನು ಮೀಸಲಾತಿಗೆ ಪರಿಗಣಿಸುತ್ತಿವೆ. ಕರ್ನಾಟಕದಲ್ಲಿ ಕ್ರೈಸ್ತರಾದ, ಬೌದ್ಧರಾದ ಪರಿಶಿಷ್ಟ ಜಾತಿಯವರು ಮೀಸಲಾತಿ ಸೌಲಭ್ಯ ಪಡೆಯುತ್ತಿದ್ದಾರೆ. ಇದನ್ನು ಅಧಿಕೃತವಾಗಿ ಸಂವಿಧಾನಾತ್ಮಕವಾಗಿ ನೀಡಬೇಕಾದ ಅವಶ್ಯಕತೆಯಿದೆ. ಕಾನೂನು ತಜ್ಞರು ಸಾಮಾಜಿಕ ಚಿಂತಕರ ಜೊತೆ ಮತ್ತಷ್ಟು ಚರ್ಚೆ ಮಾಡುವ ಮೂಲಕ ಸಾಮಾಜಿಕ ನ್ಯಾಯ ನೀಡುವ ಮಾರ್ಗವನ್ನು ಯಾರ ಪಾಲಿಗೂ ಮುಚ್ಚದಂತೆ ಎಚ್ಚರವಹಿಸಬೇಕಾದ ಅಗತ್ಯವಿದೆ.

ಅಂತಿಮವಾಗಿ ಹಿಂದೂ ರಾಷ್ಟ್ರದ ಕಲ್ಪನೆಯಿದ್ದರೆ ಇಂತಹ ಮೀಸಲಾತಿ ಸೌಲಭ್ಯ ನೀಡಿಕೆ ಅಪಥ್ಯವಾಗಬಹುದು. ಆದರೆ, ಎಲ್ಲರ ಹಿತಕಾಯುವ ದೃಷ್ಟಿಯಿಂದ ಮೂಲ ಅಸ್ಪೃಶ್ಯ ಸಮುದಾಯ ಯಾವುದೇ ಧರ್ಮಕ್ಕೆ ಮತಾಂತರವಾದರೂ ಅವರಿಗೆ ಮೀಸಲಾತಿ ಸೌಲಭ್ಯ ನೀಡುವುದು ಸರಿಯಾದ ತೀರ್ಮಾನ. ಸಂವಿಧಾನದ ಆಶಯವೂ ಹೌದು. ಮೀಸಲಾತಿ ಸಮಗ್ರವಾದ ಅಭಿವೃದ್ಧಿ ತರುವುದು ಸಾಧ್ಯವಿಲ್ಲವೆಂಬ ಅರಿವಿನ, ಅನುಭವದ ಹಿನ್ನೆಲೆಯಿಂದ ಶೋಷಿತ ಸಮುದಾಯವನ್ನು ಮುಖ್ಯವಾಹಿನಿಗೆ ತರುವ ಸಣ್ಣ ಪ್ರಯತ್ನವಾದ್ದರಿಂದ ಈ ಸೌಲಭ್ಯ ಮುಂದುವರಿಸಲು ಸರ್ಕಾರಗಳು ರಾಜಕೀಯೇತರವಾಗಿ ಚಿಂತಿಸಬೇಕಾಗಿದೆ.

(ಲೇಖಕ: ರಾಜ್ಯಸಭಾ ಸದಸ್ಯ)



ಮಹಿಳೆಯರ ವಿರುದ್ಧದ ಪ್ರಕರಣಗಳಲ್ಲಿ ನ್ಯಾಯ ಕಲ್ಪಿಸುವ ನಿಟ್ಟಿನಲ್ಲಿ ದೆಹಲಿ ನ್ಯಾಯಾಲಯದ ತೀರ್ಪು ಐತಿಹಾಸಿಕ

ನ್ಯಾಯದ ಹಾದಿ ಇನ್ನೂ ದೂರ

ಮಲ್ಲಿಗೆ ಸಿರಿಮನೆ

‘ಸತ್ಯಕ್ಕೆ ಸೋಲಿಲ್ಲ’ವೆಂಬ ಮಾತು ಸತ್ಯವಾಗುವತ್ತ ಸಾಗಬೇಕಾದ ಹಾದಿ ದೀರ್ಘವಾಗಿದೆ. ನಡುನಡುವೆ ಮಿಂಚುವ ಮಿಂಚುಹುಳುಗಳ ಬೆಳಕೇ ನಡಿಗೆಗೆ ದಾರಿದೀಪ. ಪತ್ರಕರ್ತೆ ಮತ್ತು ಭಾರತದ ‘ಮೀ ಟೂ’ ಅಭಿಯಾನದ ಸಂದರ್ಭದಲ್ಲಿ ದಿಟ್ಟ ದನಿಯೆತ್ತಿ ಹೆಸರಾದ ಹೆಣ್ಣುಮಗಳು ಪ್ರಿಯಾ ರಮಣಿಯವರ ಮೇಲೆ ಎಂ.ಜೆ.ಅಕ್ಬರ್ ಅವರು ದಾಖಲಿಸಿದ್ದ ಮಾನನಷ್ಟ ಮೊಕದ್ದಮೆಯ ಪ್ರಕರಣದಲ್ಲಿ ದೆಹಲಿಯ ನ್ಯಾಯಾಲಯವು ನೀಡಿರುವ ತೀರ್ಪು ಅಂತಹ ಮಿಣುಕು ಬೆಳಕಿದ್ದಂತೆ. ಫೆಬ್ರುವರಿ 17ರಂದು ದೆಹಲಿಯ ಜಿಲ್ಲಾ ನ್ಯಾಯಾಲಯವು ಪ್ರಿಯಾ ಮೊಕದ್ದಮೆಯನ್ನು ವಜಾಗೊಳಿಸಿ ರಮಣಿಯವರನ್ನು ನಿರ್ದೋಷಿಯೆಂದು ಖುಲಾಸೆ ಮಾಡಿದೆ.

ಈ ಪ್ರಕರಣ 2018ರಲ್ಲಿ ಭಾರತದಲ್ಲಿ ಅಲ್ಲೋಲಕಲ್ಲೋಲವನ್ನೇ ಸೃಷ್ಟಿಸಿದ್ದ ‘ಮೀ ಟೂ’ ಆಂದೋಲನದ ಸಂದರ್ಭದ್ದು. ಆಗಿನ ಕೇಂದ್ರ ಸರ್ಕಾರದಲ್ಲಿ ಸಚಿವರಾಗಿದ್ದ ಅಕ್ಬರ್ ಅವರಿಂದ ತಮ್ಮ ಮೇಲೆ ಲೈಂಗಿಕ ಕಿರುಕುಳ ನಡೆದಿದೆ ಎಂದು ಆರೋಪಿಸಿ ಪತ್ರಕರ್ತೆ ಪ್ರಿಯಾ ರಮಣಿಯವರು ಟ್ವೀಟ್ ಮಾಡಿದ್ದರು. ನಟಿ ತನುಶ್ರೀ ದತ್ತಾ ಹಿರಿಯ ಮತ್ತು ಪ್ರಭಾವಿ ನಟ ನಾನಾ ಪಾಟೇಕರ್ ಅವರ ವಿರುದ್ಧ ದನಿಯೆತ್ತಿದ ಬೆನ್ನಲ್ಲೇ ನಡೆದಿದ್ದ ಈ ಟ್ವೀಟ್ ಪ್ರಕರಣವು ಲೈಂಗಿಕ ಕಿರುಕುಳದ ಜೇನುಗೂಡಿಗೆ ಕಲ್ಲುಹೊಡೆದಂತೆ ಭಾರೀ ವಿವಾದವನ್ನು ಸೃಷ್ಟಿಸಿತ್ತು.

ಪ್ರಿಯಾ ರಮಣಿಯವರು 1993ರಲ್ಲಿ ತಾವಿನ್ನೂ ಕಿರಿಯ ಪತ್ರಕರ್ತೆಯಾಗಿ ಪತ್ರಿಕಾ ರಂಗಕ್ಕೆ ಕಾಲಿಟ್ಟ ಸಂದರ್ಭದಲ್ಲಿ ಆಗ ಪ್ರಮುಖ ಪತ್ರಿಕೆಯೊಂದರ ಸಂಪಾದಕರಾಗಿದ್ದ ಎಂ.ಜೆ.ಅಕ್ಬರ್ ಅವರಿಂದ ತಮ್ಮ ಮೇಲೆ ಲೈಂಗಿಕ ದೌರ್ಜನ್ಯ ನಡೆದಿತ್ತೆಂಬ ವಿಚಾರ ಬಿಚ್ಚಿಟ್ಟ ತಕ್ಷಣ, ಸುಮಾರು 20 ಮಂದಿ ಮಹಿಳೆಯರು ಒಬ್ಬರಾದ ಮೇಲೊಬ್ಬರಂತೆ ಅಕ್ಬರ್ ಅವರಿಂದ ತಮಗೂ ಕಿರುಕುಳವಾಯಿತೆಂಬ ಸಂಗತಿಯನ್ನು ಹೊರಗೆಡಹಿದರು. ಒಬ್ಬರು ಅತ್ಯಾಚಾರದ ಬಗ್ಗೆಯೂ ಮಾತನಾಡಿದರು. ಇದರಿಂದ ಉಂಟಾದ ರಾಜಕೀಯ ಒತ್ತಡದಿಂದ ಅಕ್ಬರ್ ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆ ಕೊಡಬೇಕಾಯಿತು. ಆದರೆ, ಅಷ್ಟಾದರೂ ಅವರು ತಮ್ಮ ಮೇಲಿನ ಆರೋಪಗಳನ್ನು ನಿರಾಕರಿಸಿದ್ದು ಮಾತ್ರವಲ್ಲದೆ ಪ್ರಿಯಾ ರಮಣಿಯವರ ಮೇಲೆ ಮಾನನಷ್ಟ ಮೊಕದ್ದಮೆಯನ್ನು ಹೂಡಿದರು.

2019ರಲ್ಲಿ ಆರಂಭವಾದ ವಿಚಾರಣೆಯ ಸಂದರ್ಭದಲ್ಲಿ ಪ್ರಿಯಾ ರಮಣಿಯವರು ಅಕ್ಬರ್ ಅವರ, 90 ವಕೀಲರಿದ್ದ ತಂಡವನ್ನು ಎದುರಿಸಬೇಕಿತ್ತು. ಅಷ್ಟು ಮಾತ್ರವಲ್ಲ, ಇದೇ ಅವಧಿಯಲ್ಲಿ ಮೀಟೂ ಅಭಿಯಾನದಲ್ಲಿ ದನಿಯೆತ್ತಿದ್ದ ಹಲವು ಮಹಿಳೆಯರಿಂದ ಆರೋಪಕ್ಕೊಳಗಾಗಿದ್ದ ಪುರುಷರ ಒಂದೊಂದೇ ಪ್ರಕರಣಗಳು ಮುಚ್ಚಿಹೋಗಲಾರಂಭಿಸಿದವು.

ನಿರ್ಮಾಪಕ, ನಿರ್ದೇಶಕ ರಾಜಕುಮಾರ್ ಹಿರಾನಿಯವರ ಮೇಲೆ ಗಂಭೀರವಾದಂತಹ ಲೈಂಗಿಕ ಕಿರುಕುಳದ ಆರೋಪಗಳು ಬಂದವು. ಅದಾದ ಮೇಲೂ ಅವರನ್ನು ಮರುವರ್ಷವೇ ನಡೆದ ಮಲೇಷ್ಯನ್ ಫಿಲ್ಮ್ ಫೆಸ್ಟಿವಲ್‌ನ ವಿಶೇಷ ಆಹ್ವಾನಿತರನ್ನಾಗಿ ಕರೆಯಲಾಯಿತು. ಹಿರಾನಿಯವರು ನಿರ್ಮಿಸಿ ನಿರ್ದೇಶಿಸಿದ್ದ ‘3 ಈಡಿಯಟ್ಸ್’ ಸಿನಿಮಾಕ್ಕೆ ಐಐಎಫ್‌ಎ ನೀಡುವ ವಿಶೇಷ ಪ್ರಶಸ್ತಿ ದೊರಕಿತು. (ಈ ಸಿನಿಮಾದಲ್ಲೂ ಅತ್ಯಾಚಾರವನ್ನು ಲಘುವಾಗಿ ಕುಚೇಷ್ಟೆ ಮಾಡುವ ದೃಶ್ಯವಿರುವುದನ್ನು ನೆನಪಿಸಿಕೊಳ್ಳಬಹುದು).

ನಿರ್ದೇಶಕ ಸುಭಾಷ್ ಕಪೂರ್ ಮೇಲೆ ನಟ ಗೀತಿಕಾ ತ್ಯಾಗಿ ಲೈಂಗಿಕ ಕಿರುಕುಳದ ಆರೋಪ ಮಾಡಿದಾಗ, ಅವರ ನಿರ್ದೇಶನದ ‘ಮೊಘಲ್’ ಸಿನಿಮಾ ಪ್ರಾಜೆಕ್ಟ್‌ನಿಂದ ಹಿಂದೆ ಸರಿಯುತ್ತಿರುವುದಾಗಿ ನಟ ಅಮೀರ್ ಖಾನ್ ಘೋಷಿಸಿದರು. ಆದರೆ, ನಿಧಾನವಾಗಿ ಒಂದೊಂದಾಗಿ ಪ್ರಕರಣಗಳು ಮುಚ್ಚಿಹೋದದ್ದು ಮಾತ್ರವಲ್ಲ, ಅಮೀರ್ ಖಾನ್ ಮರಳಿ ಸಿನಿಮಾದ ಭಾಗವಾಗಿ ಕೆಲಸ ಮಾಡಿದರು.

12ನೇ ಪುಟಕ್ಕೆ...



ಗ್ರಾಮಾಫೋನ್ ಕಾಲದ ಜಾಹೀರಾತು

ಎಚ್‌ಎಂವಿ ಗಾನಮುದ್ರಿಕೆಗಳ ಟ್ರೇಡ್‌ಮಾರ್ಕ್ ಎನಿಸಿದ ಗ್ರಾಮಾಫೋನ್ ಮುಂದೆ ನಾಯಿಯೊಂದು ಆಲಿಸುತ್ತಿರುವಂತೆ ಕುಳಿತಿರುವ ಚಿತ್ರ ಕಣ್ಮುಂದೆ ಬಂದಾಗಲೆಲ್ಲ ಆ ಜಮಾನಾದ ರಿಕಾರ್ಡಿಂಗ್‌ಗಳು, ಅವುಗಳ ಕುರಿತು ಬರುತ್ತಿದ್ದ ಜಾಹೀರಾತುಗಳು ಮನದಂಗಳದಲ್ಲಿ ಮೆರವಣಿಗೆ ಹೊರಡುತ್ತವೆ. ಅಬ್ಬಬ್ಬಾ! ಎಂತಹ ಅದ್ಭುತ ಜಗತ್ತು ಅದು...

ಎಸ್. ದಿವಾಕರ್

ಪಂಡಿತ್ ಭೀಮಸೇನ ಜೋಶಿಯವರ ಬಾಲ್ಯಕಾಲದ ಒಂದು ಪ್ರಸಂಗ: ಶಾಲೆಯಿಂದ ದಿನವೂ ತಡವಾಗಿ ಮನೆಗೆ ಬರುತ್ತಿದ್ದ ಬಾಲಕ ಭೀಮಸೇನನನ್ನು ಯಾಕೆ ತಡವಾಯಿತು ಎಂದು ಎಷ್ಟು ಕೇಳಿದರೂ ಅವನು ಬಾಯಿಬಿಡುತ್ತಿರಲಿಲ್ಲ. ಅದೇ ಊರಿನಲ್ಲಿ ಗ್ರಾಮಾಫೋನ್ ರಿಕಾರ್ಡುಗಳ ಒಂದು ಅಂಗಡಿಯಿತ್ತು. ಒಂದು ದಿನ ಆ ಅಂಗಡಿಯ ಮಾಲೀಕರು ಭೀಮಸೇನನ ತಂದೆ ಗುರುರಾಜ ಜೋಶಿಯವರನ್ನು ಕರೆದು, ‘ನಿಮ್ಮ ಹುಡುಗ ಛಂದ ಹಾಡತಾನ್ರಿ ಮಾಸ್ತರ. ನೀವು ಕೇಳಿಲ್ಲೇನ್ರಿ? ಸಾಲಿ ಬಿಟ್ಟ ಗಳಿಗ್ಗೆ ಇಲ್ಲೆ ಬಂದು ಕೂಡತಾನ. ನಾನೂ ಅಂವಗ ಭಾಗವತರ ‘ಆಡಿಸಿದಳೆಶೋದಾ’ ರಿಕಾರ್ಡು ಹಚ್ಚಿ ಕೇಳಸ್ತೀನಿ. ಕೇಳಿ ಕೇಳಿ ಈಗ ಆ ಹಾಡ ಪೂರ್ತಿ ಇದ್ದಕ್ಕಿದ್ದಾಂಗ ಅಂದು ತೋರಿಸತಾನ್ರಿ’ ಎಂದು ಮೆಚ್ಚುಗೆಯಿಂದ ಹೇಳಿದರು. ಮುಂದೊಂದು ದಿನ ಬಾಲಕ ಭೀಮಸೇನನ ತಾಯಿ ಅದೇ ಹಾಡನ್ನು ಹಾಡಿದಾಗ ಅವನು ‘ಹಂಗಲ್ಲವ್ವ ಈ ಹಾಡನ್ನ ಹಾಡುವದು, ನಾನು ಅಂದು ತೋರಿಸುತ್ತೇನೆ ನೋಡು’ ಎಂದು ಆ ರಿಕಾರ್ಡಿನಲ್ಲಿದ್ದ ಹಾಗೆಯೇ ಹಾಡಿ ತೋರಿಸಿದನಂತೆ.

ಹೀಗೆ ಭೀಮಸೇನರಿಗೆ ಸಂಗೀತ ಕಲಿಯಬೇಕೆಂಬ ಹುಚ್ಚು ಹತ್ತಿಸಿದ, ಕಲಿಸುವ ಗುರುವಿಗಾಗಿಯೇ ಅವರನ್ನು ದೇಶದಾದ್ಯಂತ ಅಲೆದಾಡಿಸಿದ ಗ್ರಾಮಾಫೋನ್ ರಿಕಾರ್ಡುಗಳಿಗೆ ಅಂಥ ದೀರ್ಘ ಇತಿಹಾಸವೇನೂ ಇಲ್ಲ. 1850ರ ದಶಕದಲ್ಲಿ ಎದುವರ್ದ್-ಲಿಯೋನ್ ಸ್ಕಾಟ್ ದ ಮಾರ್ತಿನ್‌ವಿಲ್ ಎಂಬ ಫ್ರೆಂಚ್ ವಿಜ್ಞಾನಿ ಮೊತ್ತಮೊದಲು ಧ್ವನಿಯನ್ನು ಮುದ್ರಿಸಿಕೊಳ್ಳಬಲ್ಲ ‘ಫೋನಾಟೋಗ್ರಾಫ್’ ಯಂತ್ರವನ್ನು ಕಂಡುಹಿಡಿದ. ಅದರಿಂದ ಪ್ರಭಾವಿತನಾದ ಅಮೆರಿಕನ್ ವಿಜ್ಞಾನಿ ಥಾಮಸ್ ಆಲ್ವ ಎಡಿಸನ್ ‘ಸಿಲಿಂಡರ್ ಫೋನೋಗ್ರಾಫ್’ ಎಂಬ ಯಂತ್ರವನ್ನು ಆವಿಷ್ಕರಿಸಿದ. ಆಮೇಲೆ ಎಮಿಲ್ ಬರ್ಲಿನರ್ (1851-1929) ಎಂಬ ಜರ್ಮನ್-ಅಮೆರಿಕನ್ ಅನ್ವೇಷಕ ಫೋನೋಗ್ರಾಫ್‌ನ ಮೇಲೆ ತಿರುಗಬಲ್ಲ ಚಪ್ಪಟೆಯಾದ ವರ್ಟಿಕಲ್-ಕಟ್ ತಟ್ಟೆಯನ್ನು ಕಂಡುಹಿಡಿದ. ಹೀಗೆ ಆವಿಷ್ಕಾರಗೊಂಡದ್ದು ಗ್ರಾಮಾಫೋನ್ ರಿಕಾರ್ಡು.

ನಿಮ್ಮಲ್ಲಿ ಕೆಲವರಾದರೂ ಗ್ರಾಮಾಫೋನ್ ತಟ್ಟೆಗಳು, ಗ್ರಾಮಾಫೋನ್ ಪ್ಲೇಟುಗಳು, ಗಾನಮುದ್ರಿಕೆಗಳು, ಧ್ವನಿಮುದ್ರಿಕೆಗಳು, ಇತ್ಯಾದಿ ಹೆಸರುಗಳಿಂದ ಕರೆಯಲಾಗುತ್ತಿದ್ದ ರಿಕಾರ್ಡುಗಳ ಮೇಲೆ ವೃತ್ತಾಕಾರದ, ಬಹುಮಟ್ಟಿಗೆ ಕೆಂಪು ಬಣ್ಣದಲ್ಲಿರುವ ಸ್ಟಿಕ್ಕರುಗಳನ್ನು ನೋಡಿರಲಿಕ್ಕೆ ಸಾಕು. ಅದರಲ್ಲಿ ಹಾಡುಗಾರರ ಹೆಸರು, ಹಾಡು, ತಯಾರಿಕಾ ಕಂಪನಿ ಇತ್ಯಾದಿ ವಿವರಗಳ ಜೊತೆ ಗಾಯನವನ್ನು ಆಲಿಸುತ್ತಿರುವ ಒಂದು ನಾಯಿಯ ಚಿತ್ರವೂ ಇರುತ್ತಿತ್ತು. 1899ರಲ್ಲಿ ಎಮಿಲ್ ಬರ್ಲಿನರ್ ತನ್ನ ಲಂಡನ್ ಶಾಖೆಗೆ ಹೋದಾಗ ಅಲ್ಲಿ ನಾಯಿಯೊಂದು ಜಾನ್ಸನ್ ಗ್ರಾಮಾಫೋನ್ ಯಂತ್ರದ ಮುಂದೆ ಆಲಿಸುತ್ತಿರುವಂತೆ ಕುಳಿತಿರುವ ಒಂದು ಪೇಂಟಿಂಗ್ ನೋಡಿದ. ಅದು ಫ್ರಾನ್ಸಿಸ್ ಬರಾದ್ ಎಂಬ ಇಂಗ್ಲಿಷ್ ಕಲಾವಿದ ಚಿತ್ರಿಸಿದ ‘ನಿಪ್ಪರ್’ ಎಂಬ ಅವನದೇ ನಾಯಿಯ ಚಿತ್ರ. ಮುಂದೆ ಅದೇ ಚಿತ್ರ ಹೆಚ್‌ಎಂವಿ ಗಾನಮುದ್ರಿಕೆಗಳ ಟ್ರೇಡ್‌ಮಾರ್ಕ್ ಆಯಿತು. (ಕ್ರಮೇಣ ಈ ‘ಹಿಸ್ ಮಾಸ್ಟರ್ಸ್ ವಾಯ್ಸ್’ ಎಂಬುದು ಸ್ವಂತ ಅಭಿಪ್ರಾಯವಿಲ್ಲದವರಿಗೆ, ಧಣಿಯ ಮಾತೇ ವೇದವಾಕ್ಯ ಎಂದು ನಂಬಿದವರಿಗೆ ಅನ್ವಯವಾಯಿತು. ನಮ್ಮ ಕಾಲದಲ್ಲಿ ಟಿ.ವಿ.ಯಲ್ಲಿ ಕಾಣಿಸಿಕೊಂಡು ಅರಚಾಡುವ ರಾಜಕೀಯ ಪಕ್ಷಗಳ ವಕ್ತಾರರಿಗೆ ಅನ್ವಯಿಸಬಹುದಾದ ಮಾತಿದು).



ಕುಣಿಯುವ ಬಾಲಕಿಯರು ಮತ್ತು ಸಂಗೀತ ಆಲಿಸುವ ನಾಯಿ... ಸರ್ವೋತ್ಕೃಷ್ಟ ಗ್ರಾಮಾಫೋನ್ ರಿಕಾರ್ಡ್‌ಗಳ ಸಂಕೇತ

1907ರಲ್ಲಿ ಗ್ರಾಮಾಫೋನ್ ಕಂಪೆನಿ ಹೊರಡಿಸಿದ ಜಾಹೀರಾತು ನೋಡಿ. ಇದರಲ್ಲಿ ಬಂಗಾಳಿ ಮಧ್ಯಮ ವರ್ಗದ ಒಂದು ಮನೆ. ನಡುಮನೆಯಲ್ಲಿ ಆಕರ್ಷಣೆಯ ಕೇಂದ್ರವಾಗಿರುವ ಗ್ರಾಮಾಫೋನ್ ಆ ಮನೆಯ ಯಜಮಾನನ ಸ್ಥಾನಮಾನದ (ಸ್ಟೇಟಸ್) ಕುರುಹಾಗಿರುವುದನ್ನು ಗಮನಿಸಿ. ಗ್ರಾಮಾಫೋನಿನ ಬದಿಯಲ್ಲೇ ನಿಂತುಕೊಂಡಿರುವ ಆತ ತನ್ನ ಕುಟುಂಬದವರಿಗೋ ಬಂಧುಗಳಿಗೋ ಗ್ರಾಮಾಫೋನಿನ ಮಹತ್ವವನ್ನು ವಿವರಿಸುತ್ತಿರುವಂತಿದೆ. ಇನ್ನೊಂದು ಬದಿಯಲ್ಲಿ ನಿಂತಿರುವ ಅವನ ಹೆಂಡತಿ ಮನೆಗೆ ಬಂದಿರುವ ಆ ಅಮೂಲ್ಯ ಯಂತ್ರವನ್ನು ನೋಡಿ ಸಂತೋಷಗೊಂಡಂತಿದೆ. ಬೆಂಚಿನ ಮೇಲೆ ಕುಳಿತಿರುವ ಹುಡುಗ, ಹುಡುಗಿ ಇಬ್ಬರೂ ಸಂಗೀತವನ್ನು ಆಲಿಸುತ್ತಿದ್ದಾರೆ. ವಯಸ್ಸಾದವರೊಬ್ಬರು, ಅಂದರೆ ಮನೆಯ ಯಜಮಾನನ ತಂದೆಯೋ ಅಜ್ಜನೋ, ಇನ್ನೊಬ್ಬ ಬಂಧುವಿನ ಜೊತೆ ಸಂಗೀತವನ್ನು ಆಲಿಸುತ್ತಾ ಕುಳಿತಿದ್ದಾರೆ. ಧೋತಿಯುಟ್ಟುಕೊಂಡಿರುವ ಒಬ್ಬ ಸೇವಕ ನೆಲದ ಮೇಲಿದ್ದಾನೆ. ಎಚ್‌ಎಂವಿಯ ನಾಯಿ ಗ್ರಾಮಾಫೋನಿನ ಅಡಿಯಲ್ಲೇ ಕುಳಿತಿದೆ. ಆ ಕಾಲದಲ್ಲಿ ನಾಯಿಯನ್ನು ಮನೆಯೊಳಕ್ಕೆ ಬಿಟ್ಟುಕೊಳ್ಳುತ್ತಿರಲಿಲ್ಲ, ನಿಜ. ಆದರೆ ಒಂದು ಟ್ರೇಡ್‌ಮಾರ್ಕ್ ಆಗಿರುವ ಈ ನಾಯಿಗೆ ಅಂಥ ನಿಷೇಧವಿರಲಿಲ್ಲ!

ಬರ್ಲಿನರ್‌ನ ಕಂಪೆನಿಗಳು

ಎಮಿಲ್ ಬರ್ಲಿನರ್ 1894ರಲ್ಲಿ ಅಮೆರಿಕದಲ್ಲಿ ಯುನೈಟೆಡ್ ಸ್ಟೇಟ್ಸ್ ಗ್ರಾಮಾಫೋನ್ ಕಂಪೆನಿಯನ್ನೂ, 1897ರಲ್ಲಿ ಲಂಡನ್ನಿನಲ್ಲಿ ಗ್ರಾಮಾಫೋನ್ ಕಂಪೆನಿಯನ್ನೂ, 1898ರಲ್ಲಿ ಜರ್ಮನಿಯ ಹ್ಯಾನೋವರ್‌ನಲ್ಲಿ ಡ್ಯೂಷೆ ಗ್ರಾಮಾಫೋನ್ ಸಂಸ್ಥೆಯನ್ನೂ ಮತ್ತು 1899ರಲ್ಲಿ ಕೆನಡಾದ ಮಾಂಟ್ರಿಯಲ್‌ನಲ್ಲಿ ಬರ್ಲಿನರ್ ಗ್ರಾಮ್-ಓ-ಫೋನ್ ಕಂಪೆನಿಯನ್ನೂ ಸ್ಥಾಪಿಸಿದವನು. ಬ್ರಿಟನ್ನಿನ ‘ದಿ ಗ್ರಾಮಾಫೋನ್ ಕಂಪೆನಿ ಲಿಮಿಟೆಡ್’ ಎಮಿಲ್ ಬರ್ಲಿನರ್‌ನ ಪರವಾಗಿ ಸ್ಥಾಪನೆಗೊಂಡ ಸಂಸ್ಥೆ. ಇದು ‘ಹಿಸ್ ಮಾಸ್ಟರ್ಸ್ ವಾಯ್ಸ್’ (ಎಚ್‌ಎಂವಿ) ಕಂಪೆನಿಯ ಮಾತೃಸಂಸ್ಥೆ. 1898ರಲ್ಲಿ ಪ್ರಾರಂಭವಾದ ಈ ಸಂಸ್ಥೆ 1931ರ ಮಾರ್ಚ್ ತಿಂಗಳವರೆಗೂ ಅಸ್ತಿತ್ವದಲ್ಲಿತ್ತು. ಕೋಲ್ಕತ್ತದಲ್ಲೊಂದು ರಿಕಾರ್ಡ್ ‘ಪ್ರೆಸ್ಸಿಂಗ್’ ಕಾರ್ಖಾನೆಯನ್ನು ಸ್ಥಾಪಿಸುವ ಮೂಲಕ ಇಪ್ಪತ್ತನೆಯ ಶತಮಾನದ ಐವತ್ತರ ದಶಕದವರೆಗೂ ಭಾರತದಲ್ಲೊಂದು ಪ್ರಮುಖ ಧ್ವನಿಮುದ್ರಣ ಕಂಪೆನಿಯಾಗಿತ್ತು.

ಒಂದು ಕಾಲದಲ್ಲಿ ಗ್ರಾಮಾಫೋನು ರಿಕಾರ್ಡುಗಳಲ್ಲಿದ್ದ ಹಾಡುಗಳ ಪುಟ್ಟ ಪುಟ್ಟ ಪುಸ್ತಕಗಳು ಅತ್ಯಧಿಕ ಸಂಖ್ಯೆಯಲ್ಲಿ ಮಾರಾಟವಾಗುತ್ತಿದ್ದವು. ಅದು ಹೇಗೋ ನನ್ನಲ್ಲಿನ್ನೂ ಉಳಿದುಬಿಟ್ಟಿರುವ ಅಂಥದೊಂದು ಪುಸ್ತಕ ‘ಹೊಸ ಗ್ರಾಮಾಫೋನ್ ಕೀರ್ತನೆಗಳು’. 1938ರಲ್ಲಿ ಮುದ್ರಿಸಲಾದ, ನಾಲ್ಕಾಣೆ ಬೆಲೆಯ, 32 ಪುಟಗಳ ಈ ಪುಸ್ತಕದಲ್ಲಿ ಕೀರ್ತನೆಗಳ ಜೊತೆಗೆ ಅವುಗಳನ್ನು ಹಾಡಿರುವವರ ಕಪ್ಪು ಬಿಳುಪು ಫೋಟೊಗಳೂ ಇವೆ. ಬಿ.ಎಸ್. ರಾಜ ಅಯ್ಯಂಗಾರ್, ವೇಮೂರಿ ಗಗ್ಗಯ್ಯಗಾರು, ಬೆಜವಾಡ ಬಾಲು ಬ್ರದರ್ಸ್, ಹೆಚ್.ಸುಬ್ರಮಣ್ಯಮ್, ಮೈಸೂರು, ಪ್ರೊಫೆಸರ್ ಸಾಂಬಮೂರ್ತಿ, ಮದ್ರಾಸು, ವಿದುಷಿಯರಾದ ಕೆ.ಅಶ್ವತ್ಥಮ್ಮ, ಕೆ.ವಿ. ರಮಣಮ್ಮ, ಇ.ವಿ. ಗೌರಿಅಮ್ಮಾಳ್, ಚೆಲ್ಲಂ ವೆಂಕಟರಾಮಯ್ಯರ್, ಪಿ.ಕೆ.ಮೀನಾಂಬಾಳ್, ಕೆ.ವೆಂಕಟಲಕ್ಷ್ಮಮ್ಮ, ಆರ್.ಬೃಹದಾಂಬಾಳ್, ದುರ್ಗಾ ಕುಮಾರಿ, ಬೇಬಿ ಸರಸ್ವತಿ.... ಹೀಗೆ ಈಗಾಗಲೇ ಮರವೆಗೆ ಸರಿದಿರುವ ಅದೆಷ್ಟು ಮಂದಿ ಗಾಯಕ ಗಾಯಕಿಯರು! ಪುಸ್ತಕದ ಕೊನೆಯಲ್ಲಿ ಹೀಗೊಂದು ಜಾಹೀರಾತು:

3 ವರ್ಷಗಳಿಂದಲೂ ನಿರೀಕ್ಷಿಸಿದ ಅಮೋಘವಾದ ಹೊಸ ರಿಕಾರ್ಡುಗಳು:

ಶ್ರೀ ನವಗ್ರಹ ಸ್ತೋತ್ರಂ 2 ರಿಕಾರ್ಡುಗಳು ಬೆಲೆ 4-8-0
ಶ್ರೀ ಜಗಜ್ಯೋತಿ ಬಸವೇಶ್ವರ ಜನನ 1 ರಿಕಾರ್ಡು ಬೆಲೆ 2-4-0
ಸುಭದ್ರಾ ಪರಿಣಯ 3 ರಿಕಾರ್ಡುಗಳು ಬೆಲೆ 6-12-0

ಈ ಪುಸ್ತಕವನ್ನು ಪ್ರಕಟಿಸಿದವರು ‘ಡಿ.ಎನ್.ಸೀತಾರಾಮ ಶೆಟ್ಟಿ, ಸೀತಾಫೋನ್ ಕಂಪೆನಿ, ಅವಿನ್ಯೂ ರೋಡು, ಬೆಂಗಳೂರು ಸಿಟಿ’. ಆ ಅಂಗಡಿಯಲ್ಲಿ ರಿಕಾರ್ಡುಗಳ ಜೊತೆಗೆ ಗ್ರಾಮಾಫೋನುಗಳು ಕೂಡ ಮಾರಾಟವಾಗುತ್ತಿದ್ದವು. ಆ ಕಾಲದಲ್ಲಿ ಅವುಗಳ ಬೆಲೆ ರೂ. 15ರಿಂದ ರೂ 150ರವರೆಗೂ ಇರುತ್ತಿತ್ತು.


ಗ್ರಾಮಾಫೋನನ್ನು ಆವಿಷ್ಕರಿಸಿದ ಪಾಶ್ಚಾತ್ಯರು ಅದು ಹೇಗೆ ನಮ್ಮದೇ ಸಂಗೀತವನ್ನು ಮುದ್ರಿಸಿ ನಮಗೇ ಮಾರತೊಡಗಿದರು?

11ನೇ ಪುಟಕ್ಕೆ...


ದುರ್ಗೆಯನ್ನು ಸುತ್ತುವರಿದ ಹುಲಿ, ಸಿಂಹ, ಹೆಬ್ಬಾವು ಮುಂತಾದ ವನ್ಯಮೃಗಗಳು ತಮ್ಮ ರೌದ್ರ ಸ್ವರೂಪ, ಸ್ವಭಾವಗಳನ್ನು ಮರೆತು ಗ್ರಾಮಾಫೋನ್ ಸಂಗೀತವನ್ನು ಕೇಳುವುದರಲ್ಲಿ ತಲ್ಲೀನವಾಗಿವೆ


1907ರಲ್ಲಿ ಗ್ರಾಮಾಫೋನ್ ಕಂಪೆನಿ ಹೊರಡಿಸಿದ ಈ ಜಾಹೀರಾತು ನೋಡಿ. ಬಂಗಾಳಿ ಮಧ್ಯಮ ವರ್ಗದ ಮನೆಯಲ್ಲಿ ಅಬ್ಬಬ್ಬಾ ಅದೆಂತಹ ಗ್ರಾಮಾಫೋನ್ ಕಚೇರಿ!

ಧರಂಪಾಲ್
ಭಾರತೀಯ ಚಿತ್ತ-ಮನಗಳ ಸಂಶೋಧಕ


ಕಲೆ: ಗುರು ನಾವಳ್ಳಿ

ಹರೀಶ ಹಾಗಲವಾಡಿ

ಒಬ್ಬ ವ್ಯಕ್ತಿ ಹೇಗೋ ಹಾಗೇ ಒಂದು ರಾಷ್ಟ್ರ ಕೂಡ, ತನ್ನ ಅಸ್ಮಿತೆಯನ್ನೂ ಕಾಲಿಕತೆಯನ್ನೂ ಒಟ್ಟೊಟ್ಟಿಗೇ ಪೊರೆದುಕೊಳ್ಳಬೇಕಾಗುತ್ತದೆ. ಅಸ್ಮಿತೆ ಸಹಜವಾಗಿ ನಿನ್ನೆಗಳತ್ತ ಮುಖ ಮಾಡಿದ್ದರೆ, ಕಾಲಿಕ ಅಗತ್ಯಗಳು ಅನಿವಾರ್ಯವಾಗಿ ನಾಳೆಗಳನ್ನು ನೋಡುತ್ತಿರುತ್ತವೆ. ಯಾವುದೇ ಕಾಲದ ಇತಿಹಾಸವೆಂಬುದು ಈ ಎರಡು ತುದಿಗಳ ನಡುವಿನ ತೂಗುನಡಿಗೆಯಷ್ಟೇ. ಹಾಗೆ ನೋಡಿದರೆ, ಸ್ವಾತಂತ್ರ್ಯೋತ್ತರ ಭಾರತವು ತನ್ನ ಕಾರ್ಯರಂಗದಲ್ಲಿ ಸ್ವಾಯತ್ತತೆಯನ್ನು ಗಳಿಸಿತಾದರೂ ತನ್ನ ರಾಷ್ಟ್ರೀಯ ಮೌಲ್ಯಗಳನ್ನು ಕಂಡುಕೊಳ್ಳುವಲ್ಲಿ, ಎಂದರೆ ತನ್ನ ನೈಜ ಸಾಮಾಜಿಕ ಮತ್ತು ಸಾಂಸ್ಕೃತಿಕ ನೆಲೆಗಳನ್ನು ಅರಿತು ತನ್ಮೂಲಕ ತನ್ನ ವೈಶ್ವಿಕ ದೃಷ್ಟಿಯನ್ನು ರೂಪಿಸಿಕೊಳ್ಳುವಲ್ಲಿ ಸ್ವೋಪಜ್ಞತೆಯನ್ನು ಸಾಧಿಸಲಿಲ್ಲ.

> ಗಾಂಧಿವಾದಿ ಧರಂಪಾಲ್ ಅವರ ಜನ್ಮಶತಾಬ್ದಿ ವರ್ಷವಿದು. ಶ್ರೀಸಾಮಾನ್ಯನಿಗಾಗಿ ಮಿಡಿದ ಅವರು, ಭಾರತೀಯ ಅಸ್ಮಿತೆಯನ್ನು ಹುಡುಕಾಡಿದ್ದು ನಮ್ಮ ಹಳ್ಳಿಗಳಲ್ಲಿ. ಅಂತಹ ದಿಗ್ದರ್ಶಕನ ನಿರ್ಮಲ ದೃಷ್ಟಿ ಇಂದಿನ ನಮ್ಮ ಚಟುವಟಿಕೆಗಳಿಗೆ ದಾರಿದೀಪವಾಗಬೇಕಿದೆ...

ಇಂದಿನ ಸಾಮಾಜಿಕ ಮತ್ತು ರಾಜಕೀಯ ವಿಪ್ಲವಗಳ ಸಂದರ್ಭದಲ್ಲಂತೂ ಈ ಕೊರತೆಯ ವಿಶ್ವರೂಪವನ್ನೇ ಕಾಣುತ್ತಿದ್ದೇವೆ. ಈ ಸಮಸ್ಯೆಯು ಮೇಲುನೋಟಕ್ಕೆ ಬಹಳ ಸರಳವಾಗಿ ಕಾಣಿಸಿದರೂ ಇದರ ಗಹನತೆ ಈ ಕಾರ್ಯಕ್ಕೆ ಬದ್ಧಸಂಕಲ್ಪರಾಗಿ ದುಡಿದವರಿಗಷ್ಟೇ ತಿಳಿದೀತು. ಇದು ಬರಿಯ ತಾತ್ತ್ವಿಕ ಪ್ರಗಲ್ಭತೆಯಲ್ಲ, ಬರಿಯ ಕಾಲಿಕವಾದ ಕ್ರಿಯಾಶೀಲತೆಗೂ ದಕ್ಕುವುದಿಲ್ಲ. ಇಡಿಯ ಜನಾಂಗದ ಜೀವಂತ ಸ್ಪಂದವನ್ನು, ನಾಡಿಮಿಡಿತವನ್ನು ಸಂವೇದನಾಶೀಲವಾಗಿ ಅರಿಯಬೇಕಾದರೆ ಬುದ್ಧಿಯು ಪ್ರಜ್ಞೆಯಾಗಿಯೂ ಬದುಕು ಯಜ್ಞವಾಗಿಯೂ ಮಾರ್ಪಡಬೇಕಾಗುತ್ತದೆ. ಇಂತಹ ತಪಸ್ಸನ್ನು ಆಜೀವ ಪರ್ಯಂತ ನಡೆಸಿದ ಮಹನೀಯರಲ್ಲಿ ಧರಂಪಾಲ್ ಅಗ್ರಪಂಕ್ತಿಯಲ್ಲಿ ನಿಲ್ಲುತ್ತಾರೆ.

ಧರಂಪಾಲರಿಗೆ ಈ ದೃಷ್ಟಿ ಮಹಾತ್ಮ ಗಾಂಧಿಯವರಿಂದ ಬಂದದ್ದು ಆಶ್ಚರ್ಯವೇನಲ್ಲ. ಸ್ವತಃ ಗಾಂಧೀಜಿಯವರೂ ತಮ್ಮ ಇಡೀ ಜೀವನ ಇದೇ ಕಾರ್ಯವನ್ನಲ್ಲವೇ ಮಾಡಿದ್ದು? 'ತಾನು ಶ್ರೀಸಾಮಾನ್ಯರ ದನಿಯಾಗಬೇಕು' ಎಂಬುದು ಅವರ ಹೃದಯದ ದನಿಯೇ ಆಗಿತ್ತಷ್ಟೆ. ಚಿಕ್ಕ ವಯಸ್ಸಿನಲ್ಲಿಯೇ ಗಾಂಧೀಜಿಯವರ ಸಂಪರ್ಕಕ್ಕೆ ಬಂದ ಧರಂಪಾಲ್ ಮುಂದೆ ಕಮಲಾದೇವಿ ಚಟ್ಟೋಪಾಧ್ಯಾಯ, ಜಯಪ್ರಕಾಶ್ ನಾರಾಯಣ್, ರಾಮಮನೋಹರ ಲೋಹಿಯಾ ಅಂತಹವರೊಂದಿಗೆ ಸಮಾಜದ ತಳಮಟ್ಟದಲ್ಲಿ ಕೆಲಸ ಮಾಡಿದರು. ಮೀರಾ ಬೆನ್ ಅವರೊಂದಿಗೆ ಗಾಂಧೀಜಿಯವರ ಕಲ್ಪನೆಯ ಆದರ್ಶಗ್ರಾಮವನ್ನು ಕಟ್ಟಲೂ ಶ್ರಮಿಸಿದರು. ಕಡೆಗೆ ಆ ಆದರ್ಶದ ಅವ್ಯಾವಹಾರಿಕತೆಯನ್ನು ಅರಿತು ಹೊರಗೆ ಬಂದರು. ಇರುವ ಗ್ರಾಮ ವ್ಯವಸ್ಥೆಗಳನ್ನು ದೃಢಗೊಳಿಸಲು AVARD ಎಂಬ ಸಂಸ್ಥೆಯ ಕಾರ್ಯದರ್ಶಿಯಾಗಿ ಬಹಳ ಕಾಲ ಕೆಲಸ ಮಾಡಿದರು. ಮುಂದೆ ಅಖಿಲ ಭಾರತ ಪಂಚಾಯತ್ ಪರಿಷತ್ತಿನ ಅಧ್ಯಕ್ಷರಾಗಿದ್ದರು.

ಈ ಅನುಭವದ ಹಿನ್ನೆಲೆಯಲ್ಲಿಯೇ ಅವರು ಮೊದಲು ಮದ್ರಾಸ್ ಪಂಚಾಯತ್ ವ್ಯವಸ್ಥೆಯ ಬಗ್ಗೆ ಸಂಶೋಧನೆ ಮಾಡಿದರು. ತಮ್ಮಷ್ಟಕ್ಕೇ ಸ್ವತಂತ್ರವೂ ಸ್ವಾವಲಂಬಿಯೂ ಆಗಿದ್ದ ಪಂಚಾಯತ್ ವ್ಯವಸ್ಥೆಯನ್ನು ಬ್ರಿಟಿಷರು ವ್ಯವಸ್ಥಿತವಾಗಿ ಹೇಗೆ ಮುರಿಯುತ್ತ ಬಂದರು ಎಂಬುದನ್ನು ಸರ್ಕಾರಿ ದಾಖಲೆಗಳಿಂದಲೇ ಶೋಧಿಸಿದರು ಮತ್ತು ಇದನ್ನು ಸ್ವತಂತ್ರ ಭಾರತದ ಸಂವಿಧಾನ ಕರಡು ಚರ್ಚೆಯ ಹಿನ್ನೆಲೆಯಲ್ಲಿಯೂ ಪರಾಮರ್ಶಿಸಿದ್ದರು. ಸ್ವತಂತ್ರ ಭಾರತ ಅಜ್ಞಾನದಿಂದಲೂ ಅಹಂಕಾರದಿಂದಲೂ ಬ್ರಿಟಿಷರ ಅದೇ ನೀತಿಯನ್ನು ಅನುಸರಿಸುತ್ತಾ ಇಡೀ ಪಂಚಾಯತ್ ವ್ಯವಸ್ಥೆಯನ್ನು ನೆಲಸಮ ಮಾಡಿದ್ದನ್ನು ಕಂಡು ಮರುಗಿದರು ಕೂಡ.

ಅಧಿಕಾರದ ವಿಕೇಂದ್ರೀಕರಣವೆಂಬ ಸೂತ್ರದಲ್ಲಿ ಪಂಚಾಯತ್ ವ್ಯವಸ್ಥೆಯನ್ನು ನೋಡಿದ ಸ್ವತಂತ್ರ ಭಾರತದ ರಾಜನೀತಿಜ್ಞರು ಮತ್ತು ಅಧಿಕಾರಿಗಳು, ಪಂಚಾಯತ್ ವ್ಯವಸ್ಥೆಯೆಂದರೆ ಹಳ್ಳಿಹಳ್ಳಿಗೆ ದಿಲ್ಲಿಯನ್ನು ತಂದಿಡುವುದು ಎಂದೇ ಭಾವಿಸಿದರು, ಅದು ಅವರಿಗೆ ಅನುಕೂಲಕರವೂ ಆಗಿತ್ತು. ಇದು ಇಂದಿಗೂ ಎಳ್ಳಷ್ಟೂ ಬದಲಾಗಿಲ್ಲ. ಇದಕ್ಕೆ ತೀರಾ ಹಸಿ ಉದಾಹರಣೆಗಳೂ ನಮ್ಮ ಕಣ್ಮುಂದೆಯೇ ಇವೆ.

ನಾವು ಜನರು ಹಳ್ಳಿಗಳನ್ನು ತೊರೆದು ನಗರಗಳನ್ನು ಸೇರುವ ವಲಸೆ ಪ್ರಕ್ರಿಯೆಯನ್ನು ನಮ್ಮ ಪಾಪ್ಯುಲರ್ ಕಥನಗಳ ಮೂಲಕ ಎಷ್ಟು ಸಾಮಾನ್ಯ ಮಾಡಿಬಿಟ್ಟಿದ್ದೇವೆಂದರೆ, ಕೋವಿಡ್ ಸಮಯದಲ್ಲಿ ಲಕ್ಷಾಂತರ ಕಾರ್ಮಿಕರು ತಮ್ಮ ಊರುಗಳಿಗೆ ಕಾಲ್ನಡಿಗೆಯಲ್ಲಿ ನಡೆದು ಹೊರಟ ದಾರುಣ ದೃಶ್ಯವೂ ನಮ್ಮನ್ನು ನೈತಿಕವಾಗಿ ಕಾಡಲಿಲ್ಲ. ಇದರರ್ಥ ನಾಗರಿಕರಾಗಿ ನಾವು ಇದಕ್ಕಾಗಿ ಮರುಗಲಿಲ್ಲ ಎಂದಲ್ಲ; ಆದರೆ ನಮ್ಮ ಮರುಕ ನಮ್ಮ ಏಳು ದಶಕಗಳ ತಪ್ಪನ್ನು ತಿದ್ದುವಷ್ಟು ನೈತಿಕವಾಗಿ ಕ್ರಿಯಾಶೀಲವಾಗಲು ಸಾಲದಾಯಿತೋ ಏನೋ! ಧರಂಪಾಲ್ ಗಾಂಧೀಜಿಯವರಂತೆಯೇ ತಳಸಮುದಾಯಗಳ ದೃಷ್ಟಿಯಿಂದ ಸಮಾಜರಚನೆಯನ್ನು ನೋಡಲು ಪ್ರಯತ್ನಿಸಿದ್ದು ಈ ಮಾನವೀಯ ಕಾರಣಕ್ಕಾಗಿಯೇ ಅಲ್ಲವೇ?

ಮುಖ್ಯವಾಗಿ 'ಪ್ರಗತಿ' ಎಂಬ ಆಧುನಿಕರ ಸರಳರೇಖಾತ್ಮಕವಾದ ತಾತ್ತ್ವಿಕ ಆಕೃತಿಯಿಂದ ಬಿಡಿಸಿಕೊಳ್ಳಬೇಕಾದ ಅನಿವಾರ್ಯ ನಮಗೆ 21ನೆಯ ಶತಮಾನದಲ್ಲಾದರೂ, ಇಷ್ಟೆಲ್ಲಾ ವೈಶ್ವಿಕ ಬಿಕ್ಕಟ್ಟುಗಳ ನಂತರವಾದರೂ ಅರ್ಥವಾಗಬೇಕಿದೆ. ಇದಕ್ಕಿರುವ ಮಾರ್ಗ ದಮನಿತರ ಲೋಕದೃಷ್ಟಿಯನ್ನು ಅರ್ಥಮಾಡಿಕೊಳ್ಳುವುದು. ಇದಕ್ಕಾಗಿ ಧರಂಪಾಲ್ ಲಂಡನ್ನಿನ ಇಂಡಿಯಾ ಆಫೀಸಿನ ಆರ್ಕೈವ್‌ಗಳನ್ನು ಸಂಶೋಧಿಸಿದರು. ವಾಸ್ತವವಾಗಿ ಧರಂಪಾಲರಿಗೆ ತಮ್ಮ ಕೌಟುಂಬಿಕ ಕಾರಣಗಳಿಂದ 1966ರಿಂದ 1982ರವರೆಗೆ ಲಂಡನ್ನಿನಲ್ಲಿ ಇರಬೇಕಾಗಿ ಬಂದಿತು. ಅದೇ ಸಮಯವನ್ನು ಅವರು ಈ ಬ್ರಿಟಿಷ್ ದಾಖಲೆಗಳ ಸಂಶೋಧನೆಗೆ ಬಳಸಿಕೊಂಡರು. ಆಗಿನ ಕಾಲಕ್ಕೆ ನಕಲು ಪ್ರತಿ ಮಾಡಿಸುವುದು ದುಬಾರಿಯೂ ಇತ್ತು, ಜೊತೆಗೆ ಇವರಿಗೆ ಆದಾಯವೂ ಇರಲಿಲ್ಲ. ಹಾಗಾಗಿ ಆ ಸಾವಿರಾರು ದಾಖಲೆಗಳನ್ನು ಪ್ರತಿಶಬ್ದವನ್ನೂ ಲಾಂಗ್ ಹ್ಯಾಂಡಿನಲ್ಲಿ ಪ್ರತಿ ಬರೆದುಕೊಂಡು, ನಂತರ ಅವನ್ನು ಟೈಪು ಮಾಡಿಸಿಕೊಂಡು ಭಾರತಕ್ಕೆ ತಂದರು. ಹಾಗೆ ತಂದ ದಾಖಲೆಗಳ ಗಾತ್ರವೇ ಅನೇಕ ಟ್ರಂಕುಗಳಷ್ಟು ತುಂಬಿತ್ತು. ಈ ಕಥೆಗೇ ಒಂದು ರೋಚಕತೆಯಿದೆಯಷ್ಟೇ, ಹಾಗೆಂದು ಇದು ಭಾವುಕ ದೇಶಭಕ್ತಿಯ ಅಭಿವ್ಯಕ್ತಿ ಮಾತ್ರ ಎಂದು ತಿಳಿದರೆ ಅದರಿಂದ ಧರಂಪಾಲರಿಗೂ ಅವರು ನಂಬಿದ ವಿಶಾಲ ಜೀವನತತ್ತ್ವಕ್ಕೂ ಅಪಮಾನ ಮಾಡಿದಂತಾಗುತ್ತದೆ.

ಇದು ಧರಂಪಾಲರಿಗೆ ನಿಜವಾದ ಅರ್ಥದಲ್ಲಿ ತಪಸ್ಸಾಗಿತ್ತು. ಮುಂದೆ ಅವರು ಜೀವನದುದ್ದಕ್ಕೂ ಭಾರತವನ್ನು ಹೇಗೆ ಅನುಸಂಧಾನಿಸಿದ್ದಾರೆ ಎಂಬುದೇ ಇದಕ್ಕೆ ಸಾಕ್ಷಿ.

ಸುಮಾರು ಎರಡು ದಶಕಗಳು ಈ ದಾಖಲೆಗಳನ್ನು ಆಳವಾಗಿ ಸಂಶೋಧಿಸಿ, ಮೂರು ಸಂಪುಟಗಳಲ್ಲಿ ಅವನ್ನು ಪ್ರಕಟಿಸಿದರು. ಇಲ್ಲಿ ಧರಂಪಾಲರ ಸಂಶೋಧನಾ ದೃಷ್ಟಿಯೇ ಬಹಳ ಗಮನಾರ್ಹವಾಗಿದೆ. ಈ ಎಲ್ಲ ಅಧ್ಯಯನವನ್ನು ಅವರು ಮಾಡಿದ್ದು ಬ್ರಿಟಿಷರ ಆಳ್ವಿಕೆಗೆ ಮೊದಲು ಭಾರತೀಯ ಸಮಾಜ ಹೇಗಿತ್ತು? ಅದರ ಸಹಜ ಚಿಂತನಕ್ರಮವೇನಿತ್ತು? ಅದರ ಸಾಮಾಜಿಕ ಸಂರಚನೆಗಳ ಪದರಗಳೇನು ಇತ್ಯಾದಿ ಸಂಗತಿಗಳನ್ನು ಅರಿಯುವುದಕ್ಕಾಗಿಯೇ. ಈ ಪ್ರಕ್ರಿಯೆಯನ್ನು ಅವರು ಪ್ರಾರಂಭಿಸಿದ್ದೇ ಬ್ರಿಟಿಷರು ತಮ್ಮ ಅನುಕೂಲಗಳಿಗಾಗಿ ಭಾರತದ ಬಗ್ಗೆ ಹುಟ್ಟುಹಾಕಿದ್ದ, ಮುಂದೆ ಸ್ವತಂತ್ರ ಭಾರತದ ಶಿಕ್ಷಿತರೂ ನಂಬಿಕೊಂಡು ಬಂದಿದ್ದ ಮುಖ್ಯ ಗೃಹೀತಗಳ ಬೆನ್ನುಹತ್ತಿಯೇ.

17ನೇ ಶತಮಾನದ ಕಾಲಕ್ಕಾಗಲೇ ಭಾರತ ಪೂರ್ಣ ಅವನತ ಸ್ಥಿತಿಯಲ್ಲಿತ್ತು, ನಮ್ಮೆಲ್ಲ ಸಾಮಾಜಿಕ ಸಾಂಸ್ಕೃತಿಕ ಕಲ್ಪಗಳೂ ಜಡ್ಡುಗಟ್ಟಿ ಹೋಗಿದ್ದವು ಎಂಬುದೇ ಆ ಗೃಹೀತ. ಇದರ ವಿಸ್ತರಣೆಯಾಗಿ ಭಾರತದಲ್ಲಿ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯೇ ಇರಲಿಲ್ಲ, ಇದ್ದರೂ ಅದು ಬರಿಯ ಮೇಲ್ಜಾತಿಯವರಿಗೆ ಮಾತ್ರ ಮೀಸಲಾಗಿತ್ತು ಎಂದೆಲ್ಲಾ ಭಾರತೀಯ ಶಿಕ್ಷಿತರೂ ನಂಬಿಕೊಂಡಿದ್ದರಷ್ಟೇ (ಇವತ್ತಿಗೂ ಇದನ್ನು ನಂಬುವವರಿದ್ದಾರೆ ಎಂಬುದು ಬೇರೆ ಮಾತು).

ಜನ್ಮಶತಾಬ್ದಿ

ಭಾರತದಲ್ಲಿ ಸುವ್ಯವಸ್ಥಿತವಾಗಿ ನಡೆಯುತ್ತಿದ್ದ ಶಿಕ್ಷಣ ವ್ಯವಸ್ಥೆಯ ವಿವರಗಳನ್ನು ಬ್ರಿಟಿಷ್ ದಾಖಲೆಗಳ ಮೂಲಕವೇ ಬಿಚ್ಚಿಟ್ಟರು. ಜೊತೆಗೆ ಹೇಗೆ ಬಹುತೇಕ ಪ್ರಾಂತಗಳಲ್ಲಿ ಈ ವ್ಯವಸ್ಥೆ ಎಲ್ಲ ಜಾತಿಗಳವರನ್ನೂ ಒಳಗೊಂಡಿತ್ತು, ಕೆಲವು ಕಡೆ ಬ್ರಾಹ್ಮಣರಿಗಿಂತಲೂ ಉಳಿದ ಅನೇಕ ಜಾತಿಗಳವರದೇ ಮೇಲುಗೈ ಕೂಡ ಆಗಿತ್ತು ಎಂಬುದನ್ನೂ ತೆರೆದಿಟ್ಟರು. ಬಹುಶಃ ಜಾತಿ ಎಂಬುದನ್ನು ನಮ್ಮ ಶಿಕ್ಷಿತ ವರ್ಗ ಅರ್ಥ ಮಾಡಿಕೊಂಡಂತೆ ಅಭಿಜಾತ ಭಾರತ ನೋಡುತ್ತಿರಲಿಲ್ಲ ಎಂಬುದನ್ನೂ ಸೂಚಿಸಿದರು.

ಇನ್ನೊಂದು ಮುಖ್ಯ ಗೃಹೀತವೆಂದರೆ ಭಾರತದಲ್ಲಿ ವಿಜ್ಞಾನ-ತಂತ್ರಜ್ಞಾನಗಳು ಬೆಳೆದಿರಲೇ ಇಲ್ಲ. ಇದ್ದದ್ದೆಲ್ಲವೂ ಪ್ರೋಟೋ-ಸೈನ್ಸ್ ಅಷ್ಟೇ ಎಂದು. ಧರಂಪಾಲ್ ಒಂದಿಡೀ ಸಂಪುಟದಲ್ಲಿ ಇದಕ್ಕೆ ತದ್ವಿರುದ್ಧವಾಗಿ ಭಾರತದಲ್ಲಿ ಪ್ರಚಲಿತವಿದ್ದ ಜ್ಯೋತಿಶಾಸ್ತ್ರ, ಆಯುರ್ವೇದ, ಶಸ್ತ್ರಚಿಕಿತ್ಸೆ, ಲೋಹಶಾಸ್ತ್ರ, ಕುಲುಮೆ ಬಳಕೆ, ಉಕ್ಕು ಉತ್ಪಾದನೆ, ಕೈಮಗ್ಗ ಇತ್ಯಾದಿ ಅನೇಕ ಕ್ಷೇತ್ರಗಳಲ್ಲಿನ ವಾಸ್ತವಾಂಶಗಳನ್ನು ಸಂಶೋಧಿಸಿ ದಾಖಲಿಸಿದರು. ಈವತ್ತಿನ ಸಂಶೋಧನೆಗಳಿಗೂ ಈ ಎಲ್ಲ ಕ್ಷೇತ್ರಗಳಲ್ಲಿ ಭಾರತ ಅದಿನ ಇಂಗ್ಲೆಂಡಿಗಿಂತ ಸಾಕಷ್ಟು ಮುಂಚೂಣಿಯಲ್ಲಿತ್ತು ಎಂಬುದು ವಿವರವಾಗಿ ದಾಖಲಾಗಿದೆ. ಧರಂಪಾಲ್ ಅವರು ಅನೇಕರ

ಚಳವಳಿಯ ಮೂಲಸ್ರೋತಸ್ಸು ಭಾರತದಲ್ಲಿ ಇದ್ದದ್ದರ ಬಗ್ಗೆ ಸಂಶೋಧಿಸಿದ್ದು ಆಗಿನ ಭಾರತೀಯರ ಸ್ವಾಭಿಮಾನೀ ಜೀವನದೃಷ್ಟಿಗೆ ಹಿಡಿದ ಕನ್ನಡಿಯೂ ಹೌದು. ಈ ದೃಷ್ಟಿಯಲ್ಲಿ ಭಾರತೀಯ ಸಮಾಜವನ್ನು ಅರ್ಥಮಾಡಿಕೊಳ್ಳುವ ದೊಡ್ಡವ್ಯಾಪ್ತಿಯ ಪ್ರಯತ್ನಗಳು ಇಂದಿಗೂ ತಮ್ಮ ಶೈಶವವನ್ನು ದಾಟಿಲ್ಲ ಎಂಬುದನ್ನೂ ನಾವು ಗಮನಿಸಿಕೊಳ್ಳುವುದು ಒಳಿತು.

ಆದರೆ ಇದು 'ಜಗತ್ತಿನಲ್ಲಿ ಇದ್ದದ್ದೆಲ್ಲವೂ ನಮ್ಮಲ್ಲಿಯೂ ಇತ್ತು' ಎಂದು ಸಾಧಿಸಹೊರಡುವ ಕೀಳರಿಮೆಯ ಅಥವಾ ಮೇಲರಿಮೆಯ ಮಾನಸಿಕ ಕ್ಲೇಷದ ವಿದ್ವತ್ತೆಯಲ್ಲ ಎಂಬುದನ್ನೂ ನಾವು ಮರೆಯಬಾರದು. ಸ್ವತಃ ಧರಂಪಾಲ್ ಈ ಸಂಶೋಧನೆಗಳ ಉದ್ದೇಶವನ್ನು ಆಳವಾಗಿ ಪ್ರಶ್ನಿಸಿಕೊಂಡಿದ್ದಾರೆ. ಈ ಬಗೆಯ ಫಾಸಿಲೈಸ್ಡ್ ಅಧ್ಯಯನಗಳಿಂದ ನೈಜ ಭಾರತೀಯ ಚಿತ್ತವನ್ನು ಅರಿಯಲು ಸಾಧ್ಯವಿಲ್ಲ ಎಂದೂ ಅವರೇ ಹೇಳಿದ್ದಾರೆ. ಅವರ ಉದ್ದೇಶ ನಮ್ಮನ್ನು ನಾವು ನಮ್ಮದೇ ದೃಷ್ಟಿಯಿಂದ ನೋಡಿಕೊಳ್ಳಲು ಸಾಧ್ಯವಾಗಬೇಕು ಎಂಬುದೇ ಆಗಿತ್ತು. ಒಬ್ಬ ಸಾಮಾನ್ಯ ಭಾರತೀಯ ತನ್ನನ್ನು ತಾನು ಹೇಗೆ ಗ್ರಹಿಸುತ್ತಾನೆ? ಅವನ ಲೋಕದೃಷ್ಟಿಯೇನು ಎಂಬುದನ್ನು ಅರಿಯುವುದು ಅವರಿಗೆ ಅತ್ಯಂತ ಮುಖ್ಯವಾಗಿ ಕಂಡಿತ್ತು. ಇದಕ್ಕಾಗಿ ಅವರು ತಮ್ಮ ಶಿಕ್ಷಿತ ಗ್ರಹಿಕೆಗಳನ್ನು ಬದಿಗಿಟ್ಟು, ತಮ್ಮ ಸಂಶೋಧಕನ ಅಹಂಕಾರವನ್ನೂ ತೆಗೆದಿಟ್ಟು, ಸಮಾಜದ ಆಳಕ್ಕೆ ಮುಳುಗು ಹಾಕಿದರು, ಅದನ್ನೇ ಧ್ಯಾನಿಸಿದರು ಕೂಡ.

ಇಂದು ಎಲ್ಲರೂ ತಾವು ಶ್ರೀಸಾಮಾನ್ಯರ ದನಿಯಾಗುತ್ತಿದ್ದೇವೆ ಎಂದು ಘೋಷಿಸಿಕೊಳ್ಳುವವರೇ. ಆದರೆ ಯಾರಿಗೂ ತಮ್ಮ ಗ್ರಹಿಕೆಯ ಕ್ರಮಗಳನ್ನು ಪ್ರಶ್ನಿಸಿಕೊಳ್ಳುವ ವ್ಯವಧಾನ ಮಾತ್ರ ಕಾಣುವುದಿಲ್ಲ. 'ಭಾರತೀಯರು ಇನ್ನೂ ಪೌರಾಣಿಕವಾದ ಕಲೆಯಿಂದ ಕಲ್ಪನೆಯಲ್ಲಿಯೇ ಬದುಕುತ್ತಿದ್ದಾರೆ ಎಂದಾದರೆ, ನಾವು 21ನೆಯ ಶತಮಾನವನ್ನು ಅವರ ಕಲೆಯಿಂದ ಮೂಲಕವೇ ಅರ್ಥಮಾಡಿಕೊಳ್ಳಬೇಕಷ್ಟೇ' ಎನ್ನುತ್ತಾರೆ ಧರಂಪಾಲ್. ಈ ಮಾತು ನಮ್ಮ ಶಿಕ್ಷಿತರ ಅಹಂಕಾರವನ್ನು ಪ್ರಶ್ನಿಸುತ್ತಿಲ್ಲವೇ? ತಮಗಿಷ್ಟವಾದ ಸಿದ್ಧಾಂತಗಳನ್ನೇ ನಂಬುವ, ತಮ್ಮದಲ್ಲದರ ಅಭಿಪ್ರಾಯ ಅವುಗಳೇ ಏನೆಂದುಕೊಂಡಿರುವ, 'ಎಕೋ ಚೇಂಬರ್'ನಲ್ಲಿ ಬದುಕುವುದೇ ತಮ್ಮ ಬದ್ಧತೆ ಎಂದುಕೊಂಡಿರುವ ಈ ಕಾಲದಲ್ಲಿ ಈ ನಿರ್ಮಲ ದೃಷ್ಟಿ ದಿಗ್ದರ್ಶಕನ ನಿಲ್ಲುತ್ತದೆ.

ಇದು ಧರಂಪಾಲರ ಜನ್ಮಶತಮಾನೋತ್ಸವ ವರ್ಷ. ಅವರು ಹುಟ್ಟಿದ್ದು ಫೆಬ್ರುವರಿ 19, 1922ರಲ್ಲಿ. ಅವರು ಧ್ಯಾನಿಸಿದ ಭಾರತೀಯ ಚಿತ್ತ, ಮಾನಸಿಕತೆ ಮತ್ತು ಕಾಲಗಳು ಇವತ್ತಿಗೂ ನಮ್ಮ ಪ್ರಜ್ಞೆಯಲ್ಲಿ ಜಾಗೃತವಾಗಬೇಕು, ಹಾಗಲ್ಲದೇ ನಿಜವಾದ ಭಾರತದ ಆತ್ಮ ನಮಗೆ ಪರಕೀಯವಾಗಿಯೇ ಉಳಿದುಬಿಡುವ ಅಪಾಯದಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲವೆಂಬುದಾಗಿದೆ.

ಮುನ್ನೋಟ 21-02-2021 ರಿಂದ 27-02-2021

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ಕಾರ್ಯಕ್ಷೇತ್ರದ ಸನ್ನಿವೇಶಗಳನ್ನು ನಿಮ್ಮ ಅನುಕೂಲಕ್ಕೆ ತಕ್ಕಂತೆ ಬದಲಾಯಿಸಿಕೊಳ್ಳುವಿರಿ. ಮನೆಯ ನವೀಕರಣ ಕಾರ್ಯವನ್ನು ಆದ್ಯತೆಯ ಮೇರೆಗೆ ಕೈಗೆತ್ತಿಕೊಳ್ಳುವಿರಿ. ವ್ಯಾಪಾರ ಮತ್ತು ವ್ಯವಹಾರಗಳಿಂದ ಬಂದ ಹಣವನ್ನು ಭೂಮಿಯ ಮೇಲೆ ಹೂಡಲು ತೀರ್ಮಾನಿಸುವಿರಿ. ಕೆಲಸಕಾರ್ಯಗಳಲ್ಲಿ ಯಶಸ್ಸನ್ನು ಕಾಣುವಿರಿ. ರಾಜಕಾರಣಿಗಳು ಜನರನ್ನು ನಂಬಿಸುವಲ್ಲಿ ಯಶಸ್ವಿಯಾಗುವರು.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ಕನ್ನಡಕಗಳ ಮಸೂರಗಳನ್ನು ಮಾರುವವರಿಗೆ ವ್ಯಾಪಾರದಲ್ಲಿ ವಿಸ್ತರಣೆ ಇದೆ. ಅವರು ಮಾಡುವ ಕಲಾತ್ಮಕ ಮಸೂರಗಳಿಗೆ ಬೇಡಿಕೆ ಹೆಚ್ಚುತ್ತದೆ. ನಿರುದ್ಯೋಗಿಗಳು ಸಿಕ್ಕ ಉದ್ಯೋಗದ ಅವಕಾಶವನ್ನು ಬಳಸಿಕೊಳ್ಳುವುದು ಒಳ್ಳೆಯದು. ಬಹಳ ದಿನದಿಂದ ಕಾಯುತ್ತಿದ್ದ ನ್ಯಾಯಾಲಯದ ಕಟ್ಟಲೆಗಳಿಗೆ ಚಾಲನೆ ದೊರೆಯುತ್ತದೆ. ವೃತ್ತಿಯಲ್ಲಿ ಒತ್ತಡಗಳು ಹೆಚ್ಚಾಗಬಹುದು ತಾಳ್ಮೆಯಿಂದ ವ್ಯವಹರಿಸುವುದು ಉತ್ತಮ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ಉನ್ನತ ಅಧ್ಯಯನಕ್ಕಾಗಿ ಬಂಧುಗಳಿಂದ ಸಹಕಾರ ಮತ್ತು ಸಲಹೆಗಳು ದೊರೆಯುತ್ತವೆ. ಉದ್ಯೋಗದಲ್ಲಿನ ಸಮಸ್ಯೆಗಳಿಗೆ ಮೇಲಧಿಕಾರಿಯ ಬಳಿ ವೈಯಕ್ತಿಕವಾಗಿ ಮಾತನಾಡಿದಲ್ಲಿ ಪರಿಹಾರ ದೊರೆಯುವುದು. ಹಿರಿಯರೊಂದಿಗೆ ಚರ್ಚಿಸುವುದರಿಂದ ವ್ಯಾಪಾರದಲ್ಲಿನ ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆ. ಶುಭ ಕಾರ್ಯಕ್ಕಾಗಿ ಅನಿರೀಕ್ಷಿತ ಪ್ರಯಾಣವನ್ನು ಕೈಗೊಳ್ಳಬಹುದು.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ಮಂಗಳ ಕಾರ್ಯಗಳ ಬಗ್ಗೆ ಸರಿಯಾದ ನಿರ್ಧಾರವನ್ನು ಕೈಗೊಳ್ಳುವಿರಿ. ಸಹೋದ್ಯೋಗಿಗಳ ನಡುವೆ ಇದ್ದ ಮನಸ್ತಾಪಗಳು ದೂರವಾಗುವವು. ಕಚೇರಿ ಕಾರ್ಯನಿಮಿತ್ತ ಕೈಗೊಂಡಿದ್ದ ದೂರ ಪ್ರದೇಶದ ಪ್ರಯಾಣಗಳು ನಿಮಗೆ ಲಾಭವನ್ನು ಕೊಡುತ್ತವೆ. ಆರ್ಥಿಕ ಸ್ಥಿತಿಯು ಪುನಶ್ಚೇತನಗೊಳ್ಳುತ್ತದೆ.

ಸಿಂಹ — ಮುಖ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ವಿದೇಶಿ ವ್ಯವಹಾರದ ಸಂಪರ್ಕದಿಂದಾಗಿ ನಿಮ್ಮ ವ್ಯವಹಾರಕ್ಕೆ ಹೊಸತಿರುವು ಬರುತ್ತದೆ. ಹಿರಿಯ ವೈದ್ಯಾಧಿಕಾರಿಗಳಿಗೆ ಪದೋನ್ನತಿಯ ಸಂದರ್ಭವಿದೆ. ಹಣಕಾಸಿನ ವಿಚಾರದಲ್ಲಿ ಯಥಾಸ್ಥಿತಿ ಇರುತ್ತದೆ. ಕೆಲವು ಖಾಸಗಿ ಕಚೇರಿಗಳಲ್ಲಿ ಕೆಲಸ ಮಾಡುತ್ತಿರುವ ಹಂಗಾಮಿ ನೌಕರರಿಗೆ ಕಾಯಂ ನೌಕರಿ ದೊರೆಯುವ ಲಕ್ಷಣಗಳಿವೆ. ಸ್ಥಿರಾಸ್ತಿ ಕೊಳ್ಳುವ ಬಗ್ಗೆ ಯಾವುದೇ ನಿರ್ಧಾರಗಳನ್ನು ಈಗ ತೆಗೆದುಕೊಳ್ಳಬೇಡಿರಿ.

ಕನ್ಯಾ — ಉತ್ತರ ಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ಉದ್ಯೋಗಿಗಳಿಗೆ ಕೆಲಸದ ಒತ್ತಡ ಸ್ವಲ್ಪ ಕಡಿಮೆಯಾಗುತ್ತದೆ. ಪ್ರಯಾಣ ಕಾಲದಲ್ಲಿ ಆಭರಣಗಳ ಬಗ್ಗೆ ಮಹಿಳೆಯರು ಎಚ್ಚರಿಕೆ ವಹಿಸುವುದು ಅಗತ್ಯ. ಸಾಮಾಜಿಕ ಕೆಲಸಗಳನ್ನು ಮಾಡುತ್ತಿರುವವರಿಗೆ ಅನುದಾನದ ಕೊರತೆ ಎದುರಾಗಬಹುದು. ಹೊಸ ಕೈಗಾರಿಕೆಯನ್ನು ಆರಂಭಿಸುವ ಬಗ್ಗೆ ಸೂಕ್ತ ವಿಚಾರಗಳನ್ನು ಕಲೆಹಾಕುವಿರಿ. ವಾಹನ ಮಾರಾಟಗಾರರಿಗೆ ಪ್ರಗತಿ ಇರುತ್ತದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖೆ 1,2,3
ಆರ್ಥಿಕ ಅಡಚಣೆಗಳು ಹಂತಹಂತವಾಗಿ ನಿವಾರಣೆಯಾಗುತ್ತವೆ. ಗಹನವಾದ ವಿಚಾರವೊಂದರ ಬಗ್ಗೆ ನಿಮ್ಮ ಸ್ನೇಹಿತರ ಸಲಹೆಪಡೆದು ಪರಿಹಾರ ಕಂಡುಕೊಳ್ಳುವಿರಿ. ಸಾಮಾಜಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಹೆಸರುಗಳಿಸಲು ಯತ್ನಿಸುವಿರಿ. ಕ್ರೀಡಾ ಪಟುಗಳಿಗೆ ಸೂಕ್ತ ಅವಕಾಶ ದೊರೆಯುವುದು. ಸಾಹಸ ಕ್ರೀಡೆಗಳಲ್ಲಿ ಭಾಗವಹಿಸುವವರಿಗೆ ಉತ್ತಮ ಅವಕಾಶ ದೊರೆಯುತ್ತದೆ.

ವೃಶ್ಚಿಕ — ವಿಶಾಖೆ 4 ಅನೂರಾಧ, ಜ್ಯೇಷ್ಠ
ಕಾರ್ಮಿಕ ವರ್ಗದವರಿಗೆ ಬಿಡುವಿಲ್ಲದ ಕೆಲಸವಿರುತ್ತದೆ, ಕೆಲಸಕ್ಕೆ ತಕ್ಕ ಸಂಭಾವನೆಯೂ ದೊರೆಯುತ್ತದೆ. ಕಟ್ಟಡ ನಿರ್ಮಾಣ ಕೆಲಸಗಾರರು ಅವರ ಕೆಲಸದಲ್ಲಿ ಎಚ್ಚರಿಕೆಯನ್ನು ವಹಿಸಬೇಕು. ಆರೋಗ್ಯ ಇಲಾಖೆಯಲ್ಲಿ ಕೆಲಸ ಮಾಡುವ ಕೆಲವರಿಗೆ ಅಪೇಕ್ಷಿತ ಸ್ಥಳಕ್ಕೆ ವರ್ಗಾವಣೆಯಾಗುವ ಅವಕಾಶಗಳಿವೆ.

ಧನುಸ್ಸು — ಮೂಲ, ಪೂರ್ವಾಷಾಢ, ಉತ್ತರಾಷಾಢ 1
ಹಮ್ಮಿಕೊಂಡ ಕೆಲಸಗಳನ್ನು ಪೂರೈಸಲು ಇದ್ದ ಅಡ್ಡಿ ಆತಂಕಗಳು ನಿವಾರಣೆಯಾಗುತ್ತದೆ. ಆತ್ಮವಿಶ್ವಾಸದಿಂದ ಮತ್ತು ಧೃಢ ಸಂಕಲ್ಪದಿಂದ ಮಾಡಿದ ಕೆಲಸಗಳಿಗೆ ಉತ್ತಮ ಫಲಿತಾಂಶ ಬರುತ್ತದೆ. ಆಸ್ತಿ ಲಾಭದ ಲಕ್ಷಣಗಳಿವೆ. ಮಕ್ಕಳಿಗೆ ಓದಿನಲ್ಲಿ ಆಸಕ್ತಿ ಮೂಡಿಸಲು ಸಾಕಷ್ಟು ಶ್ರಮ ವಹಿಸುವಿರಿ. ಆರ್ಥಿಕ ಸ್ಥಿತಿಯು ಉತ್ತಮವಾಗಿರುತ್ತದೆ. ಸ್ಥಿರಾಸ್ತಿಯನ್ನು ಮಾಡಲು ಎಲ್ಲ ಕ್ರಮಗಳನ್ನು ಅನುಸರಿಸಬಹುದು.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ಹಣ್ಣು ತರಕಾರಿ ವ್ಯಾಪಾರಿಗಳಿಗೆ ವ್ಯವಹಾರ ವೃದ್ಧಿಸಿ ಲಾಭವಿರುತ್ತದೆ. ಕೃಷಿ ಚಟುವಟಿಕೆಗಳು ಭರದಿಂದ ಸಾಗುತ್ತವೆ. ಹಣದ ಒಳ ಹರಿವಿನಲ್ಲಿ ಏರಿಕೆ ಇರುತ್ತದೆ. ಸರ್ಕಾರಿ ಕೆಲಸದಲ್ಲಿ ಇರುವವರಿಗೆ ಕಚೇರಿ ಒತ್ತಡದಿಂದ ವೈಯಕ್ತಿಕ ಕೆಲಸಗಳು ನಿಧಾನವಾಗುತ್ತವೆ. ಕರಕುಶಲ ವಸ್ತುಗಳು ಮತ್ತು ಬೊಂಬೆಗಳನ್ನು ತಯಾರಿಸುವವರಿಗೆ ಬೇಡಿಕೆ ಹೆಚ್ಚಾಗುತ್ತದೆ. ವ್ಯಾಪಾರ ವ್ಯವಹಾರಗಳಲ್ಲಿ ಸಾಕಷ್ಟು ಎಚ್ಚರಿಕೆಯನ್ನು ವಹಿಸಬೇಕಾದ ಅನಿವಾರ್ಯ ಇರುತ್ತದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಹಿರಿಯರು ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಕೊಂಡು ಸಂತೋಷಪಡುವರು. ವ್ಯವಹಾರದಲ್ಲಿ ಪ್ರಗತಿ ಕುಂಠಿತವಾಗಿ ಆದಾಯದಲ್ಲಿ ಹಿನ್ನಡೆಯನ್ನು ಕಾಣಬಹುದು. ಹೊಸ ವಾಹನವನ್ನು ಖರೀದಿ ಮಾಡುವ ಯೋಗವಿದೆ.ಗಣ್ಯ ವ್ಯಕ್ತಿಗಳೊಡನೆ ಪರಿಚಯ ಬೆಳೆಯುವ ಸಾಧ್ಯತೆಯಿದೆ. ವ್ಯಕ್ತಿಗೌರವ ಹೆಚ್ಚಾಗುವ ಸಾಧ್ಯತೆಯಿದೆ.ಲೇವಾದೇವಿ ವ್ಯವಹಾರಗಳು ಸದ್ಯದಲ್ಲಿ ಬೇಡವೇ ಬೇಡ. ಸರ್ಕಾರಿ ಸಾಲಗಳು ಸರಾಗವಾಗಿ ದೊರೆಯುತ್ತವೆ. ವೃತ್ತಿಯಲ್ಲಿ ನೀವು ಗೈದ ನಿಸ್ವಾರ್ಥ ಸೇವೆಗೆ ಬೆಲೆ ಬರುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ವ್ಯವಹಾರದಲ್ಲಿ ನಿಮ್ಮ ವಿರೋಧಿಗಳು ನಿಮ್ಮನ್ನು ಹೊಗಳಿದಲ್ಲಿ ಅದು ನಿಮ್ಮ ಹಿನ್ನಡೆಗೆ ಕಾರಣವಾಗಬಹುದು. ನಿಮ್ಮ ಒಳ್ಳೆಯತನ ದುರುಪಯೋಗವಾಗದಂತೆ ನೋಡಿಕೊಳ್ಳುವುದು ಬಹುಮುಖ್ಯ. ಹಿರಿಯರ ಮಾತಿನಂತೆ ವ್ಯವಹಾರದಲ್ಲಿ ಬದಲಾವಣೆ ತಂದುಕೊಂಡಲ್ಲಿ ಆದಾಯಸ್ಥಿರತೆಯನ್ನು ಕಾಣಬಹುದು. ಅವಶ್ಯಕತೆಗಿಂತ ಹೆಚ್ಚಿನ ಸಾಲಸೋಲಗಳನ್ನು ಮಾಡದಿರುವುದು ಒಳ್ಳೆಯದು. ಹಣಕಾಸಿನ ಸಂಸ್ಥೆಗಳನ್ನು ನಡೆಸುವವರ ಆದಾಯದಲ್ಲಿ ಏರಿಕೆ ಇರುತ್ತದೆ.

ಗ್ರಾಮಾಫೋನ್...

ಹಿಂದಿನ ಪುಟದಿಂದ...


ಇಂಗ್ಲೆಂಡಿನ ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್ ಪ್ರಕಟಿಸಿರುವ 'ಇಂಡಿಯನ್ ಮ್ಯೂಸಿಕ್ ಅಂಡ್ ದಿ ವೆಸ್ಟ್' ಈ ಬಗ್ಗೆ ಅಪರೂಪದ ಮಾಹಿತಿಯನ್ನು ಒಳಗೊಂಡಿರುವ ಗ್ರಂಥ. ಇದರಲ್ಲಿ ಲೇಖಕ ಗೆರ್ರಿ ಫ್ಯಾರೆಲ್, ವಸಾಹತು ಸಂದರ್ಭದಲ್ಲಿ ಭಾರತೀಯ ಸಂಗೀತಕ್ಕಿದ್ದ ಸ್ಥಾನ, ಆಗ ಪಾಶ್ಚಾತ್ಯ ಜನಪ್ರಿಯ ಹಾಡುಗಳಲ್ಲೂ ರಂಗಭೂಮಿಯ ಮೇಲೂ ಕಾಣಿಸುತ್ತಿದ್ದ ಭಾರತೀಯ ಪ್ರತಿಮೆಗಳು, ಭಾರತದಲ್ಲಿ ಗ್ರಾಮಾಫೋನಿನ ಪ್ರಾರಂಭದ ದಿನಗಳು ಇತ್ಯಾದಿ ವಿವರಗಳನ್ನು ದಾಖಲಿಸಿದ್ದಾನೆ. ಅವನು ಹೆಸರಿಸಿರುವ ಫ್ರೆಡೆರಿಕ್ ವಿಲಿಯಂ ಗೇಸ್‌ಬರ್ಗ್ (1873-1951) ಒಬ್ಬ ಅಮೆರಿಕನ್ ಸಂಗೀತಗಾರ. 1898ರಲ್ಲಿ ಇಂಗ್ಲೆಂಡಿನ ಗ್ರಾಮಾಫೋನ್ ಕಂಪೆನಿಯ ಮೊದಲ ರಿಕಾರ್ಡಿಂಗ್ ಎಂಜಿನಿಯರ್ ಆಗಿ ನೇಮಕಗೊಂಡ ಈತ ನಮ್ಮ ಶಾಸ್ತ್ರೀಯ ಸಂಗೀತವನ್ನು ಮೊತ್ತಮೊದಲು ಗ್ರಾಮಾಫೋನ್ ರಿಕಾರ್ಡುಗಳಿಗಾಗಿ ಅಳವಡಿಸಿದವನು; ಭಾರತದಲ್ಲಿ ಸಂಚರಿಸಿ ಹೊಸ ಹೊಸ ಸಂಗೀತಗಾರರನ್ನು ಹುಡುಕಿ ಹಾಡಿಸಿದವನು. ಹಾಗೆ ಅವನು ಹಾಡಿಸಿದ ಮೊದಲಿಗರಲ್ಲಿ ಬಹುಬೇಗ ವಿಖ್ಯಾತಳಾದವಳು ಗೋಹರ್ ಜಾನ್ (1873-1930).


ಗ್ರಾಮಾಫೋನ್ ಕೀರ್ತನೆಗಳು

ಅಲಹಾಬಾದಿನಲ್ಲಿ ಹುಟ್ಟಿದ ಗೋಹರ್ ಜಾನ್, ಪಟಿಯಾಲಾದ ಕಲು ಉಸ್ತಾದ್, ರಾಂಪುರದ ವಜೀರ್ ಖಾನ್, ಅಲಿ ಭಕ್ಷ್ ಮತ್ತು ಬೃಂದಾದಿನ್ ಮಹಾರಾಜ್ ಅವರಿಂದ ನೃತ್ಯ ಮತ್ತು ಸಂಗೀತವನ್ನು ಕಲಿತಳು. 1887ರಲ್ಲಿ ತನ್ನ 12ನೆಯ ವಯಸ್ಸಿನಲ್ಲಿ ದರ್ಭಾಂಗದ ಮಹಾರಾಜನ ಆಸ್ಥಾನದಲ್ಲಿ ಮೊತ್ತಮೊದಲು ಹಾಡಿ ನರ್ತಿಸಿದಳು. ಮೂರು ನಿಮಿಷ ಹಾಡಿ ಕಡೆಯಲ್ಲಿ ತನ್ನ ಹೆಸರನ್ನು ಘೋಷಿಸಿಕೊಳ್ಳುವುದಕ್ಕೆ ಆಕೆ ಗ್ರಾಮಾಫೋನ್ ಕಂಪನಿಯಿಂದ ಪಡೆದ ಹಣ ₹ 3,000. ಆ ಕಾಲದಲ್ಲದು ಬಹು ದೊಡ್ಡ ಮೊತ್ತ.

ಗ್ರಾಮಾಫೋನ್ ಕಂಪನಿ 1902ರಿಂದ 1920ರ ಅವಧಿಯಲ್ಲಿ ಗೋಹರ್ ಜಾನ್ ಒಬ್ಬಳಿಂದಲೇ 600ಕ್ಕೂ ಹೆಚ್ಚು ಹಾಡುಗಳನ್ನು ಹಾಡಿಸಿ ಮುದ್ರಿಸಿಕೊಂಡಿತೆಂದರೆ ಆಗ ಗ್ರಾಮಾಫೋನ್ ಹಾಡುಗಳಿಗೆ ಎಷ್ಟೆಲ್ಲ ಬೇಡಿಕೆಯಿತ್ತೆಂದು ಊಹಿಸಿಕೊಳ್ಳಬಹುದು. ಹಾಡಿದವರು ನಮ್ಮವರು, ಹಾಡುಗಳು ನಮ್ಮವು. ಅವುಗಳನ್ನು ಹುಲುಮಾನವರಷ್ಟೇ ಅಲ್ಲ, ನಮ್ಮ ದೇವತೆಯರೂ ಆಲಿಸುತ್ತಾರೆಂದರು ಗ್ರಾಮಾಫೋನ್ ಕಂಪೆನಿಯವರು. ಉದಾಹರಣೆಗೆ, 1906ರ ಜಾಹೀರಾತಿನಲ್ಲಿರುವ ನಮ್ಮ ಸರಸ್ವತಿಯನ್ನು ನೋಡಿ. ಜ್ಞಾನ, ವಿವೇಕ, ವಿದ್ಯೆ, ವಾಕ್ಕು, ವಿಜ್ಞಾನ, ಸಂಗೀತ ಮೊದಲಾದವುಗಳ ಅಧಿದೇವತೆಯೆನಿಸಿದ ಸರಸ್ವತಿ ಸಂಸ್ಕೃತ ಭಾಷೆಯನ್ನು, ದೇವನಾಗರಿ ವರ್ಣಮಾಲೆಯನ್ನು ಕಂಡುಹಿಡಿದವಳು.

ಈ ಜಾಹೀರಾತಿನಲ್ಲಿರುವ ಸರಸ್ವತಿಯೂ, ರವಿವರ್ಮ ಚಿತ್ರಿಸಿದಂತೆಯೇ, ಸರೋವರದ ನಡುವೆ ಒಂದು ತಾವರೆಯ ಮೇಲೆ ಕುಳಿತಿದ್ದಾಳೆ. ಅವಳ ತೊಡೆಯ ಮೇಲೊಂದು ವೀಣೆಯಿದೆ. ಬದಿಯಲ್ಲಿರುವ ಇನ್ನೊಂದು ಬೃಹತ್ ತಾವರೆ ಹೂವಿನ ಮೇಲೆ ವೀಣೆಯ ಇನ್ನೊಂದು ಬುರುಡೆಗೆ ಬದಲಾಗಿ ಗ್ರಾಮಾಫೋನ್ ಪೆಟ್ಟಿಗೆ ಇದೆ! ಆಕೆಯ ಎಡಗೈಯ ಬೆರಳುಗಳು ವೀಣೆಯ ತಂತಿಗಳನ್ನು ಮೀಟುತ್ತಿದ್ದರೆ ಬಲಗೈಯ ಬೆರಳುಗಳು ಗ್ರಾಮಾಫೋನ್ ರಿಕಾರ್ಡಿಗೆ ಮುಳ್ಳು ಹಚ್ಚುತ್ತಿವೆ. ಹಿನ್ನೆಲೆ ಮುನ್ನೆಲೆಗಳಲ್ಲಿರುವ ಮೀನು, ಮೊಸಳೆ, ಕಪ್ಪೆ, ಆಮೆ, ಸರ್ಪ, ಹಂಸ ಎಲ್ಲವೂ ಗ್ರಾಮಾಫೋನ್ ಹೊಮ್ಮಿಸುತ್ತಿರುವ ಸಂಗೀತವನ್ನು ಆಲಿಸುತ್ತಿವೆ.


ಸರಸ್ವತಿಯ ಎಡಗೈ ಬೆರಳುಗಳು ವೀಣೆಯ ತಂತಿಗಳನ್ನು ಮೀಟುತ್ತಿದ್ದರೆ ಬಲಗೈಯ ಬೆರಳುಗಳು ಗ್ರಾಮಾಫೋನ್ ರಿಕಾರ್ಡಿಗೆ ಮುಳ್ಳು ಹಚ್ಚುತ್ತಿವೆ

ಈಗ 1907ರಲ್ಲಿ ಪ್ರಚಲಿತವಾಗಿದ್ದ ಇನ್ನೊಂದು ಜಾಹೀರಾತು: ಇದರಲ್ಲಿರುವವಳು ದುರ್ಗಾದೇವಿ. ಆಕೆ ದುಷ್ಟಶಕ್ತಿಗಳನ್ನು ಸಂಹರಿಸುವ ಕಾಳಿ; ಇಪ್ಪತ್ತನೆಯ ಶತಮಾನದ ಮೊದಲ ದಶಕಗಳಲ್ಲಿ ನಮ್ಮ ರಾಷ್ಟ್ರೀಯತೆಗೊಂದು ಧಾರ್ಮಿಕ ಸಂಕೇತವಾಗಿದ್ದವಳು. ಆದರೆ ಈ ಜಾಹೀರಾತಿನಲ್ಲಿ ದುರ್ಗೆಯ ಪಕ್ಕದಲ್ಲೇ ಒಂದು ಸಣ್ಣಬಂಡೆಯ ಮೇಲೆ ಗ್ರಾಮಾಫೋನ್ ಯಂತ್ರವಿದೆ. ದುರ್ಗೆಯನ್ನು ಹುಲಿ, ಸಿಂಹ, ಹೆಬ್ಬಾವು ಮುಂತಾದ ವನ್ಯಮೃಗಗಳು ಸುತ್ತುವರಿದಿದ್ದು ಅವು ತಮ್ಮ ರೌದ್ರ ಸ್ವರೂಪ, ಸ್ವಭಾವಗಳನ್ನು ಮರೆತು ಸಂಗೀತವನ್ನು ಕೇಳುವುದರಲ್ಲಿ ತಲ್ಲೀನವಾಗಿವೆ. ಇಂಥ ಅಸಾಧ್ಯ ಕಲ್ಪನೆಯನ್ನು ಚಿತ್ರರೂಪಕ್ಕಿಳಿಸಿದ ಕಲಾವಿದರ ಹೆಸರು ಜಿ.ಎನ್.ಮುಖರ್ಜಿ.

ನಾನು ಹೈಸ್ಕೂಲಿನಲ್ಲಿ ಓದುತ್ತಿದ್ದ ಕಾಲದಲ್ಲಿ ದೊಡ್ಡ ಕುಳವೆಂದು ಹೆಸರಾಗಿದ್ದ ಜಮೀನ್ದಾರರೊಬ್ಬರ ಮನೆ ದೇವನಹಳ್ಳಿಯ ಕೋಟೆಯೊಳಗಿತ್ತು. ಒಂದೊಂದು ದಿನ ಸಂಜೆಯ ಹೊತ್ತು ಆ ಮನೆಯ ಆಳು ಮನೆಯೊಳಗಿಂದ ಹೊರ ಜಗಲಿಯ ಮೇಲೆ ಒಂದು ಗ್ರಾಮಾಫೋನ್ ತಂದಿಡುತ್ತಿದ್ದ. ಆರಾಮ ಕುರ್ಚಿಯಲ್ಲಿನ ಜಮೀನ್ದಾರರು ಮೂರು ಮೂರು ನಿಮಿಷಕ್ಕೊಮ್ಮೆ ಗ್ರಾಮಾಫೋನಿಗೆ ರಿಕಾರ್ಡು ಹಚ್ಚುವುದನ್ನೂ, ಅದರಿಂದ ಹಾಡುಗಳು ಹೊಮ್ಮುವುದನ್ನೂ ನೋಡುವುದು ಕೇಳುವುದು ಎಂದರೆ ನಮಗೆ ಎಲ್ಲಿಲ್ಲದ ಹಿಗ್ಗು.

ನಾನು ಮೊದಲ ಬಾರಿಗೆ ಗ್ರಾಮಾಫೋನ್ ರಿಕಾರ್ಡನ್ನು ಕೈಯಿಂದ ಮುಟ್ಟಿನೋಡಿದ್ದು 1976ರಲ್ಲಿ. ಆ ವರ್ಷ ಬೆಂಗಳೂರು ಆಕಾಶವಾಣಿ ಕೇಂದ್ರದಲ್ಲಿ ಸುಮಾರು ಎರಡು ತಿಂಗಳು ಕೆಲಸಮಾಡಿದೆ, ಪಂಡಿತ್ ವಸಂತ ಕವಲಿ ಅವರಿಗೆ ಸಹಾಯಕನಾಗಿ. ಆಕಾಶವಾಣಿಯಲ್ಲಿ ಸಂಗೀತ ನಿರ್ದೇಶಕರಾಗಿದ್ದ ಅವರು ಹಿಂದೂಸ್ತಾನಿ ಸಂಗೀತಗಾರರು; ಪಂಡಿತ್ ಮಲ್ಲಿಕಾರ್ಜುನ ಮನ್ಸೂರರ ಶಿಷ್ಯರಲ್ಲೊಬ್ಬರು. ಅದೆಲ್ಲಿಂದಲೋ ಅವರು ಮೂರು ನಿಮಿಷದ ಅವಧಿಯ ನೂರಾರು ರಿಕಾರ್ಡುಗಳನ್ನು ತಂದಿದ್ದರು. ಅವುಗಳನ್ನು ಗ್ರಾಮಾಫೋನಿಗೆ ಹಚ್ಚಿ, ಅವುಗಳಿಂದ ಹೊಮ್ಮಿದ ಹಾಡುಗಳನ್ನು ಮ್ಯಾಗ್ನೆಟಿಕ್ ಟೇಪ್‌ಗೆ ವರ್ಗಾಯಿಸುವ ಕೆಲಸ ನನಗೆ. ನಾನು ಇಂಥ ರಿಕಾರ್ಡುಗಳನ್ನು ಗ್ರಾಮಾಫೋನಿಗೆ ಹಚ್ಚಿ ಕೊಟ್ಟೂರಪ್ಪ, ಗುಬ್ಬಿ ವೀರಣ್ಣ, ಮಹಮದ್ ಪೀರ್, ಮಳವಳ್ಳಿ ಸುಂದರಮ್ಮ ಮೊದಲಾದ ರಂಗ ನಟನಟಿಯರ ಹಾಗೂ ಅಬ್ದುಲ್ ಕರೀಂಖಾನ್, ಸವಾಯ್ ಗಂಧರ್ವ, ಬಿಡಾರಂ ಕೃಷ್ಣಪ್ಪ, ಅರಿಯಕುಡಿ ರಾಮಾನುಜಯ್ಯಂಗಾರ್ ಮೊದಲಾದ ಸಂಗೀತಗಾರರ ಹಾಡುಗಳನ್ನು ಕೇಳುತ್ತಾ ಕಳೆದ ಶತಮಾನದ ಮೊದಲ ದಶಕಗಳಿಗೆ ಹಿಂತಿರುಗಿಬಿಟ್ಟದ್ದುಂಟು. ಆ ದಶಕಗಳಲ್ಲಿ ಜನರು ಹೇಗೆಲ್ಲ ಗ್ರಾಮಾಫೋನುಗಳಿಗೆ ಮುಗಿಬೀಳುತ್ತಿದ್ದರೆಂಬುದನ್ನು ಗ್ರಾಮಾಫೋನ್ ಕಂಪೆನಿಯ ಕೆಲವು ಜಾಹೀರಾತುಗಳೇ ಸ್ಪಷ್ಟಪಡಿಸುವಂತಿವೆ. ಉದಾಹರಣೆಗೆ 1905ರ, 'ದಿ ಗ್ರಾಮಾಫೋನ್ ಇನ್ ದಿ ಕೋರ್ಟ್ ಆಫ್ ಜಹಾಂಗೀರ್ ದಿ ಮ್ಯಾಗ್ನಿಫಿಸೆಂಟ್' ಎಂಬ ಶೀರ್ಷಿಕೆಯುಳ್ಳ ಜಾಹೀರಾತು. ಮೊಘಲ್ ದೊರೆ ಜಹಾಂಗೀರ್ 1605ರಿಂದ 1627ರವರೆಗೆ ಆಳಿದವನು.



ಗೋಹರ್ ಜಾನ್

ಆದರೆ ಮೊಘಲರ ಆಸ್ಥಾನ ತನ್ನೆಲ್ಲ ವೈಭವದಿಂದ ರಾರಾಜಿಸುತ್ತಿರುವ ಚಿತ್ರಣದ ಈ ಜಾಹೀರಾತಿನಲ್ಲಿ ದರ್ಬಾರಿನಲ್ಲಿರುವ ಎಲ್ಲರನ್ನೂ ಪರವಶಗೊಳಿಸಿಬಿಟ್ಟಿದೆ ಒಂದು ಗ್ರಾಮಾಫೋನ್! 1902ರಲ್ಲಿ ಕಲ್ಕತ್ತಾದಲ್ಲಿ ಗ್ರಾಮಾಫೋನ್ ಕಂಪನಿಯ ಏಜೆಂಟಾಗಿದ್ದ ಜಾನ್ ವ್ಯಾಟ್ಸನ್ ಹಾಡ್ ತಾನು ದೆಹಲಿ ದರ್ಬಾರಿನಲ್ಲಿ ಗ್ರಾಮಾಫೋನುಗಳನ್ನು ಪ್ರದರ್ಶಿಸಬಯಸುವುದಾಗಿ ಬರೆದಿದ್ದ, ನಿಜ. ಆದರೆ ಹದಿನೇಳನೆ ಶತಮಾನದಲ್ಲೇ (ಗ್ರಾಮಾಫೋನ್ ಇನ್ನೂ ಆವಿಷ್ಕಾರವಾಗದಿದ್ದ ಕಾಲದಲ್ಲೇ) ದೊರೆ ಜಹಾಂಗೀರನನ್ನು ಸಂತುಷ್ಟಗೊಳಿಸುವುದಕ್ಕಾಗಿ ಅವನಿಗೆ ಆ ಯಂತ್ರವನ್ನೊಂದು ಕೊಡುಗೆಯಾಗಿ ಕೊಡುವುದೆಂದರೆ! ಚಿತ್ರದಲ್ಲಿ ಗ್ರಾಮಾಫೋನಿನ ಪಕ್ಕ ನಿಂತಿರುವವನು ವಿಧೇಯನಾದ ಸೇವಕನೇನಲ್ಲ. ಅವನು ಶಸ್ತ್ರಸಜ್ಜಿತನಾದ ಕಾವಲುಗಾರ. ಜಹಾಂಗೀರನ ಕಾಲದಲ್ಲಿ ಗ್ರಾಮಾಫೋನುಗಳಿದ್ದಿದ್ದರೆ ಆ ದೊರೆಯೂ ಒಂದು ಗ್ರಾಮಾಫೋನಿಗಾಗಿ ಹಂಬಲಿಸುತ್ತಿದ್ದ ಎಂಬುದೇ ಈ ಜಾಹೀರಾತಿನ ಸಂದೇಶ. ಇದೆಲ್ಲ ಹಳೆಯ ಕತೆ. ಈಗ ಗ್ರಾಮಾಫೋನು ಕಣ್ಣಿಗೆ ಬೀಳುವುದೇ ಅಪರೂಪ. ಕಣ್ಣಿಗೆ ಬಿದ್ದರೂ ಅದು ಮ್ಯೂಸಿಯಮ್ಮುಗಳಲ್ಲಿ ಅಥವಾ ಗುಜರಿ ಅಂಗಡಿಗಳಲ್ಲಿ ಮಾತ್ರ. ಅಥವಾ ಶ್ರೀಮಂತರು ಕೆಲವರ ಭವ್ಯ ಭವನಗಳ ಪಡಸಾಲೆಗಳಲ್ಲಿ ಅಲಂಕರಣ ವಸ್ತುವಾಗಿ ಕೂತಿರಬಹುದೋ ಏನೊ. ಹಿಂದೊಂದು ಕಾಲದಲ್ಲಿ ಹೇಳಿದ್ದನ್ನೇ ಹೇಳುವ ಭಾಷಣಕಾರರಿಗೆ 'ಪ್ಲೇಟು ಹಾಕಿಬಿಟ್ಟರು' ಎನ್ನುತ್ತಿದ್ದರು. ಈಗ, ಧ್ವನಿತಟ್ಟೆಯಲ್ಲಿ ಹಾಡಿನ ಜಾಡು ಕೊರೆದಿದೆ/ ಕಂಪಿಸುವ ಮುಳ್ಳು/ತಟ್ಟೆ ತಿರುಗಿದಂತೆಲ್ಲ ಅದೇ ಜಾಡುಗಳಲ್ಲಿ ಮುಳ್ಳು ಚಲಿಸಿ/ ಎದೆ ಗೀರಿ ಸೀಳಿ ಹೊಮ್ಮುವ ಹಾಡು.../ ಮುಳ್ಳು, ಕಂಪನ ಮತ್ತು ಎದೆಯ ಗಾಯವಿರದೆ/ ಹಾಡು ಹೊಮ್ಮೀತು ಹೇಗೆ? ಎಂಬ ಗೋವಿಂದ ಹೆಗಡೆಯವರ ಕವನವನ್ನಾಗಲೀ, ರಾಮಚಂದ್ರ ಶರ್ಮರ 'ಮುಳ್ಳು ಜಾಡಿಗೆ ಸಿಕ್ಕಿತ್ತು' ಎಂಬ ಕತೆಯಲ್ಲಿರುವ 'ಗ್ರಾಮಾಫೋನ್ ತಟ್ಟೆಯ ಮೇಲೆ ದಾರಿ ಮರೆತ ಮುಳ್ಳು ತುಳಿದ ದಾರಿಯನ್ನೇ ತುಳಿಯುತ್ತಿತ್ತು' ಎಂಬ ವಾಕ್ಯವನ್ನಾಗಲೀ ಓದಿದಾಗ 'ಪ್ಲೇಟು ಹಳೆಯದೇ. ಆದರೆ ಸ್ವಲ್ಪ ಒರೆಸಿ ಹಾಕಬೇಕಿತ್ತು' ಎನ್ನಿಸುವುದುಂಟು.



ಸೃಜನಶೀಲ ಜಾಹೀರಾತಿಗೆ ಸಾಕ್ಷಿ 'ದಿ ಗ್ರಾಮಾಫೋನ್ ಇನ್ ದಿ ಕೋರ್ಟ್ ಆಫ್ ಜಹಾಂಗೀರ್ ದಿ ಮ್ಯಾಗ್ನಿಫಿಸೆಂಟ್'

ಪದಬಂಧ 2675



ಮೇಲಿನಿಂದ ಕೆಳಕ್ಕೆ
1. ಸರಸ್ವತಿಯ ಸಾಮ್ರಾಜ್ಯಕ್ಕೆ ಸೇರಿದವ 4
2. ಹಣವಂತ, ಗುಣವಂತರ ಜೊತೆ ನಿಲ್ಲುವ ಕರುಣಾ ಸ್ವಭಾವದವ 4
3. ಕೈಗೆ ಸಿಗುವ ಬಗೆಬಗೆಯ ಸಾಧನ 4
4. ಹಣವನ್ನು ಸಂಗ್ರಹಿಸಿಟ್ಟುಕೊಂಡ ಮಹಾಪ್ರಾಣದ ಪಶು 4
6. ಅಂಬಿನಂತೆ ರಭಸ 4
7. ಹಸುಳೆ ಮನಸ್ಸಿನ ದನ 2
9. ಕೊರಳಿನ ಶಬ್ದ ಅಲೆ ಅಲೆಯಾಗಿ ಹೊರಹೊಮ್ಮಿದೆ 5
11. ವರ್ಷಕಾಲದಲ್ಲಿ ಒಂದೇ ಸಮನೆ ಹನಿಹನಿಯ ಒಸರು 5
14. ಮಾನವ ಶರೀರ ಕೇಸರಿಯ ತಲೆ ಸೇರಿದ ಅವತಾರ 4
15. ಜಡ ಚೇತನಗಳ ಮಿಲನ 4
19. ಎದುರು ಸಿಕ್ಕಾಗಿ ಕೈಜೋಡಿಸಿ ಮಾಡುವ ನಮನ 4
20. ಒಣಗಿ ಗಾಳಿಗೆ ಹಾರಿ ಕಾಲಡಿ ಸಿಗುವ ಪತ್ರೆ 4

ಎಡದಿಂದ ಬಲಕ್ಕೆ
1. ಗಾನಕ್ಕೆ ಮೂಲ ವೇದ 4
3. ನೀವು ಬಿಡಿಸುತ್ತಿರುವ ಸುಳಿವುಗಳ ಉತ್ತರದಿಂದ ರಚಿತವಾದ ವ್ಯೂಹ 4
5. ಪೀಳಿಗೆಯಿಂದ ಪೀಳಿಗೆಯನ್ನು ಬೆಳಸುವ ಜೀವಾಣು 5
8. ಅದಾದಮೇಲೆ ಎನ್ನುವ ಸಂಸ್ಕೃತದ ಕನ್ನಡಾವಾಂತರ 5
10. ದೇವದೇವಾದಿಗಳಿಂದ ಸ್ತುತಿಸಲ್ಪಟ್ಟವ 5
12. ತಪಸ್ಸಿನಲ್ಲಿ ಉಂಟಾದ ತೊಡಕು 4
13. ಸಂಜೆಯ ಬಣ್ಣ 4
14. ಆನೆಯಂತೆ ವಿಶಾಲ ಹಾವಿನಂತೆ ಸೂಕ್ಷ್ಮ ದೃಷ್ಟಿ 5
16. ನಾಣ್ಯದ ಜೊತೆ ಸೇರುವ ಒಡವೆಯ ಪರ್ಯಾಯ 2
18. ಆಕರ್ಷಣೆಯಿಂದ ಆಂತರ್ಯದಲ್ಲಾಗುವ ಎಳೆತ 5
21. ಹಾಡುವಿಸ್ತಾರದ ಕೂಡಲು 5
22. ವಿಷ್ಣು ಶಿವ ಸಂಯೋಗದ ಹಳೆಗನ್ನಡ ಕವಿ 4
23. ಸೂರ್ಯನ ಉರಿ ಬೆಂಕಿ 4

ಪದಬಂಧ ಉತ್ತರ -2674

ಮೇಲಿಂದ ಕೆಳಕ್ಕೆ
1. ರತುನ 2.ಮಿಟುಕಿಸು 3.ಮಹಾಮುನಿ 4.ತುರಾಯಿ 6.ರಮಮಾ 8.ರಾಮಾವತಾರ 10.ಹಾಲುಪಾಯಸ 12.ದಾಸಸಾಹಿತ್ಯ 13.ಮನಾ 15.ಕವಿ 17.ಚಾರ್ವಾಕ 18.ಪಕಪಕ 19.ತಿಳಿಹಾಸ 20.ಸರಸಿ 22.ಹರಣ

ಎಡದಿಂದ ಬಲಕ್ಕೆ
1. ರಥಸಪ್ತಮಿ 3.ಮನೆಮಾತು 5.ನಶ್ವರ 7.ಮುಜರಾಯಿ 9.ಸುಹಾಸಿನಿ 11.ಚಂದಾಮಾಮ 14.ನಾದೋಪಾಸಕ 16.ವಿಚಾರಣೆ 18.ಪರಸತಿ 20.ಸತ್ಯಲೋಕ 21.ಕಲಹ 23.ಸಿಹಿಪಾಕ 24.ಸಮೀಕರಣ

ಭಾಷೆ ಮತ್ತು ನಾವು



ಮೇಟಿ ಮಲ್ಲಿಕಾರ್ಜುನ

ಸಮುದಾಯಗಳ ಅಸ್ತಿತ್ವ ಮತ್ತು ಪ್ರಜ್ಞೆಯ ವಿಭಿನ್ನ ಸ್ವರೂಪ ಮತ್ತು ವಿನ್ಯಾಸಗಳನ್ನು ಆಯಾ ಸಮುದಾಯಗಳ ನುಡಿ ಬಳಕೆಯಲ್ಲಿ ನಾವು ಕಾಣುತ್ತೇವೆ. ಆ ನುಡಿಯಲ್ಲಿಯೇ ಇಂತಹ ವಿನ್ಯಾಸಗಳು ಅಂತಸ್ಥವಾಗಿರುತ್ತವೆ ಎಂದು ಹೇಳಲು ಸಾಧ್ಯವಿಲ್ಲ. ಆದರೆ, ಅವುಗಳು ಆಯಾ ಸಮುದಾಯದ ಚಹರೆಗಳಾಗಿ ಮಾತ್ರ ನೆಲೆಗೊಂಡಿರುತ್ತವೆ. ಇಲ್ಲಿ ನುಡಿ ಮತ್ತು ಸಮುದಾಯ ಎಂಬೀ ಎರಡು ಸಂಗತಿಗಳನ್ನು ಪ್ರಧಾನವಾಗಿ ಗುರುತಿಸುವ ಜರೂರಿದೆ. ಅಂದರೆ ನುಡಿಯ ಕುರಿತು ಮಾತನಾಡುವ ಬಹುತೇಕ ಸನ್ನಿವೇಶಗಳು, ಸಮುದಾಯವನ್ನು ನೆಲೆಯಾಗಿಸಿಕೊಂಡೇ ಮುಂಚೂಣಿಗೆ ಬರುತ್ತವೆ. ಆದರೆ, ಸಮುದಾಯ ಎನ್ನುವುದು ಜಿಯೋ-ಪೊಲಿಟಿಕಲ್ ನೆಲೆಯನ್ನು ಮಾತ್ರ ಪಡೆದುಕೊಂಡಿರುತ್ತದೆ.

ನಾಡು ನುಡಿಯ ಸಂಬಂಧಗಳನ್ನು ನಿರ್ವಚಿಸುವುದಕ್ಕೆ ಮಾತ್ರ ಈ ಆಯಾಮವು ಒತ್ತಾಸೆಯಾಗುತ್ತದೆಯೇ ಹೊರತು ಆಯಾ ನುಡಿ ಸಮುದಾಯದ ಬದುಕಿನ ಪ್ರಶ್ನೆಗಳನ್ನೇ ಗಂಭೀರವಾಗಿ ಪರಿಗಣಿಸುವ ನಿಲುವುಗಳು ಇಲ್ಲಿ ಮುಖ್ಯವಾಗುವುದಿಲ್ಲ. ತಾತ್ವಿಕವಾಗಿ ನುಡಿ ಬಗೆಗೆ ನಾವು ಹೊಂದಿರುವ ಧೋರಣೆಗಳು ಅಭಿಮಾನದ ಸೂಚಕಗಳಾಗಿರುತ್ತವೆ. ಬದುಕಿನ ಪ್ರಶ್ನೆಗಳನ್ನೇ ಎದುರಾಗುವ ಇರಾದೆಯಿಂದ ನುಡಿಯ ಪ್ರಶ್ನೆಗಳು ಮೈದಾಳುವುದಿಲ್ಲ. ನಮ್ಮ ನುಡಿಗೂ ನಡೆಗೂ ಇರುವ ಅಂತರಗಳ ಸ್ವರೂಪ ಎಂತಹದು ಎನ್ನುವುದನ್ನು ಗಮನಿಸುವುದಕ್ಕೆ ಇಲ್ಲಿ ಸಾಧ್ಯವಿದೆ. ಇದು ಸಾಧ್ಯತೆ ಮಾತ್ರವಲ್ಲ ಇದುವೇ ವಾಸ್ತವ. ಹಾಗಾಗಿ ಸಮುದಾಯದ ಚಹರೆಯನ್ನಾಗಿ ನುಡಿಯನ್ನು ಬಳಸುವ ನಮ್ಮ ಧೋರಣೆಗಳು ವಾಸ್ತವದಲ್ಲಿ ಆಯಾ ಸಮುದಾಯದ ಜನರ ಬದುಕಿನ ಏಳ್ಗೆಯನ್ನು ಆಧರಿಸಿರುವುದಿಲ್ಲ.

> ಕಳೆದ ಒಂದು ದಶಕದಿಂದ ಜಗತ್ತಿನಾದ್ಯಂತ ಫೆಬ್ರುವರಿ 21ರಂದು ಲೋಕ ತಾಯ್ನುಡಿ ದಿನ ಎಂದು ಆಚರಿಸಲಾಗುತ್ತದೆ. ಈ ಸನ್ನಿವೇಶದಲ್ಲಿ ನಾವು ಮತ್ತು ನಮ್ಮ ಭಾಷೆಯ ನಡುವಣ ನಂಟಸ್ತಿಕೆ ಎಂತಹದು ಎನ್ನುವುದರ ಒಂದು ಆತ್ಮ ವಿಮರ್ಶೆ

ಹೌದು, ಮೇಲ್ನೋಟಕ್ಕೆ, ನುಡಿ ಕುರಿತ ನಮ್ಮ ಚರ್ಚೆ, ಸಂವಾದ ಹಾಗೂ ಚಿಂತನೆಗಳು ಜನರ ಬದುಕಿನ ಆಶೋತ್ತರಗಳನ್ನು ಪ್ರತಿನಿಧಿಸುವ ಬಗೆಯಲ್ಲಿರುತ್ತವೆ. ದಿಟದಲ್ಲಿ ಯಾರ ಆಶೋತ್ತರಗಳನ್ನು ನಾವು ಬಿಂಬಿಸುತ್ತೇವೆ ಮತ್ತು ಯಾವ ಬಗೆಯ ನಿಲುವುಗಳನ್ನು ತಾಳುತ್ತೇವೆ ಎನ್ನುವ ಪ್ರಶ್ನೆ ಇಲ್ಲಿ ಎದುರಾದರೆ, ನುಡಿ ಮತ್ತು ಸಮುದಾಯಗಳ ನಡುವೆ ನಾವು ಕಲ್ಪಿಸಿಕೊಂಡಿರುವ ಗ್ರಹಿಕೆಗಳು ಎಂತಹ ತಪ್ಪು ಗ್ರಹಿಕೆಗಳು ಎನ್ನುವುದನ್ನು ಮನಗಾಣಬಹುದು. ಉದಾಹರಣೆಗೆ ಉದ್ಯೋಗ ಮತ್ತು ಅನ್ನದ ಭಾಷೆಯನ್ನಾಗಿ ನಾವು, ನಮ್ಮ ನಮ್ಮ ನುಡಿಗಳನ್ನು ಪರಿಭಾವಿಸುವಲ್ಲಿ ಯಾರ ಆಸಕ್ತಿಗಳು ನಮಗೆ ಮುಖ್ಯವಾಗುತ್ತವೆ ಎಂಬುದನ್ನು ನಾವು ಯೋಚಿಸುವ ಗೋಜಿಗೆ ಹೋಗುವುದಿಲ್ಲ.

ಅನ್ನ ಮತ್ತು ಉದ್ಯೋಗದ ಪ್ರಶ್ನೆ ಎದುರಾಗುವುದು ಶಿಕ್ಷಣವನ್ನು ಪಡೆದವರ ಪರವಾದ ನಿಲುವು ಮಾತ್ರ ಆಗಿರುತ್ತದೆ. ಆದರೆ, ದಲಿತ, ತಳಸಮುದಾಯ, ಅಲ್ಪಸಂಖ್ಯಾತ, ದಿನಗೂಲಿಗಳು, ಕೃಷಿ ಕಾರ್ಮಿಕರು, ಅಸಂಘಟಿತ ಕಾರ್ಮಿಕರು ಮತ್ತು ವಲಸೆ ಕಾರ್ಮಿಕರು ಮೊದಲಾದವರ ಅನ್ನದ ಪ್ರಶ್ನೆಗಳನ್ನು ಎದುರಾಗುವ ಬಗೆ ಯಾವುದು? ಅಂದರೆ ಅನ್ನದ ಭಾಷೆ ಉದ್ಯೋಗದ ಭಾಷೆಯಾಗಿ ಕನ್ನಡ ಎಂದು ಹೋರಾಡುವವರ ಗಮನದಲ್ಲಿ ಈ ಮೇಲೆ ಉಲ್ಲೇಖಿಸಿದ ಯಾವ ಸಮೂಹವೂ ಇರುವುದಿಲ್ಲ. ಹಾಗಾದರೆ ನುಡಿ ಸಮುದಾಯ ಎಂದರೇನು? ಅಥವಾ ನುಡಿಗೂ ಸಮುದಾಯಕ್ಕೂ ಇರುವ ನಂಟಸ್ತಿಕೆ ಎಂತಹದು? ಈ ಪ್ರಶ್ನೆಗಳು ಬಹುತೇಕವಾಗಿ ಅಪ್ರಸ್ತುತವಾಗಿ ಕಾಣುತ್ತವೆ.

ನಾವು ಯಾವುದನ್ನು ಸಮುದಾಯ ಪ್ರಜ್ಞೆಯ ರೂಪಕವನ್ನಾಗಿಯೂ, ನಾಡಿನ ಚಹರೆಯನ್ನಾಗಿಯೂ ಹಾಗೂ ನಾಡಿಗರ ಅಸ್ಮಿತೆಯ ವಿನ್ಯಾಸವನ್ನಾಗಿ ಪರಿಭಾವಿಸುತ್ತೇವೆಯೋ ಅದು ದಿಟದಲ್ಲಿ ಹಾಗಿರುವುದಿಲ್ಲ. ಅದೊಂದು ಕಲ್ಪಿತ ನೆಲೆ ಮಾತ್ರ. ನುಡಿಯನ್ನು ನಾಡಿನ ಮಹತ್ವದ ಲಾಂಛನವನ್ನಾಗಿಸುವ ಬಗೆಯೇ ಸಾಮ್ರಾಜ್ಯಶಾಹಿ ಮತ್ತು ಊಳಿಗಮಾನ್ಯ ನಿಲುವು ಆಗಿರುತ್ತದೆ. ಆದ್ದರಿಂದ ನುಡಿಯನ್ನು ಸಮೂಹಗಳ ಏಳ್ಗೆಯ ಮಾಧ್ಯಮ ಇಲ್ಲವೇ ಅಸ್ತ್ರವನ್ನಾಗಿ ಭಾವಿಸುವುದೆಂದರೆ, ಅದು ಕೇವಲ ಊಳಿಗಮಾನ್ಯ ಮತ್ತು ಸಾಮ್ರಾಜ್ಯಶಾಹಿ ಚೌಕಟ್ಟಿನೊಳಗಿರುವವರ ಹಿತಾಸಕ್ತಿಯನ್ನು ಕಾಪಾಡುವ ವಿನ್ಯಾಸವಾಗಿರುತ್ತದೆ. ಇಲ್ಲಿ ಯಾವುದೇ ಸಬಾಲ್ಟ್ರನ್ ಸಮೂಹದ ಏಳ್ಗೆಯನ್ನು ಬಯಸುವ ಇರಾದೆ ಇರುವುದಿಲ್ಲ.

ಯಾವ ಅಸಂಘಟಿತ ಸಮೂಹದ ಬೆಳವಣಿಗೆಗೆ ನಮ್ಮೀ ನುಡಿ ಬಗೆಗಿನ ಚಿಂತನೆಗಳು ಉತ್ತರದಾಯಿ- ಯಾಗಿರುವುದಿಲ್ಲ. ಆದ್ದರಿಂದ ನುಡಿ ಸಮುದಾಯ ಇಲ್ಲವೇ ಸಮುದಾಯದ ನುಡಿ ಎನ್ನುವುದು ಅಖಂಡತೆಯ ಸಂಕೇತವಾಗಲಾರದು. ಸಂಸ್ಕೃತ, ಇಂಗ್ಲಿಷು ಹಾಗೂ ಇತರೆ ಪ್ರಬಲ ಭಾಷೆಗಳಂತೆ ಕನ್ನಡವೂ ಸಾಮ್ರಾಜ್ಯಶಾಹಿ ಭಾಷೆಯೇ ಆಗಿರುತ್ತದೆ. ಈ ಧೋರಣೆಯನ್ನು ಪ್ರತಿರೋಧಿಸುವ ನಿಲುವುಗಳೂ ಇದೇ ಭಾಷೆಯ ಸಾಹಿತ್ಯದಲ್ಲಿಯೇ ನೆಲೆ ಪಡೆದಿವೆ.

ಈ ಸಾಹಿತ್ಯಕ ನಿರೂಪಣೆಗಳು ಕೇವಲ ಮೀಮಾಂಸೆ ಹಾಗೂ ಏಸ್ಥೆಟಿಕ್ ಪ್ರಶ್ನೆಯನ್ನು ನಿಭಾಯಿಸುವ ಇಲ್ಲವೇ ಅನುಸಂಧಾನ ಮಾಡುವ ಬಗೆಗಳಾಗಿವೆ. ಸೃಜನಶೀಲತೆಗೆ ಸಂಬಂಧಿಸಿದ ಪ್ರಾಬಲ್ಯ ಮತ್ತು ಸವಾಲನ್ನು ಎದುರಾಗುವುದಕ್ಕೆ ಮಾತ್ರ ಸೀಮಿತವಾಗಿವೆ. ಅಂದರೆ ಸಮೂಹಗಳ ವಿಮೋಚನೆಗೆ ಪೂರಕವಾಗಿ ಮೈದಾಳಿದ ಈ ನಿಲುವುಗಳೂ ಸಾಹಿತ್ಯಕ ಹಿರಿಮೆಯನ್ನು ಕೊಂಡಾಡುವ ವಿಧಾನಗಳು ಆಗಿವೆ. ಅಂದರೆ ಕನ್ನಡದ ಯಾವ ಸಾಧ್ಯತೆಯೂ ನಮ್ಮ ಜನರ ಬದುಕಿನ ಏಳ್ಗೆಯ ನಿಲುವಾಗಿ ಪರಿವರ್ತನೆಗೊಂಡಿಲ್ಲ.

ಸಾಹಿತ್ಯ, ಸಂಸ್ಕೃತಿ, ಸಮಾಜ, ರಾಜಕಾರಣ, ವಿಜ್ಞಾನ, ತಂತ್ರಜ್ಞಾನ ಹಾಗೂ ಒಟ್ಟು ಭಾಷಿಕ ಪರಿಸರವು ಕೇವಲ ನಿರ್ದಿಷ್ಟ ಉದ್ದೇಶಗಳಿಗೆ ಸೀಮಿತಗೊಂಡಿವೆ. ಯಾರು ಕನ್ನಡದ ಹಕ್ಕುದಾರರು? ಯಾರು ಕನ್ನಡದ ವಾರಸುದಾರರು ಎಂಬೆಲ್ಲ ಪ್ರಶ್ನೆಗಳು ಎದುರಾದಾಗೆಲ್ಲ ನಾವು ವರ್ತಿಸುವ ಬಗೆಯೇ ಬೇರೆ. ಅಂದರೆ ಕನ್ನಡವನ್ನು ಉಳಿಸುವ ಬೆಳೆಸುವ ಸವಾಲುಗಳಿಗೆ ಮಾತ್ರ ಸಬಾಲ್ಟ್ರನ್ ಸಮೂಹಗಳನ್ನೇ ಹೊಣೆಗಾರರನ್ನಾಗಿಸುತ್ತೇವೆ. ಆ ಸಮೂಹಗಳ ಆರ್ಥಿಕ, ಸಾಮಾಜಿಕ ಬೆಳವಣಿಗೆಯಲ್ಲಿ ಭಾಷೆಯ ಪಾತ್ರ ಎಂತಹದು ಎನ್ನುವುದನ್ನು ವಿಶ್ಲೇಷಿಸಿ ನೋಡುವ ಪ್ರಯತ್ನವನ್ನು ನಾವು ಮಾಡುವ ಗೋಜಿಗೆ ಹೋಗುವುದೇ ಇಲ್ಲ. ಕನ್ನಡ ಅಥವಾ ಯಾವುದೇ ಭಾಷೆಯನ್ನು ಕೇವಲ ಅಭಿಮಾನದ ನೆಲೆಯನ್ನಾಗಿ ಬಿಂಬಿಸುತ್ತೇವೆ. ತಾಯ್ನುಡಿ ಬಗೆಗಿನ ಚರ್ಚೆಗಳನ್ನು ಬೆಳೆಸುತ್ತಿರುವ ಈ ಸನ್ನಿವೇಶದಲ್ಲಿ ಭಾಷೆ, ಆರ್ಥಿಕತೆ ಹಾಗೂ ಸಮೂಹಗಳ ನಡುವಿನ ನಂಟಸ್ತಿಕೆ ಕುರಿತು ಈಗಲಾದರೂ ಚರ್ಚಿಸುವ ಇರಾದೆಯನ್ನು ನಾವು ಹೊಂದುವ ಅವಶ್ಯಕತೆ ಇದೆ.


ಸಮುದಾಯಗಳ ಸಾಮಾಜಿಕ ಮತ್ತು ಆರ್ಥಿಕ ಬೆಳವಣಿಗೆಯಲ್ಲಿ ಭಾಷಾ ಸಿದ್ಧಾಂತವು ಒಂದು ಮಹತ್ವದ ಪಾತ್ರವನ್ನು ವಹಿಸುತ್ತದೆ ಎಂದು ಹಲವು ವಿದ್ವಾಂಸರು ಈಗಾಗಲೇ ವಾದಿಸಿದ್ದಾರೆ. ಭಾಷಿಕತೆ, ಸಾಮಾಜಿಕತೆ ಹಾಗೂ ಆರ್ಥಿಕತೆಗಳ ನಡುವಣ ವಾಸ್ತವ ಸಂಬಂಧ ಎಂತಹದು ಎನ್ನುವ ಸಂಗತಿಯನ್ನು ಅತ್ಯಂತ ನಿಚ್ಚಳವಾಗಿ ಗ್ರಹಿಸಲು ನಮಗೆ ಸಾಧ್ಯವಾಗಿಲ್ಲ ಎಂಬುದು ದಿಟ. ಅಂದರೆ ಯಾವುದೇ ಸಮುದಾಯದ ಸಂಪೂರ್ಣ ಏಳ್ಗೆ ಎನ್ನುವುದು ಭಾಷೆ ಹಾಗೂ ಭಾಷಿಕ ಸಂಪನ್ಮೂಲಗಳ ಮೂಲಕ ನೆರವೇರುವುದು ಅನ್ನುವ ಆಯಾಮವನ್ನು ನಾವು ತಾತ್ವಿಕ ಇಲ್ಲವೇ ಪ್ರಾಯೋಗಿಕ ನೆಲೆಗಳಿಂದಲೂ ವಿಶ್ಲೇಷಿಸಿ ನೋಡಲು ಸಾಧ್ಯವಾಗಿಲ್ಲ.

ಸಾಮಾಜಿಕ, ಆರ್ಥಿಕ ಅಭಿವೃದ್ಧಿಗಳ ಪ್ರಕ್ರಿಯೆಯಲ್ಲಿ ಭಾರತದಂತಹ ದೇಶದಲ್ಲಿ ಬಹುಭಾಷಿಕತೆ ಎಂಬ ವಿದ್ಯಮಾನವು ಹೇಗೆಲ್ಲ ಒತ್ತಾಸೆಯಾಗಬಲ್ಲದು ಎಂಬುದನ್ನು ಇವತ್ತು ಅರ್ಥೈಸುವ ಜರೂರಿದೆ. ಅಷ್ಟೇ ಅಲ್ಲದೆ ಭಾಷೆ ಮತ್ತು ಸಮಾಜಗಳ ನಡುವಿನ ನಂಟಸ್ತಿಕೆಯನ್ನು ಸ್ಪಷ್ಟವಾಗಿ ವಿವರಿಸುವಲ್ಲಿ ನಾವೇಕೆ ಸೋತಿದ್ದೇವೆ? ಇಂತಹ ಸೋಲಿಗೆ ಕಾರಣವಾಗಿರುವ ಸಂಗತಿಗಳಾವುವು? ನಮ್ಮ ಶಿಕ್ಷಣ ಪ್ರಕ್ರಿಯೆಯಲ್ಲಿ ಅನುಸರಿಸುವ ಭಾಷಾ ಯೋಜನೆ ಮತ್ತು ನೀತಿಗಳ ಸ್ವರೂಪ ಯಾವುದು ಎಂಬೆಲ್ಲ ಪ್ರಶ್ನೆಗಳನ್ನು ಎದುರಾಗಬೇಕಿದೆ. ಈ ಪ್ರಶ್ನೆಗಳು ಕೇವಲ ಭಾಷಾಶಾಸ್ತ್ರೀಯ ತಾತ್ವಿಕ ಜಿಜ್ಞಾಸೆಯಿಂದ ಮೂಡಿದಂತಹವಲ್ಲ. ಬದಲಾಗಿ ನಮ್ಮ ಸಮುದಾಯಗಳು ಇಂದು ಎದುರಿಸುತ್ತಿರುವ ಬಿಕ್ಕಟ್ಟುಗಳ ಪರಿಣಾಮವಾಗಿ ಮೂಡಿದಂತಹ ಪ್ರಶ್ನೆಗಳಾಗಿವೆ.

ಸಮುದಾಯಗಳನ್ನು ಸಬಲೀಕರಣಗೊಳಿಸುವಲ್ಲಿ ಭಾಷೆಯು ಒಂದು ಪ್ರಮುಖ ಪಾತ್ರವನ್ನು ವಹಿಸುತ್ತದೆ ಎಂದು ಈ ಹೊತ್ತಿನ ಹಲವು ಅಧ್ಯಯನಗಳು ಹೇಳುತ್ತವೆ. ವ್ಯಕ್ತಿಯೊಬ್ಬನ ಬೆಳವಣಿಗೆ ಹಾಗೂ ಸಮುದಾಯಗಳ ಆರ್ಥಿಕ ಬೆಳವಣಿಗೆಯಲ್ಲಿ ಭಾಷೆಗಳ ಪಾತ್ರವನ್ನು ಯಾವುದೇ ಬಗೆಯಲ್ಲಿ ಕಡೆಗಣಿಸಲು ಆಗುವುದಿಲ್ಲ. ಅಂದರೆ ಸಮೂಹಗಳ ಸುಸ್ಥಿರ ಬೆಳವಣಿಗೆಯಲ್ಲಿ ಭಾಷಿಕತೆ, ಸಂಸ್ಕೃತಿ, ಪರಂಪರೆ, ಇತಿಹಾಸ, ಹವಾಮಾನ, ಮತ್ತು ಪರಿಸರ ವಿಜ್ಞಾನ ಇತ್ಯಾದಿ ಜನಾಂಗೀಯ ವಿದ್ಯಮಾನಗಳು ನಿರ್ಣಾಯಕ ವಿನ್ಯಾಸಗಳಾಗಿವೆ ಎಂದೂ ವಾದಿಸಲಾಗುತ್ತಿದೆ.

ಸಮಾಜ ಮತ್ತು ವ್ಯಕ್ತಿಗಳ ಸಾಮಾಜಿಕ-ಆರ್ಥಿಕ ಬೆಳವಣಿಗೆಯ ಮೇಲೆ ಈ ಭಾಷಿಕತೆಯು ಹೇಗೆ ಪರಿಣಾಮ ಬೀರಬಲ್ಲದು ಎನ್ನುವ ಚರ್ಚೆಗಳು ಕೂಡ ಅರವತ್ತರ ದಶಕದಿಂದಲೇ ಚಾಲ್ತಿಯಲ್ಲಿವೆ. ಈ ಇಡೀ ಪ್ರಕ್ರಿಯೆಯನ್ನು ಭಾಷಾ ಅರ್ಥಶಾಸ್ತ್ರ (ಇಕಾನಮಿಕ್ಸ್ ಆಫ್ ಲ್ಯಾಂಗ್ವೇಜ್) ಎನ್ನಲಾಗುತ್ತಿದೆ. ಸಮುದಾಯಗಳ ಒಟ್ಟು ಆರ್ಥಿಕ ಬೆಳವಣಿಗೆಗಾಗಿ ರೂಪಿಸುವ ಭಾಷಾ ಯೋಜನೆಗಳ ಸ್ವರೂಪ, ಯೋಜನಾ ವಿನ್ಯಾಸಗಳನ್ನು ಕೈಗೊಳ್ಳುವಲ್ಲಿ ಈ ಭಾಷಾ ಅರ್ಥಶಾಸ್ತ್ರವು ಪ್ರಮುಖ ಚಿಂತನೆಯ ನೆಲೆಯಾಗಿ ಒದಗಿ ಬರುತ್ತದೆ ಎನ್ನುವುದು ಗಮನಾರ್ಹ. ಹಾಗಾಗಿ ಸಮೂಹಗಳ ಏಳ್ಗೆಗೂ ಭಾಷೆಗಳ ಬೆಳವಣಿಗೆಗೂ ಸಂಬಂಧವಿದೆ ಎನ್ನುವ ವಾಸ್ತವವನ್ನು ಮರೆಯುವಂತಿಲ್ಲ. ❖

ಕೆ.ಪಿ.ಸತ್ಯನಾರಾಯಣ
ಬರೆದ ಕಥೆ
ಡ್ರ್ಯೂಪ್
ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.



https://www.prajavani.net/short-story

ಪಾಪುಗುರು, ದಾವಣಗೆರೆ
ಬರೆದ ಕವಿತೆ
ಲಿಂಗ ರಾಜಕಾರಣ
ಮೊಬೈಲ್‌ನಲ್ಲಿ ಕವಿತೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.
https://www.prajavani.net/poetry

ಸಮಾಜದ ದರ್ಶನಕ್ಕೆ ವೈಚಾರಿಕ ದೀವಟಿಗೆ!

ಎಸ್.ಆರ್. ವಿಜಯಶಂಕರ

ವಿಮರ್ಶೆ



ಲೋಕ ವಿಮರ್ಶೆ
ಲೇ: ರಾಜೇಂದ್ರ ಚೆನ್ನಿ
ಪ್ರ: ಅಭಿರುಚಿ ಪ್ರಕಾಶನ
ಮೊ: 9980560013
ಪು: 344 ₹270

ಸಾಹಿತ್ಯ ವಿಮರ್ಶೆ ಮತ್ತು ವೈಚಾರಿಕತೆ ಪರಸ್ಪರ ಒಂದನ್ನೊಂದು ಬೆಳೆಸುವುದು ಡಾ.ರಾಜೇಂದ್ರ ಚೆನ್ನಿ ಅವರ ವಿಮರ್ಶೆಯ ಪ್ರಮುಖ ಲಕ್ಷಣಗಳಲ್ಲೊಂದು. ಸೂಕ್ಷ್ಮ ಓದನ್ನು ಪುರಾವೆಸಹಿತ ತೋರಿಸುವ ಕೃತಿನಿಷ್ಠ ಓದಿನಿಂದ ಹುಟ್ಟುವ ಒಳನೋಟಗಳು ಅವರನ್ನು ಸದಾ ಆಕರ್ಷಿಸುತ್ತವೆ. ಅವರ ಈಚಿನ ಕೃತಿ 'ಲೋಕ ವಿಮರ್ಶೆ'ಯಲ್ಲಿ ಸಾಹಿತ್ಯ ಮತ್ತು ಸಾಮಾಜಿಕ ವಿಮರ್ಶೆಗಳು ಪರಸ್ಪರ ಪೂರಕವಾಗಿ ಕೆಲಸ ಮಾಡುತ್ತವೆ. ಈ ಸಂಕಲನದಲ್ಲಿರುವ 63 ವಿಮರ್ಶಾ ಬರಹಗಳಲ್ಲಿ ಹೆಚ್ಚಿನವು ಅವರು ಪತ್ರಿಕೆಗಳಲ್ಲಿ ಮೂರು ವರ್ಷಗಳ ಕಾಲ ಪ್ರಕಟಿಸಿದವು. ಭಾಷಣಗಳ ಬರಹ ರೂಪಗಳು, ಮುನ್ನುಡಿಗಳು ಮತ್ತು ವಿಮರ್ಶಾ ಟಿಪ್ಪಣಿಗಳೂ ಸೇರಿ ಚೆನ್ನಿಯವರ ಈಚಿನ ಚಿಂತನಾ ವಿಧಾನ ಹಾಗೂ ತಾತ್ವಿಕ ವಿಚಾರಗಳಿಗೆ 'ಲೋಕ ವಿಮರ್ಶೆ' ಕನ್ನಡಿ ಹಿಡಿಯುತ್ತದೆ.

ಸಾಹಿತ್ಯ ವಿಮರ್ಶೆ, ಆತನಕ ಬೆಳೆದುಬಂದ ಸಾಹಿತ್ಯ ಕಲಾ ಮೀಮಾಂಸೆ ಸಾಹಿತ್ಯ ಕೃತಿಗಳ ಒಟ್ಟು ಪರಂಪರೆಯನ್ನು ಗಮನಿಸಬೇಕಾದ ಜವಾಬ್ದಾರಿ ಹೊಂದಿರುತ್ತದೆ. ವೈಚಾರಿಕ ಲೇಖನಗಳಿಗೆ ಮೀಮಾಂಸೆಗಿಂತ ಹೆಚ್ಚು ಸಿದ್ಧಾಂತಗಳ ಕಟ್ಟುಪಾಡುಗಳು ಕಾಡುತ್ತವೆ. ಇವೆರಡಕ್ಕೂ ಸಮಾನವಾದ ಅಂಶವೆಂದರೆ ವಿಶ್ಲೇಷಣಾ ವಿಧಾನಗಳು. ಚೆನ್ನಿಯವರು ಸಾಹಿತ್ಯ ವಿಮರ್ಶೆಯಿಂದ ಪಡೆದ ವಿಶ್ಲೇಷಣಾ ವಿಧಾನಗಳನ್ನು ಸಾಮಾಜಿಕ, ವೈಚಾರಿಕ ಬರಹಗಳಲ್ಲೂ ಬಳಸಿಕೊಳ್ಳುತ್ತಾರೆ. ಹೀಗಾಗಿ ಅವರು 'ಲೋಕ ವಿಮರ್ಶೆ'ಯಲ್ಲಿ ಸಾಮಾಜಿಕ ವಿವರಗಳನ್ನು ಪುರಾವೆಗಳ ರೂಪದಲ್ಲಿ ದಾಖಲಿಸಿ ವೈಚಾರಿಕತೆಯನ್ನು ಪ್ರತಿಪಾದಿಸುತ್ತಾರೆ. ಅದರಿಂದಾಗಿ ಅವರು ಎಡಪಂಥೀಯ ಚಿಂತನೆಯ ನೆಲೆಗಳಿಂದ ಹೊರಟಾಗಲೂ ಅದೊಂದು ಸಿದ್ಧಾಂತದ ನಿಲುವು ಆಗುವುದಿಲ್ಲ. ಬದಲಾಗಿ ಅವರ ವಿಶ್ಲೇಷಣೆಗಳು ಅದನ್ನೊಂದು ಉದಾರ ಮಾನವೀಯ ನೆಲೆಯಲ್ಲಿ ಪ್ರತಿಪಾದಿಸುತ್ತವೆ.

ಬಹುತ್ವದ ಪರವಾದ ವಿಶ್ಲೇಷಣೆಗಳು ಅವರು ನೀಡುವ ಪುರಾವೆಗಳ ಮೂಲಕ ಪ್ರಜಾಪ್ರಭುತ್ವದ ಮೂಲಚಿಂತನೆಯಾಗಿ ಪರಿವರ್ತಿತವಾಗುತ್ತವೆ. ಹೀಗಾದಾಗ ಅದು ಧಾರ್ಮಿಕ ಅಥವಾ ಯಾವುದೇ ಒಂದು ಪಂಥೀಯ ನಿಲುವನ್ನು ಮೀರಿ ಪ್ರಜಾಪ್ರಭುತ್ವದ ನೆಲೆಗಳನ್ನು ಅವರ ಒಳನೋಟಗಳಿಂದ ಕಾಣಿಸಲು ನೆರವಾಗುತ್ತದೆ. ಅದರ ಮೂಲದಲ್ಲಿ ಕೆಲಸ ಮಾಡುವುದು ಅವರು ಸಾಹಿತ್ಯ ವಿಮರ್ಶೆಯಿಂದ ಪಡೆದ ಮೂಲ ಸತ್ವವೇ ಆಗಿದೆ.

'ದೇಶಭಕ್ತ ಪದದ ಸ್ತ್ರೀವಾಚಕ ಪದವಿಲ್ಲವೇ?' ಲೇಖನ ಪ್ರಾರಂಭವಾಗುವುದು ಮಲಯಾಳಂ ಲೇಖಕಿ ಸಾರಾ ಜೋಸೆಫ್ ಕತೆಯ ಮೂಲಕ. ಕನ್ನಿಕೆ ಪದದ ಪುರುಷ ವಾಚಕದ ಚರ್ಚೆಯಿಂದ. ಲೈಂಗಿಕ ಪರಿಶುದ್ಧತೆ ಸ್ತ್ರೀಯರಿಗೆ ಮಾತ್ರ ಅನ್ವಯಿಸುತ್ತದೆ ಎಂಬ ನಮ್ಮ ಪುರುಷ ಪ್ರಧಾನ ಸಾಮಾಜಿಕ ವ್ಯವಸ್ಥೆಯ ಹಿನ್ನೆಲೆಯಲ್ಲಿ ನಮ್ಮ ಗಡಿಗಳಲ್ಲಿ ಹುತಾತ್ಮರಾದ ಸೈನಿಕರು 'ದೇಶಭಕ್ತ'ರಾದರೆ ಅವರ ಪತ್ನಿಯರು ದೇಶಭಕ್ತೆಯರಾಗಬೇಕಲ್ಲವೇ ಎಂದು ಚರ್ಚೆ ಪ್ರಾರಂಭವಾಗುತ್ತದೆ.

ಹುತಾತ್ಮ ಸೈನಿಕ ಬಬ್ಲು ಸಂತ್ರಾನ ಪತ್ನಿ ಮಿತಾ ಸಂತ್ರಾ ತನ್ನ ಪತಿಯನ್ನು ಕಳೆದುಕೊಂಡಾಗಲೂ ಭಾರತ–ಪಾಕಿಸ್ತಾನಗಳ ನಡುವೆ ಯುದ್ಧ ಬೇಡ, ಶಾಂತಿ ಇರಲಿ ಎಂದು ಹೇಳಿದ ಮಾತು ಆಕೆ ದೇಶದ್ರೋಹಿ ಎಂದು ಯಾಕೆ ಟ್ರೋಲ್ ಆಯಿತು ಎಂಬ ಪ್ರಶ್ನೆಯಂತಹ ಹಲವು ಪುರಾವೆಗಳ ಸಹಿತ ವಿಚಾರ ಮಂಥನ ಮಾಡುತ್ತದೆ. ಲೇಖನದ ಇರಿಯುವ ವ್ಯಂಗ್ಯ, ಸೈನಿಕರ ತ್ಯಾಗವನ್ನು ಚುನಾವಣಾ ರಾಜಕೀಯಕ್ಕೆ ಬಳಸುವ ಚಿಂತನಾ ವಿರೋಧಿ, ಭಾವೋದ್ರೇಕ ಪ್ರವೃತ್ತಿಯನ್ನು ವಿಶ್ಲೇಷಿಸುತ್ತದೆ.

ಟಾಲ್‌ಸ್ಟಾಯ್ ಅವರ 'ಯುದ್ಧ ಮತ್ತು ಶಾಂತಿ'ಯಂತಹ ಕಾದಂಬರಿಯನ್ನು ವಿಮರ್ಶಾತ್ಮಕವಾಗಿ ಜೀರ್ಣಿಸಿಕೊಳ್ಳದ ಮನಸ್ಸೊಂದು ಇಂಥ ಲೇಖನ ಬರೆಯುವುದು ಸಾಧ್ಯವಿಲ್ಲ. ಅದೇ ರೀತಿ ದ್ರೌಪದಿ ಮತ್ತು ಎಬಿವಿಪಿ ದೇಶಭಕ್ತಿ, ಹಿಂಸೆಯ ವ್ಯಾಖ್ಯಾನಗಳು, ಪ್ರತಿಮಾ ರಾಜಕೀಯ, ಪದ್ಮಾವತಿ ಪ್ರಸಂಗ, ನಮ್ಮ ಬಿಕ್ಕಟ್ಟುಗಳು... ಹೀಗೆ ಹಲವು ಲೇಖನಗಳನ್ನು ಉದಾಹರಿಸಬಹುದು.

ಕುವೆಂಪು, ಕಾರಂತ, ಷ. ಶೆಟ್ಟರ, ಕಾರ್ನಾಡ, ರಾಮಾನುಜಂ, ಬೆಸಗರಹಳ್ಳಿ, ಲಂಕೇಶ್, ತೇಜಸ್ವಿ, ಮೂಡ್ನಾಕೂಡು, ಮೊಗಳ್ಳಿ, ಕನಕರಾಜ್, ಬಸವರಾಜ ಸಬರದ, ಎಚ್.ಎಸ್. ರಾಘವೇಂದ್ರರಾವ್ ಹೀಗೆ ಹಲವು ಕನ್ನಡ ಲೇಖಕರ ಬಗ್ಗೆ ಬರೆದ ಸಾಂದರ್ಭಿಕ ಲೇಖನಗಳು ಇಲ್ಲಿವೆ. ಅಮಿತಾವ್ ಘೋಷ್, ಬ್ರೆಕ್ಟ್, ಎರಿಕ್ ಪ್ರಾಮ್, ಆರ್ವೆಲ್, ವಿಲ್ ಡ್ಯುರಾಂಟ್, ಟಾಲ್‌ಸ್ಟಾಯ್, ಶೇಕ್ಸ್‌ಪಿಯರ್, ವಿಕ್ಟರ್ ಹ್ಯೂಗೊ (ಪ್ಯಾರಿಸ್‌ನ ನೊತ್ರೊದಾಮ್ ಚರ್ಚ್‌ನ ಬೆಂಕಿ ಅವಘಡದ ಸಂದರ್ಭ) ಮೊದಲಾದ ಪಾಶ್ಚಿಮಾತ್ಯ ಲೇಖಕರ ಕುರಿತೂ ಸಾಂದರ್ಭಿಕ ಬರಹಗಳಿವೆ. ಗಾಂಧಿ, ಅಂಬೇಡ್ಕರ್, ದಲಿತ ರಾಜಕೀಯ ಮೊದಲಾದ ನೇರ ರಾಜಕೀಯ ಚಿಂತನಾ ಬರಹಗಳೂ ಇವೆ. ಇಲ್ಲಿನ ಬರಹಗಳಲ್ಲಿ ಸಮಾಜ ಮತ್ತು ಸಾಹಿತ್ಯಗಳ ನಡುವೆ ಅವಿನಾಭಾವ ಸಂಬಂಧವಿದೆ. ಅವು ಪ್ರತ್ಯೇಕ ಕಕ್ಷೆಯಲ್ಲಿ ಇರುವ ವಿಚಾರಗಳಲ್ಲ. ಪ್ರತ್ಯಕ್ಷ ಅಥವಾ ಪರೋಕ್ಷ ರಾಜಕೀಯ ನಿಲುವುಗಳಿಲ್ಲದ ಸಾಹಿತ್ಯ ಅಥವಾ ಸಾಮಾಜಿಕ ಚಿಂತನೆ ಇಂದು ಸಾಧ್ಯವಿಲ್ಲ ಎಂಬ ತಾತ್ವಿಕತೆಯಿಂದ ಇಲ್ಲಿನ ಲೇಖನಗಳು ಮೂಡಿಬಂದಿವೆ.


ಚೆನ್ನಿಯವರ ಸಾಹಿತ್ಯ ವಿಮರ್ಶೆಯ ಸಂಪೂರ್ಣ ಸತ್ವ ಹಾಗೂ ಒಳನೋಟಗಳು 'ಪ್ರಾಚೀನ ಕನ್ನಡ ಸಾಹಿತ್ಯದ ಅಂತರ್ ಶಿಸ್ತೀಯ ಅಧ್ಯಯನ'ದಂತಹ ಬರಹಗಳಲ್ಲಿ ಗೋಚರಿಸುತ್ತವೆ. ಅಸಂಗ್ರಹ, ಅಪರಿಗ್ರಹ, ಅಹಿಂಸೆ, ಸನ್ಯಾಸ ಇಂಥ ಮೌಲ್ಯಗಳನ್ನು ಹೊಂದಿದ ಜೈನ ಧರ್ಮವು ನಿರಂತರ ಕಾಳಗಗಳ ಅಂದಿನ ಕನ್ನಡ ನಾಡಿನ ಚರಿತ್ರೆಯಲ್ಲಿ ವಹಿಸಿದ ಪಾತ್ರವೇನು ಎಂಬ ಪ್ರಶ್ನೆಯನ್ನು ಪಂಪ ಮೊದಲಾದ ಕವಿಗಳ ಹಿನ್ನೆಲೆಯಲ್ಲಿ ಚೆನ್ನಿ ಕೇಳುತ್ತಾರೆ. ವಿಮರ್ಶೆ ಕೇಳುವ ಪ್ರಶ್ನೆಗಳು ವಿಶ್ಲೇಷಣೆ ತಲುಪಬಹುದಾದ ಎತ್ತರವನ್ನೂ ಸೂಚಿಸುತ್ತವೆ.

ಸಮಕಾಲೀನ ಬರಹಗಾರರ ಬಗ್ಗೆ ಬರೆಯುವಾಗ ಕೆಲವೊಮ್ಮೆ ಚೆನ್ನಿ ಉದಾರವಾಗಿರುತ್ತಾರೆ. ಎಚ್.ಎಸ್.ಆರ್ ಅವರು ಮಹಿಳಾ ಸಾಹಿತ್ಯ ವಿಮರ್ಶೆಗೆ ನೀಡಿದ ಕೊಡುಗೆ ಬಗ್ಗೆ ಅವರು ಬರೆದುದು ಅದಕ್ಕೊಂದು ನಿದರ್ಶನ. ಚೆನ್ನಿಯವರ ವಿಮರ್ಶಾ ಕೃತಿಗಳನ್ನು ಒಟ್ಟಾಗಿ ಗ್ರಹಿಸಿದಾಗ ಪಾಶ್ಚಿಮಾತ್ಯ ಸಾಹಿತ್ಯ ಸಿದ್ಧಾಂತಗಳನ್ನು ಅರಗಿಸಿಕೊಂಡ ಪ್ರತಿಭೆ ಕನ್ನಡ ಸಾಹಿತ್ಯ ಚಿಂತನೆಯನ್ನು ಪುನರ್‌ರೂಪಿಸುತ್ತಿರುವುದು ಗೋಚರಿಸುತ್ತದೆ. ನಮ್ಮ ಸಂಸ್ಕೃತಿ ವಿಮರ್ಶೆ– ಚಿಂತನೆಗಳಿಗೂ ಪಾಠಗಳು ಅಗತ್ಯ ಎಂಬುದನ್ನು ಅವರ ವಿಮರ್ಶೆ ಪ್ರತಿಪಾದಿಸುತ್ತಾ ಬಂದಿದೆ. ಅವರು ಆಶಯ ವಿಮರ್ಶೆಯನ್ನು ಪಠ್ಯಗಳ ಚೌಕಟ್ಟಿನೊಳಗೇ ಹೇಳಲು ಪ್ರಯತ್ನಿಸುವವರು. ಲೋಕ ವಿಮರ್ಶೆ ಸಂಗ್ರಹದಲ್ಲಿ ಚೆನ್ನಿಯವರು ಆದರ್ಶವನ್ನು ಪುನರ್ ವ್ಯಾಖ್ಯಾನಿಸುವ; ಸಾಮಾಜಿಕ ಚಿಂತನೆಯನ್ನು ವೈಚಾರಿಕ ಚೌಕಟ್ಟಿನೊಳಗೆ ಪುರಾವೆಸಹಿತ ಪ್ರತಿಪಾದಿಸುವ ವಿಮರ್ಶಾ ಸಂಯಮದಿಂದಲೇ ಬರೆದಿದ್ದಾರೆ. ❖

ಸೊನ್ನೆಯಷ್ಟೇ ಅಲ್ಲ...

ಮಹತಿ

ಒಳನೋಟ



ಜೀರೋ ಬ್ಯಾಲೆನ್ಸ್
ಲೇ: ಶ್ರುತಿ ಬಿ.ಆರ್.
ಪ್ರ: ಅರ್ಣವ ಸೂರ್ಯ ಪ್ರಕಾಶನ, ಬೆಂಗಳೂರು – 560040.
ಮೊ: 90353 79923.
ಪು: 88 ₹100

'ಜೀರೋ ಬ್ಯಾಲೆನ್ಸ್' ಶ್ರುತಿ ಬಿ.ಆರ್. ಅವರ ಚೊಚ್ಚಿಲ ಕವನಸಂಕಲನ. ಸೊನ್ನೆ ಎನ್ನುವುದನ್ನು ಪರಿಪೂರ್ಣ ಎನ್ನುವ ಅರ್ಥದಲ್ಲಿ ಯೋಚಿಸುವುದಾದರೆ, ಶೀರ್ಷಿಕೆಯಲ್ಲಿನ 'ಜೀರೊ' ಸಮೃದ್ಧ ಬ್ಯಾಲೆನ್ಸ್ ಅನ್ನೇ ಸೂಚಿಸುವಂತಿದೆ. ಗಮನಸೆಳೆಯುವ ಈ ಬ್ಯಾಲೆನ್ಸ್, ಕವಯತ್ರಿಯ ಕಾವ್ಯದ ಬಗೆಗಿನ ತುಡಿತ ಹಾಗೂ ಅದರ ಫಲಶ್ರುತಿ ಎರಡಕ್ಕೂ ಸಂಬಂಧಿಸಿದ್ದು.

ಶ್ರುತಿ ಅವರಿಗೆ ತಾವು ಬರೆಯುತ್ತಿರುವುದರ ಬಗ್ಗೆ ಸ್ಪಷ್ಟತೆಯಿದೆ. ಹೆಣ್ಣಿನ ಬಗೆಗಿನ ಸಮಾಜದ ರೂಢಿಗತ ಗ್ರಹಿಕೆಗಳನ್ನು ನಿರಾಕರಿಸುತ್ತ, ಈ ಕಾಲದ ಹೆಣ್ಣಿನ ಅಸ್ಮಿತೆಯನ್ನು ಮನಗಾಣಿಸುವುದು ಅವರ ಬಹುತೇಕ ಕವಿತೆಗಳ ತುಡಿತವಾಗಿದೆ. ಹೆಣ್ಣಿನ ಅನನ್ಯತೆಯನ್ನು ಎತ್ತಿಹಿಡಿಯುವ ಪ್ರಯತ್ನದಲ್ಲಿ ಗಂಡನ್ನು ಪ್ರತಿವಾದಿ ಆಗಿಸಿಕೊಳ್ಳದೆ, ಗಂಡು–ಹೆಣ್ಣು ಪರಸ್ಪರ ಅಧೀನರಲ್ಲ; ಸಮಾನರು ಎನ್ನುವ ಆರೋಗ್ಯಕರ ನಿಲುವನ್ನು ಕವಯಿತ್ರಿ ಮುಂದಿರಿಸುತ್ತಾರೆ.

'ಜೀರೋ ಬ್ಯಾಲೆನ್ಸ್' ಸಂಕಲನ ಚಿತ್ರಿಸುತ್ತಿರುವ ಹೆಣ್ಣಿನ ಸ್ವರೂಪ ಯಾವ ಬಗೆಯದ್ದು? ಅದಕ್ಕೆ ಉತ್ತರವಾಗಿ, 'ಕ್ಷಮಿಸಿ, ನಾನು ಅಂತವಳಲ್ಲ' ಕವಿತೆಯಲ್ಲಿನ – ಕರೆದಾಗಲೆಲ್ಲ ಬರುವ, ಬೇಡವೆಂದಾಗ ಕಾಯುವ, ಗಂಡಿನ ಸೇವೆ ಮಾಡುವ, ಇಂಥ ಲೋಕಗ್ರಹೀತ ಹೆಣ್ಣು ನಾನಲ್ಲ ಎನ್ನುವ ಚಿತ್ರಣವನ್ನು ಗಮನಿಸಬಹುದು. ಹಾಗಾದರೆ, ಆ ಹೆಣ್ಣು ಎಂಥವಳು. 'ನನ್ನದೊಂದಿಷ್ಟು ಬಾಯಿ ಮುಂದು / ಇದ್ದಿದ್ದ ಇದ್ದಂತೆ ವದರಿ / ಬಜಾರಿ ಎನಿಸಿಕೊಂಡಿದ್ದರೂ / ನನ್ನತನವೆಂಬುದ ಜೋಪಾನವಾಗಿ / ಕಾಪಿಡುವವಳು!'

ಶ್ರುತಿ ಅವರು ಈ ಹೊತ್ತಿನ ಹೆಣ್ಣಿನ ಬಗ್ಗೆ ಮಾತನಾಡುತ್ತಿದ್ದರೂ, ಅವರ ಮಾತುಗಳ ಹಿಂದೆ ಪುರಾಣ ಚರಿತ್ರೆಯ ಸ್ತ್ರೀಪರಂಪರೆಯಿದೆ. ಪುರಾಣ ಕಥನಗಳನ್ನು ಮುರಿದು ಕಟ್ಟಬೇಕಾದ ಅಗತ್ಯದ ಬಗ್ಗೆ ಅವರ ಕಾಳಜಿ. ಪುರಾಣದ ಅಹಲ್ಯೆ, ಸೀತೆ, ರಾಧೆ, ಇವರೆಲ್ಲರೂ ಸೂತ್ರದ ಗೊಂಬೆಗಳಂತಹವರು. ಆಯ್ಕೆಗಳಿಲ್ಲದವರು. ಆದರೆ, ಈ ಹೊತ್ತಿನ ಹೆಣ್ಣಿಗೆ ಆಯ್ಕೆಗಳಿವೆ ಎನ್ನುವುದನ್ನು ಕವಯಿತ್ರಿ ಒತ್ತಿಹೇಳುತ್ತಾರೆ. ಹೀಗೆ ಹೇಳುವಾಗ ಹೆಣ್ಣನ್ನು ನಡೆಸಿಕೊಳ್ಳುವ ಸಮಾಜದ ನಡವಳಿಕೆಯಲ್ಲಿ ಯಾವ ಬದಲಾವಣೆಯೂ ಆಗಿಲ್ಲದಿರುವುದನ್ನು ಅವರು ಗುರ್ತಿಸುತ್ತಾರೆ. 'ಮೆಸೇಜಲ್ಲಿ ಮೈ ಸವರುವ / ಆನ್‌ಲೈನ್‌ನಲ್ಲಿ ಸ್ಖಲಿಸುವ ಇಂದ್ರರು' ಈಗಲೂ ಇದ್ದು, 'ಇವರನ್ನು ಕಂಡು ಕಲ್ಲಾಗುವ ಬಯಕೆ' ಎನ್ನುತ್ತದೆ 'ಭೇಟಿಯಾಗಿದ್ದರು... ಆ ಹುಡುಗಿಯರು...' ಕವಿತೆ. ಇಂದ್ರರು ಇದ್ದಾರೆ ಎನ್ನುವ ಮೂಲಕ ಹೆಣ್ಣಿನ ಪರಿಸ್ಥಿತಿ ಬದಲಾಗಿಲ್ಲದಿರುವುದನ್ನು ಸೂಚಿಸುವ ಕವಯಿತ್ರಿ, 'ಈಗ ಕಲ್ಲಾಗುವುದು ಕೂಡ ಹೆಣ್ಣಿನ ಆಯ್ಕೆ' ಎನ್ನುವ ಮೂಲಕ ಪರಿಸ್ಥಿತಿಯಲ್ಲಿ ಆಗಿರುವ ಬದಲಾವಣೆಯನ್ನು ಕಾಣಿಸುತ್ತಾರೆ. ಈ ಕಲ್ಲಾಗುವ ಪ್ರಕ್ರಿಯೆ ಜಡವಾಗುವ ಪ್ರಕ್ರಿಯೆ ಮಾತ್ರವಲ್ಲ, ದುರುಳರ ಪಾಲಿಗೆ ಪಾಷಾಣವಾಗುವುದೂ ಹೌದು.

'ಕೇಳಿ ಕೇಳಿ ಕೇಳಿರಿಲ್ಲಿ / ಮಣ್ಣು ಮುಚ್ಚಿದವರೇ / ಸಮಾಧಿ ಕಟ್ಟಿದವರೇ / ನನ್ನೊಲವು ನಶಿಸಿಲ್ಲ / ಮಣ್ಣು ಕಲ್ಲುಗಳ ಸೀಳಿ/ ಹಸುರಾಗಿ ಬಂದಿದೆ' ('ವಿಷಕಂಠ ಸ್ವರೂಪ') ಎನ್ನುವ ಸಾಲುಗಳು ಹೇಳುವುದೂ ಈ ಹೊತ್ತಿನ ಹೆಣ್ಣಿನ ಚಿಂತನೆಯಲ್ಲಿನ ಬದಲಾವಣೆಯನ್ನು ಹಾಗೂ ಚಿವುಟಿದಷ್ಟೂ ಚಿಗುರುವ ಹೆಣ್ಣಿನ ಅದಮ್ಯ ಶಕ್ತಿಯನ್ನು.

'ಅಕ್ಕನ ಮೊಹೆಂಜೊದಾರೊ' ಸಂಕಲನದ ಉತ್ತಮ ಕವಿತೆಗಳಲ್ಲೊಂದು. ಅಕ್ಕ–ತಂಗಿಯ ಮಾತುಕತೆಯ ಮೂಲಕ ತೆರೆದುಕೊಳ್ಳುವ ಕವಿತೆಯಲ್ಲಿ, ಮೊಹೆಂಜೊದಾರೊದ ವೈಭವದ ಬಗ್ಗೆ ತಂಗಿ ಭಾವುಕತೆಯಿಂದ ಮಾತನಾಡುತ್ತಾಳೆ. ಅಕ್ಕನದು ಮಾರ್ಮಿಕ ಪ್ರತಿಕ್ರಿಯೆ: 'ಹೆಂಗಸರು ಹೇಗಿದ್ದರಂತೆ? ಏನು ಮಾಡುತ್ತಿದ್ದರಂತೆ?'. ನಿಟ್ಟುಸಿರೇ ಮೈದಾಳಿದಂತಹ ಈ ಪ್ರಶ್ನೆಗಳಲ್ಲೇ ಉತ್ತರವೂ ಇದೆ. ಪುರಾಣವಷ್ಟೇ ಅಲ್ಲ, ಚರಿತ್ರೆಯ ಪಠ್ಯಗಳಿಗೂ ಹೆಣ್ಣಿನ ಬಗ್ಗೆ ಕಡೆಗಣ್ಣು. ಪುರಾಣ, ಚರಿತ್ರೆ ಹಾಗೂ ವರ್ತಮಾನದ ತರತಮಗಳ ಬಗ್ಗೆ ಮಾತನಾಡುವ 'ಜೀರೋ ಬ್ಯಾಲೆನ್ಸ್' ಕವಿತೆಗಳು, ಯಾರನ್ನೂ ಪ್ರತಿವಾದಿಯ ಸ್ಥಾನದಲ್ಲಿ ನಿಲ್ಲಿಸುವುದಿಲ್ಲ. 'ನಿನ್ನ ಮೂಗಿನ ನೇರಕ್ಕೆ ನಿನ್ನದೇ ತಕ್ಕಡಿ / ನನ್ನ ಮೂಗಿನ ನೇರಕ್ಕೆ ನನ್ನದೇ ತಕ್ಕಡಿ' ('ಅಂತರ') ಎನ್ನುವ ಸಾಲುಗಳು, ತಪ್ಪು ಒಪ್ಪುಗಳ ತೂಗುಯ್ಯಾಲೆಗೆ ಒಬ್ಬರನ್ನೇ ಹೊಣೆಯಾಗಿಸುವುದಿಲ್ಲ. ಈ ಅರಿವು, ಪ್ರಾಂಜಲ ಮನೋಭಾವ ಹಾಗೂ ವಿಮರ್ಶೆಯ ಪ್ರಜ್ಞೆ, ಸಂಕಲನದ ಕವಿತೆಗಳ ಹೊಳಪು ಹೆಚ್ಚಲು ಕಾರಣವಾಗಿವೆ.

ಹೆಣ್ಣಿನ ತವಕತಲ್ಲಣಗಳ ಹೊರತಾದ ಸಂಗತಿಗಳ ಕವಿತೆಗಳೂ ಸಂಕಲನದಲ್ಲಿವೆ. ಬಾಲ್ಕನಿಯಲ್ಲಿನ ಪ್ರಕೃತಿಯ ಮಿನಿಯೇಚರು ('ಪ್ರತಿಕೃತಿ') ಧ್ವನಿಸುವ ನಗರದ ಜಡತೆ ಹಾಗೂ ಪರಿಸರ ನಾಶದ ಕುರಿತಾದ ವಿಷಾದ, ಪಾದಗಳ ಮೂಲಕ ಮನುಷ್ಯ ಭಾವಲೋಕವನ್ನು ಚಿತ್ರಿಸುವ ಹಂಬಲ ('ಒಂದು ಜೊತೆ ಪಾದ'), 'ಬಾಬಾ ಸಾಹೇಬರು ನೆಟ್ಟ ಮರ'ದ ತಂಪು ನೆಳಲು, 'ಒಳ್ಳೆಯವರಾಗುವುದೆಂದರೆ' ಎನ್ನುವ ಜಿಜ್ಞಾಸೆ – ಹೀಗೆ ಹಲವು ಭಾವ-ಬಣ್ಣಗಳು ಸಂಕಲನದಲ್ಲಿ ಇಣುಕುತ್ತವೆ.

'ಜೀರೋ ಬ್ಯಾಲೆನ್ಸ್' ಎನ್ನುವುದು ನಮ್ಮ ಸಮಾಜ ಹೆಣ್ಣನ್ನು ನಡೆಸಿಕೊಂಡಿರುವ ರೀತಿಗೆ ರೂಪಕವೂ ಹೌದು. ಆ ಬ್ಯಾಲೆನ್ಸ್ ಅನ್ನು ತುಂಬುವ ಹುಮ್ಮಸ್ಸಿನಲ್ಲಿ ರೂಪುಗೊಳ್ಳುತ್ತಿರುವ ಮಹಿಳಾಕಾವ್ಯದ ಹೊಸ ಧ್ವನಿಯಾಗಿ ಶ್ರುತಿ ಅವರ ಸಂಕಲನ ಕಾಣಿಸುತ್ತದೆ. ಇದು ಹೊಸ ಧ್ವನಿಯಷ್ಟೇ ಅಲ್ಲ; ಶಕ್ತವಾದುದೂ ಹೌದು, ಆತ್ಮವಿಶ್ವಾಸದಿಂದ ಕೂಡಿರುವಂತಹದ್ದೂ ಹೌದು. ಈ ಧ್ವನಿಗೆ ಈಗ ಬೇಕಾಗಿರುವುದು ತಾನು ಹೇಳುವುದನ್ನು ಸಹೃದಯರು ನಂಬುತ್ತಾರೆ, ಸ್ವಾಗತಿಸುತ್ತಾರೆ ಎನ್ನುವ ನಂಬಿಕೆ. ಆ ನಂಬಿಕೆ ಸಿದ್ಧಿಸಿದಾಗ, ಕವಿತೆ ಇನ್ನಷ್ಟು ಧ್ವನಿಪೂರ್ಣವಾಗುತ್ತದೆ, ಅನಗತ್ಯ ಹೊರೆಗಳನ್ನು ಕಳೆದುಕೊಂಡು ನಳನಳಿಸುತ್ತದೆ.

ಇತ್ತೀಚಿನ ದಿನಗಳಲ್ಲಿ ಅತ್ಯಂತ ಸುಂದರವಾಗಿ ಪ್ರಕಟಗೊಂಡ ಕೃತಿಗಳಲ್ಲಿ 'ಜೀರೋ ಬ್ಯಾಲೆನ್ಸ್' ಕೂಡ ಒಂದು ಎನ್ನುವುದನ್ನು ಹೇಳುತ್ತಲೇ, ಅಲ್ಲೊಂದು ಇಲ್ಲೊಂದು ಉಳಿದುಕೊಂಡಿರುವ ಅಕ್ಷರದೋಷಗಳು ರಸಾಸ್ವಾದಕ್ಕೆ ತೊಡಕುಂಟು ಮಾಡುವುದನ್ನೂ ಹೇಳಬೇಕು. ❖

ನ್ಯಾಯದ ಹಾದಿ ಇನ್ನೂ ದೂರ

10ನೇ ಪುಟದಿಂದ...

ನಟ ಅಲೋಕ್‌ನಾಥ್ ಮೇಲೆ ಸಿನಿಮಾ ನಿರ್ಮಾತೃ ವಿನಿತಾ ನಂದಾ ದಾಖಲಿಸಿದ್ದ ಪ್ರಕರಣವು (ವಿನಿತಾ ನಂದಾ ಮಾತನಾಡಿದ ನಂತರ ಇನ್ನೂ ಕೆಲವು ನಟಿಯರು ಅಲೋಕ್ ನಾಥ್‌ರಿಂದ ಕಿರುಕುಳಕ್ಕೊಳಗಾಗಿದ್ದ ಬಗ್ಗೆ ಹೇಳಿಕೊಂಡರು) ಪೊಲೀಸ್ ಕಡತದಲ್ಲಿ ಮುಚ್ಚುವ ಹಂತಕ್ಕೆ ಬಂದಿದ್ದು ಮಾತ್ರವಲ್ಲ, ಆ ನಂತರ ಅದೇ ನಟ 'ಮೈಂ ಭೀ' (ಮೀ ಟೂ) ಎಂಬ ಹೆಸರಿನ ಸಿನಿಮಾವೊಂದರಲ್ಲಿ ನ್ಯಾಯಾಧೀಶರ ಪಾತ್ರದಲ್ಲಿ ನಟಿಸಿದ್ದೂ ಆಯಿತು.

ನಟ ನಾನಾ ಪಾಟೇಕರ್ ಮೇಲೆ ತನುಶ್ರೀ ದತ್ತಾ ದಾಖಲಿಸಿದ್ದ ಪ್ರಕರಣವೂ 'ಸಾಕ್ಷ್ಯಾಧಾರಗಳ ಕೊರತೆ'ಯ ಕಾರಣದೊಂದಿಗೆ ಮುಚ್ಚಲ್ಪಟ್ಟಿತು. ಬ್ರ್ಯಾಂಡಿಂಗ್ ಸಲಹೆಗಾರ ಸುಹೇಲ್‌ಸೇಥ್ ಮೇಲೆ ಕನಿಷ್ಠ 6 ಮಂದಿ ಮಹಿಳೆಯರು ಕಿರುಕುಳದ ಆರೋಪ ಮಾಡಿದರು. ಅದಾದ ಸ್ವಲ್ಪ ಕಾಲದ ನಂತರ 'ಇಂಕ್‌ಪಾಟ್ ಇಂಡಿಯಾ ಕಾನ್‌ಕ್ಲೇವ್' ಸಂಸ್ಥೆಯು ತಮ್ಮ ಕಾರ್ಯಕ್ರಮವೊಂದರಲ್ಲಿ ಶಶಿ ತರೂರ್, ಕರಣ್ ಸಿಂಗ್ ಮೊದಲಾದ ಖ್ಯಾತನಾಮರ ಜೊತೆಯಲ್ಲಿ 'ಲಿಟರರಿ ಟಾರ್ಚ್ ಬೇರರ್' ಎಂಬ ಬಿರುದನ್ನು ಕೊಟ್ಟು ಮಾತನಾಡಲು ಆಹ್ವಾನಿಸಿತು. ಆ ಬಗ್ಗೆ ಅನೇಕ ಮಹಿಳೆಯರು ದನಿಯೆತ್ತಿದ ಮೇಲೆ 'ಪ್ರಯಾಣ ಮತ್ತು ತಂದೆಯಾಗುವ ಜವಾಬ್ದಾರಿಯ ಕಾರಣಕ್ಕೆ ಸುಹೇಲ್‌ಸೇಥ್ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವುದಿಲ್ಲ' ಎಂದು ಸಂಘಟಕರು ಘೋಷಿಸಿದರು.

ಲೈಂಗಿಕ ಕಿರುಕುಳದ ಆರೋಪ ಎದುರಿಸಿದ್ದ ಸುಭಾಷ್ ಕಪೂರ್ ಸಿನಿಮಾಗೆ ವಾಪಾಸ್ ಹೋದ ಬಗ್ಗೆ ಅಮೀರ್ ಖಾನ್‌ರವರು 'ಇಂತಹ ಆರೋಪದ ಕಾರಣಕ್ಕೆ ಪುರುಷನೊಬ್ಬನ ಹೊಟ್ಟೆಪಾಡನ್ನು ಕಸಿದುಕೊಳ್ಳುವುದು ನ್ಯಾಯವಲ್ಲ ಎನಿಸಿ ಸಿನಿಮಾಗೆ ವಾಪಸ್ ಬಂದೆ' ಎಂದು ಸಮರ್ಥಿಸಿಕೊಂಡರು.

ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಾಧೀಶರಾಗಿದ್ದ ರಂಜನ್ ಗೊಗೊಯ್ ಅವರ ಮೇಲೆ ಸಹೋದ್ಯೋಗಿಯೊಬ್ಬರು ದಾಖಲಿಸಿದ್ದ ಲೈಂಗಿಕ ಕಿರುಕುಳದ ಪ್ರಕರಣವನ್ನು ಈಚೆಗೆ ಸುಪ್ರೀಂ ಕೋರ್ಟ್ ವಜಾಗೊಳಿಸಿತು. ಇದರಲ್ಲಿ ನಡೆದ ಆಂತರಿಕ ಸಮಿತಿಯ ವಿಚಾರಣೆಯ ಮೇಲೆ ಗಂಭೀರವಾದ ಪ್ರಶ್ನೆಗಳೆದ್ದಿದ್ದವು.

ಬೇರೆ ಯಾವುದೋ ಪ್ರಕರಣ ಯಾಕೆ, ಈಗ ಚರ್ಚೆಯಲ್ಲಿರುವ ಇದೇ ಎಂ.ಜೆ.ಅಕ್ಬರ್ ಅವರ ಮೇಲೆ ರಮಣಿಯವರ ದೂರು ದಾಖಲಾದ ಬೆನ್ನಲ್ಲೇ ಹಿಂದೂಸ್ತಾನ್ ಟೈಮ್ಸ್ ಪತ್ರಿಕೆಯು ಅಕ್ಬರ್ ಅವರ ಅಂಕಣವನ್ನು ಪ್ರಕಟಿಸಲಾರಂಭಿಸಿತು. ಅದಕ್ಕೆ ವಿವರಣೆಯಾಗಿ 'ಈ ಬಗೆಯ ಆರೋಪಗಳಿಗೂ ವ್ಯಕ್ತಿಯೊಬ್ಬರ ಪತ್ರಿಕಾ ಬರಹದ ಸಾಮರ್ಥ್ಯಕ್ಕೂ ಸಂಬಂಧವಿಲ್ಲ' ಎಂದು ಹೇಳಿಕೊಂಡಿತು.

ಹೀಗಾಗಿ ದೆಹಲಿಯ ರೋಸ್ ಅವೆನ್ಯೂ ನ್ಯಾಯಾಲಯದ ಈ ತೀರ್ಪಿಗೆ ಭಾರತದ ಸನ್ನಿವೇಶದಲ್ಲಿ ಅತ್ಯಂತ ಹೆಚ್ಚಿನ ತೂಕವಿದೆ. ಈ ತೀರ್ಪಿಗೆ ಮಹತ್ವ ಬಂದಿರುವುದು ಪ್ರಿಯಾ ರಮಣಿಯವರ ಮೇಲಿನ ಮಾನನಷ್ಟ ಮೊಕದ್ದಮೆಯನ್ನು ವಜಾಗೊಳಿಸಲಾಗಿದೆ ಎಂಬ ಪ್ರಮುಖ ಕಾರಣಕ್ಕೆ ಮಾತ್ರವಲ್ಲ. ನ್ಯಾಯಾಧೀಶರಾದ ರವೀಂದರ್ ಕುಮಾರ್ ಪಾಂಡೆಯವರು ಈ ತೀರ್ಪಿಗೆ ಆಧಾರವೆಂದು ಉಲ್ಲೇಖಿಸಿರುವ ಹಲವು ಅಂಶಗಳ ಕಾರಣಕ್ಕೆ. ಎಲ್ಲಕ್ಕಿಂತ ಮುಖ್ಯವಾಗಿ ಬಹಳ ಸ್ಪಷ್ಟವಾಗಿ, ಯಾವುದೇ ಗೊಂದಲಕ್ಕೆ ಅವಕಾಶವಿಲ್ಲದಂತೆ 'ಮಹಿಳೆಯ ಬದುಕುವ ಹಕ್ಕು ಮತ್ತು ಘನತೆಯನ್ನು ಒತ್ತೆಯಿಟ್ಟು ವ್ಯಕ್ತಿಯೊಬ್ಬರ ಖ್ಯಾತಿಯ ರಕ್ಷಣೆಯ ಹಕ್ಕನ್ನು ಎತ್ತಿಹಿಡಿಯಲು ಸಾಧ್ಯವಿಲ್ಲ' ಎಂದು ತೀರ್ಪು ಹೇಳಿರುವುದು ಕಗ್ಗತ್ತಲಿನ ನಡುವೆ ಬೆಳಕಿನ ರೇಖೆಯಂತೆ ತೋರುತ್ತದೆ.

ಈ ತೀರ್ಪು, 'ಬದುಕುವ ಹಕ್ಕು ಮತ್ತು ವ್ಯಕ್ತಿ ಸ್ವಾತಂತ್ರ್ಯದ ಹಕ್ಕು'ಗಳನ್ನು ಖಾತ್ರಿಪಡಿಸುವ ಸಂವಿಧಾನದ ಆರ್ಟಿಕಲ್ 21ನ್ನು ಉಲ್ಲೇಖಿಸುತ್ತಾ, 'ದೌರ್ಜನ್ಯಕ್ಕೊಳಗಾದ ಮಹಿಳೆಯರು ತಮ್ಮ ಮೇಲಿನ ಹಿಂಸೆಯ ಬಗ್ಗೆ ಯಾವಾಗ ಬೇಕಾದರೂ, ತಮಗೆ ಸರಿಯೆನಿಸುವ ಯಾವುದೇ ಮಾಧ್ಯಮದ ಮೂಲಕ ಬೇಕಾದರೂ ದನಿಯೆತ್ತುವ ಹಕ್ಕನ್ನು ಹೊಂದಿದ್ದಾರೆ' ಎಂದು ಹೇಳಿದೆ. 'ಮೀ ಟೂ' ಆಂದೋಲನದಂತಹ ಪ್ರಯತ್ನಗಳ ಪರಿಣಾಮಗಳೇ ಪ್ರಶ್ನಾರ್ಹವಾಗುವಂತಹ ಸನ್ನಿವೇಶದಲ್ಲಿ ಈ ತೀರ್ಪು ತನ್ನನ್ನು ತಾನು ಸಂವಿಧಾನದ ಗಟ್ಟಿಯಾದ ತಳಹದಿಯ ಮೇಲೆ ಸ್ಥಾಪಿಸಿಕೊಂಡಿರುವುದಕ್ಕೂ ವಿಶೇಷ ಮಹತ್ವವಿದೆ.

ಕೆಲವೊಮ್ಮೆ ಕೆಲವು ವಿಚಾರಗಳು ರೂಢಿಗತ ಚೌಕಟ್ಟಿನ ಗಟ್ಟಿಯಾದ ಚಿಪ್ಪುಗಳನ್ನು ಒಡೆದು ಹೊರಬರಬೇಕಾದರೆ ಬಲವಾದ ಗುದ್ದು ಬೇಕಾಗುತ್ತದೆ. ಆ ರೀತಿಯಲ್ಲಿ ಮೀಟೂ ಅಭಿಯಾನವನ್ನು ಅಂತಹ ಒಂದು ಗಟ್ಟಿಯಾದ ಗುದ್ದು ಎಂದು ಹೇಳಬಹುದು. ಅಭಿಯಾನ ಆರಂಭವಾದಾಗ ಇದರ ಸುತ್ತ ಒಂದು ಬಗೆಯ ಗೊಂದಲಮಯ ವಾತಾವರಣ ಸೃಷ್ಟಿಯಾಗಿದ್ದನ್ನು ನಾವು ಮರೆಯುವಂತಿಲ್ಲ. ಆರೋಪಿಗಳಾದ ಪುರುಷರ 'ಹೊಟ್ಟೆಪಾಡು', 'ಪತ್ರಿಕಾ ಬರಹದ ಸಾಮರ್ಥ್ಯ'ಗಳ ಬಗ್ಗೆಯೇ ಹೆಚ್ಚು ಚಿಂತಿಸುವ ಸಮಾಜ, ಅವರ ಪರವಾಗಿ ವಾದಕ್ಕಿಳಿಯುತ್ತದೆಂಬ ಕಾರಣಕ್ಕೆ ಮಾತ್ರವಲ್ಲ; 'ಇಷ್ಟು ದಿನ ಏನು ಮಾಡುತ್ತಿದ್ದಿರಿ' ಎಂದು ತಿವಿಯುತ್ತಾ, ದನಿಯೆತ್ತಿದ ಹೆಣ್ಣುಮಕ್ಕಳ ಚಾರಿತ್ರ್ಯಹರಣಕ್ಕೆ ಅತ್ಯುತ್ಸಾಹ ತೋರಲಾಗುತ್ತದೆಂಬ ಕಾರಣಕ್ಕಾಗಿ ಮಾತ್ರವೂ ಅಲ್ಲ; ಈ ಎಲ್ಲ ಸತ್ಯಗಳೊಂದಿಗೆ, ಮೀಟೂ ಸಂದರ್ಭದಲ್ಲಿ 'ಮಾತನಾಡುವ ಶಕ್ತಿಯುಳ್ಳ ಮಹಿಳೆಯರು ಒಂದು ಟ್ವೀಟ್ ಮಾಡಿದ ಕೂಡಲೇ ಅಲುಗಾಡುವ ಜಗತ್ತು, ಅಂಚಿಗೊತ್ತಲ್ಪಟ್ಟ ಹೆಣ್ಣುಮಕ್ಕಳ ಪ್ರತಿದಿನದ ಇಂತಹ ಅಳಲುಗಳಿಗೆ ಏಕೆ ಮೌನವಾಗಿಯೇ ಉಳಿಯುತ್ತದೆ' ಎಂಬಂತಹ ಸುಡುವ ಪ್ರಶ್ನೆಗಳೂ ಎದ್ದಿದ್ದವು ಮತ್ತು ಇವುಗಳಿಗೆ ಉತ್ತರಿಸಿಕೊಳ್ಳಲೇಬೇಕಾದ ಅನಿವಾರ್ಯತೆಯಿದೆ ಎಂಬ ಕಾರಣಕ್ಕೆ. ಏಕೆಂದರೆ, ಈ ಪ್ರಶ್ನೆಗಳ ಹಿಂದೆ ಈ ದೇಶದ ವಾಸ್ತವಗಳಿವೆ; ಜಾತಿ, ಧರ್ಮ, ಲಿಂಗಗಳಲ್ಲಿ ಶ್ರೇಣೀಕೃತವಾಗಿರುವ ಸಮಾಜ ಸೃಷ್ಟಿಸಿರುವ ಕ್ರೌರ್ಯ, ಅಸಮಾನತೆ ಮತ್ತು ತಾರತಮ್ಯಗಳಿವೆ.



ಪ್ರಿಯಾ ರಮಣಿ

ರಾಜಸ್ಥಾನದ ಆರೋಗ್ಯ ಸಹಾಯಕಿ ಭಂವರೀದೇವಿ ತನ್ನ ಕರ್ತವ್ಯ ನಿರ್ವಹಿಸಿದ ಕಾರಣಕ್ಕೆ ಮೇಲ್ಜಾತಿ ಬಲಾಢ್ಯರಿಂದ ಸಾಮೂಹಿಕ ಅತ್ಯಾಚಾರಕ್ಕೊಳಗಾದಾಗ, ಆಕೆಯ ಅಪರಾಧಿಗಳಿಗೆ ಅಸಹ್ಯ ಹುಟ್ಟಿಸುವ ವಾದಗಳ ಆಧಾರದಲ್ಲಿ ಜಾಮೀನು ಸಿಕ್ಕಿದ್ದು ಮಾತ್ರವಲ್ಲ, ಅವರು ಹೊರಬಂದ ತಕ್ಷಣ ಅವರನ್ನು ತೆರೆದ ಜೀಪಿನಲ್ಲಿ ಹಾರ ತುರಾಯಿಗಳೊಂದಿಗೆ ಮೆರವಣಿಗೆ ಮಾಡಲಾಗಿತ್ತು. ಖೈರ್ಲಾಂಜಿ, ಬಧಾಯುಂ, ಜಮ್ಮು, ಮಣಿಪುರಗಳು ದನಿಯಿಲ್ಲದ ಸಮುದಾಯಗಳಿಗೆ ಸೇರಿದ ನೊಂದ ಹೆಣ್ಣುಮಕ್ಕಳ ಸುದೀರ್ಘ ಕಥೆಯ ಪುಟಗಳಾಗಿ ಇತಿಹಾಸದಲ್ಲಿ ಹೂತುಹೋಗುತ್ತಿವೆ.

ಇಷ್ಟೆಲ್ಲ ನೋವು ಸಂಕಟಗಳಿಂದ ತುಂಬಿದ ಪ್ರಶ್ನೆಗಳು ಕಾಡುವಾಗಲೂ, ಈ ಎರಡೂ ವಿಚಾರಗಳನ್ನು ಒಂದಕ್ಕೊಂದು ವಿರುದ್ಧವಾಗಿ, ಎದುರು ಬದುರಾಗಿ ನಿಲ್ಲಿಸಲಾಗದು. ಏಕೆಂದರೆ, ಜಗತ್ತಿನ ಇನ್ನೂ ಅನೇಕಾನೇಕ ಚಳವಳಿಗಳು ನೀಡುವ ಪ್ರಾತ್ಯಕ್ಷಿಕೆಯಂತೆ, ಯಾವುದೋ ಒಂದು ಕಾರಣಕ್ಕೆ, ಎಲ್ಲೋ ಒಂದು ಕಡೆ ಏಳುವ ದನಿಯು ನಿರೀಕ್ಷೆಯನ್ನೂ ಮೀರಿ ಇನ್ನೂ ಎಷ್ಟೋ ಹೋರಾಟಗಳಿಗೆ ಚಾಲನೆ ನೀಡುವುದುಂಟು. 'ಮೀ ಟೂ' ಅಭಿಯಾನದ್ದೇ ಉದಾಹರಣೆ ತೆಗೆದುಕೊಳ್ಳೋಣ. ತರಾನಾ ಬರ್ಕ್ ಈ ಅಭಿಯಾನಕ್ಕೆ ಚಾಲನೆ ನೀಡಿದಾಗ ಇದ್ದ ಆಯಾಮವನ್ನೂ ಮೀರಿ, ಹಾಲಿವುಡ್‌ನ ಭಾರೀ ಪ್ರಭಾವಿ ನಿರ್ದೇಶಕ ಹಾರ್ವೆ ವೈನ್‌ಸ್ಟೀನ್‌ನಿಂದ ತನಗಾದ ಲೈಂಗಿಕ ಕಿರುಕುಳವನ್ನು ನಟಿ ಅಲಿಸ್ಸಾ ಮಿಲಾನೊ ಹೇಳಿಕೊಳ್ಳುವ ವೇಳೆಗೆ ಹಲವು ಮಂದಿ ಕಪ್ಪುಮಹಿಳೆಯರೂ, ಕಂದು ಮಹಿಳೆಯರೂ ದನಿಯೆತ್ತಲಾರಂಭಿಸಿದ್ದನ್ನು ಕಾಣಬಹುದು. ಭಾರತದಲ್ಲೂ 'ಮೀ ಟೂ' ಆಂದೋಲನದಿಂದ ಮತ್ತು ಪ್ರಿಯಾ ರಮಣಿಯವರ ಬಿಡುಗಡೆಯ ತೀರ್ಪಿನಿಂದ ಎದ್ದ ಅಲೆಯು ಅಷ್ಟಕ್ಕೇ ನಿಲ್ಲದೆ ದಿನನಿತ್ಯ ಅತ್ಯಾಚಾರಕ್ಕೊಳಗಾಗಿಯೂ ಕತ್ತಲ ಮೂಲೆಯಲ್ಲೆ ಉಳಿಯುವ ಕೋಟ್ಯಂತರ ಭಾರತೀಯ ಹೆಣ್ಣುಮಕ್ಕಳ ನೋವನ್ನು ತಲುಪುವವರೆಗೂ ಸಾಗಲು ಹುಲ್ಲುಕಡ್ಡಿಯಷ್ಟಾದರೂ ಆಧಾರವಾಗಬೇಕು. ಈ ಆಶಾವಾದವೇ ನಮ್ಮನ್ನು ಮುನ್ನಡೆಸಬೇಕು.


(ಲೇಖಕಿ: ಸಾಮಾಜಿಕ ಕಾರ್ಯಕರ್ತೆ)

ಎಲ್ಲಾ ಬೊಗಸೆ ಮಣ್ಣಿಗಾಗಿ...

ಮಂಗಳ ಅಂಗಳದಿಂದ ಮಣ್ಣು ತರಲು ಕಳೆದ ವರ್ಷ ಹೊರಟಿದ್ದ ಪರ್ಸಿವರೆನ್ಸ್ ರೋವರ್ ಮೊನ್ನೆಯಷ್ಟೆ ಆ ಗ್ರಹದಲ್ಲಿ ಇಳಿದಿದೆ. ನಾನಾ, ಮಂಗಳ ಗ್ರಹದಿಂದ ಆ ಮಣ್ಣನ್ನು ತರಲು ಕಾರಣವೇನು? ಆ ಮಣ್ಣು ಭೂಮಿಯನ್ನು ತಲುಪುವ ವಿಧಾನ ಯಾವುದು? ಅದರಿಂದ ಯಾವೆಲ್ಲ ರಹಸ್ಯಗಳು ಹೊರಬೀಳುವುವು?

ಜಲಸುತ


ಇದು ಸುಮಾರು ಹತ್ತರಿಂದ ಹನ್ನೆರಡು ಸಾವಿರ ಕೋಟಿ ಖರ್ಚುಮಾಡಿ 'ಮಣ್ಣು' ತರುವ ಮಹತ್ವಾಕಾಂಕ್ಷಿ ಯೋಜನೆ! ಲೋಡ್‌ಗಟ್ಟಲೇ ಅಲ್ಲ; ಬರಿ ಕೆಲವೇ ಕೆಲವು ಗ್ರಾಂ ಮಾತ್ರ! ಆದರೆ, ಆ ಮಣ್ಣು - ಕೋಟಿ ಕೋಟಿ ಕಿ.ಮೀ ದೂರದ ಮಂಗಳ ಗ್ರಹದ್ದು. ಕಣ ಕಣವೂ ಮಂಗಳ ಗ್ರಹದ ಚರಿತ್ರೆಯನ್ನು ಬಿಡಿಸಿ ಹೇಳಬಹುದು ಎನ್ನುವ ನಿರೀಕ್ಷೆ. ಅನ್ಯ ಗ್ರಹವೊಂದರಿಂದ ದ್ರವ್ಯರಾಶಿ ತರುವ ಈ ಮೊದಲ ಪ್ರಯತ್ನವೇ ಮಾರ್ಸ್ -2020 ಯೋಜನೆ. ಅಮೆರಿಕದ ಬಾಹ್ಯಾಕಾಶ ಸಂಸ್ಥೆ 'ನಾಸಾ'ದ ಈ ಅತಿ ದುಬಾರಿಯ ಅಭಿಯಾನ ಯಶಸ್ವಿಯಾದರೆ 2031ರ ಮೊದಲು ಮಂಗಳನ ಹೊನ್ನಿನಂತಹ ಮಣ್ಣ ಕಣಗಳನ್ನು ಭೂಮಿಯಲ್ಲಿ ಕಾಣುವ ಸೌಭಾಗ್ಯ ನಮ್ಮದು. ಜುಲೈ 2020ರ ಅಂತ್ಯದಲ್ಲಿ ಉಪಗ್ರಹ ನೌಕೆಯನ್ನು ಸ್ವಸ್ತಿವಾಚನ ಹೇಳಿ ಮಂಗಳನೆಡೆಗೆ ಕಳುಹಿಸಲಾಗಿತ್ತು. ನೌಕೆಯು ಮೊನ್ನೆಯಷ್ಟೇ (ಫೆ.18) ಮನುಕುಲದ ರಾಯಭಾರಿಯಾಗಿ ಮಂಗಳನ ಅಂಗಳದಲ್ಲಿ ಇಳಿದಿದೆ.



2021ರ ಫೆಬ್ರುವರಿ ಮೂರನೇ ವಾರದಲ್ಲಿ ಮನುಕುಲದ ರಾಯಭಾರಿಯಾಗಿ ನೌಕೆ ಮಂಗಳಗ್ರಹದ ನೆಲವನ್ನು ಸ್ಪರ್ಶಿಸುವ ಸಾಧ್ಯತೆ ಇದೆ.

ಮಾರ್ಸ್ - 2020 ಯೋಜನೆಯಲ್ಲಿ ಅತ್ಯಾಧುನಿಕ ಪ್ರಯೋಗಾಲಯವಿರುವ 'ಪರ್ಸಿವರೆನ್ಸ್' ಹೆಸರಿನ ರೋವರ್ ಮತ್ತು 'ಇಂಜೆನಿಯುಟಿ' ಹೆಸರಿನ ಸಣ್ಣ ಹೆಲಿಕಾಪ್ಟರ್ ಇವೆ. ರೋವರ್ ಗಾತ್ರದಲ್ಲಿ ಸುಮಾರಾಗಿ ದೊಡ್ಡ ಜೀಪಿನಷ್ಟಿದೆ. ಗ್ರಹದ ಮೇಲೆ ಚಲಿಸಲು, ಮಾದರಿಗಳನ್ನು ಸಂಗ್ರಹಿಸಲು ರೋವರ್ ಅನ್ನು ಬಳಸಲಾಗುವುದು. ಪ್ರಮುಖ ವೈಜ್ಞಾನಿಕ ಉಪಕರಣಗಳನ್ನು ಹೊಂದಿದ್ದು ಎಲ್ಲಾ ಮಹತ್ವದ ಸಂಶೋಧನೆಗಳು ನಡೆಯುವುದು ಇಲ್ಲಿಯೇ. ಪ್ರಯೋಗಾರ್ಥವಾಗಿ ಒಂದು ಸಣ್ಣ ಹೆಲಿಕಾಪ್ಟರ್ ಅನ್ನು ಮೊದಲ ಬಾರಿ ಕಳುಹಿಸಲಾಗಿದೆ. ಅತ್ಯಂತ ತೆಳುವಾದ ವಾತಾವರಣದ ಪದರ ಹೊಂದಿರುವ ಮಂಗಳ ಗ್ರಹದಲ್ಲಿ ಹೆಲಿಕಾಪ್ಟರ್ ಪ್ರಯೋಗ ಯಶಸ್ವಿಯಾದರೆ ಮುಂದಿನ ಯೋಜನೆಗಳಲ್ಲಿ (ರಸ್ತೆಗಳಿಲ್ಲದ!) ಆ ಗ್ರಹದೊಳಗಿನ ಓಡಾಟಕ್ಕೆ ಹೆಲಿಕಾಪ್ಟರ್ ಅನ್ನೇ ಪ್ರಮುಖ ವಾಹನವಾಗಿ ಬಳಸಲು ಚಿಂತಿಸಲಾಗಿದೆ.

ಇದು ಮೂರು ಅಭಿಯಾನಗಳ ಒಂದು ದಶಕದ ಕಾಲಾವಧಿಯ ದೀರ್ಘಕಾಲದ ಯೋಜನೆ. ಮೊದಲ ಭಾಗ ಮಾರ್ಸ್- 2020 ಅಭಿಯಾನ. ಈ ಅಭಿಯಾನದಲ್ಲಿ ಮಂಗಳ ಗ್ರಹದ ಮಾದರಿಗಳನ್ನು ಸಂಗ್ರಹಿಸಿ, ಪರೀಕ್ಷಿಸಲಾಗುವುದು. ವಿಶೇಷವೆನಿಸಿದರೆ ಅಂತಹ ಮಾದರಿಗಳನ್ನು ಭೂಮಿಯಲ್ಲಿ, ಅತ್ಯುನ್ನತ ತಂತ್ರಜ್ಞಾನ ಬಳಸಿ ಹೆಚ್ಚಿನ ಸಂಶೋಧನೆ ನಡೆಸಲು ಜೋಪಾನವಾಗಿ ಶೇಖರಿಸಿಡಲಾಗುವುದು. ಎಲ್ಲಾ ಯೋಜಿತ ಪ್ರಯೋಗಗಳು ಮುಗಿಯುವ ವೇಳೆಗೆ ಮತ್ತೊಂದು ರೋವರ್ ಅನ್ನು ಭೂಮಿಯಿಂದ ಮಂಗಳ ಗ್ರಹಕ್ಕೆ ಕಳುಹಿಸಲಾಗುವುದು. ಎರಡನೇ ಅಭಿಯಾನದಲ್ಲಿ ಜೋಪಾನವಾಗಿಟ್ಟ ಮಾದರಿಗಳನ್ನು ಮಂಗಳ ಗ್ರಹದ ಕಕ್ಷೆಗೆ ತರಲಾಗುವುದು ಮತ್ತು ಮೂರನೇ ಅಭಿಯಾನದಲ್ಲಿ ಮಂಗಳ ಗ್ರಹದ ಕಕ್ಷೆಯಿಂದ ಸುರಕ್ಷಿತವಾಗಿ ಮಣ್ಣ ಕಣಗಳನ್ನು ಭೂಮಿಗೆ ರವಾನಿಸಲಾಗುವುದು.





ಮಾರ್ಸ್ 2020 - ಮಂಗಳನೆಡೆಗಿನ ಮೊದಲ ಯೋಜನೆಯೇನಲ್ಲ. 1960ರಿಂದ ಆರಂಭವಾಗಿ ಸುದೀರ್ಘ 60 ವರ್ಷಗಳ ಅವಧಿಯಲ್ಲಿ 40ಕ್ಕೂ ಹೆಚ್ಚು ಉಪಗ್ರಹಗಳನ್ನು ಮಂಗಳನೆಡೆಗೆ ಹಾರಿ ಬಿಡಲಾಗಿದೆ. 2013ರ ನಮ್ಮ ಹೆಮ್ಮೆಯ ಭಾರತದ ಮಂಗಳಯಾನವನ್ನು ಒಳಗೊಂಡಂತೆ ಹಲವು ಉಪಗ್ರಹ ನೌಕೆಗಳು ಆಗಲೇ ಮಂಗಳ ಗ್ರಹವನ್ನು ಕೂಲಂಕಷವಾಗಿ ಅಭ್ಯಸಿಸಿ ವೈಜ್ಞಾನಿಕ ಮಾಹಿತಿಯ ಕಣಜವನ್ನು ಶ್ರೀಮಂತಗೊಳಿಸಿವೆ. ಮಂಗಳ ಗ್ರಹವನ್ನು ಸುತ್ತುತ್ತಿರುವ ಉಪಗ್ರಹಗಳು ರವಾನಿಸಿದ ಚಿತ್ರಗಳಿಂದ ಸಂಪೂರ್ಣ ನಕ್ಷೆ - ಜೊತೆಗೆ ಆ ಗ್ರಹದ ಇಂಚಿಂಚೂ ಮಾಹಿತಿ ಲಭ್ಯವಿದೆ. ಹೀಗಿರುವಾಗ ಮತ್ತೆ ಮತ್ತೆ ಮಂಗಳ ಗ್ರಹ ಸೂಜಿಗಲ್ಲಿನಂತೆ ಸೆಳೆಯುತ್ತಿರುವುದೆಂದರೆ ಮತ್ತೇನೋ ವಿಶೇಷ ಇರಲೇಬೇಕಲ್ಲವೇ?

ಮಂಗಳ ಗ್ರಹದ ಉಪಗ್ರಹ ಚಿತ್ರಗಳನ್ನು ಗಮನಿಸಿದರೆ ನಮ್ಮ ಭೂಗ್ರಹದ ಮರುಭೂಮಿ ಪ್ರದೇಶವನ್ನೋ ಇಲ್ಲವೇ ಯಾವುದೋ ಬರಡು ಬಂಜರು ಭೂಮಿಯನ್ನೋ ನೋಡಿದಂತಾಗುವುದು. ಹಾಗಿದ್ದರೆ ಮಂಗಳಗ್ರಹದಲ್ಲಿ ಜೀವಿಗಳಿವೆಯೇ? ಜೀವಿಗಳನ್ನು ಸಲಹುವಂತಹ ವಾತಾವರಣವೇನಾದರೂ ಇದೆಯೇ? ನಿರಂತರ ಸಂಶೋಧನೆಗಳಿಂದ ಇಂದು ಸ್ಪಷ್ಟವಾಗಿ ಈ ಎಲ್ಲಾ ಪ್ರಶ್ನೆಗಳಿಗೆ 'ಇಲ್ಲ' ಎನ್ನುವ ಉತ್ತರ ನಮ್ಮಲ್ಲಿದೆ. ಆದರೆ, ಈಗ ಖಚಿತತೆ ಇಲ್ಲದೆ ನಾವು ಹುಡುಕುತ್ತಿರುವುದು, ಈ ಹೊತ್ತು ನಮ್ಮನ್ನು ಕಾಡುತ್ತಿರುವುದು ಪೂರ್ವದಲ್ಲಿ ಯಾವುದಾದರೂ ರೂಪದಲ್ಲಿ ಅ ಗ್ರಹದಲ್ಲಿ ಜೀವಿಗಳಿದ್ದವೇ ಎಂಬುದನ್ನು.

ಶ್ರೇಷ್ಠ ಖಾದ್ಯದ ಘಮಘಮಿಸುವ ಪರಿಮಳವನ್ನು ಆಘ್ರಾಣಿಸಿದ ಮೇಲೆ ರುಚಿಯನ್ನು ತವಕಿಸಿ ಆಸ್ವಾದಿಸಲು ಹಾತೊರೆಯುವುದು ಮನುಷ್ಯ ಸಹಜವಲ್ಲವೇ? ಉಪಗ್ರಹ ಆಧಾರಿತ ಚಿತ್ರಗಳಲ್ಲಿ ಮಂಗಳ ಗ್ರಹದ ಮೇಲ್ಮೈ ಮೇಲೆ ನೈಸರ್ಗಿಕವಾಗಿ ಮೂಡಿರುವ ನಾಲೆ - ಕಾಲುವೆಯಂತಹ ರಚನೆಗಳನ್ನು ಗಮನಿಸಿದರೆ ನದಿಯೊಂದು ಬಹುಹಿಂದೆ ಹರಿದಿತ್ತು ಎಂಬುದು ಸುಸ್ಪಷ್ಟ. ನದಿ ಪಾತ್ರದ ಸನಿಹದಲ್ಲಿರುವ ದೊಡ್ಡ ಗುಂಡಿಯಲ್ಲಿ ಕಾಣಸಿಗುವ ಭೌಗೋಳಿಕ ಪದರಗಳನ್ನು ಉಪಗ್ರಹ ಚಿತ್ರಗಳ ಮೂಲಕ ಗಮನಿಸಿದರೆ, ನದಿಯ ದ್ರಾವಣ ಕಾಲುವೆಯ ಎಲ್ಲೆಯನ್ನು ಮೀರಿ ಉಕ್ಕಿ ಹರಿದು ಈ ಗುಂಡಿಯನ್ನು ತುಂಬಿ ಸರೋವರವೊಂದರ ರಚನೆಯಾಗಿತ್ತು ಎಂಬುದು ತಜ್ಞರ ಅಭಿಪ್ರಾಯ. ಇದು ಇಷ್ಟಕ್ಕೇ ನಿಲ್ಲುವುದಿಲ್ಲ. ಈ ದೊಡ್ಡ ಗುಂಡಿಯ ಉತ್ತರ ಮತ್ತು ಪಶ್ಚಿಮ ದಿಕ್ಕಿನ ನಡುವೆ ಹರಿಯುವ ನದಿಯಿಂದ ಮಾತ್ರ ರಚಿಸಲು ಸಾಧ್ಯವಿರುವ ಮುಖಜ ಭೂಮಿಯೊಂದು ಸಹ ಉಪಗ್ರಹ ಚಿತ್ರಗಳಲ್ಲಿ ಕಂಡು ಬಂದಿದೆ.

ಸಹಜವಾಗಿ ಮೂಡುವ ಪ್ರಶ್ನೆ ಆ ನದಿಯಲ್ಲಿ ಹರಿದ ದ್ರಾವಣವಾದರೂ ಯಾವುದು? ನೀರೇ? ಉಪಗ್ರಹಗಳು ಕಂಡಂತೆ - ಈ ಮುಖಜ ಭೂಮಿಯಲ್ಲಿರುವುದು ಜೇಡಿ ಮಣ್ಣು! ನೀರಿಲ್ಲದೆ ಜೇಡಿಮಣ್ಣಿನ ರಚನೆ ಸಾಧ್ಯವಿಲ್ಲ. ಹೀಗೆಂದ ಮೇಲೆ ನದಿಯಲ್ಲಿ ಹರಿದ ಆ ದ್ರಾವಣ ನೀರು ಮಾತ್ರವೇ ಆಗಿರಲು ಸಾಧ್ಯ. ನೀರೆಂದ ಮೇಲೆ ಜೀವಿಗಳು ಇರಬಹುದಾದ ಸಾಧ್ಯತೆಯೂ ದಟ್ಟ ಅಲ್ಲವೇ? ಇಷ್ಟೆಲ್ಲಾ ಮಾಹಿತಿ ನೀಡಿ ಉಪಗ್ರಹ ಚಿತ್ರಗಳು ಕುತೂಹಲವನ್ನು ನೂರ್ಮಡಿ ಹೆಚ್ಚಿಸಿದ ಮೇಲೆ ಸುಮ್ಮನಿರಲು ಮನುಷ್ಯನಿಗೆ ಸಾಧ್ಯವೇ? ಸ್ವತಃ ಹೋಗಿ ಪರೀಕ್ಷಿಸಬೇಕೆನಿಸುವ ಉತ್ಕಟ ಇಚ್ಛೆ ಚಿಗುರೊಡೆಯುವುದು ಸಹಜವಲ್ಲವೇ? ಅದಕ್ಕಾಗಿಯೇ ರೂಪುಗೊಂಡಿರುವುದು ಮಾರ್ಸ್ - 2020 ಯೋಜನೆ. ನೌಕೆಯನ್ನು ಇಳಿಸಬೇಕೆಂದಿರುವ, ಕುತೂಹಲಗಳ ಆಗರವಾಗಿರುವ ಈ ಸ್ಥಳವೇ ಸುಮಾರು 45 ಕಿ.ಮೀ ವ್ಯಾಪಿಸಿರುವ ಒಂದು ದೊಡ್ಡ ಗುಂಡಿ - ಜೆಝೆರೊ ಗುಂಡಿ.





ಮಂಗಳನ ಅಂಗಳಕ್ಕೆ ಪಯಣ ಕೈಗೊಂಡ ಪರ್ಸಿವರೆನ್ಸ್ ರೋವರ್

ಜೆಝೆರೊ ಗುಂಡಿಯಲ್ಲಿ ಕಂಡಂತಹ ಜೇಡಿಮಣ್ಣನ್ನು ಹೋಲುವಂತಹ ಮಣ್ಣನ್ನು ಅಮೆರಿಕದ ಮಿಸ್ಸಿಸಿಪ್ಪಿ ನದಿಯ ಮುಖಜ ಭೂಮಿಯಲ್ಲೂ ಭೂವಿಜ್ಞಾನಿಗಳು ಕಂಡಿದ್ದಾರೆ. ಮಿಸ್ಸಿಸಿಪ್ಪಿ ನದಿಯ ಜೇಡಿಮಣ್ಣಿನ ಮುಖಜ ಭೂಮಿಯ ಕಲ್ಲುಗಳಲ್ಲಿ, ಕಲ್ಲಿನ ಭಾಗವಾಗಿಯೇ ಇರುವಂತಹ ಸೂಕ್ಷ್ಮ ಜೀವಿಗಳನ್ನು ಸಹ ಗುರುತಿಸಲಾಗಿದೆ. ಬಹಳಷ್ಟು ಹೋಲಿಕೆಗಳಿರುವುದರಿಂದ ಮಂಗಳಗ್ರಹದ ಜೆಝೆರೊ ಗುಂಡಿಯ ಮುಖಜ ಭೂಮಿಯ ಕಲ್ಲುಗಳಲ್ಲೂ ಸೂಕ್ಷ್ಮ ಜೀವಿಗಳು ಎಂದೋ ಗತಕಾಲದಲ್ಲಿ ಇದ್ದಿರಬಹುದಾದ ಕುರುಹು ಸಿಗಬಹುದೇನೋ ಎಂಬುದು ಎಲ್ಲರ ನಿರೀಕ್ಷೆ.

ಈ ಮೊದಲು ಮಂಗಳ ಗ್ರಹಕ್ಕೆ ಕಳುಹಿಸಿದ ವಿವಿಧ ಬಗೆಯ ವಿಶೇಷ ವೈಜ್ಞಾನಿಕ ಉಪಕರಣಗಳಿರುವ ಸ್ಪಿರಿಟ್, ಆಪರ್ಚುನಿಟಿ, ಕ್ಯೂರಿಯಾಸಿಟಿ - 3 – ರೋವರ್‌ಗಳು ಮಂಗಳನ ಅಂಗಳದಲ್ಲಿ ಆಗಲೇ ಸಂಶೋಧನೆಯ ಕಾರ್ಯವನ್ನು ನಿರ್ವಹಿಸುತ್ತಿವೆ. ಮತ್ತೆ ಈ ಯೋಜನೆ 3ರ ನಂತರ ನಾಲ್ಕನೆಯದೇ? ಖಂಡಿತಾ ಅಲ್ಲ! ಪರ್ಸಿವರೆನ್ಸ್ ರೋವರ್‌ನ ಒಡಲಿನಲ್ಲಿ - ಮಂಗಳ ಗ್ರಹದ ಮಾದರಿಗಳನ್ನು ಸಂಗ್ರಹಿಸಲು ಮತ್ತು ವರ್ಷಗಳ ಕಾಲ ಕಾಣದ ನೆಲದಲ್ಲಿ ಯಾವುದೇ ಬಗೆಯ ಬಾಹ್ಯ ಬಲಗಳ ಪ್ರಭಾವ ಬೀಳದಂತೆ, ಮಾದರಿಯನ್ನು ಮೂಲರೂಪದಲ್ಲಿಯೇ ಅಚ್ಚಳಿಯದಂತೆ ಜೋಪಾನವಾಗಿ ಶೇಖರಿಸಲು ಅತ್ಯುನ್ನತ ತಂತ್ರಜ್ಞಾನದಿಂದ ಕೂಡಿದ ಅಸಾಧಾರಣ ವ್ಯವಸ್ಥೆಯೊಂದಿದೆ. ಇದೇ ಈ ಯೋಜನೆಯನ್ನು ವಿಭಿನ್ನವಾಗಿರಿಸಿರುವುದು.

ಪ್ರಯೋಗಾಲಯಗಳಲ್ಲಿ ಬಳಸುವಂತಹ ಪ್ರಣಾಳಗಳನ್ನು ಹೋಲುವಂತಹ, ಆದರೆ ಗಾಜಿನ ಬದಲು ದುಬಾರಿ ಟೈಟಾನಿಯಮ್‌ನಿಂದ ನಿರ್ಮಿಸಲಾದ 43 ವಿಶೇಷ ಪ್ರಣಾಳಗಳನ್ನು ಈ ಯೋಜನೆಗೆ ಬಳಸಲಾಗಿದೆ. 43 ರಲ್ಲಿ 38 ಪ್ರಣಾಳಗಳನ್ನು ಅಲ್ಲಿಯ ಕಲ್ಲು, ಮಣ್ಣು, ದೂಳಿನ ಮಾದರಿಗಳನ್ನು ಸಂಗ್ರಹಿಸಲು ಬಳಸಲಾಗುವುದು. ಉಳಿದ ಐದನ್ನು - ಮಾದರಿ ಸಂಗ್ರಹಿಸಿದ ಜಾಗದ ವಾತಾವರಣವನ್ನು ದಾಖಲಿಸಲು ಸಹಕಾರಿಯಾಗುವಂತೆ, ಅಗತ್ಯ ವಸ್ತುಗಳನ್ನು ತುಂಬಿ ರೂಪಿಸಲಾಗಿದೆ.

ಹುಡುಕುತ್ತಿರುವುದು ಕಣ್ಣಿಗೆ ಕಾಣದ ಸೂಕ್ಷ್ಮ ಜೀವಿಗಳಿಗಾಗಿ. ಅದು ಮಂಗಳ ಗ್ರಹದಲ್ಲಿ. ಯೋಜನೆ ಯಶಸ್ವಿಯಾಗಿ ಏನಾದರೂ ಸೂಕ್ಷ್ಮ ಜೀವಿಗಳು ದೊರೆತರೆ ಅವು ಮಂಗಳ ಗ್ರಹದ್ದೇ ಎಂದು ಖಚಿತವಾಗಿ ಹೇಳುವುದು ಹೇಗೆ? ಬಲು ಜಟಿಲವಾದ ಪ್ರಶ್ನೆ. ಸೂಕ್ಷ್ಮ ಜೀವಿಗಳು ಭೂಮಿಯಲ್ಲಿ ಸರ್ವಾಂತರ್ಯಾಮಿ. ಅವು ಇಲ್ಲದ ಜಾಗವೇ ಇಲ್ಲ. ಉಪಗ್ರಹದ ಮೇಲೂ, ಉಪಕರಣಗಳ ಮೇಲೂ, ಅಷ್ಟೇ ಏಕೆ, ಪ್ರಣಾಳಗಳಲ್ಲಿ ಮೊದಲೇ ಸೂಕ್ಷ್ಮ ಜೀವಿಗಳಿದ್ದು, ಅವೇ ಮಂಗಳ ಗ್ರಹಕ್ಕೆ ಹೋಗಿ ಅಲ್ಲಿನ ಮಾದರಿಗಳ ಜೊತೆ ಸೇರಿ ಪುನಃ ಭೂಮಿಗೆ ಮರಳಿದರೆ ಸಂಪೂರ್ಣ ಯೋಜನೆ ವಿಫಲವಾದಂತೆಯೇ ಸರಿ. ಅಲ್ಲವೇ? ತಿಳಿಯುವುದು ಹೇಗೆ? ಕಬ್ಬಿಣದ ಕಡಲೆ!

ಮೊದಲು ಪರಿಶುದ್ಧತೆಯಲ್ಲಿ ಅತೀ ಪರಿಶುದ್ಧ! 24 ಕ್ಯಾರೆಟ್ ಚಿನ್ನಕ್ಕಿಂತಲೂ 1000 ಪಾಲು ಶುದ್ಧವಿರುವ ಪ್ರಣಾಳಗಳು ಬೇಕು. ಸಾಮಾನ್ಯವಾಗಿ ಸ್ವಚ್ಛಗೊಳಿಸಿದ ನಂತರವೂ ನಮ್ಮ ಹೆಬ್ಬೆರಳಿನಲ್ಲಿ 45,000 ನ್ಯಾನೊ ಗ್ರಾಮ್‌ನಷ್ಟು ಜೈವಿಕ ಕಣಗಳು ಇರುತ್ತವೆಯಂತೆ. ಇವುಗಳನ್ನು ಬೇರ್ಪಡಿಸುವುದು ಅತಿ ಸಂಕೀರ್ಣವಾದ ಕೆಲಸ. ಕೈ ತೊಳೆದರೆ ಸಾಲದು!

ಈ ಯೋಜನೆಗೆ ಒಂದು ಪ್ರಣಾಳದಲ್ಲಿನ ಜೈವಿಕ ಕಣಗಳ ಸಂಖ್ಯೆಯನ್ನು 150 ನ್ಯಾನೊ ಗ್ರಾಮ್ ಅಥವಾ ಅದಕ್ಕಿಂತ ಕೆಳಗಿನ ಸಂಖ್ಯೆಗೆ ತರಬೇಕು. ಇದಕ್ಕೆಂದು ಪರಿಶುದ್ಧತೆಯ ಹೊಸ ಭಾಷೆಯನ್ನು ನಾಸಾ ವಿಜ್ಞಾನಿಗಳು ಬರೆದಿದ್ದಾರೆ. ಅವರ ಪ್ರಕಾರ ಈ ಯೋಜನೆಗೆ ಬಳಸಿರುವ ಒಂದು ಪ್ರಣಾಳ ಎಲ್ಲಾ ಸ್ವಚ್ಛತಾ ಹಂತಗಳನ್ನು ದಾಟಿ ಯೋಗ್ಯವೆನಿಸುವಷ್ಟರಲ್ಲಿ ಕಡಿಮೆ ಎಂದರೂ 250 ಪುಟಗಳಷ್ಟು ಮಾಹಿತಿ ರಚಿತವಾಗುವುದಂತೆ. ಅಷ್ಟೊಂದು ಸ್ವಚ್ಛತಾ ಕಾರ್ಯಗಳು ಮತ್ತು ಸಂಬಂಧಿತ ಪರೀಕ್ಷೆಗಳು!

ಪ್ರಣಾಳಗಳನ್ನೇನೋ ಶುಭ್ರಗೊಳಿಸಬಹುದು. ಆದರೆ ಇತರೆ ಉಪಕರಣ, ಸಂಪೂರ್ಣ ಉಪಗ್ರಹವನ್ನು? ಸಾಧ್ಯವಿಲ್ಲ. ಇಂತಹ ಸಂದರ್ಭದಲ್ಲಿ ಮೇಲೆ ಹೇಳಿದ 5 ವಿಶೇಷ ಪ್ರಣಾಳಗಳು ಉಪಯೋಗಕ್ಕೆ ಬರುವವು. ಏನಾದರೂ ಭೂಮಿಯ ಜೈವಿಕ ಕಣಗಳು ಮಾದರಿ ಸಂಗ್ರಹಿಸುವ ಪೂರ್ವದಲ್ಲಿ ಕಂಡು ಬಂದರೆ ಅವುಗಳನ್ನು ದಾಖಲಿಸಿ ತಪ್ಪು ತಿಳಿವಳಿಕೆ ಮೂಡದಂತೆ ತಡೆಯುವವು, ಎಚ್ಚರಿಸುವವು.

ಎಲ್ಲ ಹಂತಗಳನ್ನು ದಾಟಿ ಕೊರೊನಾ ವಕ್ರದೃಷ್ಟಿಯ ನಡುವೆಯೂ ನಿಗದಿಯಂತೆ ಸಾಗಿ ಮಾರ್ಸ್ 2020 ಉಪಗ್ರಹ ಮಂಗಳನ ಅಂಗಳವನ್ನು ತಲುಪಿದೆ. ಮಾದರಿಗಳನ್ನು ಸಂಗ್ರಹಿಸುವುದು ಮತ್ತು ಭೂಮಿಗೆ ಮರಳಿ ತರುವುದು ಮುಖ್ಯ ಉದ್ದೇಶವಾದರೂ, ಇತರೆ ವೈಜ್ಞಾನಿಕ ಉಪಕರಣಗಳಾದ PIXL, RIMFAX, MEDA, MOXIE, MASTCAM-Z, SHERLOC ಅನ್ನು ಸಹ ವಿವಿಧ ಬಗೆಯ ಸಂಶೋಧನೆಗಳಿಗೆಂದು ಜೊತೆಗೆ ಹೊತ್ತೈದಿದೆ. ಇವುಗಳಿಂದ ಒದಗುವ ಮಾಹಿತಿ ಭವಿಷ್ಯದ ಮಂಗಳ ಗ್ರಹದ ಯೋಜನೆಗಳಿಗೆ ದಾರಿ ದೀಪವಾಗುವುದರಲ್ಲಿ ಎರಡು ಮಾತಿಲ್ಲ. ಬಾಹ್ಯಾಕಾಶ ಕ್ಷೇತ್ರದಲ್ಲಿ ತಪ್ಪಿಗೆ ಅವಕಾಶವಿಲ್ಲ. ಸಣ್ಣ ಅಜಾಗರೂಕತೆಯೂ ಭಾರಿಯಾಗಿ ಸಂಭವಿಸುವುದು. ಸಣ್ಣ ಲೋಪದಿಂದ ವೈಫಲ್ಯ ಕಂಡರೆ - ತಜ್ಞರ ದಶಕಗಳ ಪರಿಶ್ರಮಕ್ಕೆ ತಣ್ಣೀರು ಎರಚಿದಂತಾಗುವುದು. ದೀರ್ಘಕಾಲದ ಈ ಯೋಜನೆ ಸಫಲವಾಗಲಿ, ಸಂಗ್ರಹಿಸಿದ ಮಾದರಿಗಳು ಭೂಮಿಯನ್ನು ತಲುಪಲಿ. ಹೆಚ್ಚಿನ ವೈಜ್ಞಾನಿಕ ಮಾಹಿತಿ ಹೊರಬರಲಿ. ಸಫಲತೆಯ, ಸಂತೃಪ್ತಿಯ ನಗೆ ಮೂಡಲಿ ಎಂಬುದೇ ಆಶಯ.

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಮಜ ಮಜ ಮಜಕೂರದ ಫೆ. 14ರ ಸಂಚಿಕೆ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ದೃಶ್ಯ ಚಿಕ್ಕ ಶ್ರೇಷ್ಠ ಕಥೆಯ | ಗಿಂಡಿಯೊಳಗಿನ ಆನೆ!

• ಕಲೆ–ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ



ಮೊಘಲ್ ದೊರೆ ಅಕ್ಬರ್‌ನ ಆಸ್ಥಾನದಲ್ಲಿ ಬೀರಬಲ್ಲ ಪ್ರಮುಖ ಮಂತ್ರಿಯಾಗಿದ್ದ. ಬೀರಬಲ್ಲ ಒಮ್ಮೆ ಆಸ್ಥಾನಕ್ಕೆ ಎಲ್ಲರಿಗಿಂತ ತಡವಾಗಿ ಬಂದ. ಅಷ್ಟೊಂದು ತಡವಾಗಿ ಬರಲು ಕಾರಣವೇನೆಂದು ದೊರೆ ಅಕ್ಬರ್, ಆತನನ್ನು ಕೇಳಿದ



ಹಟ ಮಾಡುತ್ತಿದ್ದ ಮೊಮ್ಮಗ ಬೇಗ ಬಿಡದಿದ್ದರಿಂದ ಬರಲು ತಡವಾಯಿತು ಎಂದ ಬೀರಬಲ್ಲ. ಸಮಾಧಾನಿಸಿ ಬರುವುದು ಅಷ್ಟು ಕಷ್ಟವೇ ಎಂದು ಅಕ್ಬರ್ ಕೇಳಿದ. ನಾನು ಮೊಮ್ಮಗನಾಗುವೆ, ನೀವು ಅಜ್ಜನಾಗಿ. ಸಮಾಧಾನಪಡಿಸಿ ತೋರಿಸಿ ಎಂದ ಬೀರಬಲ್ಲ



ಬೀರಬಲ್ಲನ ಪಂಥಾಹ್ವಾನ ಸ್ವೀಕರಿಸಿದ ಅಕ್ಬರ್, ಆಸ್ಥಾನದಲ್ಲಿಯೇ ಅಜ್ಜನ ಪಾತ್ರ ವಹಿಸಿಕೊಂಡ. ಮೊಮ್ಮಗನ ಪಾತ್ರ ವಹಿಸಿದ ಬೀರಬಲ್ಲ ಆನೆ ಬೇಕೆಂದು ಹಟ ಹಿಡಿದ. ಕೂಡಲೇ ಆಳುಗಳಿಗೆ ಹೇಳಿ ಆಸ್ಥಾನಕ್ಕೆ ಒಂದು ಆನೆಯನ್ನೇ ತರಿಸಿದ ಅಕ್ಬರ್



ಬೀರಬಲ್ಲ ಅಳುತ್ತಿರುವಂತೆ ನಟಿಸುತ್ತಾ, ನನಗೀಗ ಒಂದು ಗಿಂಡಿ ಬೇಕು ಎಂದು ಪಟ್ಟು ಹಿಡಿದ. ಅದಕ್ಕೇನಂತೆ ಎಂದ ಅಕ್ಬರ್, ಆಳುಗಳಿಗೆ ಹೇಳಿ, ಒಂದು ಚಿನ್ನದ ಗಿಂಡಿಯನ್ನೇ ತರಿಸಿ, ಮೊಮ್ಮಗನ ಪಾತ್ರಧಾರಿ ಬೀರಬಲ್ಲನಿಗೆ ಕೊಡಿಸಿದ



'ಅಜ್ಜ, ಅಜ್ಜ, ಈ ಗಿಂಡಿಯಲ್ಲಿ ಆನೆಯನ್ನು ಹಾಕಿಕೊಡು' ಎಂದು ಬೀರಬಲ್ಲ ಪಟ್ಟು ಹಿಡಿದಾಗ, ಅಕ್ಬರ್ ಗಲಿಬಿಲಿಗೊಂಡ. ಏನು ಮಾಡಬೇಕು ಎನ್ನುವುದು ತೋಚದೆ ಚಿಂತಾಕ್ರಾಂತನಾಗಿ ಕುಳಿತ. ಬಳಿಕ ನಾನು ಸೋತೆ ಎಂದು ಬೀರಬಲ್ಲನ ಮುಂದೆ ಒಪ್ಪಿಕೊಂಡ



'ಹೌದಪ್ಪ, ಮಕ್ಕಳನ್ನು ಸಮಾಧಾನ ಮಾಡುವುದು ರಾಜಕಾರ್ಯ ಕೈಗೊಂಡಷ್ಟು ಸುಲಭವಲ್ಲ. ಅದಕ್ಕೆ ವಿಶೇಷ ಜಾಣ್ಮೆ, ಕೌಶಲ ಬೇಕೇಬೇಕು ಎಂದ ಅಕ್ಬರ್, ಅದನ್ನು ಅರ್ಥಮಾಡಿಸಿದ ಬೀರಬಲ್ಲನ ಬೆನ್ನುತಟ್ಟಿದ, ಜತೆಗೆ ಇನಾಮನ್ನೂ ಕೊಟ್ಟ

ಗಣಿತದಲ್ಲಿ ಗರ್ದಿ ಗಮ್ಮತ್ತು

ಬದಲಾಗದ ಸಂಖ್ಯೆ

ಬೇರೆ ಬೇರೆ ನಾಲ್ಕು ಅಂಕಿಗಳುಳ್ಳ ಒಂದು ಸಂಖ್ಯೆ ಬರೆದುಕೊಳ್ಳಿ. ಆ ಅಂಕಿಗಳನ್ನು ಇಳಿಕೆ ಕ್ರಮದಲ್ಲಿ ಬರೆದ ನಂತರ ಅದೇ ಅಂಕಿಗಳನ್ನು ಏರಿಕೆಯ ಕ್ರಮದಲ್ಲಿ ಬರೆಯಿರಿ. ನಂತರ ಕಳೆಯಿರಿ. ದೊರೆತ ಉತ್ತರದ ಅಂಕಿಗಳನ್ನು ಮತ್ತೆ ಇಳಿಕೆಯ ಕ್ರಮದಲ್ಲಿ ಬರೆಯಿರಿ. ನಂತರ ಅದೇ ಅಂಕಿಗಳನ್ನು ಏರಿಕೆ ಕ್ರಮದಲ್ಲಿ ಬರೆದು ಕಳೆಯಿರಿ. ಹೀಗೆ ಕೆಲವೇ ಹಂತಗಳ ಬಳಿಕ ಉತ್ತರವಾಗಿ 6147 ಸಂಖ್ಯೆ ಲಭಿಸುವುದು. ಇದು ಬದಲಾಗದ ಒಂದು ಸ್ಥಿರ ಸಂಖ್ಯೆ ಎಂಬುದು ನಿಮಗೇ ತಿಳಿಯುತ್ತದೆ.

ಇದಕ್ಕೆ ಕಪ್ರೇಕರ್ ಸ್ಥಿರ ಸಂಖ್ಯೆ ಎಂದೂ ಹೆಸರು (ಗಣಿತಜ್ಞ ಡಿ.ಆರ್. ಕಪ್ರೇಕರ್ ಅವರ ಶೋಧ ಇದಾಗಿದ್ದರಿಂದ ಇದಕ್ಕೆ ಅವರ ಹೆಸರನ್ನೇ ಇಡಲಾಗಿದೆ)

ಉದಾ: *6972* ಸಂಖ್ಯೆಯನ್ನು ತೆಗೆದುಕೊಳ್ಳೋಣ
9762 ಇಳಿಕೆ ಕ್ರಮದಲ್ಲಿ ಬರೆದಾಗ
2679 ಅದೇ ಸಂಖ್ಯೆಯನ್ನು ಏರಿಕೆ ಕ್ರಮದಲ್ಲಿ ಬರೆದಾಗ
7083 ಕಳೆದಾಗ ಸಿಕ್ಕ ಉತ್ತರ

8730 ಮತ್ತೆ ಇಳಿಕೆ ಕ್ರಮದಲ್ಲಿ ಬರೆದಾಗ
0378 ಅದೇ ಸಂಖ್ಯೆ ಏರಿಕೆ ಕ್ರಮದಲ್ಲಿ ಬರೆದಾಗ
8352 ಕಳೆದಾಗ ಸಿಕ್ಕ ಉತ್ತರ

8532 ಮತ್ತೆ ಇಳಿಕೆ ಕ್ರಮದಲ್ಲಿ ಬರೆದಾಗ
2358 ಮತ್ತೆ ಏರಿಕೆ ಕ್ರಮದಲ್ಲಿ ಬರೆದಾಗ
6174 ಕಳೆದಾಗ ಸಿಗುವ ಸ್ಥಿರ ಸಂಖ್ಯೆ

ಹೀಗೆ ಬೇರೆ ಬೇರೆ ಸಂಖ್ಯೆ ಬರೆದುಕೊಂಡು ಆಟದ ಬಗ್ಗೆ ಖಾತ್ರಿ ಮಾಡಿಕೊಳ್ಳಿ.

ಶಬ್ದಗಳೊಡನೆ ಸರಸ...

ಇಲ್ಲಿರುವ ಶಬ್ದಗಳನ್ನು ಎಡದಿಂದ ಓದಿದರೆ ಒಂದು ಶಬ್ದ, ಬಲದಿಂದ ಓದಿದರೆ ಮತ್ತೊಂದು ಶಬ್ದವಾಗುವುದು

ಕಲಿಮಾನವ – ವನಮಾಲಿಕ

ಕುರುಹು - ಹುರುಕು

ಟ್ವೆಂಟಿ – 20 ಮ್ಯಾಚ್

ಇಲ್ಲಿ ಕೊಟ್ಟಿರುವ ಜೋಡಿ ಪದಗಳನ್ನು ಹೊಂದಿಸಿ

1.	ಕೊತಕೊತ	A	ಬಟ್ಟೆ
2.	ಜುಳುಜುಳು	B	ಬಿಸಿಲು
3.	ಢಣಢಣ	C	ಕೆಂಡ ಉರಿಯುವುದು
4.	ನಿಗಿನಿಗಿ	D	ಹೊಳೆಯುವುದು
5.	ತಪತಪ	E	ಗಾಳಿ ಬೀಸುವುದು
6.	ರಪರಪ	F	ಮಳೆ ಬರುವುದು
7.	ರಣರಣ	G	ಗಂಟೆ ಬಾರಿಸುವುದು
8.	ಸುಯ್‌ಸುಯ್	H	ಕಾಂಚಾಣ
9.	ಝುಣಝುಣ	I	ನೋಡುವುದು
10.	ಗರಿಗರಿ	J	ಕುಣಿಯುವುದು
11.	ಫಳಫಳ	K	ನಡುಗುವುದು
12.	ಬಳಬಳ	L	ಎಳೆಯುವುದು
13.	ದಳದಳ	M	ತೇಕುವುದು
14.	ಮಿಕಿಮಿಕಿ	N	ಮಳೆ ಹತ್ತುವುದು
15.	ಗಡಗಡ	O	ತೋಯಿಸಿ ಕೊಳ್ಳುವುದು
16.	ದರದರ	P	ನೀರು ಹರಿಯುವುದು
17.	ತಕತಕ	Q	ತಿರುಗುವುದು
18.	ಜಿಟಿಜಿಟಿ	R	ಕುದಿಯುವುದು
19.	ದಸದಸ	S	ಉದುರುವುದು
20.	ಪಿರಿಪಿರಿ	T	ಕಣ್ಣೀರು

ಪುಟಾಣಿ ಪದಬಂಧ

ಇಲ್ಲಿ ಕೊಟ್ಟಿರುವ ಅನುಸ್ವಾರದ ಆಚೀಚೆ ಸುಳಿವು ಆಧರಿಸಿ, ಪದ ಪಟ್ಟಿಯಿಂದ ಎರಡಕ್ಷರ ತುಂಬಿ ಪದ ರಚಿಸಿ.

ಪದ ಪಟ್ಟಿ

ಅ ದಿ ತ ಬಿ ದ
ಬೂ ತಿ ಡಿ ತಿ ಕ

○	ಂ	○	ವಯ್ಯಾರ
○	ಂ	○	ತಿನಿಸು
○	ಂ	○	ಲೋಹದ ಎಳೆ
○	ಂ	○	ಒಂದು ಸಿಹಿ ಪದಾರ್ಥ
○	ಂ	○	ಸುಂದರ

ಸರಿ ಉತ್ತರ ನೀಡಿದ ಆಯ್ದ ಮೂರು ಪುಟಾಣಿಗಳು



ಸೈಯದ್ ತೌಸಿಫ್
ಚಳ್ಳಕೆರೆ



ಲಿಖಿತ.ಜಿ.ಟಿ.
ಕೊಮ್ಮೆರಹಳ್ಳಿ (ಮಂಡ್ಯ)



ಶಾರದಾ ದೇಸಾಯಿ
ಹಿರೇಬಾಗೇವಾಡಿ

ಕಳೆದ ಸಂಚಿಕೆಯ ಸರಿ ಉತ್ತರಗಳು

ಪುಟಾಣಿ ಪದಬಂಧ

1. ಹಂಪಿ, 2. ಅಂದು, 3. ದಂಡು, 4. ಪಂಪ, 5. ಗುಂಡಿ

ಟ್ವೆಂಟಿ-20 ಮ್ಯಾಚ್

1-C, 2-T, 3-D, 4-H, 5-E, 6-B, 7-G, 8-F, 9-I, 10-K, 11-A, 12-L, 13-J, 14-O, 15-M, 16-R, 17-P, 18-N, 19-Q, 20-S

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ-20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.

ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಆಸ್ಟ್ರೇಲಿಯಾ ಓಪನ್: ನಾಲ್ಕನೇ ಗ್ರ್ಯಾನ್‌ಸ್ಲಾಂ ಗೆದ್ದ ಜಪಾನ್ ಆಟಗಾರ್ತಿ; ಅಮೆರಿಕದ ಜೆನಿಫರ್ ಬ್ರಾಡಿಗೆ ನಿರಾಸೆ

ನವೊಮಿ ಒಸಾಕ ಮುಡಿಗೆ ಕಿರೀಟ

ಮೆಲ್ಬರ್ನ್(ಎಎಫ್‌ಪಿ: ಎದುರಾಳಿಯ ಬಲಶಾಲಿ ಹೊಡೆತಗಳಿಗೆ ತಿರುಗೇಟು ನೀಡಿದ ಜಪಾನ್ ಆಟಗಾರ್ತಿ ನವೊಮಿ ಒಸಾಕ ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿಯ ಮಹಿಳೆಯರ ಸಿಂಗಲ್ಸ್ ವಿಭಾಗದ ಪ್ರಶಸ್ತಿ ಮುಡಿಗೇರಿಸಿಕೊಂಡರು. ರಾಡ್ ಲೇವರ್ ಅರೆನಾದಲ್ಲಿ ಶನಿವಾರ ನಡೆದ ಫೈನಲ್ ಪಂದ್ಯದಲ್ಲಿ ಅವರು ಅಮೆರಿಕದ ಜೆನಿಫರ್ ಬ್ರಾಡಿ ವಿರುದ್ಧ 6-4, 6-3ರಲ್ಲಿ ಗೆಲುವು ಸಾಧಿಸಿದರು.

ಸಾವಿರಾರು ಪ್ರೇಕ್ಷಕರ ನಡುವೆ ನಡೆದ ಹಣಾಹಣಿಯನ್ನು ಗೆಲ್ಲಲು ಮೂರನೇ ಶ್ರೇಯಾಂಕದ ಒಸಾಕ ಅವರಿಗೆ 77 ನಿಮಿಷಗಳು ಸಾಕಾದವು. ಈ ಮೂಲಕ ನಾಲ್ಕನೇ ಗ್ರ್ಯಾನ್ ಸ್ಲಾಂ ಪ್ರಶಸ್ತಿ ತಮ್ಮದಾಗಿಸಿಕೊಂಡ ಅವರು ಆಡಿದ ಮೊದಲ ನಾಲ್ಕು ಗ್ರ್ಯಾನ್‌ಸ್ಲಾಂ ಫೈನಲ್‌ಗಳಲ್ಲೂ ಗೆದ್ದ ಎರಡನೇ ಆಟಗಾರ್ತಿ ಎನಿಸಿಕೊಂಡರು. ಈ ಸಾಧನೆ ಮಾಡಿದ ಒಟ್ಟಾರೆ ಮೂರನೇ ಟೆನಿಸ್ ಪಟು ಆಗಿದ್ದಾರೆ ಅವರು.

2018ರಲ್ಲಿ ಅಮೆರಿಕ ಓಪನ್ ಟೂರ್ನಿಯ ಪ್ರಶಸ್ತಿ ಗೆಲ್ಲುವ ಮೂಲಕ ಮೊದಲ ಗ್ರ್ಯಾನ್‌ಸ್ಲಾಂ ಕಿರೀಟಕ್ಕೆ ಮುತ್ತಿಟ್ಟ ಒಸಾಕ 2020ರಲ್ಲಿ ಮತ್ತೆ ಅಮೆರಿಕ ಓಪನ್ ಸಾಮ್ರಾಜ್ಞಿಯಾದರು. 2019ರಲ್ಲಿ ಆಸ್ಟ್ರೇಲಿಯಾ ಓಪನ್ ಟೂರ್ನಿಯ ಕಿರೀಟವೂ ಅವರ ಮುಡಿಗೇರಿತ್ತು. ಮಹಿಳಾ ವಿಭಾಗದಲ್ಲಿ ಮೋನಿಕಾ ಸೆಲೆಸ್ ಮತ್ತು ಪುರುಷರ ವಿಭಾಗದಲ್ಲಿ ರೋಜರ್ ಫೆಡರರ್ ಆಡಿದ ಮೊದಲ ನಾಲ್ಕು ಫೈನಲ್‌ಗಳಲ್ಲಿ ಪ್ರಶಸ್ತಿ ಗೆದ್ದಿದ್ದರು.

ಸೆಮಿಫೈನಲ್‌ನಲ್ಲಿ ಸೆರೆನಾ ವಿಲಿಯಮ್ಸ್ ವಿರುದ್ಧ ಗೆದ್ದಿದ್ದ ಒಸಾಕ ಫೈನಲ್‌ನಲ್ಲಿ ಯಾವುದೇ ಉದ್ವೇಗವಿಲ್ಲದೆ ಆಡಿದರು. ಆದರೆ ಭರ್ಜರಿ ಹೊಡೆತಗಳ ಮೂಲಕ ಪಾಯಿಂಟ್‌ಗಳನ್ನು ಕಲೆ ಹಾಕಿದ 22ನೇ ಶ್ರೇಯಾಂಕದ ಬ್ರಾಡಿ ಕೆಲವೊಮ್ಮೆ ವಿಶಿಷ್ಟ ಹಾವ-ಭಾವದ ಮೂಲಕ ಸಂತಸ ವ್ಯಕ್ತಪಡಿಸಿದರು.

ಮೊದಲ ಗೇಮ್ ಒಸಾಕ ಗೆದ್ದರೂ ನಂತರ ಬ್ರಾಡಿ ತಿರುಗೇಟು ನೀಡಿದರು. ಆದರೆ ಎರಡು ಡಬಲ್ ಫಾಲ್ಟ್‌ಗಳನ್ನು ಎಸಗಿದ ಅವರು ನಾಲ್ಕನೇ ಗೇಮ್‌ನಲ್ಲಿ ಸರ್ವ್ ಕಳೆದುಕೊಂಡರು. ಆದರೂ ಛಲ ಬಿಡದ ಅವರು ಬ್ರೇಕ್ ಪಾಯಿಂಟ್ ಮೂಲಕ ಮತ್ತೆ ಆಧಿಪತ್ಯ ಸ್ಥಾಪಿಸಿ ಎದುರಾಳಿಗೆ ಆತಂಕ ಒಡ್ಡಿದರು. ಎದೆಗುಂದದ ಒಸಾಕ ಮೇಲೆ ಇದ್ಯಾವುದೂ ಪ್ರಭಾವ ಬೀರಲಿಲ್ಲ. ಮೊದಲ ಸೆಟ್ ಗೆಲ್ಲುವ ಮೂಲಕ ಮೆಲ್ಬರ್ನ್ ಪಾರ್ಕ್‌ನಲ್ಲಿ ಸತತ 20 ಸೆಟ್ ಗೆದ್ದ ಸಾಧನೆ ಮಾಡಿದರು.

ಎರಡನೇ ಸೆಟ್‌ನಲ್ಲಿ ಇನ್ನಷ್ಟು ಭರವಸೆಯಿಂದ ಕಣಕ್ಕೆ ಇಳಿದ ಒಸಾಕ ಏಸ್ ಸಿಡಿಸುವ ಮೂಲಕ 3-0 ಮುನ್ನಡೆ ಗಳಿಸಿದರು. ನಂತರ ಬ್ರಾಡಿ ಸ್ವಲ್ಪ ಪ್ರತಿರೋಧ ಒಡ್ಡಿದರೂ ಕೊನೆಯಲ್ಲಿ ಒಸಾಕಗೆ ಸುಲಭ ಜಯ ಒಲಿಯಿತು. ಸೋತರೂ ಬ್ರಾಡಿ ಅವರು ಡಬ್ಲ್ಯುಟಿಎ ರ‍್ಯಾಂಕಿಂಗ್‌ನಲ್ಲಿ ಜೀವನಶ್ರೇಷ್ಠ 13ನೇ ಸ್ಥಾನಕ್ಕೇರಿದರು


ಪ್ರಶಸ್ತಿಯೊಂದಿಗೆ ನವೊಮಿ ಒಸಾಕ –ಎಎಫ್‌ಪಿ ಚಿತ್ರ

ನಾಲ್ಕರಲ್ಲಿ ನಾಲ್ಕು: ಒಸಾಕ ಕ್ರಮಿಸಿದ ಯಶಸ್ಸಿನ ಹಾದಿ

- 2018ರ ಅಮೆರಿಕ ಓಪನ್ ಟೂರ್ನಿಯಲ್ಲಿ ಸೆರೆನಾ ವಿಲಿಯಮ್ಸ್ ಅವರನ್ನು 6-2, 6-4ರಲ್ಲಿ ಮಣಿಸಿ ಒಸಾಕ ಮೊದಲ ಗ್ರ್ಯಾನ್‌ಸ್ಲಾಂ ಪ್ರಶಸ್ತಿ ಗೆದ್ದಿದ್ದರು. ಆ ಪಂದ್ಯ ಅಹಿತಕರ ಘಟನೆಗೂ ಸಾಕ್ಷಿಯಾಗಿತ್ತು. ದುರ್ವರ್ತನೆಗೆ ದಂಡ ವಿಧಿಸಿದ ಚೇರ್ ಅಂಪೈರ್ ಕಾರ್ಲೋಸ್ ರಾಮೋಸ್ ಅವರನ್ನು ಸೆರೆನಾ 'ಮೋಸಗಾರ' ಎಂದು ಜರಿದಿದ್ದರು. ಒಸಾಕ ಅಮೆರಿಕ ಓಪನ್ ಟೂರ್ನಿಯ ಚಾಂಪಿಯನ್ ಆದ ಅತಿ ಕಿರಿಯ ಆಟಗಾರ್ತಿ ಎಂದೆನಿಸಿಕೊಂಡಿದ್ದರು. 2006ರಲ್ಲಿ ಪ್ರಶಸ್ತಿ ಗೆದ್ದ ಮರಿಯಾ ಶರಪೋವಾ ಅವರ ಹೆಸರಿನಲ್ಲಿ ಅಲ್ಲಿಯ ವರೆಗೆ ಈ ದಾಖಲೆ ಇತ್ತು.
- 2019ರಲ್ಲಿ ಮೆಲ್ಬರ್ನ್ ಪಾರ್ಕ್‌ನಲ್ಲಿ ಜೆಕ್ ಗಣರಾಜ್ಯದ ಪೆಟ್ರಾ ಕ್ವಿಟೋವಾ ಅವರನ್ನು 7-6 (7/2), 5-7, 6-4ರಲ್ಲಿ ಮಣಿಸಿ ಒಸಾಕ ಎರಡನೇ ಗ್ರ್ಯಾನ್‌ಸ್ಲಾಂ ಪ್ರಶಸ್ತಿ ಗೆದ್ದುಕೊಂಡಿದ್ದರು. ಈ ಮೂಲಕ ವಿಶ್ವ ಕ್ರಮಾಂಕದಲ್ಲಿ ಒಂದನೇ ಸ್ಥಾನಕ್ಕೇರಿ ಈ ಸಾಧನೆ ಮಾಡಿದ ಏಷ್ಯಾದ ಮೊದಲ ಟೆನಿಸ್ ಪಟು ಎನಿಸಿದ್ದರು. ಎರಡು ತಾಸುಗಳ ಹಣಾಹಣಿಯಲ್ಲಿ ಎದುರಾಳಿಯ ಪ್ರಬಲ ಪೈಪೋಟಿ ಮೀರಿ ನಿಂತ ಒಸಾಕ ಸತತ ಎರಡು ಗ್ರ್ಯಾನ್‌ಸ್ಲಾಂ ಗೆದ್ದ ಅತಿ ಕಿರಿಯ ಆಟಗಾರ್ತಿ ಎಂದೆನಿಸಿಕೊಂಡಿದ್ದರು. ಮಾರ್ಟಿನಾ ಹಿಂಗಿಸ್ (1998ರಲ್ಲಿ) ಮತ್ತು ಕರೊಲಿನಾ ವೋಜ್ನಿಯಾಕಿ (2010ರಲ್ಲಿ) ಅವರನ್ನು ಒಸಾಕ ಹಿಂದಿಕ್ಕಿದ್ದರು.
- 2020ರ ಅಮೆರಿಕ ಓಪನ್ ಟೂರ್ನಿಯಲ್ಲಿ ಬೆಲಾರಸ್‌ನ ವಿಕ್ಟೋರಿಯಾ ಅಜರೆಂಕಾ ಅವರನ್ನು ಸೋಲಿಸಿ ಮೂರನೇ ಗ್ರ್ಯಾನ್‌ಸ್ಲಾಂ ಪ್ರಶಸ್ತಿಯನ್ನು ಒಸಾಕ ತಮ್ಮದಾಗಿಸಿಕೊಂಡಿದ್ದರು. ಮೊದಲ ಸೆಟ್‌ನಲ್ಲಿ 1-6ರ ಸೋಲುಂಡಿದ್ದ ಅವರು ಎರಡನೇ ಸೆಟ್‌ನಲ್ಲಿ 0-2ರ ಹಿನ್ನಡೆ ಅನುಭವಿಸಿದ್ದರು. ಆದರೆ ನಂತರ ಪುಟಿದೆದ್ದು 1-6, 6-3, 6-3ರಲ್ಲಿ ಫೈನಲ್ ಪಂದ್ಯ ಗೆದ್ದ ಅವರು ವರ್ಣಭೇದ ನೀತಿಯ ವಿರುದ್ಧ ಮಾಸ್ಕ್ ಧರಿಸಿ ಗಮನ ಸೆಳೆದಿದ್ದರು. ಬ್ಲ್ಯಾಕ್ ಲೈವ್ಸ್ ಮ್ಯಾಟರ್ ಅಭಿಯಾನದಲ್ಲೂ ಸಕ್ರಿಯವಾಗಿ ಪಾಲ್ಗೊಂಡಿದ್ದಾರೆ.

ಕುಸ್ತಿ: ಅರ್ಜುನ್‌ಗೆ ಚಿನ್ನದ ಪದಕ

ದಾವಣಗೆರೆ: ಭಾರತೀಯ ಸೇನೆಯ ಯೋಧ, ಬಾಗಲಕೋಟೆ ಜಿಲ್ಲೆಯ ಬೇವಿನಹಳ್ಳಿಯ ಅರ್ಜುನ್ ಹಲಕುರ್ಕಿ ಅವರು ಪಂಜಾಬ್‌ನ ಜಲಂಧರ್‌ನಲ್ಲಿ ಶನಿವಾರ ನಡೆದ ರಾಷ್ಟ್ರೀಯ ಸೀನಿಯರ್ ಗ್ರಿಕೊ ರೋಮನ್ ಕುಸ್ತಿ ಚಾಂಪಿಯನ್‌ಷಿಪ್‌ನ 55 ಕೆ.ಜಿ. ವಿಭಾಗದಲ್ಲಿ ಚಿನ್ನದ ಪದಕ ಗೆದ್ದುಕೊಂಡಿದ್ದಾರೆ. ಫೈನಲ್ ಪಂದ್ಯದಲ್ಲಿ ಅರ್ಜುನ್ ಅವರು ಸರ್ವೀಸ್ ಸ್ಪೋರ್ಟ್ಸ್ ಕಂಟ್ರೋಲ್ ಬೋರ್ಡ್ (ಸಿ.ಎಸ್.ಸಿ.ಬಿ)ನ ವಿಜಯ ಅವರನ್ನು 10-2ರಲ್ಲಿ ಸೋಲಿಸಿದರು. ಚಾಂಪಿಯನ್‌ಷಿಪ್‌ನಲ್ಲಿ ಆರಂಭದಿಂದಲೂ ಉತ್ತಮ ಸಾಮರ್ಥ್ಯ ಮೆರೆದ ಅರ್ಜುನ್, ಸೆಮಿಫೈನಲ್‌ವರೆಗಿನ ಎಲ್ಲಾ ಪಂದ್ಯಗಳಲ್ಲೂ 8-0ಯಲ್ಲಿ ಗೆಲುವು ಸಾಧಿಸಿದ್ದರು.


ಅರ್ಜುನ್

ವಿಶ್ವ ಕುಸ್ತಿ ಚಾಂಪಿಯನ್‌ಷಿಪ್ ಹಾಗೂ ಒಲಂಪಿಕ್‌ಗೆ ಭಾರತ ತಂಡವನ್ನು ಆಯ್ಕೆ ಮಾಡುವ ರಾಷ್ಟ್ರೀಯ ತರಬೇತಿ ಶಿಬಿರಕ್ಕೆ ಅರ್ಜುನ್ ಆಯ್ಕೆಯಾಗಿದ್ದಾರೆ.

ಪುಣೆಯ ಸೇನಾ ಕ್ಯಾಂಪ್‌ನಲ್ಲಿ ಅರ್ಜುನ್ ಅವರಿಗೆ ತರಬೇತುದಾರ ವಿನಾಯಕ ದಳವಿ ತರಬೇತಿ ನೀಡುತ್ತಿದ್ದಾರೆ. ಈ ಹಿಂದೆ ಅರ್ಜುನ್, ದಾವಣಗೆರೆ ಕ್ರೀಡಾ ವಸತಿನಿಲಯದಲ್ಲಿ ಕುಸ್ತಿ ತರಬೇತುದಾರ ಆರ್. ಶಿವಾನಂದ ಅವರಿಂದ ತರಬೇತಿ ಪಡೆದಿದ್ದಾರೆ.

ರಾಷ್ಟ್ರೀಯ ಮೌಂಟೆನ್ ಬೈಕ್ ಸೈಕ್ಲಿಂಗ್ ಚಾಂಪಿಯನ್‌ಷಿಪ್

ಅಕ್ಷತಾ ಬಿರಾದಾರಗೆ ಚಿನ್ನ

ಪ್ರಜಾವಾಣಿ ವಾರ್ತೆ

ಗದಗ: ಆತಿಥೇಯ ಕರ್ನಾಟಕದ ಅಕ್ಷತಾ ಬಿರಾದಾರ ಇಲ್ಲಿನ ಬಿಂಕದಕಟ್ಟಿ ಸಾಲುಮರದ ತಿಮ್ಮಕ್ಕ ಉದ್ಯಾನದದಲ್ಲಿ ನಡೆಯುತ್ತಿರುವ 17ನೇ ರಾಷ್ಟ್ರಮಟ್ಟದ ಸೈಕ್ಲಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಶನಿವಾರ ಚಿನ್ನದ ಪದಕ ಜಯಿಸಿದರು.

18 ವರ್ಷದೊಳಗಿನ ಬಾಲಕಿಯರ ವಿಭಾಗದ 13.8 ಕಿ.ಮೀ ವೈಯಕ್ತಿಕ ಟೈಮ್ ಟ್ರಯಲ್ಸ್‌ನಲ್ಲಿ ಅಕ್ಷತಾ (ಕಾಲ: 01:04:23.970) ಮೊದಲಿಗರಾದರು.

ಎರಡನೇ ದಿನ ಕರ್ನಾಟಕ ತಂಡ ಒಂದು ಚಿನ್ನ, ಎರಡು ಬೆಳ್ಳಿ ಹಾಗೂ 1 ಕಂಚಿನ ಪದಕ ಗೆದ್ದುಕೊಂಡಿತು. ಶನಿವಾರ ಒಟ್ಟು ಆರು ವಿಭಾಗಗಳಲ್ಲಿ ಸ್ಪರ್ಧೆ ನಡೆದವು. 18.4 ಕಿ.ಮೀ. ಮಿಶ್ರ ರಿಲೇಯಲ್ಲಿ ಮಹಾರಾಷ್ಟ್ರದ ಸೈಕ್ಲಿಸ್ಟ್‌ಗಳು ಚಿನ್ನದ ಪದಕ ಗೆದ್ದರು. ವೈಯಕ್ತಿಕ ಟೈಮ್ ಟ್ರಯಲ್ಸ್‌ನಲ್ಲಿ ಮಹಾರಾಷ್ಟ್ರದ ಪ್ರಣೀತಾ ಸೋಮನ್ ಮೊದಲಿಗರಾದರು.

ಫಲಿತಾಂಶ: 18 ವರ್ಷದೊಳಗಿನ ಬಾಲಕಿಯರ ವಿಭಾಗ; 13.8 ಕಿ.ಮೀ. ವೈಯಕ್ತಿಕ ಟೈಮ್ ಟ್ರಯಲ್ಸ್: ಅಕ್ಷತಾ ಬಿರಾದಾರ (ಕಾಲ: 01:04:23.970, ಕರ್ನಾಟಕ)– 1, ಬಿನಿಲಾ ಮೋಳ್ ಗಿಬಿ (ಕಾಲ: 01:05:51.976, ಕೇರಳ)– 2, ಸ್ವಾರ್ ನಜಾರಿ (ಕಾಲ: 01:07:36.604, ಕರ್ನಾಟಕ)– 3.

ಮಿಶ್ರ ವಿಭಾಗ: (18.4 ಕಿ.ಮೀ. ರಿಲೇ): ವಿಠಲ್ ಭೋಸ್ಲೆ, ಭೀಮ್ ರೊಕಯಾ, ಪ್ರಣೀತಾ ಸೋಮನ್, ಪ್ರಿಯಾಂಕಾ ಕರಾಂಡೆ (ಕಾಲ: 01:05:01.223, ಮಹಾರಾಷ್ಟ್ರ)– 1, ವೈಶಾಖ್ ಕೆ.ವಿ., ಕೆ.ಕಿರಣ್ ಕುಮಾರ ರಾಜು, ಜ್ಯೋತ್ಸ್ನಾ ನಜಾರಿ, ದಾನೇಶ್ವರಿ ಪಾಯಣ್ಣವರ (ಕಾಲ: 01:06:43.096, ಕರ್ನಾಟಕ)– 2, ರಮೇಶ ಭಾರ್ತಿ, ಪ್ರಿಯಾಂಕ ಮೆಹ್ತಾ, ಆಸ್ತಾ ಬಿಸ್ಟ್, ಅರ್ಜುನ್ ರಾಥೋಡ್ (ಕಾಲ: 01:13:06.689, ಉತ್ತರಾಖಂಡ)–3.

ಮಹಿಳೆಯರ ವಿಭಾಗ: (18.4 ಕಿ.ಮೀ. ವೈಯಕ್ತಿಕ ಟೈಮ್ ಟ್ರಯಲ್ಸ್): ಪ್ರಣೀತಾ ಸೋಮನ್ (ಕಾಲ: 51:46.165, ಮಹಾರಾಷ್ಟ್ರ)– 1, ಜ್ಯೋತ್ಸ್ನಾ ನರ್ಜರಿ (ಕಾಲ: 56:39.302, ಕರ್ನಾಟಕ) 2, ಪ್ರಿಯಾಂಕಾ ಕರಾಂಡೆ (ಕಾಲ: 57:06.148, ಮಹಾರಾಷ್ಟ್ರ)– 3.


ಅಕ್ಷತಾ ಬಿರಾದಾರ

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ಹೈದರಾಬಾದ್ ರೇಸ್

'ಫಾಲ್ಕನ್ ಎಡ್ಜ್' ಗೆಲ್ಲುವ ನಿರೀಕ್ಷೆ

ಅಬೆರಡಾರ್ ಪ್ಲೇಟ್ ಭಾನುವಾರದ ಹೈದರಾಬಾದ್ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಈ ರೇಸ್‌ನಲ್ಲಿ 'ಫಾಲ್ಕನ್ ಎಡ್ಜ್' ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.45ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ವಿನ್ನಿಂಗ್ ಸ್ಟ್ರೀಕ್ 7, ಅಕಿಡೊ 1, ಕೀಸ್ಟೋನ್ 8
2ನೇ ರೇಸ್: ವಾಹ್ ಮಿಸ್ ಜಾರ 3, ವಾರಿಯರ್ ಸುಪ್ರೀಮ್ 1, ಎನ್.ಆರ್.ಐ ವಿಶನ್ 10
3ನೇ ರೇಸ್: ಬಗ್ಗಿ 2, ನವೆಂಬರ್ ರೈನ್ 6, ಲೈಫ್ಸ್ ಸಾಂಗ್ 10
4ನೇ ರೇಸ್: ಫಾರೆವರ್ ಸ್ಪ್ಲೆಂಡರ್ 6, ಎನ್.ಆರ್.ಐ ಎಲಿಗೆನ್ಸ್ 3, ಹರ್ ಲೆಗಸಿ 2
5ನೇ ರೇಸ್: ಫಾಲ್ಕನ್ ಎಡ್ಜ್ 1, ಬಾರ್ನ್ ಟು ಬಿ 4, ಹಾರ್ಸ್ ಓ ವಾರ್ 2
6ನೇ ರೇಸ್: ಪಾಸೊ ರಾಬಲ್ಸ್ 2, ಪಾಂಟಿಯಸ್ ಪಿಲೇಟ್ 3, ಹ್ಯಾವಲಾಕ್ ಕ್ರೂಝ್ 7
7ನೇ ರೇಸ್: ಗ್ರ್ಯಾಂಡ್ ಫಿನಾಲೆ 9, ಮೆಲ್ಟಿಂಗ್ ಐಸ್ 7, ಸಾಟನ್ ಸಿಂಫೋನಿ 10
8ನೇ ರೇಸ್: ಬ್ಲೂ ಕ್ರೂಝ್ 1, ಬಿಗ್ ಡೇ 10, ಮಿನ್ನೆಲ್ಲಿ 7.

ಉತ್ತಮ ಬೆಟ್: ಬ್ಲೂ ಕ್ರೂಝ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	3,4,5	6,7,8

ರಾಜ್ಯಮಟ್ಟದ ವೇಟ್ ಲಿಫ್ಟಿಂಗ್ ಚಾಂಪಿಯನ್‌ಷಿಪ್

ಆಳ್ವಾಸ್‌ನ ಲಕ್ಷ್ಮೀ ಕೂಟ ದಾಖಿಲೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಆಳ್ವಾಸ್ ಕಾಲೇಜಿನ ಲಕ್ಷ್ಮೀ ಶನಿವಾರ ಕರ್ನಾಟಕ ವೇಟ್ ಲಿಫ್ಟಿಂಗ್ ಸಂಸ್ಥೆ ಸಹಯೋಗದಲ್ಲಿ ಮೂಡುಬಿದಿರೆಯ ಆಳ್ವಾಸ್ ಕಾಲೇಜಿನಲ್ಲಿ ಆರಂಭವಾದ ರಾಜ್ಯಮಟ್ಟದ ವೇಟ್ ಲಿಫ್ಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಸೀನಿಯರ್ ಮಹಿಳೆಯರ 55 ಕೆ.ಜಿ. ವಿಭಾಗದಲ್ಲಿ ದಾಖಲೆ ಮಾಡಿದರು.

ಲಕ್ಷ್ಮೀ (ಹಳೆಯ ದಾಖಲೆ: ಸ್ನ್ಯಾಚ್- 63, ಕ್ಲೀನ್ ಅಂಡ್ ಜರ್ಕ್- 75,) ಈ ಬಾರಿ ಸ್ನ್ಯಾಚ್ 70 ಕೆ.ಜಿ, ಕ್ಲೀನ್ ಅಂಡ್ ಜರ್ಕ್‌ನಲ್ಲಿ 90 ಕೆ. ಜಿ ಭಾರ ಎತ್ತಿದ್ದಾರೆ. ಇದರೊಂದಿಗೆ ತಮ್ಮದೇ ದಾಖಲೆಯನ್ನು ಉತ್ತಮಪಡಿಸಿಕೊಂಡಿದ್ದಾರೆ.

ಫಲಿತಾಂಶ: ಪುರುಷರ ವಿಭಾಗ: 49 ಕೆ.ಜಿ. ಯೂಥ್: ದರ್ಶನ್ ಸಾಗರ (ಸಂಜೀವಿನಿ ಸ್ಪೋರ್ಟ್ಸ್ ಕ್ಲಬ್)-1. **55 ಕೆ.ಜಿ. ಯೂಥ್:** ಚಿರಂಜೀವಿ (ಆಳ್ವಾಸ್)-1, ಸುಶಾಂತ್ ಸಿನ್ಹಾ (ಆಳ್ವಾಸ್)-2, ಕರಣ್ ಎಂ. (ಕಾರ್ಪೊರೇಷನ್ ಜಿಮ್, ದಾವಣಗೆರೆ)-3. **55 ಕೆ.ಜಿ. ಜೂನಿಯರ್:** ಚಿರಂಜೀವಿ (ಆಳ್ವಾಸ್)-1, ಪ್ರಶಾಂತ್ (ಆಳ್ವಾಸ್)-2, ಸುಶಾಂತ್ ಪಿ.ಎನ್. (ಕೆವಿಜಿ ಸುಳ್ಯ)-3.

ಮಹಿಳಾ ವಿಭಾಗ: 45 ಕೆ.ಜಿ. ಯೂಥ್: ಯಾಸ್ಮಿನ್ (ಆಳ್ವಾಸ್)-1, ಸಮ್ರೀನ್ (ಆಳ್ವಾಸ್)-2. **45 ಕೆ.ಜಿ. ಜೂನಿಯರ್:** ದೀಪಶ್ರೀ (ಎಸ್‌ಐಸಿಎಂ)-1. **49 ಕೆ.ಜಿ. ಯೂಥ್:** ರಂಜಿತಾ ಎಸ್. (ಆಳ್ವಾಸ್ ಏಕಲವ್ಯ)-1, ಸಿಲಿಯಾ (ಆಳ್ವಾಸ್)-2. **49 ಕೆ.ಜಿ. ಜೂನಿಯರ್:** ಭಾಗ್ಯಶ್ರೀ (ವಿಜಯಪುರ)-1. **49 ಕೆ.ಜಿ. ಸೀನಿಯರ್:** ಅರ್ಚನಾ ಡೆನ್ಸಿ (ಆಳ್ವಾಸ್)-1, ಶ್ವೇತಾ ಜಾಧವ್ (ಎಸ್‌ಎಕೆ ಬೆಳಗಾವಿ)-2. **55 ಕೆ.ಜಿ. ಯೂಥ್:** ಐಶ್ವರ್ಯ (ಆಳ್ವಾಸ್)-1, ಕಾವ್ಯಾ ಮೊಕಾಶಿ (ಆಳ್ವಾಸ್)-2, ತನ್ವಿ ಪಿ. ಬೋಳೂರು (ಡಿಸಿಸಿ, ಮಂಗಳೂರು)-3. **55 ಕೆ.ಜಿ. ಜೂನಿಯರ್:** ಯುಕ್ತಿಕಾ (ಎಸ್‌ಡಿಎಂ ಉಜಿರೆ)-1, ಕಾವ್ಯಾ ಮೊಕಾಶಿ (ಆಳ್ವಾಸ್)-2, ರಕ್ಷಾ ಕೆ.ಆರ್. (ಕೆವಿಜಿ ಸುಳ್ಯ)-3. **55 ಕೆ.ಜಿ. ಸೀನಿಯರ್:** ಲಕ್ಷ್ಮಿ ಬಿ. (ಆಳ್ವಾಸ್)-1, ಪೃಥ್ವಿಕಾ (ಆಳ್ವಾಸ್ ಏಕಲವ್ಯ)-2, ಸಿಂಧೂ ಹೆಗಡೆ (ಎಸ್‌ಡಿಎಂ, ಉಜಿರೆ)-3.


ಆಳ್ವಾಸ್‌ನ ಲಕ್ಷ್ಮೀ

ಹಾಕಿ ತಂಡಕ್ಕೆ ಶ್ರೀಜೇಶ್ ನಾಯಕ

ನವದೆಹಲಿ (ಪಿಟಿಐ): ಕೋವಿಡ್–19ರಿಂದಾಗಿ ಒಂದು ವರ್ಷ ಪ್ರವಾಸಗಳನ್ನು ನಡೆಸದೇ ಇದ್ದ ಭಾರತ ಹಾಕಿ ತಂಡ ಜರ್ಮನಿ ಮತ್ತು ಬೆಲ್ಜಿಯಂನಲ್ಲಿ ಪಂದ್ಯಗಳನ್ನು ಆಡುವ ಮೂಲಕ ಒಲಿಂಪಿಕ್ಸ್ ಸಿದ್ಧತೆಗಳಿಗೆ ನಾಂದಿ ಹಾಡಲಿದೆ. ತಂಡ ಬೆಂಗಳೂರಿನಿಂದ ಭಾನುವಾರ ಹೊರಡಲಿದೆ.

22 ಆಟಗಾರರು ಮತ್ತು ಆರು ಸಿಬ್ಬಂದಿಯನ್ನು ಒಳಗೊಂಡ ತಂಡ ಇದೇ 28 ಮತ್ತು ಮಾರ್ಚ್ 2ರಂದು ಜರ್ಮನಿಯ ಕ್ರೆಫರ್ಡ್‌ನಲ್ಲಿ ಪಂದ್ಯ ಆಡಲಿದೆ. ನಂತರ ಬೆಲ್ಜಿಯಂನ ಅಂಟ್ವೆರ್ಪ್‌ಗೆ ತೆರಳಲಿದೆ.

ಒಟ್ಟು 17 ದಿನಗಳ ಪ್ರವಾಸದಲ್ಲಿ ಗೋಲ್‌ಕೀಪರ್ ಪಿ.ಆರ್. ಶ್ರೀಜೇಶ್ ತಂಡವನ್ನು ಮುನ್ನಡೆಸಲಿದ್ದಾರೆ.

ಏರ್ ಇಂಡಿಯಾ ಸಿಬ್ಬಂದಿ ವಿರುದ್ಧ ಕ್ರಮಕ್ಕೆ ಮನು ಒತ್ತಾಯ

ನವದೆಹಲಿ (ಪಿಟಿಐ): ಭೋಪಾಲ್‌ಗೆ ತೆರಳುವ ವೇಳೆ ದೆಹಲಿ ವಿಮಾನ ನಿಲ್ದಾಣದಲ್ಲಿ ತಮಗೆ 'ಕಿರುಕುಳ' ಹಾಗೂ ಅವಮಾನಿಸಿದ ಇಬ್ಬರು ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಮಹಿಳಾ ಶೂಟರ್ ಮನು ಭಾಕರ್ ಒತ್ತಾಯಿಸಿದ್ದಾರೆ.

ಕೇಂದ್ರ ಕ್ರೀಡಾ ಸಚಿವ ಕಿರಣ್ ರಿಜಿಜು ಅವರ ಮಧ್ಯಸ್ಥಿಕೆಯ ನಂತರ ಶುಕ್ರವಾರ ಸಂಜೆ ಮನು ಅವರು ಭೋಪಾಲ್‌ಗೆ ವಿಮಾನದಲ್ಲಿ ತೆರಳಿದರು.

ದೆಹಲಿ ವಿಮಾನ ನಿಲ್ದಾಣದಲ್ಲಿ ವಿಮಾನವೇರಲು ಏರ್‌ಇಂಡಿಯಾ ಸಿಬ್ಬಂದಿ ಅನುಮತಿ ನಿರಾಕರಿಸಿದ ಕುರಿತು ಟ್ವಿಟ್ಟರ್‌ನಲ್ಲಿ ಮನು ಭಾಕರ್ ಆರೋಪ ಮಾಡಿದ್ದು, ನನ್ನ ಬಳಿ ಅಗತ್ಯವಿರುವ ಎಲ್ಲಾ ದಾಖಲೆಗಳು ಇದ್ದರೂ ಪ್ರಯಾಣಕ್ಕಾಗಿ ₹ 10,200 ಲಂಚವನ್ನು ಕೇಳಿದ್ದಾರೆ ಎಂದಿದ್ದರು.

ಟ್ವಿಟ್ಟರ್‌ನಲ್ಲಿ ಕೇಂದ್ರ ಕ್ರೀಡಾ ಸಚಿವ ಕಿರಣ್ ರಿಜಿಜು ಹಾಗೂ ವಿಮಾನಯಾನ ಸಚಿವ ಹರ್ದೀಪ್ ಸಿಂಗ್ ಪುರಿ ಸಹಾಯವನ್ನು ಕೋರಿದ್ದರು.

ಐಎಸ್‌ಎಲ್: ಒತ್ತಡದಲ್ಲಿ ಬಿಎಫ್‌ಸಿ

ಫತೋರ್ಡ, ಗೋವಾ (ಪಿಟಿಐ): ಆರಂಭದ ಕೆಲವು ಪಂದ್ಯಗಳಲ್ಲಿ ನೀರಸ ಆಟವಾಡಿದ ಬೆಂಗಳೂರು ಫುಟ್‌ಬಾಲ್ ಕ್ಲಬ್ (ಬಿಎಫ್‌ಸಿ) ಈಗ ಸಂಕಷ್ಟದಲ್ಲಿದ್ದು ಭಾನುವಾರದ ಪಂದ್ಯದಲ್ಲಿ ಆತಿಥೇಯ ಎಫ್‌ಸಿ ಗೋವಾ ಎದುರು ಗೆಲ್ಲಲೇಬೇಕಾದ ಒತ್ತಡದಲ್ಲಿದೆ. ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಟೂರ್ನಿಯಲ್ಲಿ ಉಳಿದಿರುವ ಎರಡೂ ಪಂದ್ಯಗಳಲ್ಲಿ ಬಿಎಫ್‌ಸಿಗೆ ಗೆಲುವು ಅನಿವಾರ್ಯವಾಗಿದೆ. ಆದರೆ ಪ್ಲೇ ಆಫ್ ಹಂತದ ಹಾದಿ ಸುಗಮವಾಗಬೇಕಾದರೆ ತಂಡ ಗೆದ್ದರೆ ಮಾತ್ರ ಸಾಲದು. ಇತರ ತಂಡಗಳು ಪಾಯಿಂಟ್‌ಗಳನ್ನು ಕಳೆದುಕೊಳ್ಳಬೇಕು. ಆದರೆ ತಂಡ ಒತ್ತಡದಲ್ಲಿ ಇಲ್ಲ ಎಂದು ಹಂಗಾಮಿ ಕೋಚ್ ನೌಶಾದ್ ಮೂಸಾ ಹೇಳಿದರು.

'ಪ್ಲೇ ಆಫ್ ಹಂತದ ಬಗ್ಗೆ ಒತ್ತಡವಿಲ್ಲ. ಜಯ ಗಳಿಸಿದರೆ ತಂಡ ಪ್ಲೇ ಆಫ್ ಹಂತದ ಸನಿಹ ತಲುಪಲಿದೆ. ಆದರೂ ಕೇವಲ ಜಯವನ್ನಷ್ಟೇ ಗಳಿಸುವ ಹಪಾಹಪಿ ನಮಗಿಲ್ಲ. ಅಂಥ ಯೋಚನೆಯೊಂದಿಗೆ ಕಣಕ್ಕೆ ಇಳಿದರೆ ಕೆಲವೊಮ್ಮೆ ಯೋಜನೆಗಳು ಬುಡಮೇಲಾಗುವ ಸಾಧ್ಯತೆ ಇದೆ. ಆದ್ದರಿಂದ ತಾಳ್ಮೆಯಿಂದ ಆಡುತ್ತೇವೆ' ಎಂದು ಮೂಸಾ ಹೇಳಿದರು.

ಗೋವಾ ಲೀಗ್‌ನಲ್ಲಿ ಈ ವರೆಗೆ ಅತ್ಯುತ್ತಮ ದಾಳಿ ನಡೆಸಿ ಗಮನ ಸೆಳೆದಿದೆ. ತಂಡ ಗಳಿಸಿರುವ 26 ಗೋಲುಗಳಲ್ಲಿ 16 ಗೋಲುಗಳು ದ್ವಿತೀಯಾರ್ಧದಲ್ಲಿ ದಾಖಲಾಗಿವೆ. ಕೊನೆಯ 15 ನಿಮಿಷಗಳಲ್ಲಿ ಗೋವಾ 10 ಗೋಲು ಗಳಿಸಿದೆ. ಸತತ ಆರು ಪಂದ್ಯಗಳನ್ನು ಡ್ರಾ ಮಾಡಿಕೊಂಡಿರುವ ತಂಡ ಕಳೆದ ಪಂದ್ಯದಲ್ಲಿ ಒಡಿಶಾ ವಿರುದ್ಧ ಜಯ ಗಳಿಸಿ ಲಯ ಕಂಡುಕೊಂಡಿದೆ.

ಕೇರಳ–ಚೆನ್ನೈಯಿನ್ ಸೆಣಸು: ಬ್ಯಾಂಬೊಲಿಮ್‌ನಲ್ಲಿ ನಡೆಯಲಿರುವ ಪಂದ್ಯದಲ್ಲಿ ಕೇರಳ ಬ್ಲಾಸ್ಟರ್ಸ್ ಹಾಗೂ ಚೆನ್ನೈಯಿನ್ ತಂಡಗಳು ಸೆಣಸಲಿವೆ. ಎರಡೂ ತಂಡಗಳು ಪ್ಲೇಆಫ್ ರೇಸ್‌ನಿಂದ ಹೊರಬಿದ್ದಿವೆ. ಗೌರವ ಉಳಿಸಿಕೊಳ್ಳುವುದಕ್ಕಾಗಿ ಆಡಲಿವೆ.

ಮುಂಬೈಗೆ ಸೋಲು: ವಾಸ್ಕೊದ ತಿಲಕ್ ಮೈದಾನದಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಜೆಮ್ಶೆಡ್‌ಪುರ ಎಫ್‌ಸಿ ತಂಡ ಮುಂಬೈ ಸಿಟಿ ಎಫ್‌ಸಿಯನ್ನು 2–0 ಗೋಲುಗಳಿಂದ ಮಣಿಸಿತು.

ಟಿ20: ಭಾರತ ತಂಡದಲ್ಲಿ ಮನೀಷ್ ಪಾಂಡೆಗಿಲ್ಲ ಅವಕಾಶ

ಸೂರ್ಯಕುಮಾರ್, ಇಶಾನ್‌ಗೆ ಸ್ಥಾನ

ನವದೆಹಲಿ (ಪಿಟಿಐ): ಮುಂಬೈ ಬ್ಯಾಟ್ಸ್‌ಮನ್ ಸೂರ್ಯಕುಮಾರ್ ಯಾದವ್ ಮತ್ತು ಜಾರ್ಖಂಡ್‌ನ ಇಶಾನ್ ಕಿಶನ್ ಅವರು ಇಂಗ್ಲೆಂಡ್ ಎದುರಿನ ಟಿ20 ಸರಣಿಯಲ್ಲಿ ಆಡಲಿರುವ ಭಾರತ ತಂಡದಲ್ಲಿ ಸ್ಥಾನ ಪಡೆದಿದ್ದಾರೆ.

ಕರ್ನಾಟಕದ ಮನೀಷ್ ಪಾಂಡೆಗೆ ಈ ಬಾರಿ ಸ್ಥಾನ ಲಭಿಸಿಲ್ಲ. ಕುಲದೀಪ್ ಯಾದವ್ ಕೂಡ ತಂಡದಲ್ಲಿಲ್ಲ. ರಾಹುಲ್ ತೆವಾಟಿಯಾ, ವರುಣ್ ಚಕ್ರವರ್ತಿ ಸ್ಥಾನ ಪಡೆದಿದ್ದಾರೆ. ರೋಹಿತ್ ಶರ್ಮಾ ಅವರನ್ನು ಉಪನಾಯಕರನ್ನಾಗಿ ಮಾಡಲಾಗಿದೆ. ಹೋದ ವರ್ಷ ಆಸ್ಟ್ರೇಲಿಯಾದಲ್ಲಿ ನಡೆದಿದ್ದ ಸೀಮಿತ ಓವರ್‌ಗಳ ಸರಣಿಯಲ್ಲಿ ಕೆ.ಎಲ್. ರಾಹುಲ್ ಉಪನಾಯಕರಾಗಿದ್ದರು.


ಸೂರ್ಯಕುಮಾರ್ ಯಾದವ್

ತಂಡ: ವಿರಾಟ್ ಕೊಹ್ಲಿ (ನಾಯಕ), ರೋಹಿತ್ ಶರ್ಮಾ (ಉಪನಾಯಕ), ಕೆ.ಎಲ್. ರಾಹುಲ್, ಶಿಖರ್ ಧವನ್, ಶ್ರೇಯಸ್ ಅಯ್ಯರ್, ಸೂರ್ಯಕುಮಾರ್ ಯಾದವ್, ಹಾರ್ದಿಕ್ ಪಾಂಡ್ಯ, ರಿಷಭ್ ಪಂತ್ (ವಿಕೆಟ್‌ಕೀಪರ್), ಇಶಾನ್ ಕಿಶನ್ (ವಿಕೆಟ್‌ಕೀಪರ್), ಯಜುವೇಂದ್ರ ಚಾಹಲ್, ವರುಣ್ ಚಕ್ರವರ್ತಿ, ಅಕ್ಷರ್ ಪಟೇಲ್, ವಾಷಿಂಗ್ಟನ್ ಸುಂದರ್, ರಾಹುಲ್ ತೆವಾಟಿಯಾ, ಟಿ. ನಟರಾಜನ್, ಭುವನೇಶ್ವರ್ ಕುಮಾರ್, ದೀಪಕ್ ಚಾಹರ್, ನವದೀಪ್ ಸೈನಿ, ಮತ್ತು ಶಾರ್ದೂಲ್ ಠಾಕೂರ್.

ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿ: ದೇವದತ್ತ, ಅನಿರುದ್ಧ ಜೋಶಿ ಅರ್ಧಶತಕ ವ್ಯರ್ಥ

ರಿಂಕು ಮಿಂಚು: ಕರ್ನಾಟಕಕ್ಕೆ ಆಘಾತ

ಪ್ರಜಾವಾಣಿ ವಾರ್ತೆ

ಬೆಂಗಳೂರು:ಉತ್ತರ ಪ್ರದೇಶದ ಬ್ಯಾಟ್ಸ್‌ಮನ್ ರಿಂಕು ಸಿಂಗ್ ಶನಿವಾರ ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯ ಮೊದಲ ಪಂದ್ಯದಲ್ಲಿ ಚಾಂಪಿಯನ್ ಕರ್ನಾಟಕ ತಂಡಕ್ಕೆ ಆಘಾತ ನೀಡಿದರು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಸಿ ಗುಂಪಿನ ಮೊದಲ ಪಂದ್ಯದಲ್ಲಿ ಆರ್. ಸಮರ್ಥ್ ನಾಯಕತ್ವದ ಕರ್ನಾಟಕ ತಂಡವು ಒಂಬತ್ತು ರನ್‌ಗಳಿಂದ ಸೋತಿತು.

ಟಾಸ್ ಗೆದ್ದ ಉತ್ತರಪ್ರದೇಶ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ದೇವದತ್ತ ಪಡಿಕ್ಕಲ್ (52; 84ಎ, 7ಬೌಂಡರಿ) ಮತ್ತು ಅನಿರುದ್ಧ ಜೋಶಿ (68; 48ಎ, 4ಬೌಂ, 4ಸಿ) ಅವರ ಅರ್ಧಶತಕಗಳ ಬಲದಿಂದ ಕರ್ನಾಟಕವು 50 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 246 ರನ್ ಗಳಿಸಿತು.

ಮಧ್ಯಮಕ್ರಮಾಂಕದ ಬ್ಯಾಟ್ಸ್‌ಮನ್ ರಿಂಕು ಸಿಂಗ್ (ಅಜೇಯ 62, 61ಎ, 7ಬೌಂ, 1ಸಿ) ತಂಡದ ಜಯವನ್ನು ಸುಲಭಗೊಳಿಸಿದರು. ಉತ್ತರಪ್ರದೇಶವು 45.2 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 215 ರನ್ ಗಳಿಸಿತು. ಈ ಸಂದರ್ಭದಲ್ಲಿ ಮಳೆ ಸುರಿದ ಕಾರಣ ವಿ.ಜಯದೇವನ್ ನಿಯಮದನ್ವಯ ಗುರಿ ಪರಿಷ್ಕರಿಸಲಾಯಿತು. ಅದರಿಂದಾಗಿ ಗೆಲುವಿನ ಗುರಿಯು 207 ರನ್‌ಗಳಿಗೆ ನಿಗದಿಯಾಯಿತು. ಉತ್ತರಪ್ರದೇಶ ವಿಜಯಿಯಾಯಿತು.

ಉತ್ತರಪ್ರದೇಶ ತಂಡಕ್ಕೆ ಅಭಿಷೇಕ್ ಗೋಸ್ವಾಮಿ (54; 67ಎ, 3ಬೌಂ, 2ಸಿ) ಮತ್ತು ಕರಣ್ ಶರ್ಮಾ (40; 74ಎ) ಮೊದಲ ವಿಕೆಟ್ ಜೊತೆಯಾಟದಲ್ಲಿ 102 ರನ್ ಸೇರಿಸಿ ಭದ್ರಬುನಾದಿ ಹಾಕಿದ್ದರಿಂದ ಗೆಲುವು ಸುಲಭವಾಯಿತು.

ಸ್ಪಿನ್ನರ್‌ಗಳ ಪ್ರಯತ್ನ: ಅಭಿಷೇಕ್ ವಿಕೆಟ್ ಗಳಿಸಿದ ಎಡಗೈ ಸ್ಪಿನ್ನರ್ ಜೆ.ಸುಚಿತ್ 24ನೇ ಓವರ್‌ನಲ್ಲಿ ಜೊತೆಯಾಟವನ್ನು ಮುರಿದರು. ಅದೇ ಓವರ್‌ನಲ್ಲಿ ಕರಣ್ ರನ್‌ಔಟ್ ಆಗಲು ದೇವದತ್ತ ಚುರುಕಿನ ಫೀಲ್ಡಿಂಗ್ ಕಾರಣವಾಯಿತು. ಈ ಹಂತದಲ್ಲಿ ರನ್ ಗಳಿಕೆಗೆ ಕಡಿವಾಣ ಹಾಕುವ ಪ್ರಯತ್ನವನ್ನು ಆತಿಥೇಯ ಬೌಲರ್‌ಗಳು ಮಾಡಿದರು. 28ನೇ ಓವರ್‌ನಲ್ಲಿ ಪ್ರಿಯಂ ಗರ್ಗ್ ವಿಕೆಟ್ ಅನ್ನು ಶ್ರೇಯಸ್ ಗೋಪಾಲ್ ಉರುಳಿಸಿದರು. ಸಾಂದರ್ಭಿಕ ಬೌಲರ್ ಕರುಣ್ ನಾಯರ್ ಬೌಲಿಂಗ್‌ನಲ್ಲಿ ಆಕಾಶದೀಪ್ ನಾಥ್ ಎಲ್‌ಬಿಡಬ್ಲ್ಯು ಬಲೆಗೆ ಬಿದ್ದರು.

ಈ ವೇಳೆ ಕ್ರೀಸ್‌ಗೆ ಬಂದ ರಿಂಕು ಸಿಂಗ್ ಬಿರುಸಿನ ಬ್ಯಾಟಿಂಗ್ ಮಾಡಿದರು. ಅವರಿಗೆ ಉಪೇಂದ್ರ ಯಾದವ್ (ಔಟಾಗದೆ 26) ಉತ್ತಮ ಜೊತೆ ನೀಡಿದರು. **ಅನಿರುದ್ಧ ಮಿಂಚು:** ಸಾಧಾರಣ ಮೊತ್ತಕ್ಕೆ ಕುಸಿಯುವ ಆತಂಕ ಎದುರಿಸಿದ್ದ ಕರ್ನಾಟಕ ತಂಡಕ್ಕೆ ಗದುಗಿನ ಅನಿರುದ್ಧ ಜೋಶಿ ಮರುಜೀವ ತುಂಬಿದರು.

ಮೊದಲು ಬ್ಯಾಟಿಂಗ್ ಮಾಡಿದ ಕರ್ನಾಟಕದ ಆರಂಭ ಉತ್ತಮವಾಗಿರಲಿಲ್ಲ. ಆರಂಭಿಕ ಬ್ಯಾಟ್ಸ್‌ಮನ್ ಸಮರ್ಥ್ ಮೂರು ರನ್ ಮಾತ್ರ ಗಳಿಸಿ ಔಟಾದರು. ದೇವದತ್ತ ಮತ್ತು ಕೆ.ವಿ. ಸಿದ್ಧಾರ್ಥ್ (38) ತಾಳ್ಮೆಯಿಂದ ಆಡಿದರು.

ಎಚ್ಚರಿಕೆಯಿಂದ ಆಡಿದ ದೇವದತ್ತ ಮತ್ತು ಸಿದ್ಧಾರ್ಥ್ ಎರಡನೇ ವಿಕೆಟ್‌ಗೆ 82 ರನ್ ಕಲೆಹಾಕಿದರು.

ದೇವದತ್ತ ಔಟಾದ ನಂತರ ಕರುಣ್ ನಾಯರ್ 33 ರನ್ ಗಳಿಸಿದರು. ಶ್ರೇಯಸ್ ಗೋಪಾಲ್ ಒಂದು ರನ್ ಗಳಿಸಿ ನಿರ್ಗಮಿಸಿದರು. ಈ ಹಂತದಲ್ಲಿ ಕ್ರೀಸ್‌ಗೆ ಬಂದ ಜೋಶಿ ಬ್ಯಾಟ್ ಬೀಸಿದರು. ನಾಲ್ಕು ಸಿಕ್ಸರ್‌ಗಳನ್ನೂ ಸಿಡಿಸಿದರು. 141.67ರ ಸ್ಟ್ರೈಕ್‌ರೇಟ್‌ನಲ್ಲಿ ಅರ್ಧಶತಕದ ಗಡಿ ದಾಟಿದರು.

ಸಂಕ್ಷಿಪ್ತ ಸ್ಕೋರ್: ಕರ್ನಾಟಕ: 50 ಓವರ್‌ಗಳಲ್ಲಿ 8ಕ್ಕೆ 246 (ಅನಿರುದ್ಧ ಜೋಷಿ 68, ಕೃಷ್ಣಮೂರ್ತಿ ಸಿದ್ಧಾರ್ಥ್ 38, ಕರುಣ್ ನಾಯರ್ 33, ಅಭಿಮನ್ಯು ಔಟಾಗದೆ 17; ಶಿವಂ ಶರ್ಮಾ 40ಕ್ಕೆ 3, ಮೊಹಸಿನ್ ಖಾನ್ 61ಕ್ಕೆ 2). ಉತ್ತರ ಪ್ರದೇಶ: 45.2 ಓವರ್‌ಗಳಲ್ಲಿ 4ಕ್ಕೆ 215 (ರಿಂಕು ಸಿಂಗ್ ಔಟಾಗದೆ 62, ಉಪೇಂದ್ರ ಯಾದವ್ ಔಟಾಗದೆ 26 ಅಭಿಷೇಕ್ ಗೋಸ್ವಾಮಿ 54, ಕರಣ್ ಶರ್ಮಾ 40; ಜಗದೀಶ ಸುಚಿತ್ 40ಕ್ಕೆ 1, ಶ್ರೇಯಸ್ ಗೋಪಾಲ್ 54ಕ್ಕೆ 1, ಕರುಣ್ ನಾಯರ್ 20ಕ್ಕೆ 1). **ಫಲಿತಾಂಶ:** ಉತ್ತರ ಪ್ರದೇಶ ತಂಡಕ್ಕೆ ಉತ್ತರ ಪ್ರದೇಶ ತಂಡಕ್ಕೆ ವಿ.ಜಯದೇವನ್ ನಿಯಮದನ್ವಯ 9 ರನ್‌ಗಳ ಗೆಲುವು

ಪ್ರದೀಪ್‌ಗೆ ಆರು ವಿಕೆಟ್: ಉತ್ತಪ್ಪ ಶತಕ

ಬೆಂಗಳೂರು: ಕನ್ನಡಿಗ ಟಿ. ಪ್ರದೀಪ್ (43ಕ್ಕೆ6) ಅಮೋಘ ಬೌಲಿಂಗ್ ಮತ್ತು ಮೃಣಾಲ್ ದೇವಧರ್ (ಅಜೇಯ 105) ಶತಕದ ಬಲದಿಂದ ರೈಲ್ವೆಸ್ ತಂಡವು ವಿಜಯ್ ಹಜಾರೆ ಟ್ರೋಫಿ ಟೂರ್ನಿಯ ಸಿ ಗುಂಪಿನಲ್ಲಿ ಜಯದ ಆರಂಭ ಮಾಡಿತು. ಆಲೂರಿನ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ರೈಲ್ವೆಸ್ ತಂಡವು 10 ವಿಕೆಟ್‌ಗಳಿಂದ ಬಿಹಾರ ವಿರುದ್ಧ ಜಯಿಸಿತು.

ರಾಬಿನ್ ಶತಕ: ಕೊಡಗಿನ ರಾಬಿನ್ ಉತ್ತಪ್ಪ (107; 85ಎ, 10ಬೌಂ, 4ಸಿ) ಭರ್ಜರಿ ಶತಕದ ಬಲದಿಂದ ಕೇರಳ ತಂಡವು 34 ರನ್‌ಗಳಿಂದ ಒಡಿಶಾ ಎದುರು ಜಯಿಸಿತು. ಆಲೂರು ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಕೇರಳದ ಮಧ್ಯಮವೇಗಿ ಎಸ್. ಶ್ರೀಶಾಂತ್ ಎರಡು ವಿಕೆಟ್ ಗಳಿಸಿದರು.

ಇಶಾನ್ ಕಿಶನ್ ಅಬ್ಬರ: ಭಾರತ ಟಿ20 ತಂಡದಲ್ಲಿ ಪದಾರ್ಪಣೆಗೆ ಸಿದ್ಧವಾಗಿರುವ ಜಾರ್ಖಂಡ್ ತಂಡದ ಇಶಾನ್ ಕಿಶನ್ (178; 94ಎ, 19ಬೌಂ, 11ಸಿ) ಇಂದೋರ್‌ನಲ್ಲಿ ನಡೆದ ಪಂದ್ಯದಲ್ಲಿ ಆತಿಥೇಯ ಮಧ್ಯಪ್ರದೇಶ ವಿರುದ್ಧ ಭರ್ಜರಿ ಶತಕ ಗಳಿಸಿದರು. ಇದರಿಂದಾಗಿ ಜಾರ್ಖಂಡ್ ತಂಡವು 324 ರನ್‌ಗಳ ಬೃಹತ್ ಜಯ ದಾಖಲಿಸಿತು.

ಬಿ ಗುಂಪಿನ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಜಾರ್ಖಂಡ್ 50 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 422 ರನ್ ಗಳಿಸಿತು. ಅದಕ್ಕುತ್ತರವಾಗಿ ಮಧ್ಯಪ್ರದೇಶ ತಂಡವು 18.4 ಓವರ್‌ಗಳಲ್ಲಿ 98 ರನ್ ಗಳಿಸಿ ಪತನವಾಯಿತು. ಜಾರ್ಖಂಡ್‌ನ ವರುಣ್ ಆ್ಯರನ್ ಆರು ವಿಕೆಟ್ ಗಳಿಸಿದರು.


ಉತ್ತಪ್ಪ


ಟಿ.ಪ್ರದೀಪ್

ಸಂಕ್ಷಿಪ್ತ ಸ್ಕೋರು: ಸಿ ಗುಂಪು (ಆಲೂರು): ಬಿಹಾರ: 45.5 ಓವರ್‌ಗಳಲ್ಲಿ 189 (ಶಬ್ಬೀರ್ ಖಾನ್ 46, ಅನುಜ್ ರಾಜ್ 72, ಅಮಿತ್ ಮಿಶ್ರಾ 30ಕ್ಕೆ3, ಟಿ. ಪ್ರದೀಪ್ 43ಕ್ಕೆ6), ರೈಲ್ವೆಸ್: 29 ಓವರ್‌ಗಳಲ್ಲಿ 190 (ಮೃಣಾಲ್ ದೇವಧರ್ ಔಟಾಗದೆ 105, ಪ್ರಥಮ್ ಸಿಂಗ್ ಔಟಾಗದೆ 72) ಫಲಿತಾಂಶ: ರೈಲ್ವೆಸ್ ತಂಡಕ್ಕೆ 10 ವಿಕೆಟ್‌ಗಳ ಜಯ.

ಒಡಿಶಾ: 45 ಓವರ್‌ಗಳಲ್ಲಿ 8ಕ್ಕೆ258 (ಗೌರವ್ ಚೌಧರಿ 57, ಸಂದೀಪ್ ಪಟ್ನಾಯಕ್ 66, ಕಾರ್ತಿಕ್ ಬಿಸ್ವಾಲ್ 45, ದೇವವ್ರತ್ ಪ್ರಧಾನ್ 27, ಎಸ್. ಶ್ರೀಶಾಂತ್ 41ಕ್ಕೆ2, ನಿಧೀಶ್ 43ಕ್ಕೆ2, ಜಲಜ್ ಸಕ್ಸೆನಾ 43ಕ್ಕೆ2) ಕೇರಳ: 38.2 ಓವರ್‌ಗಳಲ್ಲಿ 4ಕ್ಕೆ233 (ರಾಬಿನ್ ಉತ್ತಪ್ಪ 107, ವಿಷ್ಣು ವಿನೋದ್ 28, ಸಚಿನ್ ಬೇಬಿ 40, ವತ್ಸಲ್ ಗೋವಿಂದ ಔಟಾಗದೆ 29, ಮೊಹಮ್ಮದ್ ಅಜರುದ್ದೀನ್ ಔಟಾಗದೆ 23) ಫಲಿತಾಂಶ: ಕೇರಳ ತಂಡಕ್ಕೆ 34 ರನ್‌ಗಳ ಜಯ (ವಿಜೆಡಿ ನಿಯಮ)